
ಜೂನ್ 2012

₹ 15/-

# ಯುಗಶ್ರೀ

ತ್ರೈಮಾಸಿಕ



- ಜಾಗತಿಕ ರಾಷ್ಟ್ರ ನಾಯಕರಿಗೆ ಖಲೀಫರ ಪತ್ರಗಳು
- ನ್ಯಾಯ ಮತ್ತು ಸಮತೋಲನದ ಸಹಜ ವ್ಯವಸ್ಥೆ
- ಧರ್ಮನಿಂದೆಗೆ ಇಸ್ಲಾಮ್ ವಿಧಿಸುವ ಶಿಕ್ಷೆ ಏನು?
- ಪವಿತ್ರ ಖುರ್‌ಆನ್ ವಿರುದ್ಧ ಪಾದರಿಯ ಆಕ್ಷೇಪಗಳಿಗೆ ಉತ್ತರ
- ಟ್ಯೂರಿನಿನ ಶವವಸ್ತ್ರ
- ಪ್ರವಾದಿತ್ವದ ಜಾರಿ

“ಎಲ್ಲೈ ವಿಶ್ವಾಸಿಗಳೇ, ಹೆಚ್ಚಿನ ಧರ್ಮಪಂಡಿತರೂ ಸನ್ಯಾಸಿಗಳೂ ಜನರ ಸಂಪತ್ತನ್ನು ಅನ್ಯಾಯವಾಗಿ ಕೈವಶಪಡಿಸಿ ತಿನ್ನುತ್ತಾರೆ ಹಾಗೂ ದೇವಮಾರ್ಗದಿಂದ ಜನರನ್ನು ತಡೆಯುತ್ತಾರೆ. ಯಾರು ಚಿನ್ನ ಮತ್ತು ಬೆಳ್ಳಿಯನ್ನು ಕೂಡಿಟ್ಟು ದೇವಮಾರ್ಗದಲ್ಲಿ ಅವನ್ನು ಖರ್ಚುಮಾಡುವುದಿಲ್ಲವೋ, ಅವರಿಗೆ ಯಾತನಾಮಯವಾದ ಶಿಕ್ಷೆ ಇದೆಯೆಂದು ಮುನ್ನೆಚ್ಚರಿಕೆ ನೀಡು.”

ಪವಿತ್ರ ಖುರ್‌ಆನ್ ): ;45*

## ವಿಷಯ ಸೂಚಿಕೆ


ಪುಟ

☆ ಪರಿಪೂರ್ಣ ಮನುಷ್ಯನ ಗುಣಗಳು 1
☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
☆ ಜಾಗತಿಕ ರಾಷ್ಟ್ರ ನಾಯಕರಿಗೆ ಪತ್ರಗಳು 3
☆ ನ್ಯಾಯ ಮತ್ತು ಸಮತೋಲನದ ಸಹಜ ವ್ಯವಸ್ಥೆ 10
☆ ಧರ್ಮನಿಂದೆಗೆ ಇಸ್ಲಾಮ್ ವಿಧಿಸುವ ಶಿಕ್ಷೆ ಏನು? 15
☆ ಪವಿತ್ರ ಖುರ್‌ಆನ್ ವಿರುದ್ಧ ಪಾದರಿಯ ಆಕ್ಷೇಪಗಳಿಗೆ ಉತ್ತರ - 3 22
☆ ಟ್ಯೂರಿನಿನ ಶವವಸ್ತ್ರ (The Shroud of Turin) 31
☆ ಪ್ರವಾದಿತ್ವದ ಜಾರಿ 37
☆ ವುಝುವಿನ ಪ್ರಯೋಜನಗಳು 43
☆ ಇಸ್ಲಾಮಿನ ಪ್ರಾಥಮಿಕ ಪಾಠಗಳು 46
☆ ಕಾಶ್ಮೀರ ಕಣಿವೆಯಲ್ಲಿ ಮೇರಿಯ ಸಮಾಧಿ 47
☆ ತ್ಯಜಿಸದಿರಿ ಈ ಅನುಗ್ರಹವ 48
☆ ವಾರ್ತೆಗಳು :
☆ ಲೋಕವನ್ನು ಯುದ್ಧದಡೆಗೆ ಕೊಂಡೊಯ್ಯಬೇಡಿರಿ ಅಹ್ಮದಿಯಾ ಖಲೀಫರ ವಿನಂತಿ 49
☆ ☆ ಗುರು ಶ್ರೀ ಶ್ರೀ ರವಿಶಂಕರರಿಗೆ ಅಹ್ಮದಿಯಾ ಸಾಹಿತ್ಯ ಪಾರಿತೋಷಕ ☆ ಪ್ರತಿಭಾಶಾಲಿಯಾದ ಅಹ್ಮದಿ ಬಾಲಿಕೆ
☆ ಸಂಪಾದಕರಿಗೆ ಪತ್ರ 50
☆ ನಿಧನ ವಾರ್ತೆ 50
☆ ಓದಿದ್ದು :
☆ ಅಲ್‌ಕಾಯಿದಾ ನಾಯಕ ಮನ್ಸೂರ್ ಹತ್ಯೆ ☆ ಪ್ರವಾದಿ ಆಗಮನ : ಏಸು ಭವಿಷ್ಯ ☆ ಜಿನ್ನಾ ಭಾಷಣಕ್ಕೋಸ್ಕರ ಪಾಕ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಶನ್ ಆಕಾಶವಾಣಿಯಲ್ಲಿ 51
☆ ಮುಸ್ಲಿಂ ಯುವತಿಯರು 15 ವರ್ಷಕ್ಕೇ ಮದುವೆಯಾಗಬಹುದು ☆ ಬುಶ್ : ಅಮೆರಿಕದ ಅತ್ಯಂತ ಕುಪ್ರಸಿದ್ಧ ಮಾಜಿ ಅಧ್ಯಕ್ಷ ☆ ಪಾಪ್ ಗಾಯಕಿ ವಿಟ್ನಿ ಹ್ಯೂಸ್ಟನ್ ಸೌಂದರ್ಯಕ್ಕೆ ಮರುಳಾಗಿದ್ದ ಲಾದನ್ 52
☆ ಡ್ರೋನ್ ದಾಳಿ ವೇಳೆ ಅಕ್ಷತ ಕನ್ಯೆಯರನ್ನು ನೆನೆಯಿರಿ ☆ ರಾಷ್ಟ್ರಪಿತ ದಾಖಲೆಯೇ ಇಲ್ಲ!
☆ ಬೇಯಿಸಿದ ಟೊಮೆಟೊ ಕ್ಯಾನ್ಸರ್‌ಗೆ ರಾಮಬಾಣ 53
☆ ಸ್ವತಂತ್ರ ಭಾರತ ನೋಡುತ್ತಿದ್ದರೆ ನಿಮಗೆ ಏನನ್ನಿಸುತ್ತೆ? ☆ ಸತ್ತ 88 ವರ್ಷಗಳ ಬಳಿಕ ಲೆನಿನ್ ಶವ ದಫನ
☆ 'ಎ ಫಾರ್ ಅಲ್ಲಾ, ಬಿ ಫಾರ್ ಬಂದೂಕ್!' ☆ ಇಸ್ಲಾಂ ಹೆಸರಲ್ಲಿ ಹಿಂಸಾಕೃತ್ಯ ಸಲ್ಲದು: ಮೌಲಾನಾ ಅಶ್ರಫ್ 54
☆ ನಮ್ಮ ಪ್ರೇರಕ ಶಕ್ತಿ : LOVE FOR ALL HATRED FOR NONE – ಪಾಕ್ ನೂತನ ಪ್ರಧಾನಿ 55


**ಮುಖಪುಟ ಚಿತ್ರ :** 56

ಇತ್ತೀಚೆಗೆ ನಾರ್ವೆಯ ಓಸ್ಲೋ ಏರ್‌ಪೋರ್ಟ್ ರಸ್ತೆಯಲ್ಲಿ ನಿರ್ಮಿಸಲ್ಪಟ್ಟ, ದೇಶದ ಅತಿ ದೊಡ್ಡ ಮಸ್ಜಿದ್ “ಬೈತುನ್ನಸ್ರ್” 7759 ಚದರ ಮೀಟರ್ ವಿಸ್ತಾರದಲ್ಲಿರುವ ಈ ಮಸೀದಿಯಲ್ಲಿ 2250 ಮಂದಿಗೆ ಪ್ರಾರ್ಥಿಸುವ ಸೌಕರ್ಯವಿದೆ.


ಬಿಡಿ ಪ್ರತಿ : ರೂ.15/- ವಾರ್ಷಿಕ ಚಂದಾ : ರೂ.60/- ಅಂಚೆ ಮೂಲಕ : ರೂ.70/-

ವಿಳಾಸ : 10-23-1008 / 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ನಿಗಾವಣೆ : ಮುಹಮ್ಮದ್ ಶಫೀಉಲ್ಲಾಹ್
ಸೌತ್ ಝೋನಲ್ ಅಮೀರ್,
ಅಹ್ಮದಿಯಾ ಮುಸ್ಲಿಂ ಜಮಾಅತ್,
ಕರ್ನಾಟಕ.

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 29 | ಜೂನ್ 2011 | ಇಹ್‌ಸಾನ್ 1391 | ಸಂಚಿಕೆ : 1-2 |
|---|---|---|---|---|

## ಪರಿಪೂರ್ಣ ಮನುಷ್ಯನ ಗುಣಗಳು

ವಿಶೇಷವಾಗಿ, ಧರ್ಮಶಾಸ್ತ್ರಕ್ಕೆ ಮನುಷ್ಯನ ಮೇಲಿರುವ ಸ್ವಾಧೀನ ಶಕ್ತಿಯೇನೆಂದರೆ, ಅದು ಅವನ ಜೀವಿತವನ್ನು ನಿಯಂತ್ರಿಸುತ್ತದೆ. ಈ ನಿಯಂತ್ರಣದ ಪರಿಣಾಮದಿಂದ ಅವನು ಸಮಸೃಷ್ಟಿಗಳ ಹಕ್ಕುಗಳ ಬಗ್ಗೆ ಸರಿಯಾದ ಜ್ಞಾನ ಪಡೆಯುತ್ತಾನೆ. ಅವರೊಡನೆ ವರ್ತಿಸುವಾಗ ನ್ಯಾಯ, ಪರೋಪಕಾರ, ಸಹಾನುಭೂತಿ ಎಂಬೀ ಸ್ವಭಾವಗಳನ್ನು ಯಥೋಚಿತವಾಗಿ ತೋರ್ಪಡಿಸುತ್ತಾನೆ. ತನಗೆ ದೇವನಿತ್ತ ಜ್ಞಾನ, ಸುಖೈಶ್ವರ್ಯ ಮತ್ತು ಇತರ ಅನುಗ್ರಹಗಳಲ್ಲಿ ಅನ್ಯರನ್ನೂ ಯಥೋಚಿತ ಪಾಲುಗಾರರನ್ನಾಗಿ ಮಾಡುತ್ತಾನೆ. ಸೂರ್ಯನಂತೆ ಅವನು ತನ್ನ ಪ್ರಕಾಶವನ್ನು ಎಲ್ಲರ ಮೇಲೂ ಹರಡುತ್ತಾನೆ. ಚಂದ್ರನಂತೆ ಅವನು ಸರ್ವಪ್ರಕಾಶ ಕೇಂದ್ರವಾದ ದೇವನಿಂದ ಪಡೆಯುವ ಪ್ರಭಾಪೂರವನ್ನು ಅನ್ಯರಿಗೆ ತಲುಪಿಸುತ್ತಾನೆ. ಹಗಲಿನಂತೆ ಅವನು ಪ್ರಕಾಶಭರಿತನಾಗಿ ಸತ್ಯ ಮತ್ತು ಸದ್ಗತಿಯ ಮಾರ್ಗಗಳನ್ನು ಜನರಿಗೆ ತೋರಿಸಿಕೊಡುತ್ತಾನೆ. ರಾತ್ರಿಯಂತೆ ಅವನು ಬಲಹೀನರ ದೌರ್ಬಲ್ಯಗಳನ್ನೂ ಚಾಪಲ್ಯಗಳನ್ನೂ ಮರೆಮಾಡಿ ಬಳಲಿದವರಿಗೆ ವಿಶ್ರಾಂತಿ ನೀಡುತ್ತಾನೆ. ಅವನು ಆಕಾಶದಂತೆ ಅಭಯಾರ್ಥಿಗಳಿಗೆ ಆಶ್ರಯಕೊಟ್ಟು ಸಂದರ್ಭಾನುಸಾರ ತನ್ನ ಕೃಪಾವೃಷ್ಟಿಯನ್ನು ಅವರ ಮೇಲೆ ಸುರಿಸುತ್ತಾನೆ. ಭೂಮಿಯಂತೆ ಅವನು ಅತ್ಯಂತ ವಿನಯದಿಂದ ಇತರರಿಗೆ ಸುಖ ಕ್ಷೇಮ ನೀಡಲಿಕ್ಕಾಗಿ ಸ್ವಯಂ ಕಷ್ಟವನ್ನು ಸಹಿಸಿಕೊಂಡು ಸಕಲರನ್ನೂ ತನ್ನ ಸಹಾಯ ವಲಯದಲ್ಲಿ ಒಟ್ಟುಗೂಡಿಸಿ ವಿವಿಧ ತರದ ಆಧ್ಯಾತ್ಮಿಕ ಫಲಗಳನ್ನು ಅವರ ಮುಂದಿರಿಸುತ್ತಾನೆ. ಪರಿಪೂರ್ಣ ಧರ್ಮ ನಿಯಮದಿಂದ ಈ ಬಗೆಯ ಪರಿವರ್ತನೆಯುಂಟಾಗುತ್ತದೆ. ಈ ನಿಯಮಶಾಸ್ತ್ರಕ್ಕನುಸಾರವಾಗಿ ಜೀವಿಸುವವನು ಸೃಷ್ಟಿಕರ್ತನಿಗಾಗಿ ತನ್ನ ಕರ್ತವ್ಯಗಳನ್ನು ಅನುಷ್ಠಿಸಲಿಕ್ಕೂ ಸಮಸೃಷ್ಟಿಗಳಿಗಾಗಿ ತನ್ನ ಹೊಣೆಗಳನ್ನು ಸಂಪೂರ್ಣವಾಗಿ ನಿರ್ವಹಿಸಲಿಕ್ಕೂ ಶಕ್ತನಾಗುತ್ತಾನೆ. ಇಂತಹ ಭಕ್ತನು ದೇವಪ್ರೀತಿಯಲ್ಲಿ ಲೀನನಾಗಿ ಸಮಸೃಷ್ಟಿಗಳ ಯಥಾರ್ಥ ಸೇವಕನಾಗಿ ಮಾರ್ಪಡುತ್ತಾನೆ. ಧರ್ಮಶಾಸ್ತ್ರಕ್ಕನುಗುಣವಾದ ಜೀವಿತ ಮನುಷ್ಯನಲ್ಲಿ ಇಲ್ಲಿ ಉಂಟುಮಾಡುವ ಪ್ರಭಾವ ಇದಾಗಿದೆ.

(ಇಸ್ಲಾಂ ಧರ್ಮ ತತ್ವಜ್ಞಾನ)

– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಸತ್ಯವು ಸತ್ಕರ್ಮಗಳಿಗೂ ಸತ್ಕರ್ಮಗಳು ಸ್ವರ್ಗಕ್ಕೂ ಕೊಂಡೊಯ್ಯುತ್ತವೆ.
- ಸುಳ್ಳು ನುಡಿ ದುಷ್ಕರ್ಮಗಳಿಗೂ ದುಷ್ಕರ್ಮಗಳು ನರಕಕ್ಕೂ ಕೊಂಡೊಯ್ಯುತ್ತವೆ.
- ಸತ್ಯ ಮನಃಸಮಾಧಾನವನ್ನೂ ಸುಳ್ಳು ಮನಃಕ್ಲೇಶವನ್ನೂ ಹುಟ್ಟುಹಾಕುತ್ತವೆ. (ತಿರ್ಮಿದಿ)
- ಎಲ್ಲ ಪುಣ್ಯಕರ್ಮಗಳೂ ದಾನವಾಗಿವೆ. (ಬುಖಾರಿ)
- ಒಬ್ಬ ಮುಸ್ಲಿಮನ ಕೃಷಿಯಿಂದ ಕದ್ದುಹೋಗುವುದು, ತಿಂದು ನಾಶಮಾಡುವುದು, ಬೇರೆ ವಿಧದಲ್ಲಿ ನಷ್ಟ ಹೊಂದುವುದು ಅವನ ದಾನವಾಗಿದೆ. (ಮುಸ್ಲಿಂ)
- ಒಂದು ಖರ್ಜೂರದ ಸೀಳನ್ನು ದಾನಮಾಡಿಯಾದರೂ ನೀವು ನರಕದಿಂದ ಪಾರಾಗಿರಿ. (ಬುಖಾರಿ, ಮುಸ್ಲಿಂ)
- ಆರಾಧನೆಯಲ್ಲಿ ಅಮಿತತ್ವವನ್ನು ಕೈಗೊಳ್ಳುವವರು ಪರಾಜಿತರು. (ಹೀಗೆ ಅವರು ಮೂರು ಸಲ ಪುನರಾವರ್ತಿಸಿದರು) (ಮುಸ್ಲಿಂ)
- ಒಳಿತನ್ನು ತೋರಿಸಿಕೊಡುವವನಿಗೆ ಆ ಒಳಿತು ಮಾಡಿದವನ ತುಲ್ಯ ಪ್ರತಿಫಲ ಲಭಿಸುವುದು. (ಮುಸ್ಲಿಂ)
- ಜನರೊಡನೆ ಕರುಣೆ ತೋರಿಸದವನಿಗೆ ಅಲ್ಲಾಹನು ಕರುಣೆ ತೋರಿಸಲಾರ. (ಬುಖಾರಿ, ಮುಸ್ಲಿಂ)
- ದೀರ್ಘವಾಗಿ ನಮಾಝ್ ಮಾಡಲು ನಾನು ಆರಂಭಿಸುತ್ತೇನೆ. ಮಕ್ಕಳ ಅಳು ಕೇಳಿದಾಗ ತಾಯಂದಿರಿಗೆ ತೊಂದರೆಯಾಗದಿರಲಿಕ್ಕಾಗಿ ನಾನು ಬೇಗ ನಮಾಝ್ ಮುಗಿಸುತ್ತೇನೆ. (ಬುಖಾರಿ)


**Statement about ownership and other particulars about the Newspaper**
**Yugarashmi Quarterly**

(Form IV See Rule 8)

| | |
|---|---|
| 1. Place of Publication | : Mangalore |
| 2. Period of its Publication | : Quarterly |
| 3. Printer's Name | : Muhanmmad Yusuf |
| Whether citizen of India | : Yes |
| Address | : 10-23-1008/1, 1st Floor , Ansari Road, Bunder, Mangalore - 575 001 |
| 4. Publisher's Name | : Muhanmmad Yusuf |
| Whether citizen of India | : Yes |
| Address | : 10-23-1008/1, 1st Floor , Ansari Road, Bunder, Mangalore - 575 001 |
| 5. Editor's Name | : Muhanmmad Yusuf |
| Whether citizen of India | : Yes |
| Address | : 10-23-1008/1, 1st Floor , Ansari Road, Bunder, Mangalore - 575 001 |
| 6. Name and address of individuals who own the newspaper and partners or shareholders holding more than one percent of the capital | : Jamath Ahmadiyya "Darussalam" Near Railway Crossing, Pandeshwar, Mangalore - 575 001 |

I, Muhammad Yusuf hereby declare that the particulars given above are true to the best of my knowledge and belief.

Sd/-

Date : 1-6-2012

**Muhammad Yusuf**

# ಜಾಗತಿಕ ರಾಷ್ಟ್ರ ನಾಯಕರಿಗೆ ಪತ್ರಗಳು

## ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋಚ್ಚ ನಾಯಕರಾದ ಖಲೀಫರಿಂದ.




ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ವತಿಯಿಂದ ಇತ್ತೀಚೆಗೆ ನಡೆಸಲಾದ ಒಂಬತ್ತನೆಯ ಶಾಂತಿ ವಿಚಾರ ಗೋಷ್ಠಿಯಲ್ಲಿ ಸಚಿವರು, ವಿವಿಧ ದೇಶಗಳ ರಾಯಭಾರಿಗಳು, ಬ್ರಿಟನಿನ ಪಾರ್ಲಿಮೆಂಟಿನ ಹೌಸ್ ಆಫ್ ಕಾಮನ್ಸ್ ಮತ್ತು ಹೌಸ್ ಆಫ್ ಲಾರ್ಡ್ಸ್ ಸದಸ್ಯರು, ಲಂಡನಿನ ಮೇಯರ್ ಮತ್ತು ಎಲ್ಲಾ ವರ್ಗಗಳಿಗೆ ಸೇರಿದ ಅಧಿಕಾರಿಗಳೂ ಗಣ್ಯ ಮಹನೀಯರೂ ಭಾಗವಹಿಸಿ ಜಾಗತಿಕ ಶಾಂತಿಯನ್ನು ಸ್ಥಾಪಿಸುವ ಬಗ್ಗೆ ಚರ್ಚಿಸಿದರು. ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನೇತಾರರಾದ ಪಂಚಮ ಖಲೀಫ ಹಝ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬ್ ಮುಖ್ಯ ಭಾಷಣ ಮಾಡುತ್ತಾ, ಇಂದಿನ ಕಾಲದಲ್ಲಿ ಜಗತ್ತಿನ ಅಪಾಯಕಾರಿ ಸನ್ನಿವೇಶಗಳು ಅಣುಬಾಂಬ್ ವರ್ಷಿಸಲ್ಪಡುವ ಮೂರನೆಯ ಜಾಗತಿಕ ಮಹಾಯುದ್ಧಕ್ಕೆ ನಮ್ಮನ್ನು ಕೊಂಡೊಯ್ಯಬಹುದೆಂದು ಮುನ್ನೆಚ್ಚರಿಕೆ ನೀಡಿದರು. ಅವರು ಹೀಗೆ ಸಹ ಹೇಳಿದರು:

"ಜಗತ್ತಿನಲ್ಲಿ ಶಾಂತಿ ಸ್ಥಾಪಿತವಾಗಲು ನಾನು ಮಾಡಿದ ಪ್ರಯತ್ನಗಳಲ್ಲಿ ಒಂದು, ವಿವಿಧ ದೇಶಗಳ ಕೆಲವು ನಾಯಕರಿಗೆ ನಾನು ಪತ್ರ ಬರೆದುದಾಗಿದೆ... ಇರಾನ್ ಮತ್ತು ಇಸ್ರಾಯೇಲ್ ದೇಶಗಳ ಮಧ್ಯೆ ಶತ್ರುತ್ವವು ಅಪಾಯಕರವಾಗಿ ಕುದಿಯುತ್ತಿರುವಾಗ ಇಸ್ರಾಯೇಲ್ ದೇಶದ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹೂರಿಗೂ ಇರಾನಿನ ಅಧ್ಯಕ್ಷ ಮಹ್‌ಮೂದ್ ಅಹ್ಮದಿ ನೆಜಾದ್‌ರಿಗೂ ಪತ್ರ ಬರೆದು, ನಿರ್ಧಾರಗಳನ್ನು ಕೈಗೊಳ್ಳುವಾಗ ಆತುರತೆಯಿಂದಲೂ ನಿರ್ಲಕ್ಷ್ಯತೆಯಿಂದಲೂ ವರ್ತಿಸಿ ಮಾನವರ ಹಿತಕ್ಕೆ ಕೇಡುಂಟಾಗದಂತೆ ಜಾಗರೂಕರಾಗಿರಬೇಕೆಂದು ಅವರನ್ನು ನಾನು ಒತ್ತಾಯ ಪೂರ್ವಕವಾಗಿ ಅಪೇಕ್ಷಿಸಿದೆನು. ಇತ್ತೀಚೆಗೆ ನಾನು ಅಮೇರಿಕದ ಪ್ರೆಸಿಡೆಂಟ್ ಬರಾಕ್ ಒಬಾಮರಿಗೂ ಕೆನಡದ ಪ್ರಧಾನ ಮಂತ್ರಿ ಸ್ಟೀಫೆನ್ ಹಾರ್ಪರ್‌ರಿಗೂ ಪತ್ರ ಬರೆದು ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದತೆ ಸ್ಥಾಪಿಸುವ ಬಗ್ಗೆ ಅವರಿಬ್ಬರಿಗಿರುವ ಹೊಣೆಗಾರಿಕೆಗಳನ್ನು ಈಡೇರಿಸಬೇಕೆಂದು ಅಪೇಕ್ಷಿಸಿದ್ದೆನು. ನಾನು ಇತರ ದೇಶಗಳ ಅಧ್ಯಕ್ಷರಿಗೂ ರಾಜಕೀಯ ಧುರೀಣರಿಗೂ ಪತ್ರ ಬರೆಯಲು ಉದ್ದೇಶಿಸುತ್ತೇನೆ.

"ನಾನು ಬರೆದ ಪತ್ರಗಳಿಗೆ ವಿವಿಧ ರಾಷ್ಟ್ರೀಯ ನಾಯಕರು ಯಾವುದಾದರೂ ರೀತಿ ಲಕ್ಷ್ಯ ನೀಡುವರೋ ಇಲ್ಲವೋ ಎಂದು ನನಗೆ ತಿಳಿಯದು. ಅವರ ಪ್ರತಿಕ್ರಿಯೆ ಹೇಗೆಯಾದರೂ ಜಗತ್ತಿನಾದ್ಯಂತ ಮಿಲಿಯಗಟ್ಟಲೆ ಸಂಖ್ಯೆಯಲ್ಲಿರುವ ಅಹ್ಮದಿ ಮುಸ್ಲಿಮರ ಆಧ್ಯಾತ್ಮಿಕ ನಾಯಕ ಮತ್ತು ಖಲೀಫನಾಗಿರುವ ನಾನು ನಮ್ಮ ಜಮಾಅತ್ ಲೋಕದ ಇಂದಿನ ಅಪಾಯಕಾರಿ ಪರಿಸ್ಥಿತಿಯ ಬಗ್ಗೆ ಹೊಂದಿರುವ ಆತಂಕವನ್ನು ಬಹಿರಂಗಪಡಿಸಲು ಈ ಮೂಲಕ ಪ್ರಯತ್ನಿಸಿದ್ದೇನೆ. ನಾನು ನನ್ನ ಭಾವನೆಗಳನ್ನು ಬಹಿರಂಗಪಡಿಸಿದುದು ನನ್ನ ವೈಯಕ್ತಿಕ ಭಯದಿಂದಲ್ಲ. ನಾನು ಮಾನವರ ಬಗ್ಗೆ ಹೊಂದಿರುವ ಪ್ರಾಮಾಣಿಕ ಪ್ರೀತಿಯು ನನ್ನನ್ನು ಇದಕ್ಕೋಸ್ಕರ ಪ್ರೇರೇಪಿಸಿದೆ. ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಸರ್ವಲೋಕಗಳಿಗೂ ಅನುಗ್ರಹದಾಯಕರಾಗಿ ಕಳುಹಿಸಲ್ಪಟ್ಟಿದ್ದು ಅವರ ಉಪದೇಶಗಳು ಎಲ್ಲಾ ನೈಜ ಮುಸ್ಲಿಮರಲ್ಲಿ ಮಾನವರ ಬಗ್ಗೆ ಇಂತಹ ಪ್ರೀತಿಯನ್ನು ಪ್ರಬೋಧಿಸಿ ಬೆಳೆಸಿದೆ.

## ಇಸ್ರಾಯೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹೂರಿಗೆ ಬರೆದ ಪತ್ರ



ಫೆಬ್ರವರಿ ದಿನಾಂಕ 26, 2012

ಪ್ರಿಯ ಪ್ರಧಾನ ಮಂತ್ರಿಯವರೇ,

ಇತ್ತೀಚೆಗೆ ನಾನು ಒಂದು ಪತ್ರವನ್ನು ಇಸ್ರಾಯೇಲ್ ಪ್ರೆಸಿಡೆಂಟ್ ಸನ್ಮಾನ್ಯ ಸೈಮನ್ ಪೇರೆಸ್‌ರಿಗೆ, ಲೋಕದಲ್ಲಿ ಸಂಭವಿಸುತ್ತಿರುವ ಅಪಾಯಕಾರಿ ಸನ್ನಿವೇಶಗಳ ಬಗ್ಗೆ ಬರೆದಿದ್ದೆನು. ಬೇಗ ಬೇಗನೆ ಬದಲಾಗುತ್ತಿರುವ ಸನ್ನಿವೇಶಗಳ ಕಾರಣದಿಂದ ನಿಮ್ಮ ದೇಶದ ಸರಕಾರದ ಮುಖ್ಯಸ್ಥರಾದ ನಿಮಗೆ ಸಹ ಪತ್ರ ಬರೆಯುವುದು ಆವಶ್ಯಕವಾಗಿದೆ ಎಂದು ನಾನು ಮನವರಿಕೆ ಮಾಡಿರುವೆನು.

ನಿಮ್ಮ ಜನಾಂಗದ ಚರಿತ್ರೆ ಪ್ರವಾದಿಗಳೊಂದಿಗೆ ಮತ್ತು ದೇವಸಂದೇಶ ಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ಇಸ್ರಾಯೇಲ್ ಸಂತತಿಗಳಲ್ಲಿ ಆಗಮಿಸಿದ ಪ್ರವಾದಿಗಳು ನಿಮ್ಮ ಜನಾಂಗದ ಭವಿಷ್ಯದ ಬಗ್ಗೆ ಸ್ಪಷ್ಟ ಭವಿಷ್ಯವಾಣಿಗಳನ್ನು ನುಡಿದಿದ್ದಾರೆ. ಪ್ರವಾದಿಗಳ ಉಪದೇಶಗಳಿಗೆ ಅವಿಧೇಯ ರಾದುದರಿಂದಲೂ ಅವರ ಭವಿಷ್ಯವಾಣಿಗಳ ಬಗ್ಗೆ ನಿರ್ಲಕ್ಷತೆಯನ್ನು ಹೊಂದಿದುದರಿಂದಲೂ ಇಸ್ರಾಯೇಲ್ ಸಂತತಿಗಳು ಕಷ್ಟಗಳನ್ನೂ ಪರೀಕ್ಷೆಗಳನ್ನೂ ಎದುರಿಸಬೇಕಾಯಿತು. ನಿಮ್ಮ ಜನಾಂಗದ ನಾಯಕರು ಪ್ರವಾದಿಗಳನ್ನು ಅನುಸರಿಸುವುದರಲ್ಲಿ ನಿಷ್ಠಾವಂತರಾಗಿಯೂ ಸ್ಥಿರವಾಗಿಯೂ ಇದ್ದಿದ್ದರೆ ಅವರು ಅನೇಕ ದೌರ್ಭಾಗ್ಯಪೂರ್ಣ ಕಷ್ಟಗಳಿಂದ ರಕ್ಷಿಸಲ್ಪಡುತ್ತಿದ್ದರು. ಆದುದರಿಂದ ನೀವು ನಿಮ್ಮ ಜನಾಂಗದ ಪ್ರವಾದಿಗಳ ಭವಿಷ್ಯವಾಣಿಗಳ ಬಗ್ಗೆ ಮತ್ತು ಆಜ್ಞೆಗಳ ಬಗ್ಗೆ ಇತರರಿಗಿಂತ ಹೆಚ್ಚು ಲಕ್ಷ್ಯನೀಡುವುದು ನಿಮ್ಮ ಕರ್ತವ್ಯವಾಗಿರುತ್ತದೆ.

ಪ್ರವಾದಿ ಮುಹಮ್ಮದ್‌ರ(ಸ) ದಾಸನಾಗಿ ದೇವನಿಂದ ನೇಮಿಸಲ್ಪಟ್ಟ ವಾಗ್ದತ್ತ ಮಸೀಹ್ ಮತ್ತು ಮಹ್‌ದಿಯವರ ಖಲೀಫ ಎಂಬ ನೆಲೆಯಲ್ಲಿ ನಾನು ನಿಮ್ಮನ್ನು ಸಂಬೋಧಿಸುತ್ತಿದ್ದೇನೆ. ಪ್ರವಾದಿ ಮುಹಮ್ಮದ್‌ರನ್ನು(ಸ) ಇಸ್ರಾಯೇಲ್ ಸಂತತಿಗಳ ಸಹೋದರ ಜನಾಂಗದಲ್ಲಿ ಮೋಶೆ ಪ್ರವಾದಿಗೆ ಹೋಲಿಕೆ ಹೊಂದಿದವರನ್ನಾಗಿ ಮಾಡಿ ಕಳುಹಿಸಲಾಯಿತು. (ಧರ್ಮೋಪದೇಶ ಕಾಂಡ 18:18 ನೋಡಿರಿ). ಅವರು ಸರ್ವ ಮಾನವರಿಗೆ ಅನುಗ್ರಹದಾಯಕರಾಗಿರುವರು. ಆದುದರಿಂದ, ದೇವ ಸಂದೇಶದ ಬಗ್ಗೆ ನಿಮಗೆ ಮುನ್ನೆಚ್ಚರಿಕೆ ನೀಡುವುದು ನನ್ನ ಕರ್ತವ್ಯವಾಗಿದೆ. ನೀವು ದೇವನ ಕರೆಗೆ ಓಗೊಡುವವರೂ ಸರ್ವಶಕ್ತನೂ ಭೂಮ್ಯಾಕಾಶಗಳ ಒಡೆಯನೂ ಆಗಿರುವ ದೇವನ ಮಾರ್ಗದರ್ಶನ ಪ್ರಕಾರ ನೇರಮಾರ್ಗವನ್ನು ಕಂಡುಕೊಳ್ಳುವುದರಲ್ಲಿ ಜಯಶಾಲಿಗಳೂ ಆಗುವಿರೆಂದು ನಾನು ಪ್ರತೀಕ್ಷಿಸುತ್ತೇನೆ.

ನೀವು ಇರಾನನ್ನು ಆಕ್ರಮಿಸುವುದಕ್ಕಾಗಿ ಸಿದ್ಧತೆಗಳನ್ನು ಮಾಡುತ್ತಿರುವಿರಿ ಎಂದು ಇಂದಿನ ದಿನಗಳಲ್ಲಿ ವಾರ್ತೆಗಳನ್ನು ಆಲಿಸುತ್ತಿದ್ದೇವೆ. ಜಾಗತಿಕ ಮಹಾಯುದ್ಧದ ಭೀಕರ ಪರಿಣಾಮಗಳು ನಿಮ್ಮ ಮುಂದಿವೆ. ದ್ವಿತೀಯ ಮಹಾಯುದ್ಧದಲ್ಲಿ ಮಿಲಿಯಗಟ್ಟಲೆ ಜನರು ಕೊಲ್ಲಲ್ಪಟ್ಟರು. ಅವರ ಪೈಕಿ ಲಕ್ಷಾಂತರ ಜನರು ಯಹೂದಿಯರಾಗಿದ್ದರು. ಪ್ರಧಾನ ಮಂತ್ರಿಯಾದ ನೀವು ನಿಮ್ಮ ದೇಶದ ಜನರ ಜೀವವನ್ನು ರಕ್ಷಿಸಬೇಕಾದ ಹೊಣೆಗಾರಿಕೆಯನ್ನು ಹೊಂದಿರುವಿರಿ. ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಜಾಗತಿಕ ಮಹಾಯುದ್ಧವು ಕೇವಲ ಎರಡು ದೇಶಗಳ ಮಧ್ಯೆ ಮಾತ್ರ ನಡೆಯಲಾರದು. ಯುದ್ಧಮಾಡುವ ದೇಶಗಳ ಪರಸ್ಪರ ವಿರೋಧಿಸುವ ಎರಡು ಗುಂಪುಗಳು ಅಸ್ತಿತ್ವಕ್ಕೆ ಬರುವುವು. ಜಾಗತಿಕ ಮಹಾಯುದ್ಧವು ಪ್ರಾರಂಭವಾಗುವ ಬೆದರಿಕೆಯು ಈಗ ಬಹಳ ತೀವ್ರವಾಗಿದೆ. ಮುಸ್ಲಿಮರ, ಕ್ರೈಸ್ತರ, ಯುಹೂದಿಯರ ಮತ್ತು ಇತರರ ಜೀವಿತವು ಅದರಿಂದ ಅಪಾಯಕ್ಕೊಳಪಡುವುದು. ಅಂತಹ ಯುದ್ಧವೇನಾದರೂ ಘಟಿಸುವುದಾದರೆ ಮಾನವರ ಧ್ವಂಸದ ಸರಪಳಿಯಾಗಿ ಪರಿಣಮಿಸುವುದು. ಈ ಅನಾಹುತದ ಪರಿಣಾಮಗಳನ್ನು ಮುಂದಿನ ಪೀಳಿಗೆಗಳು ಅನುಭವಿಸ ಬೇಕಾಗುವುದು. ಅವರು ಅಂಗವಿಕಲರಾಗಿ ಅಥವಾ ಅಂಗಹೀನರಾಗಿ ಜನಿಸುವರು. ಏಕೆಂದರೆ ನಿಶ್ಚಯವಾಗಿಯೂ ಇಂತಹ

ಯುದ್ಧದಲ್ಲಿ ಅಣ್ವಾಯುಧಗಳು ಬಳಸಲ್ಪಡುವುವು.

ಆದುದರಿಂದ, ನಾನು ನಿಮ್ಮೊಂದಿಗೆ ಅಪೇಕ್ಷಿಸುವುದೇನೆಂದರೆ, ಲೋಕವನ್ನು ಜಾಗತಿಕ ಮಹಾಯುದ್ಧದ ಮುಷ್ಟಿಯ ಹಿಡಿತಕ್ಕೊಳಪಡಿಸಲು ಕೊಂಡೊಯ್ಯುವುದಕ್ಕೆ ಪ್ರತಿಯಾಗಿ ಲೋಕವನ್ನು ಈ ಜಾಗತಿಕ ಅನಾಹುತದಿಂದ ರಕ್ಷಿಸಲು ಗರಿಷ್ಠ ಪ್ರಯತ್ನ ಮಾಡಬೇಕು. ಬಲಪ್ರಯೋಗಿಸಿ ಬಿಕ್ಕಟ್ಟುಗಳನ್ನು ಪರಿಹರಿಸುವುದಕ್ಕೆ ಬದಲಾಗಿ ಚರ್ಚೆಯ ಮೂಲಕ ಜಗಳಗಳನ್ನು ಪರಿಹರಿಸಲು ಪ್ರಯತ್ನಿಸಬೇಕು. ಹಾಗೆ ಮಾಡಿದರೆ ನೀವು ನಮ್ಮ ಮುಂದಿನ ಪೀಳಿಗೆಗಳಿಗೆ ಪ್ರಕಾಶಮಾನವಾದ ಭಾವೀ ಜೀವಿತವನ್ನು – ಅಂಗವಿಕಲತೆ ಮತ್ತು ಅಂಗಹೀನತೆಯ ಬಹುಮಾನಕ್ಕೆ ಪ್ರತಿಯಾಗಿ – ಬಹುಮಾನವಾಗಿ ನೀಡುವಿರಿ. ನಿಮ್ಮ ಧರ್ಮದ ಉಪದೇಶಗಳನ್ನು ಉಲ್ಲೇಖಿಸಿ ನನ್ನ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಲು ಬಯಸುತ್ತೇನೆ. ನಿಮ್ಮ ಧಾರ್ಮಿಕ ಗ್ರಂಥವಾದ ಝುಬೂರ್‌ನಲ್ಲಿ (ಕೀರ್ತನೆಗಳು) ಹೀಗೆ ಹೇಳಲಾಗಿದೆ: """"ಕೆಟ್ಟ ನಡತೆಯವರನ್ನು ನೋಡಿ ಉರಿಗೊಳ್ಳಬೇಡ. ದುರಾಚಾರಿಗಳಿಗೋಸ್ಕರ ಹೊಟ್ಟೆಕಿಚ್ಚು ಪಡಬೇಡ. ಅವರು ಹುಲ್ಲಿನಂತೆ ಬೇಗ ಒಣಗಿ ಹೋಗುವರು; ಸೊಪ್ಪಿನ ಪಲ್ಯದಂತೆ ಬಾಡಿಹೋಗುವರು. ಕರ್ತನಲ್ಲಿ ಭರವಸೆಯಿಟ್ಟು ಒಳ್ಳೆಯದನ್ನು ಮಾಡು; ದೇಶದಲ್ಲಿ ವಾಸವಾಗಿದ್ದು ನಂಬಿಕೆಯನ್ನು ಅನುಸರಿಸು. ಆಗ ಕರ್ತನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು. ನಿನ್ನ ಭೂಯಾತ್ರೆಯ ಚಿಂತೆಯನ್ನು ಕರ್ತನಿಗೆ ವಹಿಸಿಬಿಟ್ಟು ಭರವಸದಿಂದಿರು; ಆತನೇ ಅದನ್ನು ಸಾಗಿಸುವನು. ಆತನು ನಿನ್ನ ನೀತಿಯನ್ನು ಉದಯದ ಬೆಳಕಿನಂತೆಯೂ ನಿನ್ನ ನ್ಯಾಯವನ್ನು ಮಧ್ಯಾಹ್ನದ ತೇಜಸ್ಸಿನಂತೆಯೂ ಪ್ರಕಾಶಗೊಳಿಸುವನು. ಕರ್ತನ ಸನ್ನಿಧಿಯಲ್ಲಿ ಶಾಂತನಾಗಿ ಆತನಿಗೋಸ್ಕರ ಕಾದಿರು; ಕುಯುಕ್ತಿಗಳನ್ನು ನೆರವೇರಿಸಿಕೊಂಡು ಅಭಿವೃದ್ಧಿ ಹೊಂದುವವರನ್ನು ನೋಡಿ ಉರಿಗೊಳ್ಳಬೇಡ. ಕೋಪವನ್ನು ಅಣಗಿಸಿಕೋ; ರೋಷವನ್ನು ಬಿಡು. ಉರಿಗೊಳ್ಳಬೇಡ; ಕೆಡುಕಿಗೆ ಕಾರಣವಾದೀತು. ಕೆಡುಕರು ತೆಗೆದು ಹಾಕಲ್ಪಡುವರು; ಕರ್ತನನ್ನು ನಿರೀಕ್ಷಿಸುವವರೇ ದೇಶವನ್ನು ಅನುಭವಿಸುವರು. ಇನ್ನು ಸ್ವಲ್ಪ ಕಾಲದೊಳಗೆ ದುಷ್ಟನು ಕಾಣಿಸದೆ ಹೋಗುವನು; ಅವನಿದ್ದ ಸ್ಥಳ ಎಷ್ಟು ವಿಚಾರಿಸಿದರೂ ಅವನು ಸಿಕ್ಕುವುದೇ ಇಲ್ಲ. ಆದರೆ ದೀನರು ದೇಶವನ್ನು ಅನುಭವಿಸುವರು; ಅವರು ಮಹಾಸೌಖ್ಯದಿಂದ ಆನಂದಿಸುವರು."" (ಕೀರ್ತನೆಗಳು 37:1–11)

ಇದೇ ರೀತಿ ಧರ್ಮೋಪದೇಶಕಾಂಡದಲ್ಲಿ ಹೀಗೆ ನಾವು ಕಾಣುತ್ತೇವೆ: ""ಹೆಚ್ಚು ಕಡಮೆಯಾಗಿರುವ ಎರಡು ವಿಧವಾದ ತೂಕದ ಕಲ್ಲುಗಳನ್ನು ನಿಮ್ಮ ಚೀಲದಲ್ಲಿಟ್ಟುಕೊಳ್ಳಬಾರದು. ಹೆಚ್ಚು ಕಡಮೆಯಾದ ಎರಡು ವಿಧವಾದ ಸೇರುಗಳು ನಿಮ್ಮ ಮನೆಯಲ್ಲಿರಬಾರದು. ನಿಮ್ಮ ತೂಕದ ಕಲ್ಲೂ ನಿಮ್ಮ ಅಳತೆಯ ಸೇರೂ ನ್ಯಾಯವಾಗಿಯೇ ಇರಬೇಕು. ನೀವು ಹೀಗೆ ನಡೆದುಕೊಂಡರೆ ನಿಮ್ಮ ದೇವರಾದ ಕರ್ತನು ನಿಮಗೆ ಕೊಡುವ ದೇಶದಲ್ಲಿ ಬಹುಕಾಲ ಬಾಳುವಿರಿ. ನ್ಯಾಯ ವಿರುದ್ಧವಾದ ಅಳತೆ ತೂಕಗಳನ್ನು ಮಾಡುವವರೆಲ್ಲರೂ ನಿಮ್ಮ ದೇವರಾದ ಕರ್ತನಿಗೆ ಹೇಯವಾಗಿದ್ದಾರೆ."""" (ಧರ್ಮೋಪದೇಶ ಕಾಂಡ 25:13–16)

ಆದುದರಿಂದ ಜಾಗತಿಕ ನಾಯಕರು ಮತ್ತು ವಿಶಿಷ್ಟವಾಗಿ ನೀವು ಬಲಾತ್ಕಾರದಿಂದ ಆಡಳಿತೆ ನಡೆಸುವ ನಿಲುವನ್ನು ತ್ಯಜಿಸಬೇಕು ಮತ್ತು ಬಲಹೀನರನ್ನು ದೌರ್ಜನ್ಯಕ್ಕೆ ಗುರಿಪಡಿಸುವುದನ್ನು ಬಿಟ್ಟುಬಿಡಬೇಕು. ಇದಕ್ಕೆ ಬದಲಾಗಿ ನ್ಯಾಯ ಮತ್ತು ಶಾಂತಿಯನ್ನು ಸ್ಥಾಪಿಸಲು ಮತ್ತು ಪ್ರೋತ್ಸಾಹಿಸಲು ಪ್ರಯತ್ನಿಸಬೇಕು. ಹೀಗೆ ನೀವು ಮಾಡಿದರೆ ನೀವೆಲ್ಲರೂ ಶಾಂತಿಯಲ್ಲಿ ಇದ್ದು ಶಕ್ತಿಗಳಿಸುವಿರಿ ಮತ್ತು ಜಾಗತಿಕ ಶಾಂತಿಯೂ ಸ್ಥಾಪಿಸಲ್ಪಡುವುದು. ನೀವು ಮತ್ತು ಜಾಗತಿಕ ನಾಯಕರು ನನ್ನ ಸಂದೇಶವನ್ನು ಮನವರಿಕೆ ಮಾಡಿಕೊಂಡು ನಿಮ್ಮೆಲ್ಲರ ಸ್ಥಾನಗಳನ್ನು ಅರಿತುಕೊಂಡು ನಿಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವವರಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ನಿಮ್ಮೊಂದಿಗೆ ಸ್ನೇಹಪೂರ್ವಕ,

***ಮಿರ್ಝಾ ಮಸ್ರೂರ್ ಅಹ್ಮದ್, ಖಲೀಫತುಲ್ ಮಸೀಹ್ V***

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋಚ್ಚ ನಾಯಕ

## ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಅಧ್ಯಕ್ಷರಿಗೆ ಪತ್ರ



ಮಾರ್ಚ್ ದಿನಾಂಕ 8, 2012

ಪ್ರಿಯ ಅಧ್ಯಕ್ಷರೇ.

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ.

ಲೋಕದಲ್ಲಿ ಕಂಡುಬರುತ್ತಿರುವ ಭಯಾನಕ ಪರಿಸ್ಥಿತಿಯ ಕಾರಣದಿಂದ ಇರಾನಿನ ಅಧ್ಯಕ್ಷರಾದ ನಿಮಗೆ ಪತ್ರ ಬರೆಯಬೇಕಾದುದು ಆವಶ್ಯಕವಾಗಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ನಿಮ್ಮ ದೇಶ ಮತ್ತು ಲೋಕಕ್ಕೆ ಸಂಬಂಧಿಸಿ ನಿರ್ಧಾರಗಳನ್ನು ಮಾಡುವ ಅಧಿಕಾರವನ್ನು ನೀವು ಹೊಂದಿರುವಿರಿ. ಈಗ ಲೋಕದಲ್ಲಿ ಬಹಳ ಕೋಲಾಹಲ ಮತ್ತು ಆತಂಕವು ವ್ಯಾಪಿಸಿದೆ. ಕೆಲವು ಪ್ರದೇಶಗಳಲ್ಲಿ ಚಿಕ್ಕಮಟ್ಟದಲ್ಲಿ ಯುದ್ಧಗಳು ಪ್ರಾರಂಭವಾಗಿವೆ. ಬೇರೆ ಕೆಲವು ಪ್ರದೇಶಗಳಲ್ಲಿ ಪ್ರಬಲ ರಾಷ್ಟ್ರಗಳು ಶಾಂತಿ ಸ್ಥಾಪಿಸುವ ನೆವನದಲ್ಲಿ ಯುದ್ಧನಿರತವಾಗಿದೆ. ಪ್ರತಿಯೊಂದು ದೇಶ ಇತರ ದೇಶಗಳಿಗೆ ನೆರವು ನೀಡಲು ಅಥವಾ ಎದುರಿಸಲು ಕಾರ್ಯನಿರತವಾಗಿವೆ. ಆದರೆ ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುತ್ತಾ ಇಲ್ಲ. ಲೋಕದಲ್ಲಿ ಈಗಿರುವ ಸನ್ನಿವೇಶಗಳನ್ನು ವೀಕ್ಷಿಸುವುದಾದರೆ ಇನ್ನೊಂದು ಜಾಗತಿಕ ಮಹಾಯುದ್ಧಕ್ಕೆ ಅಸ್ತಿಭಾರವನ್ನು ಈಗಾಗಲೇ ಹಾಕಲಾಗಿದೆ ಎಂದು ನಾವು ಖೇದಪೂರ್ವಕವಾಗಿ ಕಾಣುತ್ತೇವೆ. ದೊಡ್ಡ ಮತ್ತು ಚಿಕ್ಕ ಅನೇಕ ದೇಶಗಳು ಅಣು ಅಸ್ತ್ರಗಳನ್ನು ಹೊಂದಿರುವುದರಿಂದ ಪರಸ್ಪರ ದ್ವೇಷ ಮತ್ತು ಹಗೆತನವು ವರ್ಧಿಸುತ್ತಾ ಇರುತ್ತದೆ. ಇಂತಹ ದುಸ್ಥಿತಿಯಲ್ಲಿ ಮೂರನೆಯ ಜಾಗತಿಕ ಮಹಾಯುದ್ಧವು ನಿಶ್ಚಯವಾಗಿಯೂ ನಮ್ಮ ಮುಂದೆ ಕಾಣಿಸುತ್ತಾ ಇದೆ. ಅಣುಬಾಂಬುಗಳನ್ನು ಅನೇಕ ದೇಶಗಳು ಹೊಂದಿರುವುದರಿಂದ ಮೂರನೆಯ ಜಾಗತಿಕ ಮಹಾಯುದ್ಧವು ಅಣುಬಾಂಬು ವರ್ಷಿಸುವ ಯುದ್ಧವಾಗುವುದು. ಇದರ ಪರಿಣಾಮ ಬಹಳ ದಾರುಣ ವಿಪತ್ತಾಗುವುದು. ಇಂತಹ ಯುದ್ಧಗಳ ದೀರ್ಘಕಾಲೀನ ಪರಿಣಾಮದಿಂದಾಗಿ ಮುಂದಿನ ಪೀಳಿಗೆಗಳು ಅಂಗವಿಕಲರಾಗಿ ಮತ್ತು ಅಂಗಹೀನರಾಗಿ ಜನಿಸುವರು.

ನನ್ನ ನಂಬಿಕೆ ಏನೆಂದರೆ ಹಝ್ರತ್ ಪ್ರವಾದಿ ಮುಹಮ್ಮದ್‌ರನ್ನು[ಸ] ಶಾಂತಿಯನ್ನು ಸ್ಥಾಪಿಸಲು ಕಳುಹಿಸಲಾಗಿದ್ದು ಅವರು ರಹ್ಮತುನ್ ಲಿಲ್‌ಆಲಮೀನ್ - ಸಕಲ ಮಾನವರಿಗೂ ಅನುಗ್ರಹ ದಾಯಕರಾಗಿದ್ದಾರೆ. ಅವರ ಅನುಯಾಯಿಗಳಾಗಿರುವ ನಾವು ಲೋಕವು ಇಂತಹ ನಾಶಕ್ಕೆ ಗುರಿಯಾಗಬೇಕೆಂದು ಆಶಿಸಲಾರೆವು. ಇರಾನ್ ಜಗತ್ತಿನಲ್ಲಿರುವ ವಿಶಿಷ್ಟ ಶಕ್ತಿ ಗಳಿಸಿದ ರಾಷ್ಟ್ರಗಳಲ್ಲಿ ಒಂದಾದುದರಿಂದ ಅದು ಮೂರನೆಯ ಜಾಗತಿಕ ಮಹಾಯುದ್ಧವನ್ನು ತಡೆಯಲು ತನ್ನ ಪಾತ್ರವನ್ನು ನಿರ್ವಹಿಸಬೇಕು. ಲೋಕದ ಮಹಾಶಕ್ತಿ ರಾಷ್ಟ್ರಗಳು ದ್ವಿಮುಖ ಧೋರಣೆಯಿಂದ ವರ್ತಿಸುತ್ತವೆ ಎಂಬುದು ನಿರಾಕರಿಸಲಾಗದ ಸತ್ಯವಾಗಿದೆ. ಅವರ ಅನ್ಯಾಯಭರಿತ ವರ್ತನೆ ಲೋಕದಲ್ಲೆಲ್ಲಾ ಆತಂಕವನ್ನೂ ಅಸ್ತವ್ಯಸ್ತತೆಯನ್ನೂ ಉಂಟುಮಾಡಿದೆ.

ಆದರೆ ಕೆಲವು ಮುಸ್ಲಿಮ್ ಗುಂಪುಗಳು ಇಸ್ಲಾಮಿನ ಉಪದೇಶಗಳಿಗೆ ವಿರುದ್ಧವಾಗಿ ಅನುಚಿತವಾಗಿ ವರ್ತಿಸುತ್ತವೆ ಎಂಬುದನ್ನು ಸಹ ನಾವು ನಿರ್ಲಕ್ಷಿಸಲು ಸಾಧ್ಯವಿಲ್ಲ. ಲೋಕದಲ್ಲಿ ಶಕ್ತಿಶಾಲಿಗಳಾದ ಪ್ರಬಲ ರಾಷ್ಟ್ರಗಳು ಇದನ್ನು ತಮ್ಮ ಸ್ವಾರ್ಥ ಸಾಧನೆಗೋಸ್ಕರ ಬಡ ಮುಸ್ಲಿಮ್ ದೇಶಗಳ ವಿರುದ್ಧ ವರ್ತಿಸಲು ನೆವನವನ್ನಾಗಿ ಮಾಡಿಕೊಂಡಿವೆ.

ನೀವು ನಿಮ್ಮ ಎಲ್ಲಾ ಶಕ್ತಿಗಳನ್ನೂ ಪ್ರಯತ್ನಗಳನ್ನೂ ವಿಶ್ವವನ್ನು ಮೂರನೆಯ ಜಾಗತಿಕ ಮಹಾ

ಯುದ್ಧದಿಂದ ರಕ್ಷಿಸಲು ಕೇಂದ್ರೀಕರಿಸಬೇಕೆಂದು ನಾನು ನಿಮ್ಮನ್ನು ಇನ್ನೊಮ್ಮೆ ಅಪೇಕ್ಷಿಸುತ್ತೇನೆ. ಯಾವುದೇ ಜನಾಂಗದ ವಿರುದ್ಧವಾಗಿರುವ ಹಗೆತನವು ನ್ಯಾಯಯುತವಾಗಿ ವರ್ತಿಸುವುದನ್ನು ತಡೆಗಟ್ಟಬಾರದೆಂದು ಪವಿತ್ರ ಖುರ್‌ಆನ್ ಮುಸ್ಲಿಮರಿಗೆ ಕಲಿಸುತ್ತದೆ. ಪವಿತ್ರ ಖುರ್‌ಆನಿನ ಸೂರಃ ಅಲ್‌ಮಾಇದದಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿರುತ್ತಾನೆ: "

"ಒಂದು ಜನತೆಯವರು ನಿಮ್ಮನ್ನು ಪವಿತ್ರ ಮಸ್‌ಜಿದ್‌ನಿಂದ ತಡೆಗಟ್ಟಿ (ನಿಮ್ಮೊಡನೆ) ತೋರಿಸಿದ ವಿರೋಧವು ಅವರೊಡನೆ ಅನ್ಯಾಯದಿಂದ ವರ್ತಿಸುವರೆ ನಿಮ್ಮನ್ನು ಪ್ರೇರೇಪಿಸದಿರಲಿ. ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ನೀವು ಪರಸ್ಪರ ಸಹಕರಿಸಿರಿ. (ಆದರೆ) ಪಾಪಕರ್ಮ ಮತ್ತು ಅನ್ಯಾಯವೆಸಗುವುದರಲ್ಲಿ ನೀವು ಅನ್ಯೋನ್ಯ ಸಹಕರಿಸಬಾರದು. ಅಲ್ಲಾಹನ ಭಯ ಭಕ್ತಿಯಿರಿಸಿಕೊಳ್ಳಿರಿ. ಖಂಡಿತವಾಗಿಯೂ ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ." (5:3)

ಪವಿತ್ರ ಖುರ್‌ಆನಿನ ಇದೇ ಅಧ್ಯಾಯದಲ್ಲಿ ಅಲ್ಲಾಹನು ಮುಸ್ಲಿಮರಿಗೆ ನೀಡಿದ ಈ ಕೆಳಗಿನ ಆಜ್ಞೆಯನ್ನು ಸಹ ಕಾಣುತ್ತೇವೆ:

""ಓ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯದಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ಆ ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ."" (5:9)

ಆದುದರಿಂದ, ನೀವು ಇನ್ನೊಂದು ದೇಶವನ್ನು ದ್ವೇಷ ಮತ್ತು ಹಗೆತನದ ಕಾರಣದಿಂದ ವಿರೋಧಿಸಬಾರದು. ಇಸ್ರಾಯೇಲ್ ತನ್ನ ಪರಿಮಿತಿಯನ್ನು ದಾಟಿಹೋಗಿದೆ ಮತ್ತು ತನ್ನ ದೃಷ್ಟಿಯನ್ನು ಇರಾನಿನ ಮೇಲಿರಿಸಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವುದಾದರೂ ದೇಶ ನಿಮ್ಮ ದೇಶದ ವಿರುದ್ಧ ಆಕ್ರಮಣ ಮಾಡಿದರೆ ಸಹಜವಾಗಿಯೂ ಅದನ್ನು ಪ್ರತಿರೋಧಿಸುವ ಹಕ್ಕು ನಿಮಗಿರುತ್ತದೆ. ಆದರೆ ಸಾಧ್ಯವಿರುವಷ್ಟು ಮಟ್ಟಿಗೆ ಜಗಳಗಳನ್ನು ರಾಜಕೀಯ ಚರ್ಚೆ ಮತ್ತು ಮಾತುಕತೆಗಳ ಮೂಲಕ ಪರಿಹರಿಸಲು ಪ್ರಯತ್ನಿಸಬೇಕು. ಶಕ್ತಿ ಪ್ರಯೋಗದ ಬದಲಿಗೆ ಮಾತುಕತೆ ಮೂಲಕ ಸಮಸ್ಯೆಗಳನ್ನು ಪರಿಹರಿಸಬೇಕೆಂದು ನಾನು ನಿಮ್ಮನ್ನು ವಿನೀತವಾಗಿ ಅಪೇಕ್ಷಿಸುತ್ತೇನೆ. ನಾನು ನಿಮ್ಮೊಂದಿಗೆ ಈ ಅಪೇಕ್ಷೆ ಮಾಡಿದುದೇಕೆಂದರೆ ನಾನು ಅಲ್ಲಾಹನಿಂದ ಆಯ್ಕೆಗೊಂಡ ಮಹಾನುಭಾವರ ಅನುಯಾಯಿಯಾಗಿದ್ದೇನೆ. ಅವರು ಈ ಕಾಲಘಟ್ಟದಲ್ಲಿ ಪ್ರವಾದಿ ಮುಹಮ್ಮದ್‌ರ(ಸ) ನಿಜವಾದ ದಾಸನಾಗಿ ಆಗಮಿಸಿ ತಾನು ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದೀ ಎಂದು ವಾದಿಸಿದರು. ಅವರ ಆಗಮನದ ಉದ್ದೇಶ ಮಾನವರನ್ನು ಅಲ್ಲಾಹನಿಗೆ ಹೆಚ್ಚು ಸಮೀಪಗೊಳಿಸುವುದು ಮತ್ತು ನಮ್ಮ ಯಜಮಾನರೂ ನಮ್ಮ ಮಾರ್ಗದರ್ಶಕರೂ ಆಗಿರುವ ಸಕಲ ಲೋಕಗಳಿಗೂ ಅನುಗ್ರಹದಾಯಕರಾಗಿರುವ ಹಝ್‌ರತ್ ಪ್ರವಾದಿ ನಮಗೆ ತೋರಿಸಿಕೊಟ್ಟ ರೀತಿಯಲ್ಲಿ ಮಾನವರ ಹಕ್ಕುಗಳನ್ನು ಸ್ಥಾಪಿಸುವುದಾಗಿದೆ.

ಸರ್ವೋನ್ನತನಾದ ಅಲ್ಲಾಹನು ಮುಸ್ಲಿಮ್ ಸಮುದಾಯಕ್ಕೆ ಈ ಸುಂದರ ಉಪದೇಶಗಳನ್ನು ಮನವರಿಕೆ ಮಾಡಿಕೊಳ್ಳುವ ಸೌಭಾಗ್ಯವನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ವಸ್ಸಲಾಮ್. ನಿಮ್ಮೊಂದಿಗೆ ಸ್ನೇಹಪೂರ್ವಕ,

***ಮಿರ್ಝಾ ಮಸ್ರೂರ್ ಅಹ್ಮದ್, ಖಲೀಫತುಲ್ ಮಸೀಹ್ V***

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನಾಯಕ

## ಯು.ಎಸ್.ಎ. ಪ್ರೆಸಿಡೆಂಟ್ ಬರಾಕ್ ಒಬಾಮರಿಗೆ ಬರೆದ ಪತ್ರ

ಮಾರ್ಚ್ ದಿನಾಂಕ 8 , 2012



ಪ್ರಿಯ ಅಧ್ಯಕ್ಷರೇ,

ಲೋಕದಲ್ಲಿ ಸಂಭವಿಸುತ್ತಿರುವ ಆತಂಕಕಾರಿ ಬೆಳವಣಿಗೆಗಳ ಕಾರಣ ನಿಮಗೆ ಪತ್ರ ಬರೆಯುವುದು ಆವಶ್ಯಕವೆಂದು ನಾನು ಭಾವಿಸುತ್ತೇನೆ. ಜಾಗತಿಕ ಮಹಾಶಕ್ತಿ ರಾಷ್ಟ್ರವಾದ ಅಮೇರಿಕದ ಅಧ್ಯಕ್ಷರಾದ ನೀವು ನಿಮ್ಮ ದೇಶ ಮತ್ತು ಲೋಕದ ಭವಿಷ್ಯವನ್ನು ಬಾಧಿಸುವಂತಹ ನಿರ್ಧಾರಗಳನ್ನು ಮಾಡುವ ಅಧಿಕಾರವನ್ನು ಹೊಂದಿರುವಿರಿ.

ಈಗಿನ ಕಾಲದಲ್ಲಿ ಲೋಕದಾದ್ಯಂತ ಕ್ಷೋಭೆ ಮತ್ತು ಆತಂಕ ವ್ಯಾಪಕವಾಗಿ ಹರಡಿವೆ. ಕೆಲವು ಪ್ರದೇಶಗಳಲ್ಲಿ ಚಿಕ್ಕ ಮಟ್ಟದ ಯುದ್ಧಗಳು ನಡೆಯುತ್ತಿವೆ. ದುರದೃಷ್ಟಕರವಾಗಿ, ಮಹಾಶಕ್ತಿ ರಾಷ್ಟ್ರಗಳು ಸಂಘರ್ಷಭರಿತ ಪ್ರಗೇಶಗಳಲ್ಲಿ ಶಾಂತಿಯನ್ನು ಸ್ಥಾಪಿಸಲು ಮಾಡಿದ ಪ್ರಯತ್ನಗಳು ಪ್ರತೀಕ್ಷಿಸಿದ ರೀತಿಯಲ್ಲಿ ಫಲಕಾರಿಯಾಗಲಿಲ್ಲ. ಜಾಗತಿಕವಾಗಿ ನೋಡಿದರೆ ಹೆಚ್ಚು ಕಮ್ಮಿ ಪ್ರತಿಯೊಂದು ದೇಶವು ಇತರ ದೇಶಗಳನ್ನು ಬೆಂಬಲಿಸುವ ಅಥವಾ ವಿರೋಧಿಸುವ ಚಟುವಟಿಕೆಗಳಲ್ಲಿ ನಿರತವಾಗಿವೆ. ಆದರೆ ನ್ಯಾಯಪಾಲನೆಯ ಆವಶ್ಯಕತೆಗಳು ಈಡೇರಿಸಲ್ಪಡುವುದಿಲ್ಲ. ನಾವು ಲೋಕದ ಈಗಿನ ಸ್ಥಿತಿಗತಿಗಳನ್ನು ವೀಕ್ಷಿಸುವುದಾದರೆ, ಇನ್ನೊಂದು ಜಾಗತಿಕ ಮಹಾಯುದ್ಧಕ್ಕೋಸ್ಕರ ಅಸ್ತಿಭಾರವನ್ನು ಇಷ್ಟರಲ್ಲಿಯೇ ಹಾಕಲಾಗಿದೆ ಎಂದು ಖೇದಪೂರ್ವಕವಾಗಿ ನಾವು ಕಾಣುತ್ತೇವೆ. ಅನೇಕ ದೊಡ್ಡ ಮತ್ತು ಚಿಕ್ಕ ದೇಶಗಳು ಅಣುಬಾಂಬುಗಳನ್ನು ಹೊಂದಿರುವುದರಿಂದ ದ್ವೇಷ ಮತ್ತು ಹಗೆತನ ವಿವಿಧ ದೇಶಗಳ ಮಧ್ಯೆ ವರ್ಧಿಸುತ್ತಾ ಇವೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಮೂರನೆಯ ಜಾಗತಿಕ ಮಹಾಯುದ್ಧ ನಮ್ಮ ಮುಂದೆ ನಿಶ್ಚಯವಾಗಿಯೂ ಕಾಣಿಸುತ್ತಾ ಇದೆ. ಅಂತಹ ಯುದ್ಧ ನಿಶ್ಚಯವಾಗಿಯೂ ಅಣುಬಾಂಬು ವರ್ಷಿಸುವ ಯುದ್ಧವಾಗುವುದು. ಆದುದರಿಂದ ಲೋಕವು ದಾರುಣ ನಾಶದ ಕಡೆಗೆ ಸಾಗುವುದನ್ನು ನಾವು ಕಾಣುತ್ತೇವೆ. ಎರಡನೆಯ ಜಾಗತಿಕ ಮಹಾಯುದ್ಧದ ನಂತರ ಸಮತೆ ಮತ್ತು ನ್ಯಾಯದ ಮಾರ್ಗವನ್ನು ಅನುಸರಿಸಿದ್ದರೆ ನಾವು ಲೋಕವನ್ನು ಇಂದಿನ ಸ್ಥಿತಿಯಲ್ಲಿ ಎಂದರೆ ಯುದ್ಧದ ಜ್ವಾಲೆಗಳಿಂದ ಪುನಃ ಆವೃತವಾಗಿ ಕಾಣುತ್ತಿರಲಿಲ್ಲ.

ನಮಗೆಲ್ಲರಿಗೂ ತಿಳಿದಿರುವಂತೆ ಎರಡನೆಯ ಜಾಗತಿಕ ಮಹಾಯುದ್ಧವು ಪ್ರಾರಂಭವಾಗಲು ಕಾರಣ ಲೀಗ್ ಆಫ್ ನೇಶನ್ಸ್ ತನ್ನ ಸ್ಥಾಪನೆಯ ಉದ್ದೇಶವನ್ನು ತಲಪಲು ವಿಫಲವಾದುದು ಮತ್ತು 1932ರಲ್ಲಿ ಆರಂಭವಾದ ಆರ್ಥಿಕ ಮುಗ್ಗಟ್ಟಾಗಿದೆ. ಈಗ ಪ್ರಸಿದ್ಧ ಅರ್ಥ ಶಾಸ್ತ್ರಜ್ಞರು ಈಗಿನ ಆರ್ಥಿಕ ಮುಗ್ಗಟ್ಟು 1932ರ ಆರ್ಥಿಕ ಮುಗ್ಗಟ್ಟಿಗೆ ಹಲವಾರು ವಿಷಯಗಳಲ್ಲಿ ಸಮಾನತೆ ಹೊಂದಿದೆ ಎಂದು ಹೇಳುತ್ತಾರೆ. ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳು ಚಿಕ್ಕ ದೇಶಗಳ ಮಧ್ಯೆ ಯುದ್ಧ ಪ್ರಾರಂಭವಾಗಲು ಕಾರಣಗಳಾಗಿವೆ ಎಂದು ನಾವು ನೋಡುತ್ತಿದ್ದೇವೆ. ಆಂತರಿಕೆ ಕ್ಷೋಭೆ ಮತ್ತು ಅತೃಪ್ತಿ ಈ ದೇಶಗಳಲ್ಲಿ ವರ್ಧಿಸುತ್ತಾ ಇವೆ. ಈ ಕಾರಣಗಳಿಂದ ಕೆಲವು ಶಕ್ತಿಗಳು ಅಧಿಕಾರಕ್ಕೆ ಬರುವುವು. ಅಂತಹ ಶಕ್ತಿಗಳು ನಮ್ಮನ್ನು ಜಾಗತಿಕ ಮಹಾಯುದ್ಧಕ್ಕೆ ಕೊಂಡೊಯ್ಯುವುವು. ಚಿಕ್ಕ ದೇಶಗಳಲ್ಲಿ ಜಗಳಗಳು ರಾಜಕೀಯವಾಗಿ ಅಥವಾ ರಾಜಕೀಯ ತಂತ್ರಗಳ ಮೂಲಕ ಪರಿಹರಿಸದಿದ್ದರೆ ಲೋಕದಲ್ಲಿ ದೇಶಗಳು ಒಗ್ಗೂಡಿದ ಹೊಸ ಗುಂಪುಗಳು ಸ್ಥಾಪಿಸಲ್ಪಡುವುವು. ಇದು ಮೂರನೆಯ ಜಾಗತಿಕ ಮಹಾಯುದ್ಧವು ಪ್ರಾರಂಭವಾಗುವುದಕ್ಕೆ ಮುನ್ನುಡಿಯಾಗುವುದು. ಈಗ ನಾವು ಲೋಕವನ್ನು ಆರ್ಥಿಕ ಅಭಿವೃದ್ಧಿಗೊಯ್ಯುವ ಬಗ್ಗೆ ನಮ್ಮ ಚಿಂತೆಯನ್ನು ಕೇಂದ್ರೀಕರಿಸುವುದಕ್ಕೆ ಬದಲಾಗಿ ಲೋಕ ವನ್ನು ನಾಶದಿಂದ ರಕ್ಷಿಸುವ ಬಗ್ಗೆ ಕೂಡಲೇ ನಮ್ಮ ಪ್ರಯತ್ನಗಳನ್ನು ವೃದ್ಧಿಗೊಳಿಸಲು ತೊಡಗುವುದು ಅತ್ಯಾವಶ್ಯಕವಾಗಿದೆ. ಮಾನವರು ತಮ್ಮ ಸೃಷ್ಟಿಕರ್ತನಾದ ಏಕದೇವನನ್ನು ಗುರುತಿಸುವುದು ಅತ್ಯಾವಶ್ಯಕವಾಗಿದೆ. ಹೀಗೆ ಮಾಡಿದರೆ ಮಾತ್ರ ಮಾನವತೆಯು ರಕ್ಷಿಸಲ್ಪಡುವುದು ಖಾತರಿಗೊಳಿಸಲ್ಪಡುವುದು. ಇಲ್ಲದಿದ್ದರೆ ಲೋಕವು ವೇಗವಾಗಿ ಸ್ವಯಂ ನಾಶದ ಕಡೆಗೆ ಸಾಗುತ್ತಾ ಹೋಗುವುದು.

ನಿಮ್ಮೊಂದಿಗೆ ಮತ್ತು ಎಲ್ಲಾ ಜಾಗತಿಕ ನಾಯಕರೊಂದಿಗೆ ನಾನು ಅಪೇಕ್ಷಿಸುವುದೇನೆಂದರೆ, ಇತರ ದೇಶಗಳನ್ನು ಬಲಪ್ರಯೋಗಿಸಿ ಅದುಮಿ ಹಾಕುವುದಕ್ಕೆ ಬದಲಾಗಿ ರಾಜಕೀಯ ತಂತ್ರಗಳನ್ನೂ

ಮಾತುಕತೆಗಳನ್ನೂ ವಿವೇಕವನ್ನೂ ಬಳಸಬೇಕು. ಯುನೈಟೆಡ್ ಸ್ಟೇಟ್ಸ್ ಮೊದಲಾದ ಪ್ರಬಲ ಶಕ್ತಿಶಾಲಿ ರಾಷ್ಟ್ರಗಳು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ತಕ್ಕುದಾದ ಕ್ರಮಗಳನ್ನು ಕೈಗೊಳ್ಳಬೇಕು. ಚಿಕ್ಕ ದೇಶಗಳು ಮಾಡಿದ ಕೃತ್ಯಗಳನ್ನು ಜಾಗತಿಕ ಸೌಹಾರ್ದತೆಯನ್ನು ಕೆಡಿಸಲು ನೆವನವನ್ನಾಗಿ ಪ್ರಬಲ ಶಕ್ತಿಶಾಲಿ ರಾಷ್ಟ್ರಗಳು ಮಾಡಬಾರದು. ಈಗ ಅಣು ಆಯುಧಗಳನ್ನು ಯುನೈಟೆಡ್ ಸ್ಟೇಟ್ಸ್ ಮತ್ತು ಇತರ ಪ್ರಬಲ ದೇಶಗಳು ಮಾತ್ರವಲ್ಲ, ಕೆಲವು ಚಿಕ್ಕ ದೇಶಗಳು ಸಹ ಅಂತಹ ವಿನಾಶಕಾರಿ ಅಣು ಅಸ್ತ್ರಗಳನ್ನು ಹೊಂದಿದ್ದು, ಅಂತಹ ದೇಶಗಳ ಯುದ್ಧ ಪ್ರಿಯರಾದ ನಾಯಕರು ಯಾವುದನ್ನೂ ಯೋಚಿಸದೆ, ವಿಶ್ಲೇಷಿಸದೆ ಕಾರ್ಯಪ್ರವೃತ್ತರಾಗುವವರಾಗಿದ್ದಾರೆ. ಆದುದರಿಂದ ನಾನು ನಿಮ್ಮೊಂದಿಗೆ ವಿನೀತನಾಗಿ ಅಪೇಕ್ಷಿಸುವುದೇನೆಂದರೆ, ಪ್ರಬಲ ರಾಷ್ಟ್ರಗಳು ಮತ್ತು ಚಿಕ್ಕ ರಾಷ್ಟ್ರಗಳು ಮೂರನೆಯ ಜಾಗತಿಕ ಮಹಾಯುದ್ಧ ಸ್ಫೋಟಿಸದಂತೆ ತಡೆಯಲು ನಿಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಬಳಸಬೇಕು. ನಾವು ಶಾಂತಿ ಸ್ಥಾಪನೆ ಮಾಡುವ ಪ್ರಯತ್ನದಲ್ಲಿ ಸೋತು ಹೋದರೆ ಜಾಗತಿಕ ಮಹಾ ಯುದ್ಧದ ಪರಿಣಾಮಗಳು ಏಶಿಯಾದ ಬಡ ರಾಷ್ಟ್ರಗಳಿಗೂ ಯುರೋಪು ಮತ್ತು ಅಮೇರಿಕದ ದೇಶಗಳಿಗೂ ಸೀಮಿತವಾಗಿರಲಾರವು. ನಮ್ಮ ಮುಂದಿನ ಪೀಳಿಗೆಗಳು ನಮ್ಮ ಕೃತ್ಯಗಳ ಭೀಕರ ಪರಿಣಾಮಗಳನ್ನು ಅನುಭವಿಸಬೇಕಾಗುವುದು ಮತ್ತು ಲೋಕದಲ್ಲೆಡೆಗಳಲ್ಲೂ ಮಕ್ಕಳು ಅಂಗವಿಕಲ ರಾಗಿಯೂ ಅಂಗಹೀನರಾಗಿಯೂ ಜನಿಸುವರು. ಜಾಗತಿಕ ಅನಾಹುತಕ್ಕೆ ಲೋಕವನ್ನು ಕೊಂಡೊಯ್ದ ಅವರ ಹಿರಿಯರನ್ನು ಅವರು ಎಂದೂ ಕ್ಷಮಿಸಲಾರರು. ನಾವು ನಮ್ಮ ಸ್ವಾರ್ಥ ಹಿತಾಸಕ್ತಿಗಳ ಬಗ್ಗೆ ಮಾತ್ರ ಚಿಂತಿಸದೆ, ನಮ್ಮ ಮುಂದಿನ ಪೀಳಿಗೆಗಳ ಬಗ್ಗೆ ಚಿಂತಿಸಿ ಅವರಿಗೆ ಪ್ರಕಾಶಮಾನವಾದ ಭವಿಷ್ಯತ್ ಕಾಲವನ್ನು ಸೃಷ್ಟಿಸಲು ಕಠಿಣ ಪರಿಶ್ರಮ ಮಾಡಬೇಕಾಗಿದೆ. ಸರ್ವೋನ್ನತನಾದ ಸೃಷ್ಟಿಕರ್ತನು ಈ ಸಂದೇಶವನ್ನು ನೀವು ಮತ್ತು ಇತರ ಜಾಗತಿಕ ನಾಯಕರು ಮನವರಿಕೆ ಮಾಡಿಕೊಳ್ಳುವ ಸೌಭಾಗ್ಯ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ನಿಮ್ಮೊಂದಿಗೆ ಸ್ನೇಹಪೂರ್ವಕ,

***ಮಿರ್ಝಾ ಮಸ್ರೂರ್ ಅಹ್ಮದ್, ಖಲೀಫತುಲ್ ಮಸೀಹ್ V***

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನಾಯಕ

## ಕೆನಡದ ಪ್ರಧಾನ ಮಂತ್ರಿಯವರಿಗೆ ಬರೆದ ಪತ್ರದ ಸಾರಾಂಶ



2012 ಮಾರ್ಚ್ ದಿನಾಂಕ 8ರಂದು ಕೆನಡದ ಪ್ರಧಾನ ಮಂತ್ರಿ ಮಿಸ್ಟರ್ ಸ್ಟೀಫನ್ ಹಾರ್ಪರ್‌ರಿಗೆ ಬರೆದ ಪತ್ರದಲ್ಲಿ ಪಂಚಮ ಖಲೀಫ ಮತ್ತು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋಚ್ಚ ನಾಯಕರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್‌ರವರು ಮೂರನೆಯ ಜಾಗತಿಕ ಮಹಾಯುದ್ಧವು ಪ್ರಾರಂಭವಾಗುವ ಸಾಧ್ಯತೆಯ ಬಗ್ಗೆ ಮತ್ತು ಅದರ ಭಯಾನಕ ಪರಿಣಾಮಗಳ ಬಗ್ಗೆ ಮುನ್ನೆಚ್ಚರಿಕೆ ನೀಡಿದರು. ವಿವಿಧ ದೇಶಗಳ ಮಧ್ಯೆ ಇರುವ ಹಗೆತನ, ದೊಡ್ಡ ಮತ್ತು ಚಿಕ್ಕ ದೇಶಗಳು ಮಾಡಿದ ಅನ್ಯಾಯಕರ ಕೆಲಸಗಳು ಒಂದು ಜಾಗತಿಕ ಅನಾಹುತಕ್ಕೆ ಇಷ್ಟರಲ್ಲಿಯೇ ಅಸ್ತಿಭಾರ ಹಾಕಿವೆ. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಸಂಪೂರ್ಣವಾಗಿ ಶಾಂತಿಮಯ ಪ್ರಯತ್ನಗಳ ಮೂಲಕ ತನ್ನ ಅಧಿಕಾರವನ್ನು ಚಲಾಯಿಸಬೇಕೆಂದೂ ಬಲಪ್ರಯೋಗವನ್ನು ವರ್ಜಿಸಬೇಕೆಂದೂ ಕೆನಡದ ಪ್ರಧಾನ ಮಂತ್ರಿಯವರೊಂದಿಗೆ ಅಪೇಕ್ಷಿಸಲಾಗಿದೆ. ಸನ್ಮಾನ್ಯ ಖಲೀಫರು ತನ್ನ ಪತ್ರದಲ್ಲಿ ಕೊನೆಯದಾಗಿ ಹೀಗೆ ಬರೆದರು: "ಕೆನಡ ಅತ್ಯಂತ ನ್ಯಾಯನಿಷ್ಠೆಯಿಂದ ವರ್ತಿಸುವ ಲೋಕದ ದೇಶಗಳಲ್ಲಿ ಒಂದೆಂದು ವ್ಯಾಪಕವಾಗಿ ಗಣಿಸಲಾಗುತ್ತಿದೆ. ನಿಮ್ಮ ದೇಶ ಸಾಮಾನ್ಯವಾಗಿ ಅನ್ಯದೇಶಗಳ ಆಂತರಿಕ ಸಮಸ್ಯೆಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಅಹ್ಮದಿಯಾ ಮುಸ್ಲಿಮ್ ಸಂಘಟನೆಗೆ ಸೇರಿದ ನಮಗೆ ಕೆನಡದ ಜನತೆಯೊಂದಿಗೆ ವಿಶಿಷ್ಟವಾದ ಸ್ನೇಹ ಸಂಬಂಧ ಇದೆ. ನಾನು ನಿಮ್ಮೊಂದಿಗೆ ಅಪೇಕ್ಷಿಸುತ್ತೇನೆ: ದೊಡ್ಡ ಮತ್ತು ಚಿಕ್ಕ ದೇಶಗಳು ವಿನಾಶಕಾರಿ ಮೂರನೆಯ ಜಾಗತಿಕ ಮಹಾಯುದ್ಧಕ್ಕೆ ನಮ್ಮನ್ನು ಕೊಂಡೊಯ್ಯುವುದನ್ನು ತಡೆಗಟ್ಟಲು ನೀವು ಅತ್ಯಂತ ಹೆಚ್ಚು ಪ್ರಯತ್ನ ಮಾಡಬೇಕು."

# ನ್ಯಾಯ ಮತ್ತು ಸಮತೋಲನದ ಸಹಜ ವ್ಯವಸ್ಥೆ

★ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್
ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋಚ್ಚ ನೇತಾರ




ಜರ್ಮನಿಯ ಹ್ಯಾಂಬರ್ಗ್ ಪ್ರಾಂತೀಯ ವಿಧಾನ ಸಭೆಯ ಗ್ರೀನ್ ಪಾರ್ಟಿ 2011 ಜೂನ್ 14ನೇ ದಿನಾಂಕ ಹ್ಯಾಂಬರ್ಗ್ ಟೌನ್‌ಹಾಲ್‌ನಲ್ಲಿ "ಅಂತರ್ ಧಾರ್ಮಿಕ ಚರ್ಚೆ" ಏರ್ಪಡಿಸಿ ಮುಖ್ಯ ಭಾಷಣ ಮಾಡಲು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್‌ರನ್ನು ಆಹ್ವಾನಿಸಿತು. ಐವತ್ತಕ್ಕಿಂತ ಹೆಚ್ಚು ಜನರು ಭಾಗವಹಿಸಿದ ಈ ಸಭೆಯಲ್ಲಿ ರಾಜಕಾರಣಿಗಳು, ಪ್ರೊಫೆಸರ್‌ಗಳು, ನ್ಯಾಯಪಂಡಿತರು, ಧಾರ್ಮಿಕ ನಾಯಕರು ಮತ್ತು ಪತ್ರಕರ್ತರು ಭಾಗವಹಿಸಿದರು. ಅಲ್ಲಿ ಜಮಾಯಿಸಿದ ಗಣ್ಯರಲ್ಲಿ ಕೆಲವರು ಈ ಕೆಳಗಿನವರಾಗಿದ್ದರು.

- ಐಯನ್ ಕರನ್ (ಹ್ಯಾಂಬರ್ಗ್ ಪ್ರಾಂತ್ಯದ ಮಾಜಿ ಸೆನಟರ್)
- ಡಾ॥ ಟಿಲ್-ಸ್ಟೆಫ಼ನ್ (ಹ್ಯಾಂಬರ್ಗ್ ಪ್ರಾಂತ್ಯ ವಿಧಾನ ಸಭೆಯ ಸದಸ್ಯ, ಗ್ರೀನ್ ಪಾರ್ಟಿ)
- ಫೆಲಿಝ್ ಡೆಮಿರೆಲ್ (ಹ್ಯಾಂಬರ್ಗ್ ಪ್ರಾಂತ್ಯ ವಿಧಾನ ಸಭೆಯ ಸದಸ್ಯ, ಗ್ರೀನ್ ಪಾರ್ಟಿ)
- ಕ್ರಿಸ್ಟಾ ಗೊಯೆಟರ್ (ಹ್ಯಾಂಬರ್ಗ್ ಪ್ರಾಂತ್ಯ ವಿಧಾನ ಸಭೆಯ ಸದಸ್ಯೆ, ಗ್ರೀನ್ ಪಾರ್ಟಿ)
- ಪ್ರೊಫೆಸರ್ ವೋಲ್‌ಫ್ರಮ್ ವೈಸ್ಸೆ (ಹ್ಯಾಂಬರ್ಗ್ ಯುನಿವರ್ಸಿಟಿ)
- ಡಾ॥ ಮುಹಮ್ಮದ್ ಖಲೀಫ (ಹ್ಯಾಂಬರ್ಗ್ ಯುನಿವರ್ಸಿಟಿ)

ಜರ್ಮನಿಯ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಅಧ್ಯಕ್ಷರಾದ ಅಬ್ದುಲ್ಲಾ ವಾಗಿಸ್‌ಹೌಸರ್, ಅಹ್ಮದಿಯಾ ಸಂಘಟನೆಯ ಸಂಕ್ಷಿಪ್ತ ವಿವರಣೆ ನೀಡಿದರು. ಅವರು ಅಹ್ಮದಿಯಾ ಜಮಾಅತಿನ ಸರ್ವೋನ್ನತ ನೇತಾರರಾದ ಮತ್ತು ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಇಮಾಮರ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದರನ್ನು ಪರಿಚಯಪಡಿಸುತ್ತಾ ಈಗ ಅಹ್ಮದಿಯಾ ಜಮಾಅತ್ 200 ದೇಶಗಳಲ್ಲಿ ಸ್ಥಾಪಿತವಾಗಿದೆ ಎಂದು ಹೇಳಿದರು.

ಕ್ರಿಸ್ಟಾ ಗೋಯೆಟರ್ ಈ ಸಭೆಯ ಮುಖ್ಯ ಆತಿಥೇಯರಾಗಿದ್ದರು. ಅವರು ತನ್ನ ಸಂಕ್ಷಿಪ್ತ ಪ್ರಾಸ್ತಾವಿಕ ಭಾಷಣದಲ್ಲಿ ಹೀಗೆ ಹೇಳಿದರು: "ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋನ್ನತ ನಾಯಕರು ಈ ಸಭೆಯಲ್ಲಿ ಭಾಗವಹಿಸಿದುದು ನಮಗೆ ಗೌರವಾರ್ಹವಾಗಿದೆ. ಹ್ಯಾಂಬರ್ಗಿನ ಗ್ರೀನ್ ಪಾರ್ಟಿಗೆ ಸ್ಥಳೀಯ ಅಹ್ಮದಿಯಾ ಮುಸ್ಲಿಮ್ ಜಮಾಅತಿನೊಂದಿಗೆ ನಿಕಟ ಸಂಬಂಧವಿದೆ. ಗ್ರೀನ್ ಪಾರ್ಟಿ ಅಂತರ್ ಧಾರ್ಮಿಕ ಚರ್ಚೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ.

ಪ್ರೊಫೆಸರ್ ವೋಲ್ ಫ್ರವ್ ವೈಸ್ಸೆ ಹ್ಯಾಂಬರ್ಗ್ ಯುನಿವರ್ಸಿಟಿಯ ಅಕಾಡೆಮಿ ಆಫ್ ರಿಲೀಜಿಯನ್ಸಿನ ಡೈರೆಕ್ಟರ್ ಆಗಿರುವರು. ಅವರು ಹೀಗೆ ಹೇಳಿದರು:

"ಸನ್ಮಾನ್ಯ ಮಿರ್ಝಾ ಮಸ್ರೂರ್ ಅಹ್ಮದರು ಹ್ಯಾಂಬರ್ಗ್ ನಗರ ಸಂದರ್ಶಿಸಿದುದು ನಮಗೆ ಗೌರವಾರ್ಹವಾಗಿದೆ. ಈ ನಗರ ಅಂತರ್ ಧಾರ್ಮಿಕ ಚರ್ಚೆಯ ಕೇಂದ್ರವೆಂದು ಹೇಳಬಹುದಾಗಿದೆ. ಅಂತರ್ ಧಾರ್ಮಿಕ ಚರ್ಚೆ ನಡೆಸಲು ನಾವು ಒಂದು ಪರಿಣಿತರ ತಂಡವನ್ನು ನೇಮಿಸಿದ್ದೇವೆ." ಅವರು ಈ ಚರ್ಚಾಕೂಟವನ್ನು ಏರ್ಪಡಿಸಿದುದಕ್ಕೆ ಗ್ರೀನ್ ಪಾರ್ಟಿಗೆ ಕೃತಜ್ಞತೆ ಅರ್ಪಿಸಿದರು.

ಈ ಚರ್ಚಾ ಕೂಟದ ಮುಖ್ಯ ಭಾಷಣ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್‌ರವರು ಮಾಡಿದರು. ಅದು ಈ ಕೆಳಗಿನಂತಿದೆ:

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ –

ಪರಮ ದಯಾವಂತನೂ ಕಾರುಣ್ಯ ನಿಧಿಯೂ ಆದ ಅಲ್ಲಾಹನ ನಾಮದಿಂದ (ಪ್ರಾರಂಭಿಸುತ್ತೇನೆ).

ಗಣ್ಯರಾದ ಎಲ್ಲಾ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ –

ನಿಮ್ಮ ಮೇಲೆ ಶಾಂತಿ ಸಮಾಧಾನಗಳು ಮತ್ತು ದೇವಾನುಗ್ರಹಗಳು ಉಂಟಾಗಲಿ.

ಮೊದಲನೆಯದಾಗಿ, ನಾನು ನಿಮ್ಮೊಂದಿಗೆ ಮಾತನಾಡಲು ಆಮಂತ್ರಿಸಿದ ನಮ್ಮ ಮುಖ್ಯ ಆತಿಥೇಯರಿಗೆ ಮತ್ತು ನಿಮ್ಮೆಲ್ಲರಿಗೆ ಕೃತಜ್ಞತೆ ಅರ್ಪಿಸುತ್ತೇನೆ. ನೀವೆಲ್ಲರೂ ನಿಮ್ಮ ನಿಷ್ಕಳಂಕ ಮನೋಭಾವವನ್ನೂ ವಿಶಾಲ ಹೃದಯವನ್ನೂ ಪ್ರಕಟಿಸಿರುವಿರಿ.

ಜನಾಂಗಗಳು ಮತ್ತು ಧರ್ಮಗಳು ಬೇರೆ ಬೇರೆ ಆಗಿದ್ದರೂ ನೀವು ಎಲ್ಲಾ ಮಾನವರಿಗೆ ಉತ್ತಮ ಮಾನವೀಯ ಮೌಲ್ಯಗಳನ್ನು ಬಯಸುತ್ತಿರುವಿರಿ ಎಂದು ನಿಮ್ಮ ವರ್ತನೆಯಿಂದ ಸಾಬೀತಾಗುತ್ತದೆ. ಪ್ರೊಫೆಸರ್ ವೋಲ್‌ಫ್ರಮ್ ವೈಸ್ಸೆ, ಅಕಾಡೆಮಿ ಆಫ್ ವರ್ಲ್ಡ್ ರಿಲೀಜಿಯನ್ಸ್ ಸ್ಥಾಪಿಸಿದ ಬಗ್ಗೆ ಪ್ರಸ್ತಾಪಿಸಿ ವಿವಿಧ ಧರ್ಮಗಳನ್ನು ಮತ್ತು ಜನಾಂಗಗಳನ್ನು ಒಗ್ಗೂಡಿಸಲು ಮಾಡಿದ ಪ್ರಯತ್ನದ ಬಗ್ಗೆ ಆಲಿಸಿ ಸಂತೋಷವಾಗಿದೆ. ನಿಮಗೆ ಈ ನಿಟ್ಟಿನಲ್ಲಿ ಯಶಸ್ಸು ದೊರೆಯಲೆಂದು ಅಲ್ಲಾಹನೊಡನೆ ಪ್ರಾರ್ಥಿಸುತ್ತೇನೆ.

ಇಂದಿನ ಲೋಕಕ್ಕೆ ಇಂತಹ ಜ್ಞಾನವರ್ಧಕ ಪ್ರಯತ್ನಗಳು ಆವಶ್ಯಕವಾಗಿವೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನಾವು ಇಂತಹ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ನಾವು ಇಸ್ಲಾಮ್ ಧರ್ಮದ ಸಿದ್ಧಾಂತಗಳನ್ನು ಪ್ರಚಾರ ಮಾಡುತ್ತೇವೆ ಮತ್ತು ಅನುಷ್ಠಾನಕ್ಕೆ ತರುತ್ತಿದ್ದೇವೆ. ನಾವು ಈ ಕಾರಣದಿಂದ ಯಾವಾಗಲೂ "ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ" ಎಂಬ ಘೋಷಣೆ ಮಾಡುತ್ತಾ ಇರುತ್ತೇವೆ.

ನಾವು ನಂಬುವ ಒಂದು ಮೂಲತತ್ವವೇನೆಂದರೆ, ಬೇರೆ ಬೇರೆ ಅಭಿಪ್ರಾಯ ಮತ್ತು ಬೇರೆ ಬೇರೆ ಧರ್ಮವನ್ನು ಅನುಷ್ಠಿಸುವುದರಿಂದ ಯಾವ ಹಾನಿಯೂ ಇಲ್ಲ. ಧರ್ಮದ ವಿಷಯವಾಗಿ ನಾನು ಹೇಳಲು ಬಯಸುವುದೇನೆಂದರೆ, ಅದೊಂದು ವೈಯಕ್ತಿಕ ವಿಷಯವಾಗಿದ್ದು ಪ್ರತಿಯೊಬ್ಬ ವ್ಯಕ್ತಿ ಅದನ್ನು ತನ್ನ ಬಗ್ಗೆ ನಿರ್ಧರಿಸಬಹುದಾಗಿದೆ. ಅನ್ಯರು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಹೊಂದಿಲ್ಲ. ಪ್ರತಿಯೊಬ್ಬ ತನ್ನ ಸ್ವಂತ ನಂಬಿಕೆಗಳನ್ನು ಹೊಂದಲು ಮತ್ತು ತನಗಿಚ್ಛೆ ಇರುವಂತೆ ನಡೆಯಲು ಸ್ವತಂತ್ರನಾಗಿದ್ದಾನೆ. ಪ್ರತಿಯೊಬ್ಬ ತನ್ನ ಧಾರ್ಮಿಕ ನಂಬಿಕೆಯನ್ನು ಅನ್ಯರಿಗೆ ಭಯವಿಲ್ಲದೆ ಹೇಳಲು ಮತ್ತು ಧಾರ್ಮಿಕ ಕರ್ಮಗಳನ್ನು ಅನುಷ್ಠಿಸಲು ಸ್ವಾತಂತ್ರ್ಯವನ್ನು ಹೊಂದಿರಬೇಕು.

ಆಗಾಗ ಕೆಲವು ಗುಂಪುಗಳು, ವಿಶಿಷ್ಟವಾಗಿ ಪಾಶ್ಚಿಮಾತ್ಯ ದೇಶಗಳಲ್ಲಿರುವ ಗುಂಪುಗಳು, ಧರ್ಮವನ್ನು ಅನುಷ್ಠಿಸಲು ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂಬ ಮಾತನ್ನು ಆಲಿಸುವಾಗ ಹೆದರುತ್ತಾರೆ. ವಿಶಿಷ್ಟವಾಗಿ ಇಸ್ಲಾಮಿನ ಬಗ್ಗೆ ಚರ್ಚಿಸುವಾಗ ಈ ಹೆದರಿಕೆ ಮತ್ತು ಗಾಬರಿ ಬಹಳ ಹೆಚ್ಚಾಗುತ್ತದೆ.

ಈ ಹೆದರಿಕೆಗೆ ಕಾರಣವೇನೆಂದರೆ, ಮುಸ್ಲಿಮರ ಜನಸಂಖ್ಯೆ ಹೆಚ್ಚಾದರೆ, ಪಾಶ್ಚಿಮಾತ್ಯ ದೇಶಗಳ ಕಾನೂನು ಕಾಯಿದೆ ವ್ಯವಸ್ಥೆ ಮುಸ್ಲಿಮ್ ದೇಶಗಳ ಹಾಗೆ ಅಸ್ತವ್ಯಸ್ತವಾಗುವುದೆಂದಾಗಿದೆ. ನಿಸ್ಸಂಶಯವಾಗಿ ಕೆಲವು ಉಗ್ರವಾದಿ ಮುಸ್ಲಿಮ್ ಗುಂಪುಗಳು ಪ್ರತಿಪಾದಿಸುವ ಇಸ್ಲಾಮ್‌ನಿಂದ ಇಂತಹ ಭಯ ಉಂಟಾಗುವುದು ನ್ಯಾಯಬದ್ಧವೂ ಮನವರಿಕೆ ಮಾಡಿಕೊಳ್ಳಬಹುದಾದದೂ ಆಗಿದೆ.

ನಾವು ಎಲ್ಲಾ ಧರ್ಮಗಳ ಚರಿತ್ರೆಯನ್ನು ಪರಾಂಬರಿಸುವುದಾದರೆ, ನಮಗೆ ಬೇಗನೇ ಹೀಗೆ ತಿಳಿಯುತ್ತದೆ: ಯಾವುದೇ ಧರ್ಮದ ಸ್ಥಾಪಕ ಅನ್ಯರ ಹಕ್ಕುಗಳನ್ನು ಕಿತ್ತುಕೊಳ್ಳಲು ಮತ್ತು ಕ್ರೂರವಾಗಿ ವರ್ತಿಸಲು ತನ್ನ ಅನುಯಾಯಿಗಳಿಗೆ ಉಪದೇಶಿಸಿಲ್ಲ. ವಾಸ್ತವಿಕವಾಗಿ ಪ್ರತಿಯೊಂದು ಧರ್ಮದ ಉದ್ದೇಶ ಲಕ್ಷ್ಯ ಮನುಷ್ಯರನ್ನು ದೇವನಿಗೆ ಸಮೀಪವಾಗುವಂತೆ ಮಾಡುವುದು ಮತ್ತು ಮಾನವೀಯ ಮೌಲ್ಯಗಳನ್ನು ಸ್ಥಾಪಿಸುವುದಾಗಿದೆ.

ವಾಸ್ತವಿಕವಾಗಿ ಇಸ್ಲಾಮ್ ಎಂದರೇನೆಂದು ನೋಡಿರಿ. ಇಸ್ಲಾಮ್ ಎಂಬ ಅರಬಿ ಶಬ್ದದ ಅರ್ಥ ಶಾಂತಿ, ಪ್ರೀತಿ ಮತ್ತು ಭದ್ರತೆ ಎಂದಾಗಿದೆ. ಆದುದರಿಂದ ಯಾರಾದರೂ ಇಸ್ಲಾಮನ್ನು ಉಗ್ರವಾದಿ ಹಿಂಸಾಚಾರ ಭರಿತ ಧರ್ಮ ಎಂದು ಚಿತ್ರಿಸುವುದಾದರೆ ಅಂತಹ ಚಿತ್ರಣಕ್ಕೆ ನಿಜವಾದ ಇಸ್ಲಾಮ್‌ನೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಪವಿತ್ರ ಖುರ್‌ಆನ್ ಪ್ರಾರಂಭದಿಂದ ಕೊನೆಯ ತನಕ ಪ್ರೀತಿ, ವಾತ್ಸಲ್ಯ, ಶಾಂತಿ, ಸೌಹಾರ್ದ ಮತ್ತು ತ್ಯಾಗ ಮನೋಭಾವವನ್ನು ಉಪದೇಶಿಸುತ್ತದೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಇಸ್ಲಾಮಿನ ಈ ನೈಜ ಸಂದೇಶವನ್ನು ಪ್ರಚಾರ ಮಾಡುತ್ತಿದೆ. ಪ್ರಾಯಶಃ ಇದೇ ಕಾರಣದಿಂದ ಉಗ್ರವಾದಿಗಳ ಕಠೋರ ಕ್ರೂರ ಆಕಮಣಗಳಿಗೆ ನಮ್ಮ ಸಮುದಾಯ ತುತ್ತಾಗಿದೆ.

ಇಂತಹ ಹಿಂಸಾಚಾರಗಳಿಗೆ ಗುರಿಯಾದರೂ ಅಹ್ಮದಿಯರು ಯಾವ ದೇಶದಲ್ಲಿ ವಾಸಿಸುತ್ತಿದ್ದರೂ ನಿಯಮವನ್ನು ತಮ್ಮ ಕೈಗೆತ್ತಿಕೊಳ್ಳುವುದಿಲ್ಲ ಮತ್ತು ಶಾಂತಿಭಂಗ ಮಾಡುವುದಿಲ್ಲ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ನಮಗೆ ಕಲಿಸಿರುವುದೇನೆಂದರೆ, ದೇವನಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ದೇವನಿಗೂ ಮನುಷ್ಯರಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ಮನುಷ್ಯರಿಗೂ ಸಂದಾಯ ಮಾಡಬೇಕು. ಕ್ರೂರತೆಗೆ ಪ್ರತಿಕ್ರಿಯೆಯಾಗಿ ಸ್ವತಃ ಕ್ರೂರರಾಗಿ ವರ್ತಿಸಬಾರದೆಂದು ನಮಗೆ ಕಲಿಸಲಾಗಿದೆ. ಹಿಂಸಾಚಾರಕ್ಕೆ ಗುರಿ ಯಾದವನು ಸರಕಾರದ ನ್ಯಾಯ ವ್ಯವಸ್ಥೆಯ ಸಹಾಯ ಪಡೆಯಲು ಸಾಧ್ಯತೆ ಇರುವಲ್ಲೆಲ್ಲ ಸಹಾಯ ಪಡೆದುಕೊಳ್ಳುವ ಹಕ್ಕನ್ನು ನಿಶ್ಚಯ ವಾಗಿಯೂ ಹೊಂದಿದ್ದಾನೆ. ಆದರೆ ಕೆಲವು ದೇಶಗಳಲ್ಲಿ ನ್ಯಾಯ ವ್ಯವಸ್ಥೆಯೇ ಅನ್ಯಾಯಭರಿತವಾಗಿದೆ. ಉದಾಹರಣೆಗೆ, ಪಾಕಿಸ್ಥಾನ ಮತ್ತು ಇಂಡೋನೇಶಿಯಾದಲ್ಲಿ ಅಹ್ಮದಿಯರನ್ನು ಹಿಂಸಿಸಲು ನ್ಯಾಯ ನಿರ್ಮಾಣ ಮಾಡಲಾಗಿದೆ. ಇಂತಹ ಸನ್ನಿವೇಶಗಳಲ್ಲಿ ಸಹನೆಯಿಂದ ವರ್ತಿಸಲು ಮತ್ತು ವಿಷಯವನ್ನು ಸರ್ವಶಕ್ತನಾದ ದೇವನ ತೀರ್ಮಾನಕ್ಕೆ ಬಿಡಲು ನಮಗೆ ಕಲಿಸಲಾಗಿದೆ. ಇದಕ್ಕೆ ಕಾರಣವೇನೆಂದರೆ ಮರಣಾನಂತರ ನಾವು ಪರಲೋಕ ಜೀವನವಿದೆಯೆಂದು ನಂಬುತ್ತೇವೆ. ದೇವನೇ ಅಂತಿಮ ತೀರ್ಪು ನೀಡುವನು. ಯಾರು ತಪ್ಪು ವಿಶ್ವಾಸ ಹೊಂದಿದವರು, ಯಾರು ಸರಿಯಾದ ವಿಶ್ವಾಸ ಹೊಂದಿದವರು ಎಂದು ಅವನೇ ತೀರ್ಪು ನೀಡುವನು. ದೌರ್ಜನ್ಯಗಾರ ಮತ್ತು ದೌರ್ಜನ್ಯಪೀಡಿತರ ಮಧ್ಯ ದೇವನೇ ತೀರ್ಪು ನೀಡುವನು.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಜರ್ಮನ್ ಸರಕಾರಕ್ಕೆ ಮತ್ತು ಜರ್ಮನ್ ಜನರಿಗೆ ಯಾವಾಗಲೂ ಕೃತಜ್ಞತೆ ಅರ್ಪಿಸುತ್ತಿದೆ. ಅಹ್ಮದಿಯರ ವಿರುದ್ಧ ಕೆಲವು ದೇಶಗಳಲ್ಲಿ ಕ್ರೂರ ನಿಯಮಗಳನ್ನು ಜಾರಿಗೊಳಿಸಿದಾಗ ದೇಶಬಿಟ್ಟು ವಲಸೆ ಹೋಗಲು ನಿರ್ಬಂಧಿತರಾದ ಅಹ್ಮದಿ ಮುಸ್ಲಿಮರಿಗೆ ಈ ದೇಶವು ಆಶ್ರಯವನ್ನೂ ಸಂರಕ್ಷಣೆಯನ್ನೂ ಬಹಳ ಹೆಚ್ಚಿನ ಮಟ್ಟದಲ್ಲಿ ನೀಡಿತು.

ಈಗಿನ ತನಕ ಪಾಕಿಸ್ತಾನದ ಅಹ್ಮದಿಯರಲ್ಲಿ ಕೇವಲ ಒಂದು

ಚಿಕ್ಕ ಭಾಗ ಮಾತ್ರ ವಿದೇಶಕ್ಕೆ ವಲಸೆ ಹೋಗಿದೆ. ಮಿಲಿಯಗಟ್ಟಲೆ ಜನರು ಈಗ ಸಹ ಅವರ ವಿರುದ್ಧ ನಡೆಸಲಾಗುವ ಕ್ರೂರ ವರ್ತನೆಯನ್ನು ಘನತೆಯಿಂದಲೂ ಧೈರ್ಯದಿಂದಲೂ ಸಹಿಸಿ ಜೀವಿಸುತ್ತಿದ್ದಾರೆ. ವಲಸೆ ಬಂದವರಲ್ಲಿ ಅನೇಕರು ಶಾರೀರಿಕವಾಗಿ ಹಿಂಸೆಗೆ ಗುರಿಯಾಗಿದ್ದರು. ಕೆಲವರು ತಮಗುಂಟಾಗುವ ಮಾನಸಿಕ ನೋವನ್ನು ಸಹಿಸಲಾಗದೆ ವಲಸೆ ಬಂದರು.

ಅಹ್ಮದಿಯಾ ಮುಸ್ಲಿಮರಿಗೆ ಸಂರಕ್ಷಣೆಯನ್ನೂ ಆಶ್ರಯವನ್ನೂ ನೀಡಿದ ಸರಕಾರಗಳೂ ದೇಶಗಳೂ ದೌರ್ಜನ್ಯಪೀಡಿತರಿಗೆ ನೆರವನ್ನು ಒದಗಿಸುವ ಕ್ರಮವನ್ನು ಆಯ್ಕೆ ಮಾಡಿದವು. ಈಗ ಸಹ ಮಾನವೀಯ ಮೌಲ್ಯಗಳು ಲೋಕದಲ್ಲಿ ಬಾಕಿಯಾಗಿ ಉಳಿದಿವೆ ಎಂದು ಅವರು ತಮ್ಮ ವರ್ತನೆಯಿಂದ ಸಾಬೀತುಗೊಳಿಸಿದರು. ಈ ಕಾರಣದಿಂದಲೂ ನಾನು ನಿಮಗೆಲ್ಲರಿಗೂ ಕೃತಜ್ಞನಾಗಿರುವೆನು.

ನನಗೆ ಹೀಗೆ ತಿಳಿಸಲಾಗಿದೆ: ದೌರ್ಜನ್ಯಪೀಡಿತರು ಯಾವ ದೇಶಕ್ಕೆ ಸೇರಿದವರಾದರೂ ಯಾವ ಧರ್ಮಕ್ಕೆ ಸೇರಿದವರಾದರೂ ಗ್ರೀನ್ ಪಾರ್ಟಿ ಅಂತಹ ಜನರ ಬಗ್ಗೆ ಸಹಾನುಭೂತಿ ಪ್ರಕಟಿಸುತ್ತದೆ. ಇಂತಹ ಮೌಲ್ಯಾಧಾರಿತ ವಿಷಯಗಳು ಮಾನವೀಯ ಮೌಲ್ಯಗಳಿಗೆ ಸೌಂದರ್ಯವನ್ನೂ ಬಣ್ಣವನ್ನೂ ನೀಡುತ್ತಿದೆ. ಇಂತಹ ಮೌಲ್ಯಾಧಾರಿತ ಕೆಲಸಗಳು ಲೋಕದಲ್ಲಿ ಒಂದು ಬೆಳಕನ್ನು ಬೆಳಗಿಸುತ್ತವೆ.

ಗ್ರೀನ್‌ಪಾರ್ಟಿ ಈಗ ಒಂದು ಪ್ರಾಂತ್ಯದಲ್ಲಿ ಸರಕಾರ ರೂಪಿಸುವ ಶಕ್ತಿ ಪಡೆಯಿತೆಂದೂ ಇತರ ಪ್ರಾಂತ್ಯಗಳಲ್ಲಿ ಶಕ್ತಿಶಾಲಿ ವಿರೋಧ ಪಕ್ಷವಾಗಿ ಹೊರಹೊಮ್ಮುತ್ತಿರುವುದಾಗಿಯೂ ನನಗೆ ತಿಳಿದು ಬಂದಿದೆ. ನೀವು ಈಗಾಗಲೇ ಹೊಂದಿರುವ ಶ್ರೇಷ್ಠ ಗುಣಧರ್ಮಗಳನ್ನು ಇನ್ನಷ್ಟು ಬೆಳೆಸಿ ನೀವು ಪ್ರೀತಿ, ನ್ಯಾಯ ಮತ್ತು ಮಾನವೀಯ ಮೌಲ್ಯಗಳನ್ನು ಹರಡುವ ವೈಶಿಷ್ಟ್ಯವನ್ನು ಗಳಿಸುವವರಾಗಬೇಕೆಂದು ನಾನು ನಿಮ್ಮೊಂದಿಗೆ ಅಪೇಕ್ಷಿಸುತ್ತೇನೆ.

ಪೂರ್ಣವಾಗಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಮುದಾಯವಾದ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನಾಯಕನಾದ ನಾನು ನಿಮಗೆ ಭರವಸೆ ನೀಡುತ್ತೇನೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಂದು ಲೋಕದಾದ್ಯಂತ ಮಾನವ ಮೌಲ್ಯಗಳನ್ನು ಸ್ಥಾಪಿಸಲು ಕಠಿಣ ಪರಿಶ್ರಮ ನಡೆಸುತ್ತಲೇ ಇರುವುದು. ಇಂತಹ ಮೌಲ್ಯಗಳನ್ನು ಸ್ಥಾಪಿಸಲು ಪ್ರಯತ್ನಿಸುವ ವ್ಯಕ್ತಿಗಳಿಗೆ ಮತ್ತು ಗುಂಪುಗಳಿಗೆ ಪ್ರತಿಯೊಬ್ಬ ಅಹ್ಮದಿ ಮುಸ್ಲಿಮ್ ಸಹಕಾರ ನೀಡುವನು. ಇದಕ್ಕಿರುವ ಮೂಲ ಕಾರಣವೇನೆಂದರೆ ಒಳಿತನ್ನು ಮಾಡುವುದರಲ್ಲಿ ಪರಸ್ಪರ ಸಹಾಯ ಮಾಡಬೇಕೆಂದು ಪವಿತ್ರ ಖುರ್‌ಆನ್ ನಮಗೆ ಕಲಿಸಿದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತವು ಈ ಉಪದೇಶಕ್ಕೆ ಸಾಕ್ಷ್ಯಗಳನ್ನು ನೀಡುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಪ್ರವಾದಿತ್ವವನ್ನು ಘೋಷಿಸುವ ಮೊದಲೇ ದೌರ್ಜನ್ಯಪೀಡಿತರಿಗೆ ನೆರವು ನೀಡಲು ಪ್ರತಿಜ್ಞೆ ಮಾಡಿದ ಜನರ ಒಂದು ಗುಂಪಿನ ಸದಸ್ಯರಾಗಿದ್ದರು. ಅನೇಕ ವರ್ಷಗಳ ನಂತರ ಹಝ್ರತ್ ಪೈಗಂಬರರು(ಸ) ಹೇಳಿದರು: ನೆರವು ನೀಡುವ ಪ್ರತಿಜ್ಞೆ ಮಾಡಿದವರ ಜೊತೆ ಸೇರುವ ಭಾಗ್ಯ ನನಗೆ ದೊರೆತುದುದು ಲೋಕದ ಎಲ್ಲಾ ಸಂಪತ್ತಿಗಿಂತಲೂ ನನಗೆ ಹೆಚ್ಚು ಬೆಲೆಬಾಳುವುದಾಗಿದೆ. ಅವರು ಮುಂದುವರಿದು ಹೇಳಿದರು: ಪ್ರವಾದಿಯಾದ ಬಳಿಕ ಈಗ ಸಹ ಯಾರಾದರೂ ನಾನು ಮಾಡಿದ ಪ್ರತಿಜ್ಞೆಯ ಈಡೇರುವಿಕೆಯ ರೂಪದಲ್ಲಿ ನೆರವನ್ನು ಆಶಿಸುವುದಾದರೆ ನಾನು ಅದನ್ನು ನೀಡಲು ಯಾವುದೇ ಹಿಂಜರಿಕೆಯಿಲ್ಲದೆ ಮುಂದೆ ಬರುವೆನು.

ಆದುದರಿಂದ ಅಹ್ಮದಿ ಮುಸ್ಲಿಮರು ಹಝ್ರತ್ ಮುಹಮ್ಮದ್ ಪೈಗಂಬರರು(ಸ) ತೋರಿಸಿಕೊಟ್ಟ ಭವ್ಯ ಮಾದರಿ ಜೀವಿತವನ್ನು ಅನುಕರಿಸಿ ಜೀವಿಸಲು ಪ್ರಯತ್ನ ಮಾಡುತ್ತಾ ಇದ್ದಾರೆ.

ಇಸ್ಲಾಮ್ ಧರ್ಮವನ್ನು ವಿರೋಧಿಸುವವರು ತೀವ್ರ ಮತ್ತು ಮನೋವೇದನೆ ಉಂಟುಮಾಡುವ ಆಕ್ಷೇಪಗಳನ್ನು ಮಾಡುತ್ತಾ ಇರುತ್ತಾರೆ. ಆದರೆ ಅವರು ಇಸ್ಲಾಮಿನ ನೈಜ ತತ್ವಗಳನ್ನು ಅಧ್ಯಯನ ಮಾಡದ ಕಾರಣ ಇಂತಹ ಆಕ್ಷೇಪಣೆಗಳನ್ನು ಮಾಡುತ್ತಾರೆ. ಒಬ್ಬನು ಒಂದು ಧರ್ಮದ ಅನುಯಾಯಿ ಎಂದು ವಾದಿಸುತ್ತಾನಾದರೂ ಅವನು ಆ ಧರ್ಮತತ್ವಗಳನ್ನು ಅನುಸರಿಸದೆ ವರ್ತಿಸುವುದಾದರೆ ಅವನು ಮಾಡುವ ತಪ್ಪುಕೃತ್ಯಗಳಿಗೆ ಅವನು ಮಾತ್ರ ಜವಾಬ್ದಾರನು. ಅವನು ಅನುಸರಿಸುವುದಾಗಿ ವಾದಿಸುವ ಧರ್ಮ ಅದಕ್ಕೆ ಹೊಣೆಯಾಗಲಾರದು. ಇದೊಂದು ಮೂಲಭೂತ ತತ್ವವಾಗಿದೆ. ವಾಸ್ತವಿಕವಾಗಿ ಪವಿತ್ರ ಖುರ್‌ಆನ್ ಲೋಕದಲ್ಲಿ ನ್ಯಾಯಪಾಲನೆಯ ಅತ್ಯುನ್ನತ ಮಟ್ಟವನ್ನು ವಿಶ್ವದಲ್ಲಿ ಸ್ಥಾಪಿಸಬೇಕೆಂದು ಉಪದೇಶಿಸುತ್ತದೆ. ಇದನ್ನು ಈಡೇರಿಸಲು ಪವಿತ್ರ ಖುರಆನ್ ಆಜ್ಞಾಪಿಸಿದೆ. ಹಿಂಸಾಚಾರಕ್ಕೆ ಗುರಿಪಡಿಸಿ ದ್ವೇಷದಿಂದ ವರ್ತಿಸುವ ದೇಶದ ವಿರುದ್ಧ ಸಹ ನ್ಯಾಯದಿಂದಲೂ ಸಮಭಾವನೆಯಿಂದಲೂ ವರ್ತಿಸಬೇಕೆಂದು ಅದು ಜನರಿಗೆ ಉಪದೇಶಿಸಿದೆ. ವಾಸ್ತವಿಕವಾದ ಸಾತ್ವಿಕತೆಯು ನ್ಯಾಯ ಬದ್ಧ ವರ್ತನೆಯನ್ನು ಆವಶ್ಯಪಡುತ್ತದೆ ಎಂದು ಪವಿತ್ರ ಖುರ್‌ಆನ್ ಕಲಿಸುತ್ತದೆ.

ಸಾತ್ವಿಕತೆಯ ಬಗ್ಗೆ ಪವಿತ್ರ ಖುರ್‌ಆನ್ ಅನೇಕ ಪ್ರಸ್ತಾಪಗಳನ್ನು ಮಾಡಿದೆ. ಸಾತ್ವಿಕನಲ್ಲದ ಮನುಷ್ಯನು ದೇವನಿಂದ ದೂರಸರಿದಿರುತ್ತಾನೆಂದೂ ಅಂತಹವನು ಇಸ್ಲಾಮ್ ಧರ್ಮ ತತ್ವಗಳಿಂದಲೂ ಬಹಳ ದೂರಸರಿದಿರುತ್ತಾನೆಂದೂ ಪವಿತ್ರ ಖುರ್‌ಆನ್ ಹೇಳಿದೆ. ಸಾಮಾಜಿಕ ಶಾಂತಿಯನ್ನು ಕಾಪಾಡಲು ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಒಳಿತು ಮತ್ತು ಕೆಡುಕು ಸಮಾನವಲ್ಲ. ಅತಿ ಉತ್ತಮವಾದ ಒಳಿತಿನ ಮೂಲಕ ನೀನು ಕೆಡುಕನ್ನು ತಡೆ. ಆಗ ನಿನ್ನ ಮತ್ತು ಅವನ ಮಧ್ಯೆ ಇರುವ ವಿರೋಧ ನೀಗಿ ಅವನು ನಿನ್ನ ಆಪ್ತ ಮಿತ್ರನಾಗುತ್ತಾನೆ."** (41:35)

ಪವಿತ್ರ ಖುರ್‌ಆನಿನ ಈ ವಚನವನ್ನು ಆಲಿಸುವವರು ಇಸ್ಲಾಮಿನ ಧರ್ಮತತ್ವಗಳು ಹಾನಿಕಾರಕವೆಂದು ಹೇಗೆ ತಾನೆ ಹೇಳಲು ಸಾಧ್ಯ? ಈ ವಚನದಲ್ಲಿ ಪ್ರತಿಪಾದಿಸಿದ ಪ್ರಕಾರ ಅಹ್ಮದಿಯರಾದ ನಾವು ಇಂತಹ ಸೌಹಾರ್ದಮಯ ಸ್ಥಿತಿಯನ್ನು ಲೋಕದಲ್ಲಿ ಉಂಟುಮಾಡಲು ಪ್ರಯತ್ನಿಸುತ್ತಿದ್ದೇವೆ. ನಿಸ್ಸಂದೇಹವಾಗಿಯೂ ಇದೊಂದು ಸುವರ್ಣ ತತ್ವವಾಗಿದ್ದು, ಸಮಾಜದಲ್ಲಿ ಶಾಂತಿ ಮತ್ತು ಪ್ರಗತಿಯನ್ನು ಖಾತರಿಪಡಿಸುವುದು. ಇದು ಪ್ರಾದೇಶಿಕ ಶಾಂತಿಗೋಸ್ಕರವಿರುವ ತತ್ವ ಮಾತ್ರವಲ್ಲ, ಜಾಗತಿಕ ಶಾಂತಿಗೆ ಅನುಯೋಜ್ಯವಾದ ಸುವರ್ಣ ತತ್ವವೂ ಆಗಿದೆ.

ಇಂದು ನಾವು ಅಭಿಮಾನದಿಂದ, "ಲೋಕವು ಸಮೀಪವಾಗುತ್ತಾ ಹೋಗುತ್ತಿದೆ ಮತ್ತು ಜಾಗತಿಕ ಗ್ರಾಮವಾಗಿ ಪರಿವರ್ತಿತವಾಗುತ್ತಿದೆ" ಎಂದು ಹೇಳುತ್ತೇವೆಯಾದರೂ ವಾಸ್ತವಿಕವಾಗಿ ವಿವಿಧ ದೇಶಗಳ ಮಧ್ಯೆ ಮತ್ತು ಧರ್ಮಗಳ ಮಧ್ಯೆ ದ್ವೇಷವು ಹರಡುತ್ತಾ ಇದೆ. ಇಂತಹ ದ್ವೇಷಗಳು ನಿಶ್ಚಿತ ಪ್ರದೇಶಗಳಿಗೆ ಸೀಮಿತವಾಗದೆ ವಿಶ್ವವು ಸಂಕುಚಿತಗೊಂಡಿರುವ ಕಾರಣ ದೂರವು ಯಾವುದೇ ತಡೆಯೊಡ್ಡದಿರುವುದರಿಂದ ಸಮಸ್ಯೆಗಳು ಅಂತರರಾಷ್ಟ್ರೀಯ ಮಟ್ಟಕ್ಕೆ ವರ್ಧಿಸುತ್ತಿವೆ.

ನಾವು ಇಂದಿನ ಲೋಕದ ಸ್ಥಿತಿಯನ್ನು ಅವಲೋಕಿಸುವುದಾದರೆ ಅನೇಕ ಸಮಸ್ಯೆಗಳು ಅಂತರರಾಷ್ಟ್ರೀಯ ಗಮನವನ್ನು ಸೆಳೆಯುವಂತಹವುಗಳಾಗಿವೆ. ಯುದ್ಧಕ್ಕಾಗಿ ಬಳಸುವ ಆಯುಧ ಸಾಮಗ್ರಿಗಳು, ಅಣು ಅಸ್ತ್ರಗಳು, ದೀರ್ಘದೂರ ಮಿಸ್ಸೈಲುಗಳು ವಿವಿಧ ದೇಶಗಳಲ್ಲಿ ನಿರ್ಮಾಣಗೊಳ್ಳುತ್ತಿರುವುದರಿಂದ ದ್ವೇಷಗಳು ಅಂತರರಾಷ್ಟ್ರೀಯ ಮಟ್ಟವನ್ನು

ತಲಪಿವೆ ಎಂದು ಸೂಚಿಸುತ್ತವೆ. ಹಾಗಲ್ಲವಾದರೆ ದೀರ್ಘದೂರ ಮಿಸ್ಸೈಲುಗಳನ್ನು ನಿರ್ಮಿಸುವ ಆವಶ್ಯಕತೆ ಏನು? ಸಾಧ್ಯವಿದ್ದಷ್ಟು ದೂರಕ್ಕೆ ಅವುಗಳನ್ನು ಪ್ರಯೋಗಿಸಬೇಕೆಂಬುದಲ್ಲವೇ ಅವುಗಳ ನಿರ್ಮಾಣದ ಉದ್ದೇಶ? ದೇವನಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ – ಜರ್ಮನಿ ದೇಶ ಇಂತಹ ಭೀಕರ ವಿನಾಶಕಾರಿ ಅಣುಬಾಂಬುಗಳನ್ನು ಹೊಂದಿರುವುದಿಲ್ಲ.

ಯುದ್ಧದ ಬಗ್ಗೆ ಹೇಳುವುದಾದರೆ, ನೆರೆಹೊರೆಯ ದೇಶಗಳು ಯುದ್ಧ ಮಾಡಲೇಬಾರದು. ಆದರೆ ದುರದೃಷ್ಟಕರವಾಗಿ ನೆರೆಹೊರೆಯ ದೇಶಗಳ ಮಧ್ಯೆ ಯುದ್ಧ ಪ್ರಾರಂಭವಾದರೆ, ಯುದ್ಧ ಆ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರಬೇಕು. ಇಂದು ನಾವು ಕಾಣುವುದೇನೆಂದರೆ, ಕೆಲವು ದೇಶಗಳು ಸಾವಿರಾರು ಮೈಲು ದೂರ ಸಾಗಿ ಬಾಂಬುದಾಳಿಯನ್ನು ವಿವೇಚನೆ ರಹಿತವಾಗಿ ಮಾಡುತ್ತಿವೆ ಮತ್ತು ಎಲ್ಲಾ ವಿಧಗಳ ಜೀವ ಜಾಲಗಳನ್ನು ನಾಶ ಮಾಡುತ್ತಿವೆ. ಜೀವಂತ ಪ್ರಾಣಿಗಳಾಗಲಿ ಸಸ್ಯಮರ ಗಳಾಗಲಿ ಇಂತಹ ದಾಳಿಗಳಿಂದ ಬಾಕಿಯಾಗಿ ಉಳಿಯುವುದಿಲ್ಲ. ಉದಾಹರಣೆಗೆ, ಜಪಾನಿನ ಮೇಲೆ ಹಾಕಲಾದ ಎರಡು ಅಣುಬಾಂಬುಗಳು ನಂಬಲಸಾಧ್ಯವಾದ ದಾರುಣ ನಾಶವನ್ನು ಉಂಟು ಮಾಡಿದವು. ಇಂತಹ ನಾಶದಿಂದ ಮುಂದೆ ಸಂರಕ್ಷಣೆ ಪಡೆಯಲು ಲೋಕವು ಕೆಲವು ಕ್ರಮಗಳನ್ನು ಕೈಗೊಂಡಿತು. ಆದರೆ ಮುಂದೆ ಸಂಭವಿಸುವ ನಾಶವನ್ನು ತಡೆಗಟ್ಟಲು ಕೈಗೊಂಡ ಕ್ರಮಗಳಿಗಿಂತ ನಾಶವನ್ನು ಹರಡಲು ಮಾಡಿದ ಪ್ರಯತ್ನಗಳು ಹೆಚ್ಚಿನ ಮಟ್ಟದಲ್ಲಿ ನಡೆದವು.

ಜನರು ಹಸಿವಿನಿಂದ ಮತ್ತು ದಾರಿದ್ರ್ಯದಿಂದ ಸಾಯುತ್ತಿರುವ ದೇಶಗಳಲ್ಲಿ ಕೂಡ ಆಡಳಿತಗಾರರು ತಮ್ಮ ಶಕ್ತಿ ಮತ್ತು ಶ್ರೇಷ್ಠತೆಯನ್ನು ಸಾಬೀತುಗೊಳಿಸಲು ಪ್ರಯತ್ನಿಸುವುದು ಕಾಣುತ್ತದೆ. ಅಂತಹ ದೇಶಗಳು ಸಹ ಅಣು ಬಾಂಬು ನಿರ್ಮಿಸುವ ದಾರಿಯಲ್ಲಿ ಮುಂದುವರಿಯುತ್ತಿವೆ. ಅವರ ಕೃತ್ಯಗಳ ದೂರಗಾಮಿ ಪರಿಣಾಮಗಳನ್ನು ಅವರು ಮನವರಿಕೆ ಮಾಡುತ್ತಾ ಇಲ್ಲವೆ? ಅಂತಹ ಜನರ ವೈಯಕ್ತಿಕ ಅಹಂಕಾರದ ಕಾರಣ ದಿಂದ ಸಂಭವಿಸುವ ಯುದ್ಧಗಳಿಂದ ಅವರೇ ನಾಶವಾಗುವರು. ಲೋಕದ ಶಕ್ತಿಶಾಲಿ ದೇಶಗಳು ಯುದ್ಧಗಳನ್ನು ತಡೆಗಟ್ಟಲು ತೀವ್ರ ಪ್ರಯತ್ನ ಮಾಡಲು ಪ್ರಾರಂಭಿಸುವ ತನಕ ಕ್ರೂರ ಹಿಂಸೆಗಳು ವರ್ಧಿಸುತ್ತಾ ಹೋಗುವುವು.

ನನಗೆ ಸಂದರ್ಭ ದೊರೆತಾಗಲೆಲ್ಲಾ ನಾನು ಈ ವಿಷಯದ ಬಗ್ಗೆ ಪ್ರಸ್ತಾಪಿಸಿರುವೆನು. 2008ರಲ್ಲಿ ಪಾರ್ಲಿಮೆಂಟ್ ಹೌಸ್‌ನಲ್ಲಿ ಬ್ರಿಟಿಷ್ ರಾಜಕಾರಣಿಗಳನ್ನು ಸಂಬೋಧಿಸುವ ಸಂದರ್ಭ ನನಗೆ ಲಭಿಸಿತ್ತು. ವಿವಿಧ ದೇಶಗಳಲ್ಲಿ ವಿವಿಧ ಶ್ರೋತೃವರ್ಗಗಳನ್ನು ಸಂಬೋಧಿಸಿ ಮಾತನಾಡುವಾಗಲೂ ನಾನು ಈ ವಿಷಯದ ಬಗ್ಗೆ ಪ್ರಸ್ತಾಪಿಸಿರುವೆನು. ಈ ದಿನ ನಾನು ಪುನಃ ಈ ವಿಷಯವನ್ನು ವಿನೀತನಾಗಿ ಪುನರಾವರ್ತಿ ಸುತ್ತಿದ್ದೇನೆ. ಜರ್ಮನಿ ಒಂದು ಜಾಗತಿಕ ಶಕ್ತಿ ರಾಷ್ಟ್ರವಾಗಿದೆ ಮತ್ತು ಅಭಿವೃದ್ಧಿ ಹೊಂದಿದ ದೇಶವೂ ಆಗಿದೆ. ನಿಮ್ಮ ಗ್ರೀನ್ ಪಾರ್ಟಿ ಪ್ರಗತಿಗಳಿಸುತ್ತಿರುವ ಪಕ್ಷವಾಗಿ ತೋರುತ್ತಿದೆ. ನೀವು ಸಹ ವಿಶ್ವದ ಶಾಂತಿ ಮತ್ತು ಭದ್ರತೆಗೆ ಈ ವಿಷಯದ ಬಗ್ಗೆ ಚಿಂತಿಸಿ ಮುಖ್ಯ ಪಾತ್ರವಹಿಸ ಬೇಕೆಂದು ನಾನು ಅಪೇಕ್ಷಿಸುತ್ತೇನೆ. ಚೆನ್ನಾಗಿ ವಿದ್ಯಾಭ್ಯಾಸ ಗಳಿಸಿದ ಇಂದಿನ ಸಮಾವೇಶದಲ್ಲಿ ಭಾಗವಹಿಸಿದ ಗಣ್ಯರು ಸಹ ಇದರ ಬಗಗೆ ಯೋಚಿಸಿ ತಮ್ಮ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಿಕೊಳ್ಳಬೇಕು. ನೀವು ಹೀಗೆ ವರ್ತಿಸುವುದಾದರೆ ನೀವು ಮಾನವರ ಹಿತಕ್ಕಾಗಿ ಮಾಡುವ ಬಹಳ ದೊಡ್ಡ ಸೇವಾಕಾರ್ಯವಾಗುವುದು.

ನಾನು ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಸಹ ಹೇಳಲು ಬಯಸುತ್ತೇನೆ. ಯಾವುದಾದರೂ ಒಂದು ದೇಶ ತನ್ನ ನೆರೆಹೊರೆಯ ದೇಶದ ವಿರುದ್ಧ ಕ್ರೂರವಾಗಿಯೂ ನ್ಯಾಯರಹಿತವಾಗಿಯೂ ವರ್ತಿಸುವುದಾದರೆ, ಆಗ ಸಂಯುಕ್ತ ರಾಷ್ಟ್ರ ಸಂಘ ಕೂಡಲೆ ಹಸ್ತಕ್ಷೇಪ ಮಾಡಿ ಈ ಕ್ರೂರವರ್ತನೆಯನ್ನು ನ್ಯಾಯಬದ್ಧವಾದ ರೀತಿಯಲ್ಲಿ ತಡೆಗಟ್ಟಬೇಕು. ಇಂದಿನ ಕಾಲಘಟ್ಟದಲ್ಲಿ ಇಂತಹ ಹಸ್ತಕ್ಷೇಪಗಳನ್ನು ಅನ್ಯದೇಶಗಳು ಮಾಡುವಾಗ ನ್ಯಾಯಬದ್ಧ ರೀತಿಯಲ್ಲಿ ಮಾಡುತ್ತಿವೆಯೋ? ಇದಕ್ಕೆ ಉತ್ತರವೇನೆಂದರೆ, ಖಂಡಿತವಾಗಿಯೂ ನ್ಯಾಯಬದ್ಧವಾಗಿ ಹಸ್ತಕ್ಷೇಪ ನಡೆಸಲಾಗುತ್ತಿಲ್ಲ.

ನಾನು ಹೀಗೆ ಹೇಳಲು ಕಾರಣವೇನೆಂದರೆ, ಒಂದು ಸರಕಾರವು ಇನ್ನೊಂದು ಸರಕಾರದ ವಿರುದ್ಧ ಮಾಡುವ ಯುದ್ಧದಲ್ಲಿ ವಿದೇಶ ಶಕ್ತಿಗಳು ಸಹಾಯ ಮಾಡುತ್ತವೆ. ಅವು ಆಯುಧಗಳನ್ನು ಮತ್ತು ಕೆಲವು ಸಾರಿ ವಿದೇಶಿ ಸೈನಿಕರನ್ನು ಸಹ ಯುದ್ಧ ಮಾಡಲು ಕಳುಹಿಸುತ್ತವೆ. ಆದರೆ ಸ್ವಲ್ಪ ಕಾಲದ ನಂತರ ವಿದೇಶಿ ಸಹಾಯ ಪಡೆದ ಸರಕಾರ ಸಹಾಯ ನೀಡಿದ ವಿದೇಶೀ ಹಿತಾಸಕ್ತಿಗಳನ್ನು ನೆರವೇರಿಸಿ ಕೊಡುವುದಿಲ್ಲ. ಅಥವಾ ಸಹಾಯ ನೀಡಿದ ವಿದೇಶ ಶಕ್ತಿಗಳು ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಂಡಿರುವುದರಿಂದ ಸಹಾಯ ಮುಂದುವರಿಸುವ ಭಾವನೆ ಕಳೆದುಕೊಳ್ಳುತ್ತವೆ. ಇವೆರಡರಲ್ಲಿ ಒಂದು ಪರಿಸ್ಥಿತಿ ಉಂಟಾಗುವಾಗ ಸಹಾಯ ಪಡೆದ ದೇಶದ ಆಡಳಿತಾಧಿಕಾರಿಗಳನ್ನು ಯುದ್ಧಾಪರಾಧಿ ಗಳೆಂದು ಘೋಷಿಸಿ ಜಾಗತಿಕ ಕ್ರಿಮಿನಲ್ ಕೋರ್ಟಿಗೆ, ಸಹಾಯ ನೀಡಿದ ದೇಶಗಳು ಹಾಜರುಪಡಿಸುತ್ತವೆ. ಕೆಲವು ದೇಶಗಳಲ್ಲಿ ದೇಶದ ಪ್ರಜೆಗಳು ನಡೆಸುವ ಪ್ರತಿಭಟನೆಗೆ ಬೆಂಬಲ ನೀಡುವುದರಿಂದ ಹೆಚ್ಚಿನ ಹಿಂಸಾಚಾರವೂ ಗಲಭೆ ಗೊಂದಲಗಳೂ ನಡೆಯುತ್ತವೆ. ಇದು ಸಂಪೂರ್ಣವಾಗಿ ತಪ್ಪಾದ ಕಾರ್ಯವಿಧಾನವಾಗಿದೆ.

ಯುದ್ಧ ಮಾಡುವವರ ಮತ್ತು ಕ್ರೂರವಾಗಿ ವರ್ತಿಸುವವರ ವಿರುದ್ಧ ಹೋರಾಟ ನಡೆಸಲು ಇಸ್ಲಾಮ್ ಅನುಮತಿಸುತ್ತದೆ. ಆದರೆ ಇಸ್ಲಾಮ್ ಈ ವಿಷಯವನ್ನು ಮುಂದುವರಿಸಿ ಹೀಗೆ ಹೇಳುತ್ತದೆ: ಕ್ರೂರವಾಗಿ ವರ್ತಿಸುವವರು ತಮ್ಮ ಕ್ರೂರಕೃತ್ಯಗಳನ್ನು ನಿಲ್ಲಿಸುವುದಾದರೆ ಮತ್ತು ಅಸ್ತವ್ಯಸ್ತತೆ ಕೊನೆಗೊಂಡರೆ ಅವರ ವಿರುದ್ಧ ನಡೆಸಲಾದ ಕ್ರಮವನ್ನು ಕೊನೆಗೊಳಿಸಬೇಕು. ಕ್ರೂರತೆಯನ್ನು ತಡೆಗಟ್ಟಲು ಮಾತ್ರ ಇಸ್ಲಾಮ್ ಧರ್ಮ ಅನುಮತಿ ನೀಡಿದೆ. ಆಕ್ರಮಣಕಾರಿ ಯುದ್ಧಗಳಿಗೆ ಇಸ್ಲಾಮ್ ಧರ್ಮ ಅನುಮತಿ ನೀಡುವುದಿಲ್ಲ. ಈ ವಿಷಯ ಪವಿತ್ರ ಖುರ್‌ಆನಿನ ಅಧ್ಯಾಯ 2 ವಚನ 192–194ರಲ್ಲಿ ವಿವರಿಸಲಾಗಿದೆ. ನಾನು ಆ ವಿಷಯವನ್ನು ಸಂಕ್ಷೇಪಿಸಿ ನಿಮ್ಮ ಮುಂದೆ ಹೇಳಿರುವೆನು.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೀಗೆ ಹೇಳಿರುವರು:

**"ನೀವು ದೌರ್ಜನ್ಯಗಾರನಿಗೂ ದೌರ್ಜನ್ಯಪೀಡಿತನಿಗೂ ಸಹಾಯ ಮಾಡಿರಿ."** ಆಗ ಅವರೊಂದಿಗೆ ಶಿಷ್ಯರು ಕೇಳಿದರು: **"ದೌರ್ಜನ್ಯಗಾರನಿಗೆ ಸಹಾಯ ಮಾಡುವುದು ಹೇಗೆ?"** ಆಗ ಹಝ್ರತ್ ಪೈಗಂಬರರು(ಸ) ಹೇಳಿದರು: **"ನೀವು ದೌರ್ಜನ್ಯಗಾರನ ಕೈಗಳನ್ನು ತಡೆದು ಅವನಿಗೆ ಸಹಾಯ ಮಾಡಬಹುದು."** ಇದರ ಅರ್ಥವೇನೆಂದರೆ, ದೌರ್ಜನ್ಯ ಗಾರನನ್ನು ಕ್ರೂರ ಮತ್ತು ಅನ್ಯಾಯಕರ ಕೃತ್ಯಗಳನ್ನು ಮಾಡುವುದರಿಂದ ತಡೆಯ ಬೇಕು. ಆ ರೀತಿ ಮಾಡಿದರೆ ಅವನು ಸರ್ವಶಕ್ತನಾದ ದೇವನು ನೀಡುವ ಶಿಕ್ಷೆಯಿಂದ ರಕ್ಷಿಸಲ್ಪಡುವನು.

ದೌರ್ಜನ್ಯಗಾರನಿಗೆ ಸಹ ಸಹಾಯ ನೀಡುವ ತತ್ವವು ದಯೆ ದೋರುವ ಇಚ್ಛೆಯಿಂದ ಹುಟ್ಟಿದುದಾಗಿದೆ. ಯಾವುದೇ ವೈಯಕ್ತಿಕ ಲಾಭಗಳಿಸುವ ಉದ್ದೇಶದ ಮೇಲೆ ಅದು ಆಧಾರಗೊಂಡಿಲ್ಲ. ಈ ವಿಷಯವನ್ನು ಒತ್ತಿ ಹೇಳಲು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: **ರಾಜಿ ಸಂಧಾನ ಮತ್ತು ಶಾಂತಿ ಸ್ಥಾಪಿತವಾದರೆ ನ್ಯಾಯ ಮತ್ತು**

ಸಮಾನತೆಯನ್ನು ಸ್ಥಾಪಿಸಬೇಕು. ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 10ರಲ್ಲಿ ಇದರ ಬಗ್ಗೆ ವಿವರಿಸಲಾಗಿದೆ.

ದ್ವಿತೀಯ ಮಹಾಯುದ್ಧದ ನಂತರ ಯುದ್ಧ ಮಾಡಿದ ದೇಶಗಳು ನ್ಯಾಯಯುತವಾಗಿ ವರ್ತಿಸುತ್ತಿದ್ದರೆ ವಿಶ್ವವು ಇಂದಿನ ಸ್ಥಿತಿಗೆ ತಲಪುತ್ತಿರಲಿಲ್ಲ. ಈಗ ದೇಶಗಳು ಪುನಃ ಯುದ್ಧ ಜ್ವಾಲೆಗಳಿಂದ ಆವೃತವಾಗಿವೆ. ಮಹಾಯುದ್ಧ ಕೊನೆಗೊಂಡ ಕಾಲ ಮತ್ತು ಇಂದಿನ ಕಾಲದ ಮಧ್ಯಾವಧಿಯಲ್ಲಿ ನ್ಯಾಯಪಾಲನೆಯು ನಡೆದಿದ್ದರೆ ನಾವು ಆಯುಧಗಳನ್ನು ಹೊಂದುವ ಸ್ಪರ್ಧೆಯನ್ನು ಈಗ ಕಾಣುತ್ತಿರಲಿಲ್ಲ. ಈಗ ಹೊಸ ಹೊಸ ಯುದ್ಧ ವಿಮಾನಗಳನ್ನು ಆವಿಷ್ಕರಿಸಲಾಗುತ್ತಿದ್ದು ದೇಶಗಳು ತಮ್ಮ ಸೈನ್ಯವನ್ನು ವರ್ಧಿಸುತ್ತಾ ಇವೆ. ನ್ಯಾಯಪಾಲನೆ ಆಗಿದ್ದರೆ ಅಣುಬಾಂಬುಗಳನ್ನು ಮತ್ತು ರಾಸಾಯನಿಕ ಶಸ್ತ್ರಗಳನ್ನು ಹೊಂದುವ ಬಗ್ಗೆ ಸ್ಪರ್ಧೆ ಉಂಟಾಗುತ್ತಿರಲಿಲ್ಲ ಮತ್ತು ದೇಶಗಳು ಇಂತಹ ಯುದ್ಧ ಸಾಮಗ್ರಿಗಳನ್ನು ಹೊಂದಿರುವ ಬಗ್ಗೆ ತಪ್ಪಾದ ಹೆಮ್ಮೆಯನ್ನೂ ಹೊಂದುತ್ತಿರಲಿಲ್ಲ.

ನಾನು ದುಃಖದಿಂದ ಹೇಳಬಯಸುವುದೇನೆಂದರೆ, ನಾವು ಲೋಕದ ಇಂದಿನ ಸನ್ನಿವೇಶಗಳನ್ನು ವೀಕ್ಷಿಸುವುದಾದರೆ ಇನ್ನೊಂದು ಮಹಾಯುದ್ಧಕ್ಕೆ ಅಸ್ತಿಭಾರವನ್ನು ಇಷ್ಟರಲ್ಲಿಯೇ ಹಾಕಲಾಗಿದೆ.

ಪ್ರತಿಯೊಂದು ದೇಶ ಯಾವುದಾದರೂ ರೀತಿಯಲ್ಲಿ ಬೇರೆ ದೇಶಗಳಿಗೆ ಸಹಾಯ ಮಾಡಲು ಅಥವಾ ಅವುಗಳನ್ನು ವಿರೋಧಿಸಲು ಪ್ರಯತ್ನ ಮಾಡುತ್ತಿದೆ. ಆದರೆ ನ್ಯಾಯಬದ್ಧ ನಡೆವಳಿಕೆಯ ಆವಶ್ಯಕತೆಗಳನ್ನು ಅವರು ಈಡೇರಿಸುವುದಿಲ್ಲ. ಸಂಘರ್ಷಗಳು ದಿನಂಪ್ರತಿ ವರ್ಧಿಸುತ್ತಾ ಇವೆ. ನಮಗೆ ಒಂದು ಮಾತನ್ನು ಹೇಳಿ, ತೆರೆಯ ಹಿಂಬದಿಯಲ್ಲಿ ತಮ್ಮ ಹಿತಾಸಕ್ತಿಗೆ ಅನುಕೂಲವಾದ ಕಾರ್ಯಗಳನ್ನು ಮಾಡುತ್ತಿರುವುದು ಒಂದು ರಹಸ್ಯವಾಗಿ ಉಳಿದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಲೋಕದಲ್ಲಿ ಶಾಂತಿ ಸ್ಥಾಪನೆ ಸಾಧ್ಯವೇ ಎಂಬುದು ಪ್ರಶ್ನೆಯಾಗಿದೆ.

ಇದರ ಪರಿಣಾಮವಾಗಿ ಅನೇಕ ದೇಶಗಳು ದೊಡ್ಡವು ಮತ್ತು ಚಿಕ್ಕವು ಅಣು ಅಸ್ತ್ರಗಳನ್ನು ಹೊಂದಿದ್ದು ಅಸೂಯೆಭರಿತವಾಗಿವೆ ಮತ್ತು ಶತ್ರುತ್ವವು ವರ್ಧಿಸುತ್ತಿದೆ. ವಾಸ್ತವಿಕವಾಗಿ ಜನರ ಹೃದಯಗಳು ಅಸೂಯೆಯಿಂದ ತುಂಬಿವೆ. ಲೋಕವು ಭಯಾನಕ ನಾಶದ ಕಡೆಗೆ ಸಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ನಾನು ನಂಬುವುದೇನೆಂದರೆ, ಈಗ ನಾವು ಲೋಕದ 'ಪ್ರಗತಿ' ಬಗ್ಗೆ ನಮ್ಮ ಶ್ರದ್ಧೆಯನ್ನು ಕೇಂದ್ರೀಕರಿಸುವುದಕ್ಕಿಂತ ಲೋಕವು ಭಯಾನಕ ನಾಶದ ಕಡೆಗೆ ಸಾಗುವುದರಿಂದ ರಕ್ಷಿಸಲು ಶೀಘ್ರವಾಗಿ ಪ್ರಯತ್ನ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ.

ಪ್ರತಿಯೊಂದು ಸಂಸ್ಥೆ ಮತ್ತು ಪ್ರತಿಯೊಂದು ದೇಶ ತಮ್ಮ ಸ್ವಂತ ಅಹಂಭಾವದ ಕಾರಣದಿಂದ ಅಪಾಯಕರವಾಗಿ ನಾಶೋನ್ಮುಖವಾಗಿದೆ. ಅವರಿಗೆ ತಮ್ಮ ಈ ಸ್ಥಿತಿಯಿಂದ ಹೊರಬರಲು ಕಷ್ಟಕರವಾಗಿದೆ.

ನಾನು ವಿನೀತವಾಗಿ ನಿಮ್ಮೊಂದಿಗೆ ಅಪೇಕ್ಷಿಸಲು ಬಯಸುತ್ತೇನೆ: ಈ ದೇಶದ ಪ್ರಭಾವಶಾಲಿ ವ್ಯಕ್ತಿಗಳಾಗಿರುವ ನೀವು, ನಾವು ಎದುರಿಸುತ್ತಿರುವ ಅಪಾಯಕರಿ ಸನ್ನಿವೇಶದ ಬಗ್ಗೆ ಲೋಕಕ್ಕೆ ಮನವರಿಕೆ ಮಾಡಿಕೊಡಬೇಕು. ಹೀಗೆ ಮಾಡದಿದ್ದರೆ ನಮ್ಮ ಮುಂದಿನ ಪೀಳಿಗೆಗಳು ಬೆಳಗುವ ಭವಿಷ್ಯವನ್ನು ಕಾಣಲಾರರು. ಅವರು ಅಂಧಕಾರಮಯ ಬರಡು ಕಾಲವನ್ನು ಪ್ರವೇಶಿಸುವರು.

ನಾವು ನೆನಪಿಡಬೇಕಾದ ಒಂದು ಮುಖ್ಯ ತತ್ವವೇನೆಂದರೆ, ನೀವು ಬಿತ್ತಿದುದನ್ನೇ ನೀವು ಕೊಯ್ಯುವಿರಿ ಎಂದಾಗಿದೆ. ನೈಸರ್ಗಿಕ ನಿಯಮಗಳು ಹೇಗಿವೆ ಎಂದರೆ ನಮ್ಮ ಕೃತ್ಯಗಳಿಗೆ ಅನುಸಾರವಾಗಿ ಪರಿಣಾಮಗಳು ಇರುತ್ತವೆ. ಜಗದೊಡೆಯನು ಸಮತೋಲನದಿಂದ ಕೂಡಿದ ನ್ಯಾಯಯುತ ವ್ಯವಸ್ಥೆಯನ್ನು ಈ ಲೋಕದಲ್ಲಿಯೂ ಈ ಬ್ರಹ್ಮಾಂಡದಲ್ಲಿಯೇ ಜನರ ಹಿತಕ್ಕಾಗಿಯೂ ಅಭಿವೃದ್ಧಿಗಾಗಿಯೂ ಸ್ಥಾಪಿಸಿರುವನು. ಈ ಸಮತೋಲನಕ್ಕೆ ಭಂಗ ಉಂಟಾದರೆ ಲೋಕವು ನಾಶವಾಗುವುದು. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

> **ಆಕಾಶವನ್ನು ಅವನು ಉನ್ನತಗೊಳಿಸಿದನು ಮತ್ತು (ನ್ಯಾಯದ) ತಕ್ಕಡಿಯನ್ನು ಸ್ಥಾಪಿಸಿದನು –**
>
> **ನೀವು (ನ್ಯಾಯದ) ತಕ್ಕಡಿಯಲ್ಲಿ ಕ್ರಮಮೀರಬಾರದೆಂದು.**
>
> **ನೀವು ನ್ಯಾಯಯುತವಾಗಿ ತೂಕ ಮಾಡಿರಿ. ನೀವು ಅಳತೆಯಲ್ಲಿ ಕಡಿಮೆ ಮಾಡಬಾರದು.**
>
> **ಭೂಮಿಯನ್ನು ಅವನು ಎಲ್ಲ ಸೃಷ್ಟಿ ಜಾಲಗಳಿಗೋಸ್ಕರ ವ್ಯವಸ್ಥೆಗೊಳಿಸಿರುವನು.**
>
> **ಅಲ್ಲಿ ಎಲ್ಲ ವಿಧ ಹಣ್ಣುಹಂಪಲುಗಳೂ ಕೋಶದಿಂದ ಕೂಡಿದ ಫಲಗಳುಳ್ಳ ಖರ್ಜೂರದ ಮರಗಳೂ ಇವೆ.**
>
> **ಹೊಟ್ಟುಗಳಿಂದ ಕೂಡಿದ ಧಾನ್ಯಗಳೂ ಸುಗಂಧಯುಕ್ತ ಸಸ್ಯಾಲತಾದಿಗಳೂ ಇವೆ.**
>
> **ಹಾಗಿರುವಾಗ ನೀವಿಬ್ಬರೂ ನಿಮ್ಮ ಪ್ರಭುವಿನ ಯಾವ ಅನುಗ್ರಹಗಳನ್ನು ಅಲ್ಲಗಳೆಯುವಿರಿ?** (55: 8–14)

ಪವಿತ್ರ ಖುರ್‌ಆನಿನ, ಮೇಲಿನ ವಚನಗಳಲ್ಲಿ ವಿಶ್ವ ವ್ಯವಸ್ಥೆಯನ್ನು ವಿವರಿಸಲಾಗಿದೆ. ವಸ್ತುಗಳ ಆಕಾರ ಮತ್ತು ಚಲನೆಗಳಿಗೆ ಪರಿಪೂರ್ಣ ಸಂಬಂಧವೂ ಅನ್ಯೂನ ಸಮನ್ವಯತೆಯೂ ಇರುತ್ತದೆ. ಮನುಷ್ಯರು ಈ ಸಮತೋಲನೆ ಮತ್ತು ನ್ಯಾಯವ್ಯವಸ್ಥೆಯನ್ನು ಪಾಲಿಸಬೇಕೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಮನುಷ್ಯನು ದೇವನ ಸೃಷ್ಟಿಗಳಲ್ಲಿ ಅತ್ಯಂತ ಉನ್ನತ ಸ್ಥಾನದಲ್ಲಿ ಇರುವವನೆಂದು ಪವಿತ್ರ ಖುರ್‌ಆನ್ ಘೋಷಿಸುತ್ತದೆ. ಮನುಷ್ಯರು ಈ ವ್ಯವಸ್ಥೆಗೆ ಭಂಗ ಉಂಟುಮಾಡಿದರೆ, ನ್ಯಾಯಯುತ ಸಮತೋಲನವನ್ನು ಉಲ್ಲಂಘಿಸಿ ತಮ್ಮ ಸ್ವಂತ ಆಶಾಭಿಲಾಷೆಗಳನ್ನು ಮತ್ತು ತಮ್ಮ ಸ್ವಾರ್ಥಭಾವನೆಗಳನ್ನು ಅನುಸರಿಸುವುದಾದರೆ ಹಾನಿಯನ್ನು ಅನುಭವಿಸುವರು. ಇದರಲ್ಲಿ ಯಾವ ಸಂಶಯವೂ ಇಲ್ಲ.

ಆದುದರಿಂದ ನೀವು ಪರಸ್ಪರ ಸಂಬಂಧಗಳಲ್ಲಿ ಪರಿಪೂರ್ಣ ಸಂಪರ್ಕ ಮತ್ತು ಸಮನ್ವಯತೆಯನ್ನು ಸ್ಥಾಪಿಸಬೇಕು. ಪರಸ್ಪರ ನ್ಯಾಯಯುತವಾದ ಸಮತೋಲನವನ್ನು ಕಾಪಾಡಬೇಕು. ದೇವನು ನಿಶ್ಚಯಿಸಿದ ಪರಿಮಿತಿಗಳನ್ನು ದಾಟಬಾರದು. ಸರ್ವಶಕ್ತ ಜಗದೊಡೆಯ ಸೃಷ್ಟಿಸಿದ ಎಲ್ಲವುಗಳೊಂದಿಗೆ, ಜೀವಿಗಳಾಗಲಿ ಸಸ್ಯವರ್ಗಗಳಾಗಲಿ ನಾವು ನ್ಯಾಯ ಮತ್ತು ಸಮತೋಲನದಿಂದ ವರ್ತಿಸಬೇಕು. ಹಾಗೆ ಮಾಡಿದರೆ ನೀವು ಅಲ್ಲಾಹನು ದಯಪಾಲಿಸಿದ ಅನುಗ್ರಹಗಳನ್ನು ಪಡೆಯುವವರಾಗುವಿರಿ.

ಪವಿತ್ರ ಖುರ್‌ಆನಿನಲ್ಲಿ ಸಸ್ಯಲತಾದಿಗಳಿಗೆ ಸಹ ಪ್ರಾಮುಖ್ಯತೆ ನೀಡಿದುದನ್ನು ನಾವು ಕಾಣುತ್ತೇವೆ. ಉದಾಹರಣೆಗೆ, ಮರಗಳು ಮತ್ತು ಬೆಳೆಗಳ ಬಗ್ಗೆ ಮತ್ತು ಪ್ರಾಣಿಗಳ ಆಹಾರವಾಗಿರುವ ಹೊಟ್ಟು ಬಗ್ಗೆ ಪ್ರಸ್ತಾಪಿಸಲಾಗಿದೆ. ಇಲ್ಲಿ ನಾನು ಒಂದು ವಿಷಯವನ್ನು ಹೇಳಲು ಬಯಸುತ್ತೇನೆ. ಅನೇಕ ಅರ್ಥಗಳನ್ನು ಹೊಂದಿದ ಅರಬಿ ಶಬ್ದಗಳನ್ನು ಕೇವಲ ಒಂದು ಶಬ್ದಕ್ಕೆ ಒಂದು ಅರ್ಥ ನೀಡಿ ಭಾಷಾಂತರಿಸುವುದು ಬಹಳ ಕಷ್ಟಕರವಾಗಿದೆ. ಉದಾಹರಣೆಗೆ ಹೇಳುವುದಾದರೆ, ನಾವು "ಹೊಟ್ಟು" ಎಂದು ಭಾಷಾಂತರಿಸಿದ ಅರಬಿ ಪದ ವಾಸ್ತವಿಕವಾಗಿ

# ಧರ್ಮನಿಂದೆಗೆ ಇಸ್ಲಾಮ್ ವಿಧಿಸುವ ಶಿಕ್ಷೆ ಏನು?

★ ಖಾಲಿದ್ ಸೈಫುಲ್ಲಾ ಖಾನ್

ಧರ್ಮನಿಂದೆಗೆ ಇಂಗ್ಲಿಷ್‌ನಲ್ಲಿ ಬ್ಲಾಸ್‌ಫೆಮಿ (BLASPHEMY) ಎನ್ನುತ್ತಾರೆ. ಈ ಶಬ್ದ ಬ್ಲಾಸ್‌ಫೇಮಿಯ (BLASPHEMIA) ಎಂಬ ಲ್ಯಾಟಿನ್ ಪದದಿಂದ ವ್ಯುತ್ಪನ್ನವಾಗಿದೆ. ಇದರ ಅರ್ಥವನ್ನು ಸಾಮಾನ್ಯವಾಗಿ ಹೀಗೆ ವಿವರಿಸಲಾಗಿದೆ: ದೇವನ ಬಗ್ಗೆ, ಧರ್ಮದ ಬಗ್ಗೆ ಮತ್ತು ಪವಿತ್ರವೆಂದು ಗಣಿಸಲ್ಪಡುವವುಗಳ ಬಗ್ಗೆ ಗೌರವರಹಿತವಾಗಿ ವರ್ತಿಸುವುದು ಮತ್ತು ನಿಂದಾತ್ಮಕ ಭಾಷೆ ಪ್ರಯೋಗಿಸುವುದು. ತಮ್ಮ ನಂಬಿಕೆಗಳ ಬಗ್ಗೆ, ತಮ್ಮ ಧಾರ್ಮಿಕ ನಾಯಕರ ಬಗ್ಗೆ, ತಮ್ಮ ಪವಿತ್ರ ಗ್ರಂಥಗಳ ಬಗ್ಗೆ, ತಮ್ಮ ಆರಾಧನಾಲಯಗಳ ಬಗ್ಗೆ ಮತ್ತು ತಮ್ಮ ಆಚಾರಗಳ ಬಗ್ಗೆ ಅಚಂಚಲ ನಂಬಿಕೆಗಳನ್ನು ಹೊಂದಿರುವವರಿಗೆ ವಿಶಿಷ್ಟವಾಗಿ ಮತ್ತು ಬಹುತೇಕ ಜನರಿಗೆ ಸಾಮಾನ್ಯವಾಗಿ ಇದೊಂದು ಸಂವೇದನಾತ್ಮಕ ವಿಷಯವಾಗಿದೆ.

ಯಾವ ಕೃತ್ಯಗಳನ್ನು 'ಗೌರವರಾಹಿತ್ಯ'ವೆಂದು ಪರಿಗಣಿಸಬಹುದು? ಆಕೃತ್ಯಗಳನ್ನು ಮಾಡುವವರನ್ನು ಹೇಗೆ ಶಿಕ್ಷಿಸಬೇಕು? ಧರ್ಮನಿಂದೆಯನ್ನು ತಡೆಗಟ್ಟಲು ಕೈಗೊಳ್ಳಬೇಕಾದ ನ್ಯಾಯವ್ಯವಸ್ಥೆ ಹೇಗಿರಬೇಕು? ಈ ಪ್ರಶ್ನೆಗಳ ಬಗ್ಗೆ ಬಹಳ ಚರ್ಚೆ ಮತ್ತು ವಾಗ್ವಾದಗಳು ನಡೆಯುತ್ತಿವೆ. ಇಸ್ಲಾಮ್ ಧರ್ಮದ ವಿರುದ್ಧ ಧರ್ಮನಿಂದೆ ಮಾಡುವವರ ಮತ್ತು ಇಸ್ಲಾಮ್ ಧರ್ಮತ್ಯಾಗ ಮಾಡುವವರ ವಿರುದ್ಧ ಕೆಲವು ಮುಸ್ಲಿಮ್ ಗುಂಪುಗಳು ಕಠಿಣ ಶಿಕ್ಷೆಗಳನ್ನು ಕೈಗೊಳ್ಳುವುದರ ಬಗ್ಗೆ ಪಾಶ್ಚಿಮಾತ್ಯ ಸಂಪರ್ಕ ಮಾಧ್ಯಮಗಳು ಭೀಕರ ಚಿತ್ರಣಗಳನ್ನು ನೀಡುತ್ತಿವೆ. ಧರ್ಮನಿಂದೆ ಮಾಡುವವರನ್ನು ಹೊಡೆದು ಬಡಿದು ಕೊಲ್ಲುವುದನ್ನು ನೋಡುವ ದೃಶ್ಯಗಳು ಪಾಶ್ಚಿಮಾತ್ಯ ಲೋಕದ ಮೇಲೆ ಗಾಢವಾದ ಪ್ರಭಾವ ಬೀರುತ್ತಿದೆ.

ದುರದೃಷ್ಟಕರವಾದ ವಿಷಯವೇನೆಂದರೆ, ತಪ್ಪುಗ್ರಹಿಕೆಗೆ ಈಡಾದ

---

ಹೊಟ್ಟು ಮಾತ್ರವಲ್ಲ, ಒಣಹುಲ್ಲು ಮತ್ತು ಮನುಷ್ಯನು ಸಾಕುವ ಜಾನುವಾರುಗಳಿಗೆ ನೀಡಲಾಗುವ ಎಲ್ಲಾ ರೀತಿಯ ಪಶು ಆಹಾರಗಳಿಗೆ ಅನ್ವಯಿಸುತ್ತದೆ. ಜಾನುವಾರುಗಳನ್ನು ನಾವು ಆಹಾರಕ್ಕೆ ಬಳಸುತ್ತೇವೆ ಮತ್ತು ಅವುಗಳಿಂದ ಬೇರೆ ಪ್ರಯೋಜನಗಳೂ ಇವೆ. ಅಂತಹ ಜಾನುವಾರುಗಳನ್ನು ಸಹ ನ್ಯಾಯ ಮತ್ತು ಸಮತೋಲನದಿಂದ ಸಾಕಬೇಕೆಂದು ಉಪದೇಶಿಸಲಾಗಿದೆ. ಸಸ್ಯಲತಾದಿಗಳೂ ಮರಗಳೂ ಮಾನವರ ಬದುಕಿಗೆ ಆವಶ್ಯಕವಾಗಿವೆ ಮತ್ತು ಮೃಗಗಳಿಗೂ ಆವಶ್ಯಕವಾಗಿವೆ. ಈಗ ಸಹ ಅವುಗಳಿಂದ ಇಂಧನವನ್ನೂ ಶಕ್ತಿಯನ್ನೂ ಪಡೆಯಲಾಗುತ್ತಿದೆ. ಆದುದರಿಂದ ನೈಸರ್ಗಿಕ ಸಮತೋಲನವನ್ನು ಕಾಪಾಡದಿದ್ದರೆ ಮನುಷ್ಯರಿಗೆ ಹಾನಿಕರವಾಗುವುದು.

ನಾವು ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನಗಳ ಕೊನೆಗೆ **"ನೀವಿಬ್ಬರೂ ನಿಮ್ಮ ಪ್ರಭುವಿನ ಯಾವ ಅನುಗ್ರಹಗಳನ್ನು ಅಲ್ಲಗಳೆಯುವಿರಿ?"** ಎಂದು ಪ್ರಶ್ನಿಸಲಾಗಿದೆ.

ಈ ವಚನದಲ್ಲಿ ನೀವಿಬ್ಬರು ಎಂದು ಹೇಳಿದುದು ದೇಶದ ಮುಂದಾಳುಗಳನ್ನು ಮತ್ತು ಸಾಮಾನ್ಯ ಜನರನ್ನು ಉದ್ದೇಶಿಸಿಯಾಗಿದೆ. ಶ್ರೀಮಂತರು ಮತ್ತು ಬಡವರು ಈ ಎರಡು ವರ್ಗಗಳಿಗೆ ಸೇರಿದವರಾಗಿದ್ದಾರೆ. ಅಹಂಕಾರಭರಿತ ಪಾಶ್ಚಿಮಾತ್ಯ ದೇಶಗಳು ಮತ್ತು ಹೆಚ್ಚು ಪ್ರಗತಿ ಹೊಂದದ ಆಫ್ರಿಕದ ಮತ್ತು ಏಶಿಯಾದ ದೇಶಗಳು ಈ ಎರಡು ವರ್ಗಗಳಿಗೆ ಸೇರುತ್ತವೆ. ಅಲ್ಲಾಹನು ಆದೇಶಿಸಿರುವುದೇನೆಂದರೆ, ನೀವೆಲ್ಲರೂ ನ್ಯಾಯ ಮತ್ತು ಸಮತೋಲನದ ವ್ಯವಸ್ಥೆಯನ್ನು ರಕ್ಷಿಸಬೇಕು.

ಅಣು ಅಸ್ತ್ರಗಳನ್ನು ಮತ್ತು ಇತರ ಆಯುಧಗಳನ್ನು ಬಳಸುವುದಾದರೆ, ನೀವು ದೇವನಿಗೆ ವಿದ್ರೋಹ ಮಾಡುವವರಾಗಿರುವಿರಿ ಎಂದಾಗುತ್ತದೆ. ಅಂತಹ ವಿದ್ರೋಹವು ಸಮತೋಲನೆ ಮತ್ತು ನ್ಯಾಯ ವ್ಯವಸ್ಥೆಗೆ ಭಂಗ ಉಂಟುಮಾಡುತ್ತದೆ. ಆದುದರಿಂದ, **"ನೀವು ನಿಮ್ಮ ಸಹಜೀವಿಗಳಾದ ಮನುಷ್ಯರಿಗೆ ಸಲ್ಲಬೇಕಾದ ಹಕ್ಕುಗಳನ್ನು ನೀಡಬೇಕು ಮತ್ತು ಸೃಷ್ಟಿಕರ್ತನಿಗೆ ಸಲ್ಲಬೇಕಾದ ಹಕ್ಕುಗಳನ್ನು ಅವನಿಗೂ ನೀಡಬೇಕು"** ಎಂದು ನಮಗೆ ನೆನಪಿಸಿಕೊಡಲಾಗಿದೆ.

ಪವಿತ್ರ ಖುರ್‌ಆನ್ ಅಣು ಅಸ್ತ್ರ ಪ್ರಯೋಗದ ಯುದ್ಧದ ಬಗ್ಗೆ ಸಹ ಸೂಚಿಸಿದೆ. ಮುಸ್ಲಿಮನಾದ ನಾನು ಪವಿತ್ರ ಖುರ್‌ಆನನ್ನು ಸಂಪೂರ್ಣ ಸತ್ಯವೆಂದು ನಂಬುತ್ತೇನೆ. ಆದುದರಿಂದ ಅನ್ಯರ ಬಗ್ಗೆ ಮಿತಿ ಮೀರಿದ ಹಗೆತನದ ಬಗ್ಗೆ ಆಗಾಗ ಎಚ್ಚರಿಕೆ ನೀಡುತ್ತಾ ಇರುತ್ತೇನೆ. ಇಂತಹ ಹಗೆತನವು ಮಾನವೀಯ ಮೌಲ್ಯಗಳನ್ನು ಧ್ವಂಸಗೊಳಿಸುತ್ತದೆ ಮತ್ತು ಲೋಕವನ್ನು ನಾಶದ ಕಡೆಗೆ ಒಯ್ಯುತ್ತಾ ಇದೆ. ಇದನ್ನು ತಡೆಗಟ್ಟಬೇಕಾಗಿದೆ.

ನಾವು ಪ್ರಾರ್ಥನೆ ಮಾಡುತ್ತಾ ಇರುತ್ತೇವೆ. ಲೋಕವನ್ನು ವಿನಾಶದಿಂದ ರಕ್ಷಿಸಬೇಕೆಂದು ನಾವು ಯಾವಾಗಲೂ ದೇವನೊಂದಿಗೆ ಬೇಡಿಕೊಳ್ಳುತ್ತಾ ಇರುತ್ತೇವೆ.

ನಿಮಗೆಲ್ಲರಿಗೆ ಲೋಕದಲ್ಲಿ ಪ್ರಭಾವಶಾಲಿಯಾದ ಧ್ವನಿ ಇದೆ. ನಾನು ನಿಮ್ಮನ್ನು ಬಲಯುತವಾಗಿ ಒತ್ತಾಯಪಡಿಸಲು ಬಯಸುತ್ತೇನೆ. ನೀವು ನಿಮ್ಮ ಜನರೊಂದಿಗೆ ಮತ್ತು ಲೋಕದ ಜನರೊಂದಿಗೆ ಹೇಳಿರಿ: **"ದೇವನು ಸ್ಥಾಪಿಸಿದ ನೈಸರ್ಗಿಕ ಸಮತೋಲನದ ದಾರಿಯಲ್ಲಿ ತಡೆಗಳನ್ನು ಸೃಷ್ಟಿಸಿದ ನೀವು ನಾಶದ ಕಡೆಗೆ ವೇಗವಾಗಿ ಸಾಗುತ್ತಿರುವಿರಿ."**

ಈ ಸಂದೇಶವನ್ನು ವ್ಯಾಪಕವಾಗಿ ಮೊದಲಿಗಿಂತ ಹೆಚ್ಚು ಪ್ರಾಮುಖ್ಯವಾಗಿ ಪ್ರಚಾರ ಮಾಡಬೇಕಾಗಿದೆ.

ನೀವು ನಿಮ್ಮನ್ನು ಮತ್ತು ಲೋಕವನ್ನು ನಾಶದಿಂದ ರಕ್ಷಿಸಿಕೊಳ್ಳಿರಿ.

ನೈಸರ್ಗಿಕ ಸೌಂದರ್ಯವನ್ನು ಕಾಪಾಡಲು ಮತ್ತು ಪ್ರೀತಿ ಹಾಗೂ ವಾತ್ಸಲ್ಯದ ವಾತಾವರಣವನ್ನು ಬೆಳೆಸಲು ಯಾವುದೇ ಸ್ವಾರ್ಥ ಆಶಾಭಿಲಾಷೆಯಿಲ್ಲದೆ ಹೆಚ್ಚು ಪರಿಶ್ರಮಪಡುವವರಲ್ಲಿ ನೀವೆಲ್ಲರೂ ಸೇರುವವರಾಗಲಿ ಎಂದು ಪ್ರಾರ್ಥಿಸುತ್ತೇನೆ.

ನಿಮ್ಮ ಈ ಉನ್ನತವಾದ ಪರಿಶ್ರಮದಲ್ಲಿ ಯಶಸ್ಸನ್ನು ಗಳಿಸುವವರಾಗಿ ದೇವನು ನಿಮ್ಮನ್ನು ಮಾಡಲಿ.

ಕೊನೆಯದಾಗಿ, ನಿಮ್ಮನ್ನು ಸಂಬೋಧಿಸಿ ಮಾತನಾಡಲು ನನಗೆ ಅವಕಾಶ ನೀಡಿದುದಕ್ಕಾಗಿ ಮತ್ತು ನಾನು ಹೇಳಿದ ಮಾತುಗಳನ್ನು ಆಲಿಸಿದುದಕ್ಕಾಗಿ ನಾನು ನಿಮಗೆ ಪುನಃ ಕೃತಜ್ಞತೆ ಅರ್ಪಿಸುತ್ತೇನೆ.

ನಿಮಗೆ ಕೃತಜ್ಞತೆಗಳು.

**(Review of Religions : August 2011 ಸಂಚಿಕೆಯಿಂದ**
**ಭಾಷಾಂತರ : ಎಂ. ಉಬೈದುಲ್ಲಾ)**

ಕೆಲವು ಮುಸ್ಲಿಮ್ ಗುಂಪುಗಳು ತಮ್ಮ ಕೃತ್ಯಗಳು ಇಸ್ಲಾಮ್ ಧರ್ಮ ತತ್ವಗಳಿಗನುಸಾರವಾಗಿವೆ ಎಂದು ಪ್ರತಿಪಾದಿಸುತ್ತವೆಯಾದರೂ ವಾಸ್ತವಿಕವಾಗಿ ಆ ಕೃತ್ಯಗಳಿಗೆ ಇಸ್ಲಾಮಿನೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಆದರೆ ಸಂಪರ್ಕ ಮಾಧ್ಯಮಗಳು ಈ ಘಟನೆಗಳನ್ನು ಲೋಕಕ್ಕೆ ಸಂತೋಷದಿಂದ ಬಿತ್ತರಿಸುತ್ತಾ ಇರುತ್ತವೆ. ಆ ಕೃತ್ಯಗಳು ಇಸ್ಲಾಮ್ ಧರ್ಮದ ವಾಸ್ತವಿಕ ತತ್ವಗಳನ್ನು ಪ್ರತಿನಿಧೀಕರಿಸುವುದಿಲ್ಲ ಎಂಬ ವಿಷಯವನ್ನು ಕಡೆಗಣಿಸಲಾಗುತ್ತಿದೆ.

ಒಬ್ಬನು ಪವಿತ್ರವೆಂದು ನಂಬುವುದನ್ನು ಅನ್ಯರು ಅಪವಿತ್ರಗೊಳಿಸುವಂತಹ ಕೃತ್ಯ ನಡೆಸುವಾಗ ಅವನಿಗೆ ಮಾನಸಿಕ ನೋವುಂಟಾಗುತ್ತದೆ. ಅನ್ಯರ ಧಾರ್ಮಿಕ ನಂಬಿಕೆಗಳನ್ನು ನೋಯಿಸುವುದು ನೈತಿಕವಾಗಿ ತಪ್ಪೆಂದು ಅನೇಕರು ಭಾವಿಸುತ್ತಾರೆ. ಏಕೆಂದರೆ ಅದರಿಂದ ಸಮಾಜದಲ್ಲಿ ಶಾಂತಿಭಂಗವಾಗುತ್ತದೆ, ಸೌಹಾರ್ದತೆಗೆ ವಿಘ್ನ ಉಂಟಾಗುತ್ತದೆ ಮತ್ತು ಕಾನೂನು ಕಾಯಿದೆಗಳ ಪಾಲನೆಗೆ ಕೇಡುಂಟಾಗುತ್ತದೆ. ಆದರೆ ಕೆಲವರು ನಂಬುವುದೇನೆಂದರೆ, ಯಾವುದೇ ರೀತಿಯ ನಿಯಂತ್ರಣವು ಮಾನವ ಸ್ವಾತಂತ್ರ್ಯ ಹಕ್ಕುಗಳನ್ನು ತಡೆಗಟ್ಟುತ್ತದೆ.

ಎಲ್ಲಾ ಜನರು ಮತ್ತು ವಿಶಿಷ್ಟವಾಗಿ ಅಲ್ಪಸಂಖ್ಯಾತ ಗುಂಪುಗಳು ಬಹಿರಂಗವಾಗಿ ತಮಗಿಷ್ಟಕರವಾದ ಧರ್ಮವನ್ನು ನಂಬಲು, ಅನುಷ್ಠಿಸಲು ಮತ್ತು ಪ್ರಚಾರಗೊಳಿಸಲು ಇರುವ ಸ್ವಾತಂತ್ರ್ಯವು ಒಂದು ಸಮಾಜದಲ್ಲಿ ಇರುವ ಧಾರ್ಮಿಕ ಸಹಿಷ್ಣುತೆಯ ಮಟ್ಟವನ್ನು ಸೂಚಿಸುತ್ತದೆ. ಈ ವಿಷಯಕ್ಕೆ ಸಂಬಂಧಿಸಿ ನ್ಯಾಯನಿಷ್ಠೆಯಿಂದ ವರ್ತಿಸಬೇಕು ಮತ್ತು ಅದು ಕಾಣುವಂತಿರಬೇಕು. ಏಕೆಂದರೆ ಕೃತ್ಯಗಳು ಮಾತಿಗಿಂತ ಹೆಚ್ಚು ಉಚ್ಚ ಧ್ವನಿಯನ್ನು ಹೊಂದಿರುತ್ತದೆ.

ಈಗಿನ ಕಾಲಘಟ್ಟದಲ್ಲಿ ಅತ್ಯಂತ ಮಹತ್ವ ಪೂರ್ಣವಾದುದೇನೆಂದರೆ, ಇಸ್ಲಾಮ್ ಧರ್ಮವು ಧರ್ಮನಿಂದೆಗೆ ಯಾವುದಾದರೂ ಶಿಕ್ಷೆಯನ್ನು ವಿಧಿಸುತ್ತದೆಯೋ? ಎಂಬ ಪ್ರಶ್ನೆ ಆಗಿದೆ. ಪ್ರತಿಯೊಬ್ಬ ಸತ್ಯ ಮುಸ್ಲಿಮನು ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ಇತರ ಎಲ್ಲರಿಗಿಂತಲೂ ಹೆಚ್ಚಿಗೆ ಪ್ರೀತಿಸುತ್ತಾನೆ ಮತ್ತು ಗೌರವಿಸುತ್ತಾನೆ. ಒಬ್ಬ ಮುಸ್ಲಿಮನು ತನ್ನ ತಂದೆ ತಾಯಿ ಬಗ್ಗೆ, ಸಂಬಂಧಿಕರ ಬಗ್ಗೆ ಮತ್ತು ಸ್ನೇಹಿತರ ಬಗ್ಗೆ ನಿಂದೆ ಮತ್ತು ಅಪಮಾನಗಳನ್ನು ಯಾರಾದರೂ ಮಾಡಿದರೆ ಸಹಿಸಬಲ್ಲನು. ಆದರೆ ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ಯಾರಾದರೂ ಪರಿಹಾಸ ಮಾಡುವುದಾದರೆ ಅದನ್ನು ಎಂದೂ ಸಹಿಸಲಾರನು.

ಆದರೆ ಹಝ್ರತ್ ಪೈಗಂಬರರನ್ನು ಪರಿಹಾಸ ಮಾಡಿದವರ ವಿರುದ್ಧ, ದೇವನನ್ನು ಮತ್ತು ಇತರ ಪವಿತ್ರ ವಸ್ತುಗಳನ್ನು ಪರಿಹಾಸ ಮಾಡಿದವರ ವಿರುದ್ಧ ಹೇಗೆ ವರ್ತಿಸಬೇಕೆಂದು ಇಸ್ಲಾಮ್ ಧರ್ಮವು ನಿಖರವಾಗಿ ಏನು ಹೇಳುತ್ತಿದೆ? ದುರದೃಷ್ಟಕರವಾದುದೇನೆಂದರೆ, ಅನೇಕ ಮುಸ್ಲಿಮರ ಅಭಿಪ್ರಾಯ ಪ್ರಕಾರ, ಮರಣದಂಡನೆ ಅಥವಾ ಇತರ ಕ್ರೂರ ಶಿಕ್ಷೆಗಳನ್ನು ಧರ್ಮನಿಂದೆ ಮಾಡುವವನಿಗೆ ವಿಧಿಸಬೇಕು. ಆದರೆ ಇನ್ನು ಮುಂದೆ ವಿವರಿಸಲ್ಪಡುವ ಹಾಗೆ ಈ ನಂಬಿಕೆಯು ತಪ್ಪಾಗಿ ಗ್ರಹಿಸಲ್ಪಟ್ಟಿದೆ. ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ ನಡೆವಳಿಕೆ ಇದನ್ನು ತಪ್ಪೆಂದು ಸಾಬೀತುಗೊಳಿಸುತ್ತದೆ.

ಎಲ್ಲರೊಂದಿಗೆ, ಶತ್ರುಗಳೊಂದಿಗೆ ಕೂಡ ನ್ಯಾಯಬದ್ಧವಾಗಿ ವರ್ತಿಸಬೇಕೆಂದು ಇಸ್ಲಾಮ್ ಹೇಳುತ್ತದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ನೋಡಿರಿ:

**"ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ಸದಾ ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು."** (5:9)

ಇಸ್ಲಾಮ್ ಧರ್ಮವು ಧರ್ಮನಿಂದೆಯನ್ನು ನಿಷಿದ್ಧಗೊಳಿಸಿದುದಲ್ಲದೆ ಬಹುದೇವಾರಾಧಕರ ಭಾವನೆಗಳಿಗೆ ಸಂರಕ್ಷಣೆಯನ್ನೂ ನೀಡುತ್ತಾ ಮುಸ್ಲಿಮರು ಬಹುದೇವಾರಾಧಕರ ವಿಗ್ರಹಗಳನ್ನು ನಿಂದಿಸಬಾರದೆಂದೂ ಹೇಳಿದೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಅವರು ಅಲ್ಲಾಹನ ಹೊರತು ಕರೆದು ಪ್ರಾರ್ಥಿಸುವವರನ್ನು ನೀವು ಹೀಯಾಳಿಸಬೇಡಿರಿ. ಆಗ ವಿರೋಧದಿಂದ ಅವರು ಸಹ ತಿಳುವಳಿಕೆಯಿಲ್ಲದೆ ಅಲ್ಲಾಹನನ್ನು ನಿಂದಿಸುವರು."** (6:109)

ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಇಸ್ಲಾಮ್ ಧರ್ಮವು ಅನ್ಯರ ಭಾವನೆಗಳ ಬಗ್ಗೆ ಜಾಗರೂಕರಾಗಿರಬೇಕೆಂದು ಮುಸ್ಲಿಮರಿಗೆ ಉಪದೇಶಿಸುತ್ತದೆ. ಅನ್ಯರೊಂದಿಗೆ ಎಷ್ಟು ತೀವ್ರ ಭಿನ್ನಾಭಿಪ್ರಾಯಗಳಿದ್ದರೂ ಹೀಗೆಯೇ ವರ್ತಿಸಬೇಕು.

ಪವಿತ್ರ ಖುರ್‌ಆನಿನ, ಮೇಲಿನ ವಚನ ಹೀಗೆ ಸೂಚಿಸುತ್ತದೆ: ಮಿಥ್ಯ ವಿಗ್ರಹಗಳನ್ನು ಕೂಡ ನಿಂದಿಸಲು ಮುಸ್ಲಿಮರಿಗೆ ಅನುಮತಿ ನೀಡಲಾಗಿಲ್ಲ. ಮುಸ್ಲಿಮರು ತಮ್ಮ ಧರ್ಮದ ವಿವಿಧ ಪಂಗಡಗಳನ್ನಾಗಲೀ ಅನ್ಯ ಧರ್ಮಗಳನ್ನಾಗಲೀ ನಿಂದಿಸಬಾರದು.

ಧರ್ಮನಿಂದನೆಯ ಬಗ್ಗೆ ಪವಿತ್ರ ಖುರ್‌ಆನ್ ನೀಡುವ ಸತ್ಯವಾದ ಉಪದೇಶಗಳು ಯಾವುವು ಮತ್ತು ಪಾಕಿಸ್ತಾನ ಮೊದಲಾದ ದೇಶಗಳಲ್ಲಿರುವ ಮುಸ್ಲಿಮ್ ಮತಪಂಡಿತರು ನೀಡಿದ ತಪ್ಪು ವ್ಯಾಖ್ಯಾನಗಳಿಂದ ಉಂಟಾದ ದುರವಸ್ಥೆಗಳ ಬಗ್ಗೆ ಸಹ ನಾವು ಇಲ್ಲಿ ಪರಿಶೀಲಿಸುವೆವು.

ಇಂಡೋನೇಶಿಯಾದ ನಂತರ ಪಾಕಿಸ್ತಾನ ಮುಸ್ಲಿಮರು ಬಹುಸಂಖ್ಯಾತರಾಗಿರುವ ಎರಡನೆಯ ದೇಶವಾಗಿದೆ. ಪಾಕಿಸ್ತಾನದ ಅಂದಾಜು 170 ಮಿಲಿಯ ಜನಸಂಖ್ಯೆಯಲ್ಲಿ ಶೇಕಡಾ 97ರಷ್ಟು ಜನರು ಮುಸ್ಲಿಮರಾಗಿದ್ದಾರೆ.

ಪವಿತ್ರ ಖುರ್‌ಆನ್, ಹದೀಸ್ ಮತ್ತು ಹಝ್ರತ್ ಪೈಗಂಬರರ[ಸ] ನಡೆವಳಿಕೆ (ಸುನ್ನತ್) ಇವುಗಳ ಬೆಳಕಿನಲ್ಲಿ ಪಾಕಿಸ್ತಾನದ ಕುಪ್ರಸಿದ್ಧ ಧರ್ಮನಿಂದೆ ಕಾನೂನನ್ನು ಪರಾಮರ್ಶೆ ಮಾಡಬೇಕಾದುದು ಆವಶ್ಯಕವಾಗಿದೆ. ಏಕೆಂದರೆ ಪಾಶ್ಚಿಮಾತ್ಯ ಸಂಪರ್ಕ ಮಾಧ್ಯಮಗಳು ಮುಸ್ಲಿಮ್ ದೇಶಗಳ ಇಂತಹ ತಥಾಕಥಿತ ಇಸ್ಲಾಮಿಕ ನಿಯಮಗಳನ್ನು ವಿಮರ್ಶಿಸಿ ಇಸ್ಲಾಮ್ ಧರ್ಮವು ಕಠಿಣ, ಮಿತಿಮೀರಿದ ಮತ್ತು ಮಧ್ಯಕಾಲೀನ ನ್ಯಾಯ ಪದ್ಧತಿಯನ್ನು ಜಾರಿಗೊಳಿಸುತ್ತದೆ ಎಂದು ತಪ್ಪಾಗಿ ಪ್ರತಿಬಿಂಬಿಸುತ್ತವೆ. ಆದರೆ ವಾಸ್ತವಿಕವಾಗಿ ಈ ದೇಶಗಳ ನಿಯಮಗಳು ವಾಸ್ತವಿಕ ಇಸ್ಲಾಮನ್ನು ಪ್ರತಿಬಿಂಬಿಸುವುದಿಲ್ಲ. ಅವು ಇಸ್ಲಾಮ್ ನಿಯಮಗಳ ಸಂಪೂರ್ಣ ತಪ್ಪಾದ ವ್ಯಾಖ್ಯಾನವನ್ನು ಸೂಚಿಸುತ್ತವೆ.

## ಧರ್ಮನಿಂದೆ ಮತ್ತು ವಾಕ್ ಸ್ವಾತಂತ್ರ್ಯ

ಧರ್ಮನಿಂದೆಯನ್ನು ತಡೆಗಟ್ಟುವ ವಿರುದ್ಧ ಮಾಡುವ ಒಂದು ವಿಮರ್ಶೆ ಏನೆಂದರೆ ಅದು ಅಭಿಪ್ರಾಯ ಸ್ವಾತಂತ್ರ್ಯವನ್ನು ಭಂಗಗೊಳಿಸುತ್ತದೆ. ಅಭಿಪ್ರಾಯವನ್ನು ಯಾವುದೇ ತಡೆಯಿಲ್ಲದೆ ಹೇಳುವ ಸ್ವಾತಂತ್ರ್ಯ ಒಂದು ಮೂಲಭೂತ ಮಾನವ ಹಕ್ಕಾಗಿದ್ದು ಅದು ಪ್ರತಿಯೊಂದು ನ್ಯಾಯಬದ್ಧ ದೇಶದ ಪ್ರಜೆಗೆ ಲಭಿಸಬೇಕಾದುದಾಗಿದೆ.

ಸಮಾಜದ ಪ್ರಗತಿಗೆ ಅಭಿಪ್ರಾಯ ಸ್ವಾತಂತ್ರ್ಯವು ಆವಶ್ಯಕವಾಗಿದ್ದರೂ ಈ ಸ್ವಾತಂತ್ರ್ಯವು ಇತರ ಸ್ವಾತಂತ್ರ್ಯಗಳ ಹಾಗೆ ಅಪರಿಮಿತವಾದುದೇನೂ ಅಲ್ಲ.

ಸತ್ಯವೇನೆಂದರೆ, ಧಾರ್ಮಿಕ ಭಾವನೆಗಳು ಮತ್ತು ಅಭಿಪ್ರಾಯ ಸ್ವಾತಂತ್ರ್ಯ ಇವೆರಡೂ ಮುಖ್ಯವಾಗಿದ್ದು ಅವುಗಳನ್ನು ಸಂರಕ್ಷಿಸುವುದು ಆವಶ್ಯಕವಾಗಿದೆ. ಅವುಗಳು ತಮ್ಮ ಪರಿಧಿಯೊಳಗೆ ಕಾರ್ಯನಿರತವಾದರೆ ಮತ್ತು ತಮ್ಮ ಪರಿಧಿಯನ್ನು ಮೀರಿ ಹೋಗದಿದ್ದರೆ ಯಾವುದೇ ಸಂಘರ್ಷವು ಉಂಟಾಗಲಾರದು. ಹೀಗಿದ್ದರೂ ಕೆಲವೊಮ್ಮೆ ಧಾರ್ಮಿಕ ಭಾವನೆಗಳು ಮತ್ತು ಅಭಿಪ್ರಾಯ ಸ್ವಾತಂತ್ರ್ಯವು ಪರಸ್ಪರ ಸಂಘರ್ಷಿಸುತ್ತವೆ.

ಇಸ್ಲಾಮ್ ಧರ್ಮನಿಂದೆಯನ್ನು ಹೀನವೂ ಆಕ್ರಮಣಕಾರಿಯೂ ಆಗಿದೆ ಎಂದು ಘೋಷಿಸುತ್ತಿದೆಯಾದರೂ ಆ ಅಪರಾಧಕ್ಕೆ ಅದು ಯಾವುದೇ ಲೌಕಿಕ ಶಿಕ್ಷೆಯನ್ನು ವಿಧಿಸುವುದಿಲ್ಲ. ಏಕೆಂದರೆ ಲೌಕಿಕ ಶಿಕ್ಷೆ ನೀಡುವಿಕೆಯು ಅಭಿಪ್ರಾಯ ಸ್ವಾತಂತ್ರ್ಯವನ್ನು ತೀವ್ರವಾಗಿ ಪರಿಮಿತಗೊಳಿಸುವುದು.

ಈ ವಿಷಯಕ್ಕೆ ಸಂಬಂಧಿಸಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್ (1928–2003) ತನ್ನ ISLAM'S RESPONSE TO CONTEMPORARY ISSUES (ಪ್ರಚಲಿತ ವಿಷಯಗಳಿಗೆ ಸಂಬಂಧಿಸಿ ಇಸ್ಲಾಮಿನ ಪ್ರತಿಕ್ರಿಯೆ) ಎಂಬ ಗ್ರಂಥದಲ್ಲಿ ಹೀಗೆ ಹೇಳುತ್ತಾರೆ:

"ಧರ್ಮನಿಂದೆ ಬಗ್ಗೆ ಹೇಳುವುದಾದರೆ, ಇಸ್ಲಾಮ್ ಧರ್ಮವು ಬೇರೆ ಯಾವುದೇ ಧರ್ಮಕ್ಕಿಂತ ಮನುಷ್ಯನಿಗೆ ಅಭಿಪ್ರಾಯ ಸ್ವಾತಂತ್ರ್ಯವನ್ನು ಹೆಚ್ಚಿಗೆ ನೀಡಿದೆ. ಧರ್ಮನಿಂದೆಯನ್ನು ನಿಸ್ಸಂಶಯವಾಗಿಯೂ ನೈತಿಕ ದೃಷ್ಟಿಯಿಂದ ಇಸ್ಲಾಮ್ ಧರ್ಮವು ಖಂಡಿಸಿದೆಯಾದರೂ ಇಂದಿನ ಕಾಲದಲ್ಲಿ ಇಸ್ಲಾಮಿನ ಬಗ್ಗೆ ಸಾಮಾನ್ಯವಾಗಿ ತಪ್ಪುಗ್ರಹಿಸಲಾಗುತ್ತಿದ್ದರೂ ಅದು ಧರ್ಮನಿಂದೆಗೆ ಯಾವುದೇ ಶಾರೀರಿಕ ಶಿಕ್ಷೆಯನ್ನು ವಿಧಿಸಿಲ್ಲ.

"ಪವಿತ್ರ ಖುರ್‌ಆನನ್ನು ಗಾಢವಾಗಿಯೂ ಪುನರಾವರ್ತಿಸುತ್ತಲೂ ನಾನು ಅಧ್ಯಯನ ಮಾಡಿದರೂ ಧರ್ಮನಿಂದೆಗೆ ಮನುಷ್ಯನು ವಿಧಿಸಬಹುದಾದ ಶಿಕ್ಷೆಯನ್ನು ಪ್ರಸ್ತಾಪಿಸುವ ಒಂದು ವಚನವನ್ನು ಕೂಡ ಕಾಣಲು ನನಗೆ ಸಾಧ್ಯವಾಗಲಿಲ್ಲ." (ಪುಟ 38)

ಅಭಿಪ್ರಾಯ ಸ್ವಾತಂತ್ರ್ಯದ ಬಗ್ಗೆ ಇಸ್ಲಾಮ್ ವಿಧಿಸುವ ಒಂದು ಪರಿಮಿತ ಏನೆಂದರೆ, ಅನ್ಯರ ಮನ ನೋಯಿಸುವಂತಹ ಅಭಿಪ್ರಾಯ ಸೂಚಿಸಬಾರದು. ಹೀಗೆ ಮನ ನೋಯಿಸುವುದು ಅನೈತಿಕವೆಂದು ಗಣಿಸಲಾಗಿದೆ. ಈ ನಿಬಂಧನೆಯೊಳಗೆ ಧರ್ಮನಿಂದೆ ಸಹ ಸೇರಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಕೆಡುಕನ್ನು ಬಹಿರಂಗವಾಗಿ ಹೇಳುವುದನ್ನು ಅಲ್ಲಾಹನು ಮೆಚ್ಚುವುದಿಲ್ಲ – ಅನ್ಯಾಯಕ್ಕೊಳಗಾದವನು ಹೊರತು."** (4:149)

ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್ ಮೇಲಿನ ವಚನದ ಬಗ್ಗೆ ಹೀಗೆ ವಿವರಣೆ ಕೊಡುತ್ತಾರೆ:

"ಅಸಭ್ಯ ವರ್ತನೆ, ಅಶ್ಲೀಲ ಮಾತು ಮತ್ತು ಕಾರಣವಿದ್ದರೂ ಇಲ್ಲದಿದ್ದರೂ ಅನ್ಯರ ಭಾವನೆಗಳನ್ನು ನೋಯಿಸುವುದನ್ನು ತೀವ್ರವಾಗಿ ಪವಿತ್ರ ಖುರ್‌ಆನ್ ನಿರುತ್ಸಾಹಪಡಿಸುತ್ತಿದ್ದರೂ ಇಸ್ಲಾಮ್ ಇಹಲೋಕದಲ್ಲಿ ಧರ್ಮನಿಂದೆಗೆ ಶಿಕ್ಷೆ ನೀಡುವುದನ್ನು ಪ್ರತಿಪಾದಿಸುವುದಿಲ್ಲ ಮತ್ತು ಶಿಕ್ಷೆ ನೀಡುವ ಅಧಿಕಾರವನ್ನು ಯಾರಿಗೂ ನೀಡಿಲ್ಲ."

(ಮೇಲಿನ ಪುಸ್ತಕ – ಪುಟ 38)

## ಎಲ್ಲಾ ಪ್ರವಾದಿಗಳನ್ನು ನಿಂದಿಸಲಾಯಿತು

ಜನರ ಪರಿಹಾಸಕ್ಕೆ ಗುರಿಯಾಗದ ಯಾವ ಪ್ರವಾದಿಯೂ ಇಲ್ಲ. ಪ್ರತಿಯೊಂದು ಜನಾಂಗಕ್ಕೆ ಮುನ್ನೆಚ್ಚರಿಕೆ ನೀಡುವವನನ್ನು ಕಳುಹಿಸಿರುವುದಾಗಿಯೂ ಪ್ರತಿಯೊಬ್ಬ ಪ್ರವಾದಿಯನ್ನು ಪರಿಹಾಸ ಮಾಡಲಾಯಿತೆಂದೂ ಪವಿತ್ರ ಖುರ್‌ಆನ್ ಹೇಳುತ್ತದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ನೋಡಿರಿ:

**"ಅನಂತರ ನಾವು ನಮ್ಮ ಸಂದೇಶವಾಹಕರನ್ನು ನಿರಂತರ ಕಳುಹಿಸುತ್ತಾ ಇದ್ದೆವು. ಪ್ರತಿಯೊಂದು ಜನತೆಯ ಬಳಿಗೆ ಅವರ ಸಂದೇಶವಾಹಕ ಬಂದಾಗಲೆಲ್ಲ ಅವರು ಆ ಸಂದೇಶವಾಹಕನನ್ನು ಸುಳ್ಳುಗಾರನನ್ನಾಗಿ ಮಾಡಿದರು."** **(23:45)**

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಈ ವಿಷಯವನ್ನು ಹೀಗೆ ಒತ್ತಿ ಹೇಳಿದೆ:

**"ಹಾ ಮನುಷ್ಯರ ದುರದೃಷ್ಟವೇ! ಅವರ ಅಪಹಾಸ್ಯಕ್ಕೆ ಗುರಿಯಾಗದೆ ಯಾವ ಪ್ರವಾದಿಯೂ ಅವರ ಬಳಿಗೆ ಬರುವುದಿಲ್ಲ!"** **(36:31)**

ಹಝ್ರತ್ ಮರ್ಯಮ್ ಮತ್ತು ಅವರ ಪುತ್ರ ಈಸಾ ಮಸೀಹರನ್ನು ನಿಂದಿಸಲಾಯಿತೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ನೋಡಿರಿ:

**"ಅವರ ಅವಿಶ್ವಾಸ ಮತ್ತು ಮರ್ಯಮಳ ಹೆಸರಿನಲ್ಲಿ ಗುರುತರವಾದ ಅಪವಾದ ಹೊರಿಸುವ ಕಾರಣದಿಂದಲೂ"** **(4:157)**

ಯಹೂದಿಯರು ಹಝ್ರತ್ ಮರ್ಯಮರನ್ನು ವ್ಯಭಿಚಾರಿಣಿ ಎಂದೂ ಅವರ ಪುತ್ರನನ್ನು ಅನೈತಿಕ ಸಂಬಂಧದ ಮೂಲಕ ಜನಿಸಿದವನೆಂದು ನಿಂದಿಸುತ್ತಿದ್ದರು.

ಎಲ್ಲಾ ಪ್ರವಾದಿಗಳನ್ನು ನಿಂದಿಸಲಾಯಿತೆಂದು ಪವಿತ್ರ ಖುರ್‌ಆನ್ ಸಾಕ್ಷ್ಯ ಹೇಳುತ್ತಿದೆಯಾದರೂ ನಿಂದಿಸುವವರನ್ನು ಶಿಕ್ಷಿಸಿದ ಬಗ್ಗೆ ಯಾವ ಸಾಕ್ಷ್ಯವನ್ನೂ ನೀಡುವುದಿಲ್ಲ.

## ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ನಿಂದನೆ

ಪವಿತ್ರ ಖುರ್‌ಆನ್, ಅವಿಶ್ವಾಸಿಗಳು ಮತ್ತು ಕಪಟ ವಿಶ್ವಾಸಿಗಳು ಹಝ್ರತ್ ಮುಹಮ್ಮದ್ ಪೈಗಂಬರರನ್ನು ನಿಂದಿಸಿದ ಬಗ್ಗೆ ವಿವರಿಸುತ್ತಿದೆಯಾದರೂ ನಿಂದಿಸುವವರಿಗೆ ಶಾರೀರಿಕ ಶಿಕ್ಷೆ ನೀಡುವ ಬಗ್ಗೆ ಏನನ್ನೂ ಹೇಳುವುದಿಲ್ಲ. ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ನೋಡಿರಿ:

**"ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ಯಾರು ತೊಂದರೆ ಕೊಡುತ್ತಾರೋ, ನಿಶ್ಚಯವಾಗಿಯೂ ಅವರನ್ನು ಅಲ್ಲಾಹನು ಇಹದಲ್ಲೂ ಪರದಲ್ಲೂ ಶಪಿಸಿದ್ದಾನೆ. ಅವರಿಗೆ ಅಪಮಾನಕರವಾದ ಶಿಕ್ಷೆಯನ್ನು ಅವನು ಸಿದ್ಧಪಡಿಸಿಟ್ಟಿದ್ದಾನೆ.**

**"ಸತ್ಯವಿಶ್ವಾಸಿಗಳನ್ನೂ ಸತ್ಯವಿಶ್ವಾಸಿನಿಯರನ್ನೂ, ಅವರು ಯಾವುದೇ ತಪ್ಪುಮಾಡದಿರುವಾಗ (ಅವರನ್ನು) ತೊಂದರೆಗೊಳಪಡಿಸುವವರು, ದಿಟವಾಗಿಯೂ ಅಂತಹವರು ಸುಳ್ಳನ್ನೂ ಸ್ಪಷ್ಟವಾದ ಪಾಪವನ್ನೂ ಹೊತ್ತುಕೊಂಡಿರುವರು."** **(33:58–59)**

ಇಲ್ಲಿ ಗಮನಾರ್ಹವಾದ ಅಂಶವೇನೆಂದರೆ, ಧರ್ಮನಿಂಧೆ ಮಾಡು

ವವರಿಗೆ ಶಿಕ್ಷೆ ನೀಡುವ ಅಧಿಕಾರ ಅಲ್ಲಾಹನಿಗೆ ಮಾತ್ರವಿದೆ. ಅಂತಹವನಿಗೆ ಈ ಲೋಕದಲ್ಲಿ ಅಥವಾ ಪರಲೋಕದಲ್ಲಿ ಶಿಕ್ಷೆ ನೀಡುವುದು ಅಲ್ಲಾಹನ ಇಚ್ಛೆಗೆ ಅನುಸಾರವಾಗಿದೆ. ಧರ್ಮನಿಂದೆ ಮಾಡುವವರನ್ನು ಶಿಕ್ಷಿಸುವ ಅಧಿಕಾರ ಯಾರಿಗೂ ಅಲ್ಲಾಹನು ವಹಿಸಿಕೊಟ್ಟಿಲ್ಲ. ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ[(ಸ)] ಕೂಡ ಅಲ್ಲಾಹನು ಅಂತಹ ಅಧಿಕಾರ ನೀಡಿಲ್ಲ.

ಹಝ್‌ರತ್ ಮುಹಮ್ಮದ್ ಪೈಗಂಬರರನ್ನು[(ಸ)] ಅವಿಶ್ವಾಸಿಗಳು ಪದೇ ಪದೇ ಪರಿಹಾಸಮಾಡುತ್ತಿದ್ದರು. ಅವರೊಂದಿಗೆ, **"ನೀನು ಒಬ್ಬ ಹುಚ್ಚ"** ಎಂದು ಹೇಳಿದುದಾಗಿ ಪವಿತ್ರ ಖುರ್‌ಆನ್ ಅಧ್ಯಾಯ 15 ವಚನ 7ರಲ್ಲಿ ಉಲ್ಲೇಖಿತವಾಗಿದೆ. ಅವರು, **"ಅವನಿಗೆ ಹುಚ್ಚು ಇದೆ"** ಎಂದು ಸಹ ಹೇಳುತ್ತಿದ್ದರೆಂದು ಪವಿತ್ರ ಖುರ್‌ಆನ್ ಅಧ್ಯಾಯ 23 ವಚನ 71ರಲ್ಲಿ ಉಲ್ಲೇಖಿಸಲ್ಪಟ್ಟಿದೆ. ಅನೇಕ ಅವಿಶ್ವಾಸಿಗಳು ಅವರ ಬಗ್ಗೆ, **"ಈ ವ್ಯಕ್ತಿ ಮಾಟಕ್ಕೊಳಗಾದವನು"** ಎಂದು ಹೇಳುತ್ತಿದ್ದರೆಂದು ಪವಿತ್ರ ಖುರ್‌ಆನ್ ಅಧ್ಯಾಯ 17 ವಚನ 48ರಲ್ಲಿ ಹೇಳಲಾಗಿದೆ. ಅವರನ್ನು ಶತ್ರುಗಳು **ಸುಳ್ಳು ಹೇಳುವವನೆಂದು** ಆಕ್ಷೇಪಿಸಿದರು. ಅವರನ್ನು **ಕವಿ ಎಂದೂ ಸುಳ್ಳು ಸೃಷ್ಟಿಸುವವನೆಂದೂ** ಆಕ್ಷೇಪಿಸುತ್ತಿದ್ದರೆಂದು ಪವಿತ್ರ ಖುರ್‌ಆನ್ ಅಧ್ಯಾಯ 16 ವಚನ 102ರಲ್ಲಿ ಉಲ್ಲೇಖಿತವಾಗಿದೆ.

ಅವಿಶ್ವಾಸಿಗಳು ಹಝ್‌ರತ್ ಮುಹಮ್ಮದ್ ಪೈಗಂಬರರನ್ನು[(ಸ)] ಮಾತ್ರವಲ್ಲ, ಪವಿತ್ರ ಖುರ್‌ಆನನ್ನೂ ಸಹ ಅಪಹಾಸ್ಯಕ್ಕೊಳಪಡಿಸಿದ್ದರು. ಅವರು ಪವಿತ್ರ ಖುರ್‌ಆನನ್ನು **"ಗೊಂದಲಮಯ ಸ್ವಪ್ನಗಳು"** ಅಡಕವಾದ ಪುಸ್ತಕವೆಂದು ಕರೆಯುತ್ತಿದ್ದರು. ಅವರು ಪವಿತ್ರ ಖುರ್‌ಆನ್ **"ಪೂರ್ವಿಕರ ಕಟ್ಟು ಕತೆಗಳು"** ಒಳಗೊಂಡ ಗ್ರಂಥವೆಂದು ಆಕ್ಷೇಪಿಸುತ್ತಿದ್ದರು.
(ಪವಿತ್ರ ಖುರ್‌ಆನ್ 16:25)

ಅವಿಶ್ವಾಸಿಗಳು ಪವಿತ್ರ ಖುರ್‌ಆನಿನ ಹಾಳೆಗಳನ್ನು ಹರಿದು ಹಾಕಿದರು. ಅದನ್ನು ಪಠಿಸುವಾಗ ಆಲಿಸಬಾರದೆಂದು ಜನರನ್ನು ಒತ್ತಾಯಪಡಿಸುತ್ತಿದ್ದರು. ಪವಿತ್ರ ಖುರ್‌ಆನ್ ಪಠಿಸುವುದನ್ನು ಆಲಿಸಿದ ಕೂಡಲೆ ಬೊಬ್ಬೆ ಹೊಡೆದು ಅದು ಜನರು ಕೇಳಿಸಿದಂತೆ ಮಾಡಬೇಕೆಂದು ಅವಿಶ್ವಾಸಿಗಳು ಹೇಳುತ್ತಿದ್ದರು.

ಆದರೆ ಪವಿತ್ರ ಖುರ್‌ಆನ್ ಹಝ್‌ರತ್ ವಾಗ್ದತ್ತ ಮಸೀಹರು[(ಅ)] ಹೇಳಿದ ಹಾಗೆ, ಮಾನವ ಕುಲಕ್ಕೆ ನೀಡಲ್ಪಟ್ಟ ಅತ್ಯಂತ ಶ್ರೇಷ್ಠ ಅನುಗ್ರಹ ವಾಗಿದೆ. ಅವರು ಹೀಗೆ ಹೇಳುತ್ತಾರೆ:

"ನಿಮ್ಮ ಎಲ್ಲಾ ಜಯಗಳ ಮತ್ತು ಮೋಕ್ಷದ ಮೂಲವು ಪವಿತ್ರ ಖುರ್‌ಆನ್ ಆಗಿದೆ.......... ಪುನರುತ್ಥಾನ ದಿನದಂದು ನಿಮ್ಮ ವಿಶ್ವಾಸದ ಬಗ್ಗೆ ಸತ್ಯವೋ ಅಸತ್ಯವೋ ಎಂದು ಸಾಕ್ಷ್ಯ ನೀಡುವುದು ಪವಿತ್ರ ಖುರ್‌ಆನ್ ಆಗಿದೆ............. ಆದುದರಿಂದ ನಿಮಗೆ ನೀಡಲ್ಪಟ್ಟ ಈ ಅನುಗ್ರಹವನ್ನು ಗೌರವಿಸಿರಿ. ಇದು ಅತ್ಯಂತ ಅಮೂಲ್ಯ ಅನುಗ್ರಹ ವಾಗಿದೆ. ಇದು ಬಹಳ ದೊಡ್ಡ ಸಂಪತ್ತಾಗಿದೆ." (ಕಿಶ್ತೀ ನೂಹ್)

ಹಝ್‌ರತ್ ಮುಹಮ್ಮದ್ ಪೈಗಂಬರ್[(ಸ)] ಪವಿತ್ರ ಖುರ್‌ಆನನ್ನು ಪ್ರೀತಿಸುತ್ತಾ ಅದನ್ನು ಅಮೂಲ್ಯ ನಿಧಿಯಂತೆ ಸಂರಕ್ಷಿಸುತ್ತಿದ್ದರು. ಅವರಿಗೆ ಪವಿತ್ರ ಖುರ್‌ಆನಿನ ಒಂದು ಭಾಗವು ಅವತೀರ್ಣಗೊಂಡಾಗ ಅವರು ಅದನ್ನು ನೆನಪಿನಲ್ಲಿಟ್ಟು ಅವರಿಗೆ ಅವತೀರ್ಣವಾದ ಸಂಪೂರ್ಣ ಭಾಗಗಳನ್ನು ತನ್ನೊಂದಿಗೆ ಅವರು ಹೋದಲ್ಲೆಲ್ಲಾ ಒಯ್ಯುತ್ತಿದ್ದರು. ಪವಿತ್ರ ಖುರ್‌ಆನಿಗೆ ಮುಸ್ಲಿಮರು ನೀಡುವ ಗೌರವದ ಕಾರಣ ಅದನ್ನು ನಿಂದಿಸುವುದನ್ನು ಧರ್ಮನಿಂದೆಯಾಗಿ ಪರಿಗಣಿಸಲಾಗುವುದು.

ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ ಮತ್ತು ಪವಿತ್ರ ಖುರ್‌ಆನಿಗೆ ಅವಿಶ್ವಾಸಿಗಳು ಅವಮಾನ ಮಾಡಿದರೂ ಅದಕ್ಕೆ ಪ್ರತೀಕಾರ ಮಾಡಬಾರದೆಂದು ಅಲ್ಲಾಹನು ಆದೇಶಿಸಿದನು. ಏಕೆಂದರೆ, **"ಈ ಪರಿಹಾಸ ಮಾಡುವವರ ವಿರುದ್ಧ ಖಂಡಿತವಾಗಿಯೂ ನಾವು ನಿನಗೆ ಸಾಕು"** ಎಂದು ಅಲ್ಲಾಹ್ ಹೇಳಿದನು. (ಪವಿತ್ರ ಖುರ್‌ಆನ್ 15:96)

ಈ ವಚನ ಹೀಗೆ ಸೂಚಿಸುತ್ತದೆ: ಅಲ್ಲಾಹನ, ಹಝ್‌ರತ್ ಮುಹಮ್ಮದ್ ಪೈಗಂಬರರ[(ಸ)] ಮತ್ತು ಪವಿತ್ರ ಖುರ್‌ಆನಿನ ವಿರುದ್ಧ ಧರ್ಮನಿಂದೆ ಮಾಡುವವರನ್ನು ನೋಡಿಕೊಳ್ಳಲು ಅಲ್ಲಾಹನು ಮಾತ್ರ ಸಾಕು. ಧರ್ಮನಿಂದೆ ಮಾಡುವವರನ್ನು ಶಿಕ್ಷಿಸುವ ಅಧಿಕಾರವನ್ನು ಅಲ್ಲಾಹನು ಯಾರಿಗೂ ನೀಡಿಲ್ಲ. ಹಝ್‌ರತ್ ಮುಹಮ್ಮದ್ ಪೈಗಂಬರ್[(ಸ)] ಶತ್ರುಗಳ ಅಪಹಾಸ್ಯಗಳ ಬಗ್ಗೆ ಸಹನೆದೋರಬೇಕೆಂದು ಅಲ್ಲಾಹನು ಹೇಳಿರುವನು. ಪವಿತ್ರ ಖುರ್‌ಆನಿನ ಈ ವಚನ ನೋಡಿರಿ: **"ಅವಿಶ್ವಾಸಿಗಳನ್ನೂ ಕಪಟವಿಶ್ವಾಸಿಗಳನ್ನೂ ಹಿಂಬಾಲಿಸಬೇಡ. ಅವರ ಕಿರುಕುಳ ಗಳನ್ನು ನಿರ್ಲಕ್ಷ್ಯಮಾಡು. ಅಲ್ಲಾಹನ ಮೇಲೆ ಭರವಸೆಯನ್ನಿಡು, ರಕ್ಷಕನಾಗಿ ಅಲ್ಲಾಹನು ಸಾಕು."** (33:49)

ಧರ್ಮನಿಂದೆ ಮಾಡುವವರೊಂದಿಗೆ ಮುಸ್ಲಿಮರು ಹೇಗೆ ವರ್ತಿಸಬೇಕೆಂಬ ಬಗ್ಗೆ ಪವಿತ್ರ ಖುರ್‌ಆನ್ ಸ್ಪಷ್ಟ ಮಾರ್ಗದರ್ಶನ ನೀಡಿದೆ. ಧರ್ಮನಿಂದೆ ಮಾಡುವವರನ್ನು ಶಿಕ್ಷಿಸಲು ಮುಂದಾಗದೆ ಅಂತಹ ಜನರ ಸಹವಾಸದಿಂದ ದೂರ ಸರಿಯಬೇಕೆಂದೂ ಅವರು ಬೇರೆ ವಿಷಯದ ಬಗ್ಗೆ ಮಾತನಾಡಲು ತೊಡಗುವ ತನಕ ಹಾಗೆ ಮಾಡಬೇಕೆಂದೂ ಇಸ್ಲಾಮ್ ಉಪದೇಶಿಸುತ್ತದೆ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

**"ಅಲ್ಲಾಹನ ದೃಷ್ಟಾಂತಗಳನ್ನು ಅಲ್ಲಗಳೆಯುತ್ತಲೂ ಅಪಹಾಸ್ಯ ಮಾಡುತ್ತಲೂ ಇರುವುದನ್ನು ನೀವು ಕೇಳಿದರೆ, ಅವರು ಅದನ್ನು ಬಿಟ್ಟು ಮತ್ತೊಂದು ವಿಷಯವನ್ನು ತೊಡಗುವವರೆಗೆ ನೀವು ಅವರೊಂದಿಗೆ ಕುಳಿತುಕೊಳ್ಳಬಾರದೆಂದು ಅವನು (ಅಲ್ಲಾಹನು) ಈ ಗ್ರಂಥದಲ್ಲಿ ನಿಮಗೆ ಆದೇಶಿಸಿದ್ದಾನೆ. (ಅವರೊಂದಿಗೆ ನೀವು ಕುಳಿತುಕೊಂಡರೆ) ಖಂಡಿತವಾಗಿಯೂ ನೀವು ಸಹ ಅವರಂತೆಯೇ (ಎಂದು ಪರಿಗಣಿಸಲಾಗುವುದು)." (4:141)**

ಪವಿತ್ರ ಖುರ್‌ಆನ್ ಇಂತಹ ಸುಂದರ ಮಾರ್ಗದರ್ಶನ ನೀಡುತ್ತಿರುವಾಗ ಧರ್ಮನಿಂದೆಗೆ ಇಸ್ಲಾಮ್ ಮರಣದಂಡನೆ ವಿಧಿಸುತ್ತದೆ ಎಂದು ಹೇಳಲು ಹೇಗೆ ತಾನೆ ಸಾಧ್ಯ?

## ಇಸ್ಲಾಮ್ ಬಗ್ಗೆ ಉಗ್ರವಾದಿ ವ್ಯಾಖ್ಯಾನ

ಪವಿತ್ರ ಖುರ್‌ಆನ್ ಬಗ್ಗೆ ಅಥವಾ ಇಸ್ಲಾಮ್ ಬಗ್ಗೆ ಧರ್ಮ ನಿಂದೆಯ ಅಪರಾಧ ಮಾಡುವವರಿಗೆ ಮರಣದಂಡನೆ ವಿಧಿಸಬೇಕೆಂಬ ಬಗ್ಗೆ ಪವಿತ್ರ ಖುರ್‌ಆನ್ ಸ್ವಲ್ಪ ಮಾತ್ರವೂ ಸೂಚನೆ ನೀಡುತ್ತಾ ಇಲ್ಲ. ದುರದೃಷ್ಟಕರವಾದುದೇನೆಂದರೆ, ಮುಸ್ಲಿಮರೆಂದು ಹೇಳಿಕೊಳ್ಳುವ ಉಗ್ರವಾದಿ ಗುಂಪುಗಳ ವರ್ತನೆ ಮತ್ತು ಮುಸ್ಲಿಮ್ ದೇಶಗಳಲ್ಲಿ ಜಾರಿಗೊಳಿಸಲಾದ ತಥಾಕಥಿತ ಶರೀಅತ್ ನಿಯಮಗಳ ಕಾರಣದಿಂದ ವಾರ್ತಾ ಮಾಧ್ಯಮಗಳು ಇಸ್ಲಾಮಿನ ಕಡೆಗೆ ಬೊಟ್ಟುಮಾಡಿ ತೋರಿಸುವಂತಾಗಿದೆ. ಆದರೆ ವಾಸ್ತವಿಕವಾಗಿ ಆ ಉಗ್ರವಾದಿ ಗುಂಪುಗಳು ಅಥವಾ ಮುಸ್ಲಿಮ್ ಸರಕಾರಗಳು ನೈಜ ಇಸ್ಲಾಮನ್ನು ಅನುಷ್ಠಿಸುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಪಾಕಿಸ್ತಾನದ ಪೀನಲ್ ಕೋಡ್‌ನಲ್ಲಿ ಧರ್ಮನಿಂದೆಗೆ ಶಿಕ್ಷೆ ವಿಧಿಸುವ ಅನೇಕ ಕಲಮುಗಳಿವೆ. ಪಾಕಿಸ್ತಾನಿ ಪೀನಲ್ ಕೋಡಿನ ಕಲಮ್ 295C ಪ್ರಕಾರ ಧರ್ಮನಿಂದೆಗೆ ಮರಣ ದಂಡನೆ ವಿಧಿಸಲಾಗಿದೆ. ಅದರಲ್ಲಿ ಹೀಗೆ ಬರೆಯಲಾಗಿದೆ:

"ಹಝ್‌ರತ್ ಪ್ರವಾದಿ ವಿರುದ್ಧ ಅಪಮಾನಕಾರವಾದ ವಿಮರ್ಶೆ, ಮಾತು, ಬರಹ ಅಥವಾ ದೃಶ್ಯ ಮೂಲಕ ಅಥವಾ ದುರಾರೋಪ ಮೂಲಕ ಅಥವಾ ಸೂಚ್ಯವಾಗಿ, ವ್ಯಂಗೋಕ್ತಿಯಿಂದ ನೇರವಾಗಿ ಅಥವಾ ಪರೋಕ್ಷವಾಗಿ ಪ್ರವಾದಿ ಮುಹಮ್ಮದ್‌ರ[ಸ] ಪರಿಶುದ್ಧ ಹೆಸರನ್ನು ಅಪವಿತ್ರಗೊಳಿಸುವವನನ್ನು ಮರಣದಂಡನೆಗೆ ಅಥವಾ ಜೀವನ ಪರ್ಯಂತ ಸೆರೆವಾಸಕ್ಕೆ ಮತ್ತು ದಂಡಪಾವತಿಗೆ ಶಿಕ್ಷಿಸಲಾಗುವುದು."

1987ರಲ್ಲಿ ಫೆಡರಲ್ ಶರೀಅತ್ ಕೋರ್ಟ್ ಈ ನಿಯಮವನ್ನು ತಿದ್ದಿ ಧರ್ಮನಿಂದೆಗೆ ಮರಣದಂಡನೆ ಮಾತ್ರ ಶಿಕ್ಷೆ ಎಂದು ವಿಧಿಸಿತು. ಅದಕ್ಕಿಂತ ಕಡಿಮೆ ಮಟ್ಟದ ಶಿಕ್ಷೆ ನೀಡಲಾಗದೆಂದು ಘೋಷಿಸಿತು. 1990ರಲ್ಲಿ ಜೀವ ಪರ್ಯಂತ ಕಾರಾಗೃಹ ವಾಸದ ಶಿಕ್ಷೆಯನ್ನು ರದ್ದುಗೊಳಿಸಿ ಮರಣದಂಡನೆಯನ್ನು ಧರ್ಮನಿಂದೆಗೆ ಏಕಮಾತ್ರ ಶಿಕ್ಷೆ ಎಂಬ ನಿಯಮ ಜಾರಿಗೊಂಡಿತು. ಈ ಕಾರಣದಿಂದ ಉಗ್ರವಾದ ಮತ್ತು ಭೀಕರವಾದದ ಜಲಪ್ರವಾಹ ಜಾರಿಗೊಂಡಿತು. ಸರಕಾರಕ್ಕೆ ಅನಂತರ ಅದನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಜಾರಿಗೊಳಿಸಲಾದ ನಿಯಮವು ಸ್ಪಷ್ಟವಾಗಿರದ ಕಾರಣ ಎಲ್ಲಾ ರೀತಿಯ ಹೇಳಿಕೆಗಳ ವಿರುದ್ಧ ಮೊಕದ್ದಮೆ ಹೂಡಬಹುದಾದ ಸ್ಥಿತಿ ಉಂಟಾಯಿತು.

ಪಾಕಿಸ್ತಾನದಲ್ಲಿ ಎಂತಹ ಘಟನೆಗಳು ನಡೆಯುತ್ತಿವೆ ಎಂದರೆ ಉಗ್ರವಾದಕ್ಕೆ ಈ ನಿಯಮವು ಸಹಾಯಕವಾಗಿದೆ ಎಂದು ಸ್ಪಷ್ಟವಾಗುತ್ತದೆ. ಪಂಜಾಬಿನ ಗವರ್ನರ್ ಸಲ್ಮಾನ್ ತಾಸೀರ್ ಧರ್ಮನಿಂದೆ ಕಾನೂನಿಗೆ ತಿದ್ದುಪಡಿಯಾಗಬೇಕೆಂದು ವಾದಿಸಿದುದರಿಂದ ಉಗ್ರವಾದಿ ಹಂತಕನಿಂದ 2010 ಡಿಸೆಂಬರ್‌ನಲ್ಲಿ ಕೊಲ್ಲಲ್ಪಟ್ಟರು. ಆಸಿಯ ಬೀಬಿ ಎಂಬ ಒಬ್ಬ ಕ್ರೈಸ್ತ ಮಹಿಳೆ ಇಸ್ಲಾಮನ್ನು ನಿರಾಕರಿಸಿದಳೆಂಬ ಆರೋಪಿಸಿ ಆಕೆಯ ವಿರುದ್ಧ ಮೊಕದ್ದಮೆ ಹೂಡಿ ಮರಣದಂಡನೆಯ ಶಿಕ್ಷೆಗೆ ಗುರಿಯಾದವರಲ್ಲಿ ಒಬ್ಬಳಾಗಿರುವಳು. ಆಕೆಯ ಪ್ರಕರಣ ಜಾಗತಿಕ ಗಮನವನ್ನು ಸೆಳೆಯಿತು.

ಈ ನಿಯಮದ ಅಪಾಯಕಾರಿ ಪರಿಣಾಮಗಳು ಕೇವಲ ಸೈದ್ಧಾಂತಿಕವಾಗಿರದೆ ವಾಸ್ತವಿಕವಾಗಿದೆ.

1987ರಲ್ಲಿ ಪಾಕಿಸ್ತಾನದ ಫೆಡರಲ್ ಶರೀಅತ್ ಕೋರ್ಟ್ 30 ಪುಟದ ಒಂದು ತೀರ್ಪಿನಲ್ಲಿ ಪವಿತ್ರ ಖುರ್‌ಆನ್ ಮತ್ತು ಸಿಹಾಹ್ ಸಿತ್ತ ಎಂಬ ಅಧಿಕೃತ ಆರು ಹದೀಸು ಗ್ರಂಥಗಳಿಗೆ ಸೇರದ ಬೇರೊಂದು ಹದೀಸು ಗ್ರಂಥದಿಂದ ಹದೀಸುಗಳನ್ನು ಉಲ್ಲೇಖಿಸಿತು. ವಿರುದ್ಧ ಪಕ್ಷದ ವಾದಗಳನ್ನು ತೀರ್ಪಿನಲ್ಲಿ ಸೇರಿಸಲಿಲ್ಲ.

ಈ ಮೊಕದ್ದಮೆಯ ಮೊದಲ ಮೂಲಾಧಾರ ಎರಡು ಮುಖ್ಯ ಕಲ್ಪನೆಗಳಾಗಿದ್ದುವು. ಒಂದು, ಧರ್ಮನಿಂದೆಯು ಧರ್ಮ ತ್ಯಾಗಕ್ಕೆ ಸಮ. ಎರಡು, ಹಝ್‌ರತ್ ಪ್ರವಾದಿಯವರನ್ನು ಪರಿಹಾಸ ಮಾಡುವವನು ಅವರೊಂದಿಗೆ ಯುದ್ಧ ಮಾಡಿದ ಹಾಗೆ.

## ಧರ್ಮನಿಂದೆ ಧರ್ಮತ್ಯಾಗಕ್ಕೆ ಸಮ ಎಂಬ ಕಲ್ಪನೆ ತಪ್ಪು

ಹಝ್‌ರತ್ ಪ್ರವಾದಿ[ಸ] ವಿರುದ್ಧ ನಿಂದಾತ್ಮಕ ವಿಮರ್ಶೆ ನಡೆಸುವುದು ಧರ್ಮತ್ಯಾಗಕ್ಕೆ ಸಮವೆಂದೂ ಧರ್ಮತ್ಯಾಗಕ್ಕಿರುವ ಶಿಕ್ಷೆ ಮರಣದಂಡನೆ ಎಂದೂ ಶರೀಅತ್ ಕೋರ್ಟ್ ವಿಧಿಸಿ ತೀರ್ಪಿನಲ್ಲಿ ಹೀಗೆ ಹೇಳಿತು:

ಮೌಲಾನ ಸುಬ್‌ಹಾನ್ ಮಹ್‌ಮೂದ್ ಪವಿತ್ರ ಖುರ್‌ಆನಿನ 9:65, 66; 33:57; 49:2; 2:217; 5:75; 39:1, 65; 47:28 ಎಂಬ ವಚನಗಳನ್ನು ಉಲ್ಲೇಖಿಸಿರುವರು. ಅವರು ಕೆಲವು ಹದೀಸುಗಳನ್ನು ಮತ್ತು ಕೆಲವು ನ್ಯಾಯಪಂಡಿತರ ಅಭಿಪ್ರಾಯಗಳನ್ನು ಸೂಚಿಸಿ, ಅಪಮಾನಗೊಳಿಸುವವನು ಧರ್ಮತ್ಯಾಗ ಮಾಡುವವನಿಗೆ ಸಮ ಎಂದು ವಾದಿಸಿರುವರು. ಅಬೂ ಖಿಲಾಬ ವರದಿ ಮಾಡಿದ ಒಂದು ಹದೀಸಿನಲ್ಲಿ ಅಪಮಾನಗೊಳಿಸಿದವನಿಗೆ ಮರಣದಂಡನೆಯ ಶಿಕ್ಷೆ ವಿಧಿಸಬೇಕೆಂದು ಸೂಚಿಸಲಾಗಿದೆ. ಖಾಝೀ ಅಯಾಝ್ ವರದಿ ಮಾಡಿದ ಒಂದು ಹದೀಸನ್ನು ಸಹ ಅವರು ಆಧಾರವಾಗಿಟ್ಟುಕೊಂಡಿದ್ದಾರೆ. ಆ ಹದೀಸಿನಲ್ಲಿ ಹಝ್‌ರತ್ ಮುಹಮ್ಮದ್ ಪೈಗಂಬರ್,[ಸ]

"ಪ್ರವಾದಿಯನ್ನು ಬೈಯ್ಯುವವರನ್ನು ಕೊಲ್ಲಿರಿ. ಪ್ರವಾದಿಯ ಶಿಷ್ಯರನ್ನು ಬೈಯ್ಯುವವರಿಗೆ ಛಡಿ ಏಟು ನೀಡಿರಿ" ಎಂದು ಹೇಳಿದುದಾಗಿ ವಿವರಿಸಲಾಗಿದೆ.

ಕೋರ್ಟಿನ ಅಭಿಪ್ರಾಯಕ್ಕೆ ಸಂಬಂಧಿಸಿ ಅನೇಕ ಸಮಸ್ಯೆಗಳಿವೆ. ಒಂದನೆಯದಾಗಿ, ಗೌರವರಹಿತ ಮಾತು ಆಡುವುದು ಧರ್ಮತ್ಯಾಗಕ್ಕೆ ಸಮ ಎಂದು ಹೇಳುವುದು ಸರಿಯಲ್ಲ. ಪವಿತ್ರ ಖುರ್‌ಆನಿನಲ್ಲಿ ಹಝ್‌ರತ್ ಮುಹಮ್ಮದ್ ಪೈಗಂಬರರ ವಿರುದ್ಧ ಕಪಟವಿಶ್ವಾಸಿಗಳು ನುಡಿದ ಅನೇಕ ಅಪಮಾನಕರ ಮಾತುಗಳ ಮತ್ತು ಮಾಡಿದ ಕೆಲಸಗಳ ಬಗ್ಗೆ ಉಲ್ಲೇಖಗಳಿವೆ. ಆ ಕಪಟವಿಶ್ವಾಸಿಗಳನ್ನು ಇಸ್ಲಾಮಿನ ಮುಖ್ಯಧಾರೆಯಿಂದ ಹೊರಹಾಕಲಿಲ್ಲ. ಅವರ ಮೇಲೆ ಧರ್ಮತ್ಯಾಗವನ್ನು ಆರೋಪಿಸಿ ಅವರನ್ನು ಕೊಲ್ಲಲೂ ಇಲ್ಲ. [ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳನ್ನು ನೋಡಿರಿ: 9:64; 3:155, 168; 4:62–64; 63:9; 4:143–147; 47:17 (ಅಧ್ಯಾಯದ ಪ್ರಾರಂಭದ "ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ" ಎಂಬ ವಚನವನ್ನು 1ನೇ ವಚನವೆಂದು ಗಣಿಸಲಾಗಿದೆ.)]

ಗಮನಾರ್ಹವಾದ ಇನ್ನೊಂದು ವಿಷಯವೇನೆಂದರೆ, ಧರ್ಮನಿಂದೆಯು ವಾಸ್ತವಿಕವಾಗಿಯೂ ಧರ್ಮತ್ಯಾಗಕ್ಕೆ ಸಮವಾಗಿದ್ದರೆ, ಪವಿತ್ರ ಖುರ್‌ಆನ್ ಧರ್ಮತ್ಯಾಗಿಗೆ ಮರಣದಂಡನೆಯನ್ನು ವಿಧಿಸುತ್ತದೆ ಎಂದು ಹೇಳುವುದು ತಪ್ಪುಗ್ರಹಿಕೆಯಾಗಿದೆ. ಪವಿತ್ರ ಖುರ್‌ಆನ್ ಈ ಅಭಿಪ್ರಾಯಕ್ಕೆ ವಿರುದ್ಧವಾಗಿ, ವಿಶ್ವಾಸವನ್ನು ಅಂಗೀಕರಿಸಿದ ನಂತರ ಪುನಃ ಅವಿಶ್ವಾಸಿಗಳಾದವರ ಬಗ್ಗೆ ಪುನರಾವರ್ತಿಸಿ ಹೇಳುತ್ತಾ ಇದೆ. ಅಂತಹ ಜನರನ್ನು ಕೊಲ್ಲಬೇಕೆಂದಾಗಲಿ ಶಿಕ್ಷಿಸಬೇಕೆಂದಾಗಲಿ ಒಮ್ಮೆಯೂ ಹೇಳಿಲ್ಲ.

ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

**"ನಿಮ್ಮ ಪೈಕಿ ಯಾರಾದರೂ ತನ್ನ ಧರ್ಮದಿಂದ ವಿಮುಖನಾಗಿ ಅವಿಶ್ವಾಸಿಯಾಗಿದ್ದುಕೊಂಡು ಮೃತನಾದರೆ ಅಂಥವರ ಕರ್ಮಗಳು ಇಹದಲ್ಲೂ ಪರದಲ್ಲೂ ನಿಷ್ಫಲವಾಗುವುವು... ಅವರೇ ನರಕವಾಸಿಗಳು......" (2:218)**

ಈ ವಚನದಲ್ಲಿ ಧರ್ಮತ್ಯಾಗಿಯನ್ನು ಕೊಲ್ಲಬೇಕೆಂದು ಹೇಳಿಲ್ಲ. ಅದು ಧರ್ಮತ್ಯಾಗಿಯು ಮೃತನಾದ ನಂತರದ ಅಂತಿಮ ಪರಿಣಾಮದ ಬಗ್ಗೆ ವಿವರಿಸಿದೆ. ಧರ್ಮತ್ಯಾಗಿಗೆ ಮರಣದಂಡನೆ ನೀಡಬೇಕೆಂದು ಪವಿತ್ರ ಖುರ್‌ಆನ್ ಉದ್ದೇಶಿಸಿದ್ದರೆ ಈ ರೀತಿ ಹೇಳುತ್ತಿರಲಿಲ್ಲ.

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಸಹ ಇದರ ಬಗ್ಗೆ ಹೀಗೆ ಸೂಚಿಸುತ್ತದೆ:

**"ಸತ್ಯವಿಶ್ವಾಸವನ್ನು ಹೊಂದಿದ ನಂತರ ಅವಿಶ್ವಾಸವನ್ನು ಹೊಂದಿ ಮತ್ತೆ ಅವಿಶ್ವಾಸದಲ್ಲೇ ಮುನ್ನೇರುವವರ ಪಶ್ಚಾತ್ತಾಪವು ಎಂದಿಗೂ ಸ್ವೀಕರಿಸಲ್ಪಡದು. ಅವರೇ ದಾರಿತಪ್ಪಿದವರು." (3:91)**

ಧರ್ಮತ್ಯಾಗಕ್ಕೆ ಮರಣದಂಡನೆಯು ಶಿಕ್ಷೆಯಾಗಿ ವಿಧಿಸಲ್ಪಡುವುದು

ದಾದರೆ ಧರ್ಮತ್ಯಾಗಿ **"ಅವಿಶ್ವಾಸದಲ್ಲೇ ಮುನ್ನೇರುವುದು"** ಹೇಗೆ? ಅವರಿಗೆ ಪಶ್ಚಾತ್ತಾಪ ಸೂಚಿಸುವ ಸಂದರ್ಭ ಸಿಗುವುದಾದರೂ ಹೇಗೆ?

ಪವಿತ್ರ ಖುರ್‌ಆನ್ ಕಪಟವಿಶ್ವಾಸಿಗಳ ಒಂದು ಗುಂಪಿನ ಬಗ್ಗೆ ಹೀಗೆ ಹೇಳಿದೆ:

**"ಗ್ರಂಥದವರಲ್ಲಿ ಒಂದು ಪಂಗಡದ ಜನರು ಹೇಳುತ್ತಾರೆ: ವಿಶ್ವಾಸಿಗಳಿಗೆ (ಮುಸ್ಲಿಮರಿಗೆ) ಅವತೀರ್ಣಗೊಂಡುದರಲ್ಲಿ ಹಗಲಿನ ಆರಂಭದಲ್ಲಿ ನೀವು ನಂಬಿಕೊಂಡು, ಅದರ ಕೊನೆಯಲ್ಲಿ ನಿರಾಕರಿಸಿರಿ. (ಹೀಗೆ ಮಾಡಿದರೆ) ಪ್ರಾಯಶಃ ಅವರು ಮರಳಿ ಬರುವರು."** (3:73)

ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಧರ್ಮತ್ಯಾಗಿಗೆ ಮರಣ ದಂಡನೆ ವಿಧಿಸುತ್ತಿದ್ದರೆ ಕಪಟವಿಶ್ವಾಸಿಗಳ ಈ ಉಪಾಯವು ಕಾರ್ಯ ಸಾಧ್ಯವಾಗುತ್ತಿರಲಿಲ್ಲ. ಈ ವಚನ ವಾಸ್ತವಿಕವಾಗಿ ಸೂಚಿಸುವುದೇನೆಂದರೆ, ಕೆಲವು ಜನರು ಇಸ್ಲಾಮ್ ಧರ್ಮಕ್ಕೆ ಸೇರಿ ಅನಂತರ ಅದನ್ನು ತ್ಯಜಿಸುವಾಗ ಅವರು ಯಾವುದೇ ರೀತಿಯಲ್ಲಿ ಶಿಕ್ಷಿಸಲ್ಪಡಲಿಲ್ಲ.

ಧರ್ಮತ್ಯಾಗಿ ವಧಾರ್ಹನು ಎಂಬ ತಪ್ಪು ಕಲ್ಪನೆ ಉಂಟಾಗಲು ಕಾರಣ ಹೀಗೆ ಆಗಿರಬಹುದು: ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಕಾಲದಲ್ಲಿ ಮುಸ್ಲಿಮರು ಅವಿಶ್ವಾಸಿಗಳ ವಿರುದ್ಧ ಪ್ರತಿರೋಧಾತ್ಮಕ ಯುದ್ಧವನ್ನು ಮಾಡುತ್ತಿದ್ದಾಗ ಧರ್ಮತ್ಯಾಗ ಮಾಡಿದವರು ಶತ್ರು ಪಕ್ಷವನ್ನು ಸೇರುತ್ತಿದ್ದರು. ಆದುದರಿಮದ ಅಂತಹ ಧರ್ಮತ್ಯಾಗಿಗಳನ್ನು ಶತ್ರು ಪಕ್ಷದವರೆಂದು ಪರಿಗಣಿಸಲಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ಒಬ್ಬ ಧರ್ಮತ್ಯಾಗಿ ಕೊಲ್ಲಲ್ಪಟ್ಟರೆ ಅವನು ಕೊಲ್ಲಲ್ಪಟ್ಟದ್ದು ಅವನು ಧರ್ಮತ್ಯಾಗಿಯಾದುದರಿಂದಲ್ಲ; ಹತ್ಯೆ ಮತ್ತು ಇತರ ಯುದ್ಧಾಪರಾಧಗಳನ್ನು ಮಾಡುತ್ತಿದ್ದ ಶತ್ರುಪಕ್ಷಕ್ಕೆ ಸೇರಿದವನಾದುದರಿಂದಾಗಿತ್ತು.

ಇಸ್ಲಾಮ್ ಧರ್ಮಕ್ಕನುಸಾರವಾಗಿ ಧರ್ಮತ್ಯಾಗಿ ವಧಾರ್ಹನಾಗುತ್ತಾನೆ ಎಂಬ ಅಭಿಪ್ರಾಯ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಕ್ಕೆ ಸಂಪೂರ್ಣ ವಿರುದ್ಧವಾಗಿದೆ.

**"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ."** (2:257)

ಮೇಲಿನ ಪವಿತ್ರ ಖುರ್‌ಆನ್ ವಚನ ಹೀಗೆ ಸ್ಪಷ್ಟಪಡಿಸುತ್ತದೆ: ಧರ್ಮವೆಂಬುದು ವ್ಯಕ್ತಿ ಸ್ವತಃ ತನ್ನ ನಿರ್ಧಾರ ಪ್ರಕಾರ ಅಂಗೀಕರಿಸಬೇಕಾದುದಾಗಿದೆ. ಯಾರನ್ನೂ ಅವನ ಇಚ್ಛೆಗೆ ವಿರುದ್ಧವಾಗಿ ಮುಸ್ಲಿಮನಾಗಲು ಬಲಾತ್ಕಾರ ಮಾಡಬಾರದು.

## ಧರ್ಮನಿಂದನೆ ಕಾನೂನು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ನಡೆವಳಿಕೆಗೆ ವಿರುದ್ಧವಾಗಿದೆ

ಹಝ್ರತ್ ಪೈಗಂಬರರ ಜೀವಿತವು ಕ್ಷಮೆ ಎಂಬ ಪದದ ಸುಂದರ ಚಿತ್ರೀಕರಣವಾಗಿತ್ತು. ಅವರು ತನ್ನ ಕಠಿಣ ಶತ್ರುಗಳನ್ನು ಕೂಡ ಹೇಗೆ ಕ್ಷಮಿಸಿದರೆಂದು ಅವರ ಜೀವಿತದ ಘಟನೆಗಳು ಚಿತ್ರಿಸುತ್ತವೆ. ಉದಾಹರಣೆಗೆ, ಪವಿತ್ರ ಖುರ್‌ಆನಿನ ಅಧ್ಯಾಯ 63 ವಚನ 9ರಲ್ಲಿ ಕಪಟವಿಶ್ವಾಸಿಗಳ ಮುಖಂಡ ಅಬ್ದುಲ್ಲಾ ಬಿನ್ ಉಬಯ್ಯ್ ತನ್ನನ್ನು **"ಅತ್ಯಂತ ಮಹನೀಯ"** ಎಂದು ಹೇಳಿಕೊಂಡು ಹಝ್ರತ್ ಪೈಗಂಬರರನ್ನು **"ಅತ್ಯಂತ ನೀಚ"** ಎಂದು ಪ್ರಸ್ತಾಪಿಸಿದುದಾಗಿ ಉಲ್ಲೇಖಿಸಲಾಗಿದೆ. ಇಂತಹ ಅಬ್ದುಲ್ಲಾ ಬಿನ್ ಉಬಯ್ಯ್‌ನಿಗೆ ಯಾವ ಶಿಕ್ಷೆಯನ್ನೂ ನೀಡಲಿಲ್ಲ. ಅವನು ಸ್ವಾಭಾವಿಕವಾಗಿ ಮೃತನಾಗುವ ತನಕ ಮದೀನದಲ್ಲಿ ಶಾಂತಿಯಿಂದ ಜೀವಿಸುತ್ತಿದ್ದನು. ಹಝ್ರತ್ ಪೈಗಂಬರರೇ ಸ್ವತಃ ಅವನ ಜನಾಝ ಪ್ರಾರ್ಥನೆ ಅನುಷ್ಠಿಸಿದರು.

ಹಝ್ರತ್ ಪೈಗಂಬರರ ಸಹನೆಯಿಂದ ತುಂಬಿದ ಪ್ರಕೃತಿಯ ಇನ್ನೊಂದು ಉದಾಹರಣೆ ಅವರು ಮಕ್ಕವನ್ನು ಜಯಿಸಿದಾಗ ಪ್ರಕಟವಾಯಿತು. ತನ್ನನ್ನು ಜಾದೂಗಾರ, ಹುಚ್ಚ ಮತ್ತು ಸುಳ್ಳು ಹೇಳುವವ ಎಂದು ಆರೋಪಿಸಿದ ಎಲ್ಲರಿಗೂ ಅವರು ಕ್ಷಮೆ ನೀಡಿದರು.

ತನ್ನ ವಿರುದ್ಧ ಅನೇಕ ಯುದ್ಧಗಳಲ್ಲಿ ಶತ್ರುಪಕ್ಷದ ಸೇನಾಧಿಪತಿಯಾಗಿದ್ದ ಅಬೂ ಸುಫ್‌ಯಾನರನ್ನೂ ಅವರು ಕ್ಷಮಿಸಿದರು. ತನ್ನ ಸ್ವಂತ ಚಿಕ್ಕಪ್ಪ ಹಝ್ರತ್ ಹಮ್‌ಝರನ್ನು ಕೊಂದ ವಹ್‌ಶಿ ಎಂಬವನನ್ನು ಕ್ಷಮಿಸಲಾಯಿತು. ಅಬೂ ಸುಫ್‌ಯಾನದ ಪತ್ನಿ ಹಿಂದ ಹಝ್ರತ್ ಹಮ್‌ಝರ ಯಕೃತ್ತನ್ನು ಹಲ್ಲಿನಲ್ಲಿ ಕಡಿದು ಜಗಿದಿದ್ದರೂ ಆಕೆಗೂ ಕ್ಷಮೆ ನೀಡಲಾಯಿತು.

ಹಝ್ರತ್ ಪೈಗಂಬರರ ಪುತ್ರಿ ಹಝ್ರತ್ ಝೈನಬ್ ಒಂಟೆ ಸವಾರಿ ಮಾಡುತ್ತಾ ಇದ್ದಾಗ ಅವರನ್ನು ಹಬ್ಬಾರ್ ಈಟಿಯಿಂದ ತಿವಿದಾಗ ಅವರು ಒಂಟೆಯಿಂದ ಕೆಳಗೆ ಬಿದ್ದರು. ಅವರಿಗೆ ಗರ್ಭಸ್ರಾವವಾಗಿ ಅವರು ಅನಂತರ ನಿಧನಹೊಂದಿದರು. ಇಂತಹ ಹಬ್ಬಾರನನ್ನೂ ಹಝ್ರತ್ ಪೈಗಂಬರ್[ಸ] ಕ್ಷಮಿಸಿದರು.

ಮೇಲೆ ಕೆಲವೇ ಕೆಲವು ಘಟನೆಗಳನ್ನು ವಿವರಿಸಲಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರ ಜೀವಿತವು ಅವರು ತನ್ನ ಕಠಿಣ ಶತ್ರುಗಳಿಗೆ ಕೂಡ ಕ್ಷಮೆ ನೀಡಿದ ಅನೇಕ ಘಟನೆಗಳಿಂದ ತುಂಬಿವೆ. ಅವರು ಎಲ್ಲಾ ಮನುಷ್ಯರಿಗಿಂತ ಹೆಚ್ಚು ದಯೆವುಳ್ಳವರಾಗಿದ್ದರು. ಅವರ ಬಗ್ಗೆ ಅಲ್ಲಾಹನೇ **"ಸಕಲ ಲೋಕಗಳಿಗೆ ಅನುಗ್ರಹದಾಯಕ"** ಎಂದು ಹೇಳಿರುವನು.

ಪಾಕಿಸ್ತಾನದ ಪೀನಲ್ ಕೋಡಿನ ಕಲಮ್ 295C ಹಝ್ರತ್ ಪೈಗಂಬರರ[ಸ] ನಡೆವಳಿಕೆಗೆ ಅನುಯೋಜ್ಯವಾಗಿದೆ ಎಂದು ಹೇಳುವುದು ಹಝ್ರತ್ ಪೈಗಂಬರರು ತನ್ನ ಪವಿತ್ರ ಹೆಸರಿಗೆ ಮಾತು, ಬರಹ ಅಥವಾ ಬೇರೆ ರೀತಿಯಲ್ಲಿ ಕಳಂಕ ಉಂಟುಮಾಡಲು ಪ್ರಯತ್ನಿಸಿದವರನ್ನೆಲ್ಲಾ ಮರಣದಂಡನೆಗೆ ಗುರಿಪಡಿಸಿದರು ಎಂದು ಹೇಳುವುದಕ್ಕೆ ಸಮವಾಗಿದೆ. ದೇವನಾಮದಲ್ಲಿ ಹತ್ಯೆ ಮಾಡುವುದರಲ್ಲಿ ಆನಂದ ಹೊಂದುವ ಜನರು ಮಾತ್ರ ಇಂತಹ ಅಭಿಪ್ರಾಯ ಹೊಂದಲು ಸಾಧ್ಯ. ಆದರೆ ಹಝ್ರತ್ ಪೈಗಂಬರರ ಜೀವಿತದ ಘಟನೆಗಳು ಈ ಅಭಿಪ್ರಾಯವನ್ನು ಅನುಮೋದಿಸುವುದಿಲ್ಲ. ಇದು ಹಝ್ರತ್ ಪೈಗಂಬರರು ಮುಸ್ಲಿಮೇತರರೊಂದಿಗೆ ಹೇಗೆ ವರ್ತಿಸುತ್ತಿದ್ದರೆಂದು ಪವಿತ್ರ ಖುರ್‌ಆನ್ ವಿವರಿಸಿದೆಯೋ ಅದಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹಝ್ರತ್ ಪೈಗಂಬರರೊಂದಿಗೆ ಹೀಗೆ ಹೇಳುತ್ತಾನೆ:

**"ಅಲ್ಲಾಹನ ಕಾರುಣ್ಯದಿಂದಲೇ ನೀನು ಅವರೊಂದಿಗೆ ಸೌಮ್ಯವಾಗಿ ವರ್ತಿಸುತ್ತಿರುವೆ. ನೀನು ಕ್ರೂರ ಸ್ವಭಾವಿಯೂ ಕಠಿಣ ಹೃದಯಿಯೂ ಆಗಿರುತ್ತಿದ್ದರೆ ಅವರು ನಿನ್ನ ಸುತ್ತಮುತ್ತಲಿನಿಂದ ಅಗಲಿ ಹೋಗುತ್ತಿದ್ದರು. ಆದ್ದರಿಂದ ನೀನು ಅವರಿಗೆ ಕ್ಷಮೆ ನೀಡು; ಅವರ ಪಾಪಮುಕ್ತಿಗಾಗಿ ನೀನು ಪ್ರಾರ್ಥಿಸು ಹಾಗೂ ಪ್ರಧಾನ ಕಾರ್ಯಗಳಲ್ಲಿ ನೀನು ಅವರೊಡನೆ ಸಮಾಲೋಚನೆ ನಡೆಸು. ಹಾಗೆ ಯಾವುದೇ ಕಾರ್ಯ ತೀರ್ಮಾನಿಸಲ್ಪಟ್ಟರೆ ನೀನು ಅಲ್ಲಾಹನ ಮೇಲೆ ಭರವಸೆಯನ್ನಿಡು. ಖಂಡಿತವಾಗಿಯೂ ಅಲ್ಲಾಹನು (ತನ್ನ ಮೇಲೆ) ಭರವಸೆಯನ್ನಿಡುವವರನ್ನು ಪ್ರೀತಿಸುತ್ತಾನೆ"** (3:160)

ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಬಗ್ಗೆ ಅಲ್ಲಾಹನು ಹೇಳಿದುದು ಅವರ ಸುಂದರ ಸ್ವಭಾವ ಗುಣದ ಬಗ್ಗೆ ಸ್ಪಷ್ಟ ಚಿತ್ರಣ ನೀಡುತ್ತದೆ. ಅವರ ಸ್ವಭಾವ ಗುಣಗಳಲ್ಲಿ ವಿಶಿಷ್ಟವಾದುದು ಅವರ

ದಯಾಗುಣವಾಗಿದೆ. ಅವರು ಮಾನವೀಯ ಕಾರುಣ್ಯವೆಂಬ ಹಾಲಿನಿಂದ ತುಂಬಿಸಲ್ಪಟ್ಟಿದ್ದರು. ಅವರು ತನ್ನ ಶಿಷ್ಯರಿಗೂ ಅನುಯಾಯಿಗಳಿಗೂ ಕರುಣೆದೋರುತ್ತಿದ್ದರಲ್ಲದೆ, ಅವರಿಗೆ ಹಾನಿಯನ್ನುಂಟುಮಾಡಲು ಯಾವಾಗಲೂ ಸಿದ್ಧರಾಗುತ್ತಿದ್ದ ಶತ್ರುಗಳ ಬಗ್ಗೆಯೂ ಊಹಾತೀತ ಕರುಣೆಯಿಂದ ವರ್ತಿಸುತ್ತಿದ್ದರು. ಉಹುದ್ ಯುದ್ಧದಲ್ಲಿ ಸೈನ್ಯವನ್ನು ತೊರೆದುಹೋದ ಕಪಟವಿಶ್ವಾಸಿಗಳ ವಿರುದ್ಧ ಯಾವ ಕ್ರಮವನ್ನೂ ಹಝ್ರತ್ ಪೈಗಂಬರ್(ಸ) ಜರಗಿಸಲಿಲ್ಲವೆಂದೂ ರಾಜ್ಯಾಡಳಿತೆಯ ವಿಷಯದಲ್ಲಿ ಅವರ ಸಲಹೆಗಳನ್ನು ಕೇಳುತ್ತಿದ್ದರೆಂದೂ ಚರಿತ್ರೆಯಲ್ಲಿ ದಾಖಲಿಸಲಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅತ್ಯುತ್ಕೃಷ್ಟ ಸ್ವಭಾವ ಗುಣದ ಬೆಳಕಿನಲ್ಲಿ ನೋಡುವುದಾದರೆ ಪಾಕಿಸ್ತಾನದ ಪೀನಲ್ ಕೋಡ್ ಹಝುರತ್ ಪೈಗಂಬರರ ನಡೆವಳಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳುವುದು ವಾಸ್ತವಿಕವಾಗಿ ತೀವ್ರ ತರದ ಧರ್ಮನಿಂದೆಯ ಅಪರಾಧವಾಗಿದೆ. ಹಝ್ರತ್ ಪೈಗಂಬರರನ್ನು(ಸ) ಪ್ರೀತಿಸುವ ಎಲ್ಲರೂ ಈ ಪ್ರಶ್ನೆಯ ಬಗ್ಗೆ ಗಾಢವಾಗಿ ಚಿಂತಿಸಬೇಕು.

ವಾಸ್ತವಿಕವಾಗಿ ಧರ್ಮನಿಂದೆ ಶಿಕ್ಷಾರ್ಹ ಅಪರಾಧ ಎಂದು ಇಸ್ಲಾಮ್ ಗಣಿಸುವುದಿಲ್ಲ ಎಂದು ನಾವು ಮೇಲೆ ವಿವರಿಸಿದ ಪವಿತ್ರ ಖುರ್‌ಆನಿನ ಮತ್ತು ಹಝ್ರತ್ ಪೈಗಂಬರರ(ಸ) ಸುಂದರ ಜೀವಿತದ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಲಾಗಿದೆ. ಆಧ್ಯಾತ್ಮಿಕ ಅಪರಾಧಗಳಿಗೆ ಆಧ್ಯಾತ್ಮಿಕ ರೀತಿಗಳಲ್ಲಿಯೇ ಪ್ರತೀಕಾರ ಮಾಡಬಹುದಾಗಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ವಾಗ್ದತ್ತ ಮಸೀಹರ ಐದನೆಯ ಖಲೀಫ ಮತ್ತು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನೇತಾರ) ಶುಕ್ರವಾರದ ಒಂದು ಖುತುಬದಲ್ಲಿ ಹೀಗೆ ಹೇಳಿದರು:

ಇಂದಿನ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರನ್ನು ಅರ್ಥಮಾಡಿಕೊಂಡವರು ಮತ್ತು ಗೌರವಿಸಿದವರು ಇತರ ಎಲ್ಲರಿಗಿಂತಲೂ ಮಿಗಿಲಾಗಿ ಹಝ್ರತ್ ವಾಗ್ದತ್ತ ಮಸೀಹರಾಗಿದ್ದಾರೆ.

ಹಝ್ರತ್ ವಾಗ್ದತ್ತ ಮಸೀಹ್(ಅ) ಹೀಗೆ ಬರೆದಿರುವರು:

"ಪರಿಪೂರ್ಣ ಮನುಷ್ಯನಿಗೆ ನೀಡಲಾದ ಉನ್ನತ ಮಟ್ಟದ ಪ್ರಕಾಶ ದೇವದೂತರಲ್ಲಿ ಇರಲಿಲ್ಲ, ನಕ್ಷತ್ರಗಳಲ್ಲಿ ಇರಲಿಲ್ಲ, ಚಂದ್ರನಲ್ಲಿರಲಿಲ್ಲ, ಸೂರ್ಯನಲ್ಲೂ ಇರಲಿಲ್ಲ, ಸಾಗರಗಳಲ್ಲೂ ನದಿಗಳಲ್ಲೂ ಇರಲಿಲ್ಲ. ಮಾಣಿಕ್ಯ, ಮರಕತ, ಇಂದ್ರನೀಲ ಮತ್ತು ಮುತ್ತು ರತ್ನಗಳಲ್ಲಿರಲಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಭೂಮಿ ಮತ್ತು ಆಕಾಶಕ್ಕೆ ಸಂಬಂಧಿಸಿದ ಯಾವ ವಸ್ತುವಿನಲ್ಲೂ ಇರಲಿಲ್ಲ, ಅದು ಪರಿಪೂರ್ಣ ಮನುಷ್ಯನಲ್ಲಿ ಮಾತ್ರ ಇರುತ್ತದೆ. ಅದರ ಅತ್ಯುನ್ನತ, ಪರಿಪೂರ್ಣ ಉದಾಹರಣೆ ನಮ್ಮ ಯಜಮಾನರಾದ, ಎಲ್ಲಾ ಪ್ರವಾದಿಗಳ ನಾಯಕರಾದ, ಎಲ್ಲಾ ಜೀವಿಗಳ ನಾಯಕರಾದ ಮುಹಮ್ಮದ್ ಮುಸ್ತಫಾ(ಸ) ಆಗಿರುವರು."
(Essence of Islam Vol-1)

ಹಝ್ರತ್ ವಾಗ್ದತ್ತ ಮಸೀಹ್(ಅ) ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಪುನಃ ಹೇಳಿದರು:

"ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತಲಪಿದ ಉನ್ನತ ಸ್ಥಾನವನ್ನು ತಲಪಲು ಯಾರಿಗೂ ಸಾಧ್ಯವಿಲ್ಲ. ಅವರ ಆಧ್ಯಾತ್ಮಿಕ ಸ್ಥಾನಮಾನಗಳನ್ನು ಅಂದಾಜು ಮಾಡಲು ಮನುಷ್ಯರಿಗೆ ಸಾಧ್ಯವಿಲ್ಲ... ಹಝ್ರತ್ ಪೈಗಂಬರರ(ಸ) ಆಧ್ಯಾತ್ಮಿಕ ಪದವಿಯನ್ನು ಅರ್ಹವಾದ ರೀತಿಯಲ್ಲಿ ಮನವರಿಕೆ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲವೆಂಬುದು ಖೇದಕರವಾಗಿದೆ. ಲೋಕದಲ್ಲಿ ಕಣ್ಮರೆಯಾಗಿ ಹೋಗಿದ್ದ ದೇವನ ಏಕತ್ವವನ್ನು ಲೋಕದಲ್ಲಿ ಪುನಃ ಸ್ಥಾಪಿಸಿದ ವೀರ ನಾಯಕ ಅವರೇ ಆಗಿದ್ದಾರೆ. ಅವರು ದೇವನನ್ನು ಅತ್ಯಂತ ಹೆಚ್ಚು ಪ್ರೀತಿಸಿದರು. ಅವರ ಆತ್ಮವು ಮಾನವಕುಲದ ಸಹಾನು ಭೂತಿಗೋಸ್ಕರ ಕರಗಿತು...."
(Essence of Islam Vol-I)

### ಪಾಕಿಸ್ತಾನದ ಪೀನಲ್ ಕೋಡ್

**ಧಾರ್ಮಿಕ ಅಪರಾಧಗಳ ಶಿಕ್ಷೆಯ ಸಂಕ್ಷಿಪ್ತರೂಪ**

**ಕಲಂ 298 A** : ಪವಿತ್ರ ವ್ಯಕ್ತಿಗಳ ವಿರುದ್ಧ ಅಪಮಾನಕರ ವಿಮರ್ಶೆ ಮೊದಲಾದವು.
ಶಿಕ್ಷೆ : 3 ವರ್ಷ ಕಾರಾಗೃಹ ವಾಸ, ದಂಡ ಅಥವಾ ಎರಡು ಸಹ.

**ಕಲಂ 298 B** : ಪವಿತ್ರ ವ್ಯಕ್ತಿಗಳಿಗೆ ಬಳಸುವ ಗೌರವ ಸೂಚಕ ಪದಗಳ ದುರುಪಯೋಗ.
ಶಿಕ್ಷೆ : 3 ವರ್ಷ ಕಾರಾಗೃಹ ವಾಸ ಮತ್ತು ದಂಡ.

**ಕಲಂ 298 C** : ಅಹ್ಮದಿ ತನ್ನನ್ನು ಮುಸ್ಲಿಮ್ ಎಂದು ಹೇಳಿದರೆ, ತನ್ನ ನಂಬಿಕೆಗಳ ಪ್ರಚಾರ ಮಾಡುವುದಾದರೆ, ಮುಸ್ಲಿಮರ ಧಾರ್ಮಿಕ ನಂಬಿಕೆಗಳಿಗೆ ನೋವನ್ನು ಉಂಟುಮಾಡಿದರೆ,
ಶಿಕ್ಷೆ : 3 ವರ್ಷ ಕಾರಾಗೃಹ ವಾಸ ಮತ್ತು ದಂಡ.

**ಕಲಂ 295** : ಪ್ರಾರ್ಥನಾಲಯಗಳಿಗೆ ಹಾನಿ ಉಂಟು ಮಾಡುವುದು, ಯಾವುದೇ ಧರ್ಮ ನಿಂದನೆ ಮಾಡುವುದು.
ಶಿಕ್ಷೆ : 2 ವರ್ಷದ ತನಕ ಶಿಕ್ಷೆ ಅಥವಾ ದಂಡ ಅಥವಾ ಅವೆರಡೂ.

**ಕಲಂ 295 A** : ದ್ವೇಷಭರಿತ ವರ್ತನೆಯಿಂದ ಅನ್ಯರ ಧಾರ್ಮಿಕ ನಂಬಿಕೆಗಳಿಗೆ ಹಾನಿ ಉಂಟುಮಾಡುವುದು.
ಶಿಕ್ಷೆ : 10 ವರ್ಷಗಳ ತನಕ ಕಾರಾಗೃಹ ವಾಸ ಅಥವಾ ದಂಡ ಅಥವಾ ಅವೆರಡೂ.

**ಕಲಂ 295 B** : ಪವಿತ್ರ ಖುರ್‌ಆನಿಗೆ ಅಪಮಾನ ಇತ್ಯಾದಿ.
ಶಿಕ್ಷೆ : ಜೀವನ ಪರ್ಯಂತ ಶಿಕ್ಷೆ.

**ಕಲಂ 295 C** : ಪವಿತ್ರ ಪ್ರವಾದಿಯ ವಿರುದ್ಧ ಅಪಮಾನಕರ ವಿಮರ್ಶೆ.
ಶಿಕ್ಷೆ : ಮರಣ ದಂಡನೆ ಮತ್ತು ದಂಡ.

ವಾಗ್ದತ್ತ ಮಸೀಹರು(ಅ) ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಗೌರವವನ್ನು ಮುಸ್ಲಿಮರು ಹೇಗೆ ಕಾಪಾಡಬಹುದು, ಅಪಮಾನಕರ ಹೇಳಿಕೆಗಳಿಗೂ ಬೈಗಳಿಗೂ ಹೇಗೆ ಉತ್ತರಿಸಬಹುದು ಎಂಬುದನ್ನು ಬಹಳ ಚಲೋದಾಗಿ ಸಂಕ್ಷಿಪ್ತವಾಗಿ ವಿವರಿಸಿರುವರು:

ಪವಿತ್ರ ಖುರ್‌ಆನ್ ಮಾನವರಿಗೆ ಅನೇಕ ಉಪದೇಶಗಳನ್ನು ನೀಡಿದೆ. ಅವುಗಳು ಹೀಗಿವೆ: ಏಕದೇವನನ್ನು ಆರಾಧಿಸಬೇಕು. ಅವನಿಗೆ ಸಲ್ಲಬೇಕಾದ ಹಕ್ಕುಗಳನ್ನು ನೀಡಬೇಕು. ದೇವನ ಎಲ್ಲಾ ಸೃಷ್ಟಿಗಳೊಂದಿಗೆ ಕರುಣೆಯಿಂದ ವರ್ತಿಸಬೇಕು. ಯಾವಾಗಲೂ ಸತ್ಯಸಂಧರಾಗಿರಬೇಕು,

# ಪವಿತ್ರ ಖುರ್‌ಆನ್ ವಿರುದ್ಧ ಪಾದರಿಯ ಆಕ್ಷೇಪಗಳಿಗೆ ಉತ್ತರ

*ಲೇಖಕ ಮೌಲವಿ ಮನ್‌ಸೂರ್ ಅಹ್ಮದ್ ಮಸ್ರೂರ್*
*ಅಧ್ಯಾಪಕರು, ಜಾಮಿಅ ಅಹ್ಮದಿಯಾ, ಖಾದಿಯಾನ್*

**ಅಮೇರಿಕದ ಫ್ಲೋರಿಡಾದ ಡವ್ (Dove) ಚರ್ಚ್ ಪಾದರಿ ಟೆರ್ರಿ ಜೋನ್ಸ್ ಆಕ್ಷೇಪ ಸಂಖ್ಯೆ – 6 :**

ಇಸ್ಲಾಮೀ ಧರ್ಮಶಾಸ್ತ್ರ ನಿರಂಕುಶಾಧಿಕಾರವನ್ನು ಪ್ರತಿಪಾದಿಸುತ್ತದೆ. ಅದರಲ್ಲಿ ಧರ್ಮ ಮತ್ತು ಸರಕಾರ ಬೇರೆ ಬೇರೆಯಾಗಿಲ್ಲ. ಪವಿತ್ರ ಖುರ್‌ಆನ್‌ನಲ್ಲಿ ಬರೆದಿರುವುದನ್ನು ಬದಲಾಯಿಸಲು ಸಾಧ್ಯವಿಲ್ಲ. ಯಾವುದೇ ವಿಮರ್ಶೆ ಮಾಡದೆ ಅದರ ಆದೇಶಗಳನ್ನು ಪಾಲಿಸಬೇಕು.

**ಆಕ್ಷೇಪ ಸಂಖ್ಯೆ 7 :** ಇಸ್ಲಾಮ್ ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ವಿರುದ್ಧವಾಗಿವೆ. ಇಸ್ಲಾಮಿನಲ್ಲಿ ನೈತಿಕ ನಿಯಮಗಳಿಲ್ಲ. ಇಸ್ಲಾಮಿನಲ್ಲಿ ಮಹಿಳೆಯರನ್ನು ಪುರುಷರಿಗಿಂತ ಕೀಳೆಂದು ಪರಿಗಣಿಸಲಾಗುತ್ತದೆ. ಆದುದರಿಂದ ಮುಸ್ಲಿಮ್ ಪುರುಷರು ಮಹಿಳೆಯರ ಮೇಲೆ ದೌರ್ಜನ್ಯ ಮಾಡುತ್ತಾರೆ. ಇದು ಪವಿತ್ರ ಖುರ್‌ಆನಿನ ಉಪದೇಶಗಳ ಪ್ರಭಾವದಿಂದಾಗಿದೆ.

## ಉತ್ತರ

ಪಾದರಿಯ ಆಕ್ಷೇಪ ಅಜ್ಞಾನದಿಂದಾಗಿದೆ. ಮುಸ್ಲಿಮರಿಗೆ ಪರಿಪೂರ್ಣ ಮತ್ತು ಬದಲಾವಣೆಯ ಆವಶ್ಯಕತೆ ಇಲ್ಲದ ಗ್ರಂಥವಾದ ಪವಿತ್ರ ಖುರ್‌ಆನ್ ಲಭಿಸಿರುವುದರಿಂದ ಅವರು ಸಂತೋಷಗೊಂಡಿದ್ದಾರೆ. ಅದರ ಆಜ್ಞೆಗಳು ಅಂತ್ಯಕಾಲದ ತನಕ ಪಾಲಿಸಲು ಯೋಗ್ಯವಾಗಿರುವವುಗಳಾಗಿವೆ. ಕಳೆದ ಒಂದೂವರೆ ಸಾವಿರ ವರ್ಷಗಳಿಂದ ಅದರ ಆಜ್ಞೆಗಳು ಅನುಸರಿಸಲ್ಪಡುತ್ತಾ ಇವೆ. ಪಾದರಿಯ ಆಕ್ಷೇಪವು ಈ ಕೆಳಗಿನ ಪರಿಸ್ಥಿತಿ ಇದ್ದರೆ ಮಾತ್ರ ಗಮನಾರ್ಹವಾಗುವುದು: ಮುಸ್ಲಿಮರು ಪವಿತ್ರ ಖುರ್‌ಆನನ್ನು ನಂಬುತ್ತಾ ಇದ್ದರೂ ಅದರಲ್ಲಿ ಬದಲಾವಣೆ ಏಕೆ ಆಗುವುದಿಲ್ಲ ಎಂದು ಅವರು ತಮಗೆ ಉಂಟಾಗುವ ಕಷ್ಟದ ಕಾರಣದಿಂದ ಬಯಸುವುದಾದರೆ; ಅಥವಾ ಪವಿತ್ರ ಖುರ್‌ಆನಿನ ಯಾವುದಾದರೂ ದೋಷಭರಿತ ಆದೇಶದ ಕಾರಣ ಮುಸ್ಲಿಮರು ಕಷ್ಟಕ್ಕೊಳಗಾಗುವುದಾಗಿ ದೂರುವುದಾದರೆ.

ಆದರೆ ಮುಸ್ಲಿಮರು ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಸಂತೋಷದಿಂದ ಪಾಲಿಸುತ್ತಾರೆ. ಹೀಗಿರುವಾಗ ಪಾದರಿಯ ಆಕ್ಷೇಪವು ಅಸಮಂಜಸವಾಗಿದೆ. ಪವಿತ್ರ ಖುರ್‌ಆನಿಗಿಂತ ಉತ್ತಮ ಉಪದೇಶಗಳು ಇರುವ ಬೇರೆ ಗ್ರಂಥ ಪಾದರಿಯ ದೃಷ್ಟಿಯಲ್ಲಿದ್ದರೆ ಅದು ಯಾವುದೆಂದು ಸೂಚಿಸಲಿ.

---

ವಾಗ್ದಾನಗಳನ್ನು ಪಾಲಿಸಬೇಕು. ಕುಟುಂಬ ಮತ್ತು ಸಂಬಂಧಿಕರಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸಬೇಕು. ಕ್ಷಮಿಸುವವರಾಗಬೇಕು. ವಿನೀತರಾಗಬೇಕು. ಎಲ್ಲಾ ಸ್ಥಿತಿಗತಿಗಳಲ್ಲಿ ದೇವನ ಬಗ್ಗೆ ಭರವಸೆ ಇಟ್ಟುಕೊಳ್ಳಬೇಕು. ಇತ್ಯಾದಿ.

ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಪವಿತ್ರ ಖುರ್‌ಆನಿನ ಎಲ್ಲಾ ಆಜ್ಞೆಗಳನ್ನು ಅತ್ಯಂತ ಉತ್ತಮ ರೀತಿಯಲ್ಲಿ ಪಾಲಿಸಿದರು – ಅವರು ಎಂದೂ ಸುಳ್ಳು ಹೇಳಲಿಲ್ಲ, ಅವರು ಎಂದೂ ವಾಗ್ದಾನಕ್ಕೆ ಭಂಗ ಉಂಟುಮಾಡಲಿಲ್ಲ, ಅವರು ಎಂದೂ ಉದ್ಧಟತನದಿಂದ ವರ್ತಿಸಲಿಲ್ಲ. ಅವರು ಯಾವಾಗಲೂ ಎಲ್ಲರೊಂದಿಗೂ ಕರುಣೆಯಿಂದ ವರ್ತಿಸುತ್ತಿದ್ದರು. ಪವಿತ್ರ ಖುರ್‌ಆನ್ ವಿವರಿಸುವ ಎಲ್ಲ ನೈತಿಕ ಗುಣಗಳ ಅನುಷ್ಠಾನಕ್ಕೆ ಅವರು ಮಾದರಿ ಆಗಿದ್ದರು. ಅವರ ಕಠಿಣ ಶತ್ರುಗಳು ಕೂಡ ಅವರನ್ನು ಗೌರವಿಸುತ್ತಿದ್ದರು ಮತ್ತು ಅವರನ್ನು ಅಲ್ ಅಮೀನ್ (ಪ್ರಾಮಾಣಿಕ, ನಂಬಿಕೆಗೆ ಅರ್ಹ) ಎಂದೂ ಅಸ್ಸಿದ್ದೀಖ್ (ಸತ್ಯಸಂಧ) ಎಂದೂ ಕರೆಯುತ್ತಿದ್ದರು.

ಸತ್ಯವಿಶ್ವಾಸಿಯಾದ ಮುಸ್ಲಿಮನು ಹಝ್ರತ್ ಮುಹಮ್ಮದ್ ಪೈಗಂಬರರಿಗೆ[ಸ] ದೇವನ ಅನುಗ್ರಹ ಕೋರುವ ದುರೂದ್ ಪ್ರಾರ್ಥನೆ ಮಾಡುತ್ತಾ ಇರಬೇಕು ಮತ್ತು ಅವರ ನಡೆವಳಿಕೆಯ ಮಾದರಿಯನ್ನು ಅನುಸರಿಸಬೇಕು. ದೇವನ ಎಲ್ಲಾ ಅಜ್ಞೆಗಳನ್ನು ಪಾಲಿಸಬೇಕು ಮತ್ತು ತನ್ನ ಜೀವಿತದ ಪ್ರತಿಯೊಂದು ಕ್ಷಣವನ್ನೂ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ತೋರಿಸಿಕೊಟ್ಟ ಮಾರ್ಗದಲ್ಲಿ ಚಲಿಸುತ್ತಾ ಜೀವಿಸಬೇಕು. ಒಬ್ಬ ಮುಸ್ಲಿಮನು ಹೃತ್ಪೂರ್ವಕವಾಗಿ ದುರೂದ್ ಪ್ರಾರ್ಥನೆ ಮಾಡಿ ಮೇಲೆ ವಿವರಿಸಿದಂತೆ ವರ್ತಿಸಲು ತೊಡಗಿದರೆ ಅವನು ಸುಗುಣಗಳ ಮತ್ತು ಶ್ರೇಷ್ಠ ನೈತಿಕ ಮಟ್ಟದ ಮಾದರಿಯಾಗುವನು. ಹಝ್ರತ್ ಮುಹಮ್ಮದ್ ಪೈಗಂಬರರಿಗೆ[ಸ] ಗೌರವ ನೀಡುವ ಸರಿಯಾದ ವಿಧಾನ ಇದೇ ಆಗಿದೆ. ಮೆರವಣಿಗೆ ಏರ್ಪಡಿಸುವುದು, ಟೈರ್‌ಗಳನ್ನು ಸುಟ್ಟು ವಾಹನ ಸಂಚಾರವನ್ನು ತಡೆಗಟ್ಟುವುದು ಮೊದಲಾದವು ಸರಿಯಾದ ವಿಧಾನಗಳಲ್ಲ.

ಸತ್ಯವಿಶ್ವಾಸಿಯಾದ ಮುಸ್ಲಿಮನು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮಾದರಿಯನ್ನು ಅನುಸರಿಸಿ ತನ್ನ ವರ್ತನೆಯನ್ನು ರೂಪಿಸಿ ವಿರೋಧಿಗಳ ಆಕ್ಷೇಪಗಳನ್ನು ಮತ್ತು ಬೈಗಳನ್ನು ತಡೆಗಟ್ಟಬಹುದು. ಮುಸ್ಲಿಮರು ಉತ್ತಮವಾಗಿ ವರ್ತಿಸುವ ಗುಣಶಾಲಿಗಳಾದರೆ ಇಸ್ಲಾಮಿನ ಶತ್ರುಗಳು ಕೂಡ ಅದನ್ನು ಗಮನಿಸಲು ತೊಡಗುವರು ಹಾಗೂ ಇಸ್ಲಾಮೀ ತತ್ವಗಳನ್ನು ಮತ್ತು ಇಂತಹ ಉತ್ತಮ ಗುಣಗಳನ್ನು ಪ್ರೇರೇಪಿಸಿದ ಹಝ್ರತ್ ಪೈಗಂಬರರನ್ನು[ಸ] ಪ್ರಶಂಸಿಸುವರು.

★

## ಪವಿತ್ರ ಖುರ್‌ಆನ್ ತನ್ನ ಪ್ರಸ್ತಾಪಗಳನ್ನು ವಿಮರ್ಶಿಸಲು ಬಹಿರಂಗ ಆಹ್ವಾನ ನೀಡುತ್ತದೆ

ಪವಿತ್ರ ಖುರ್‌ಆನನ್ನು ವಿಮರ್ಶಿಸಲು ವಿರೋಧಿಗಳಿಗೆ ಅದು ಬಹಿರಂಗ ಆಹ್ವಾನ ನೀಡುತ್ತದೆ. ಅದು ತನ್ನ ಎಲ್ಲಾ ಆದೇಶಗಳಿಗೆ ಸಾಕಷ್ಟು ಕಾರಣಗಳನ್ನು ನೀಡುತ್ತದೆ. ವಿರೋಧಿಗಳು ತಮ್ಮ ವಾದಗಳಿಗೆ ಸಾಕ್ಷ್ಯಾಧಾರಗಳನ್ನು ನೀಡಬೇಕೆಂದು ಅದು ಆವಶ್ಯಪಡುತ್ತದೆ.

ಪವಿತ್ರ ಖುರ್‌ಆನನ್ನು ಅನುಸರಿಸುವವರು ಅದನ್ನು ಹೃತ್ಪೂರ್ವಕವಾಗಿ ನಂಬುತ್ತಾರೆ. ಅವರು ಅದನ್ನು ಭವ್ಯವೆಂದೂ ಕಾರ್ಯಗತಗೊಳಿಸಲು ಯೋಗ್ಯವೆಂದೂ ನಂಬುವುದರಿಂದ ಅವರು ಅದನ್ನು ವಿಮರ್ಶಿಸುವ ಪ್ರಶ್ನೆಯೇ ಉದಿಸುವುದಿಲ್ಲ.

ಪಾದರಿ ದ್ವೇಷಭರಿತರಾಗಿ ಅಂಧರಾಗುತ್ತಾರೆ. ಯೇಸು ಕ್ರಿಸ್ತರನ್ನು ಮತ್ತು ಅವರ ತಾಯಿಯನ್ನು ನಂಬುವ ಪಾದರಿ ಅವರಿಬ್ಬರನ್ನು ತಮ್ಮ ಆಕ್ಷೇಪಗಳಿಗೆ ಗುರಿಪಡಿಸಲು ಸಿದ್ಧರಾಗುತ್ತಾರೋ? ಅವರಿಬ್ಬರನ್ನು ನಂಬದವರು ಯೇಸು ಕ್ರಿಸ್ತರ ವಾದಗಳ ಬಗ್ಗೆ ಮತ್ತು ಅವರ ತಾಯಿಯ ಚಾರಿತ್ರ್ಯದ ಬಗ್ಗೆ ಸಾಕ್ಷ್ಯಾಧಾರಗಳನ್ನು ಆವಶ್ಯಪಡಬಹುದು. ಅಂತಹ ಸಂದರ್ಭದಲ್ಲಿ ಪಾದರಿ ಪ್ರಶ್ನಿಸುವವರನ್ನು ಸಮಾಧಾನಪಡಿಸುವ ಉತ್ತರ ನೀಡಬೇಕಾಗುತ್ತದೆ.

ಪವಿತ್ರ ಖುರ್‌ಆನ್ ಸುಜ್ಞಾನ ಮತ್ತು ಸಾಕ್ಷ್ಯಾಧಾರ ಭರಿತ ಗ್ರಂಥವಾಗಿದೆ. ಸಾಕ್ಷ್ಯಾಧಾರಗಳಿಲ್ಲದೆ ಹೇಳಿಕೆ ನೀಡುವವರನ್ನು ಅದು ಆಕ್ಷೇಪಿಸುತ್ತದೆ. ವಿಶ್ವಾಸವು ಸಾಕ್ಷ್ಯಾಧಾರಗಳನ್ನು ಅವಲಂಬಿಸಬೇಕೆಂದು ಅದು ಹೇಳುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಅಲ್ಲಾಹನು ನಿರ್ಧರಿಸಿದುದು ನೆರವೇರುವಂತಾಗಲು ಹೀಗೆ ಸಂಭವಿಸಿತು – ಸಾಕ್ಷ್ಯಾಧಾರ ಮೂಲಕ ನಾಶಹೊಂದಬೇಕಾದವನು ನಾಶಹೊಂದಲಿಕ್ಕೂ ಸಾಕ್ಷ್ಯಾಧಾರ ಮೂಲಕ ಬದುಕಬೇಕಾದವನು ಬದುಕಲಿಕ್ಕೂ." (8:43)**

ಈ ವಿಷಯ ಎಷ್ಟು ವೈಭವಶಾಲಿಯಾಗಿದೆ! ಯಾರು ಸಾಕ್ಷ್ಯಾಧಾರದಿಂದ ತನ್ನ ವಾದವನ್ನು ಸಾಬೀತುಗೊಳಿಸುತ್ತಾರೋ ಅವರ ಮಾತನ್ನು ಅಂಗೀಕರಿಸಬೇಕು. ಯಾರು ಸಾಕ್ಷ್ಯಾಧಾರ ನೀಡುವುದಿಲ್ಲವೋ ಅಂತಹವನ ಹೇಳಿಕೆ ಖಂಡಿತವಾಗಿಯೂ ಅಂಗೀಕರಿಸಲ್ಪಡಲಾರದು.

ಇದು ವಿಮರ್ಶಿಸಲು ಬಹಿರಂಗ ಆಹ್ವಾನವನ್ನು ಹೊರತು ಇನ್ನೇನನ್ನು ಸೂಚಿಸುತ್ತದೆ? ಪಾದರಿ ತನ್ನ ವಾದವನ್ನು ಸಾಬೀತುಗೊಳಿಸಲು ಸಾಕ್ಷ್ಯಾಧಾರಗಳನ್ನು ತರಬೇಕಿತ್ತು. ಕೇವಲ ಆಕ್ಷೇಪಗಳನ್ನು ಮಾಡಿ ತನ್ನ ಆಕ್ಷೇಪ ಕೇವಲ ಡೊಂಬರಾಟಗಾರನ ಬುಡುಬುಡಿಕೆ ಹೊರತು ಇನ್ನೇನೂ ಅಲ್ಲ ಎಂದು ಪಾದರಿ ಸಾಬೀತುಗೊಳಿಸಿರುವರು.

ಪವಿತ್ರ ಖುರ್‌ಆನ್ ವಾದದ ಕುರಿತು ಸಾಕ್ಷ್ಯಾಧಾರ ಪರಿಶೀಲಿಸುವ ಬಗ್ಗೆ ಹೀಗೆ ಹೇಳುತ್ತದೆ:

**"ಯಹೂದ ಅಥವಾ ಕ್ರಿಸ್ತೀಯನ ಹೊರತು ಯಾರೂ ಸ್ವರ್ಗವನ್ನು ಪ್ರವೇಶಿಸಲಾರ ಎಂದು ಅವರು (ಯಹೂದಿಯರೂ ಕ್ರಿಸ್ತೀಯರೂ) ಹೇಳುತ್ತಾರೆ. ಇದು ಅವರ ವೃಥಾ ವ್ಯಾಮೋಹ ಮಾತ್ರವಾಗಿದೆ. ನೀವು ಹೇಳುವುದು ಸತ್ಯವೆಂದಾದರೆ ಪುರಾವೆ ತನ್ನಿರಿ." (2:112)**

**"ಅವರು ಅಲ್ಲಾಹನ ಹೊರತು ಬೇರೆ ದೇವರುಗಳನ್ನು ಕೈಗೊಂಡಿರುವರೇ? ಹೇಳು : ನಿಮ್ಮ ಸಾಕ್ಷ್ಯಾಧಾರ ತನ್ನಿರಿ." (21:25)**

**"ಅಥವಾ ಮೊದಲು ಸೃಷ್ಟಿಯನ್ನು ಆರಂಭಿಸಿದವನು ಮತ್ತು ಅದನ್ನು ಪುನರಾವರ್ತನೆ ಮಾಡಿದವನು ಯಾರು? ಹಾಗೂ ಆಕಾಶ ಮತ್ತು ಭೂಮಿಯಿಂದ ನಿಮಗೆ ಆಹಾರ ಒದಗಿಸಿದವನು ಯಾರು? ಅಲ್ಲಾಹನ ಜೊತೆಯಲ್ಲಿ ಬೇರೆ ದೇವರಿದ್ದಾನೆಯೇ? (ಓ ಪ್ರವಾದಿ) ಹೇಳು: ನೀವು ಸತ್ಯವಂತರೆಂದಾದರೆ ನಿಮ್ಮ ಪುರಾವೆಗಳನ್ನು ತನ್ನಿರಿ." (27:65)**

**"ಹೇಳು: ಇದು ನನ್ನ ಮಾರ್ಗವಾಗಿದೆ. ನಾನು ಅಲ್ಲಾಹನ ಕಡೆಗೆ ನಿಮ್ಮನ್ನು ಆಮಂತ್ರಿಸುತ್ತೇನೆ. ನಾನು ಮತ್ತು ನನ್ನನ್ನು ಅನುಸರಿಸುವವರು ಸಂಶಯಾತೀತ ಜ್ಞಾನವನ್ನು ಹೊಂದಿರುವೆವು." (12:109)**

ಈ ವಚನದಲ್ಲಿ ಅಲ್ಲಾಹನು ಹೀಗೆ ಸೂಚಿಸುತ್ತಾನೆ:

ಓ ಪ್ರವಾದಿ, ಅವಿಶ್ವಾಸಿಗಳೊಂದಿಗೆ ಹೇಳಿರಿ: "ನನ್ನ ಮಾರ್ಗ ನಾನು ಉಲ್ಲೇಖಿಸಿದುದಾಗಿದೆ. ನಾನು ಅಲ್ಲಾಹನ ಕಡೆಗೆ ಕರೆಯುತ್ತಿದ್ದೇನೆ. ನಾನು ಮತ್ತು ನನ್ನ ಅನುಯಾಯಿಗಳು ನಿರಾಧಾರ ವಿಷಯಗಳನ್ನು ನಂಬುವುದಿಲ್ಲ. ನಾವು ಯೋಚಿಸಿ ಖಂಡಿತ ಸಾಕ್ಷ್ಯಗಳನ್ನು ಆಧಾರವಾಗಿಟ್ಟು ಶಂಕಾತೀತವಾದ ವಿಷಯಗಳನ್ನು ನಂಬುತ್ತೇವೆ."

## ಪವಿತ್ರ ಖುರ್‌ಆನ್‌ನಲ್ಲಿ ಬದಲಾವಣೆ ಸಾಧ್ಯವಿಲ್ಲ

ಪವಿತ್ರ ಖುರ್‌ಆನ್ ಆರಂಭದಿಂದ ಅಂತ್ಯದ ತನಕ ದೇವವಾಣಿಯಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

**"ಅವರು (ಎಂದರೆ ಪೈಗಂಬರ್) ತನ್ನ ಇಚ್ಛೆಯಿಂದ ಮಾತನಾಡುವುದಿಲ್ಲ. ಇದು ಅವತೀರ್ಣಗೊಳಿಸಲ್ಪಟ್ಟ ದಿವ್ಯ ಸಂದೇಶವೇ ಹೊರತು ಬೇರೇನೂ ಅಲ್ಲ." (53:45)**

ಅಲ್ಲಾಹನ ಕಡೆಯಿಂದ ಅವತೀರ್ಣಗೊಂಡ ಪವಿತ್ರ ಖುರ್‌ಆನ್ ಪುನರುತ್ಥಾನ ತನಕದ ಸಂಭವಗಳ ವಿವರಣೆ ನೀಡುತ್ತದೆ. ಇದು ಯಾವ ರೀತಿಯಲ್ಲೂ ಕುಂದು ಕೊರತೆ ಉಳ್ಳದ್ದಾಗಿ ಗಣಿಸಲಾಗದು. ಪವಿತ್ರ ಖುರ್‌ಆನಿನ ಅದ್ವಿತೀಯ ಗುಣವಿಶೇಷಗಳು ಇವುಗಳಾಗಿವೆ:

1. ಅದರ ನಿಯಮ ಸಂಹಿತೆ ಸಾರ್ವಲೌಕಿಕವಾಗಿದೆ.
2. ಅದು ಅಂತಿಮ ನಿಯಮ ಸಂಹಿತೆ ಆಗಿದೆ.
3. ಅಂತ್ಯಕಾಲ ತನಕ ಅದು ಅನುಸರಣೆಗೆ ಯೋಗ್ಯವಾಗಿದೆ.
4. ಅದು ಯಾವುದೇ ಮಾರ್ಪಾಡಿಗೆ ಒಳಗಾಗದೆ ಸಂರಕ್ಷಿಸಲ್ಪಟ್ಟಿದೆ. ಅಂತ್ಯಕಾಲದ ತನಕ ಅದು ಹೀಗೆಯೇ ಬಾಕಿಯಾಗಿ ಉಳಿಯುವುದು.
5. ಅದು ಜ್ಞಾನ ಮತ್ತು ಜಾಣ್ಮೆಯ ಸಾಗರವಾಗಿದೆ.
6. ಅದು ಯಾವುದೇ ಆಜ್ಞೆಯನ್ನು ಬಲಾತ್ಕಾರದಿಂದ ಹೇರುವುದಿಲ್ಲ.
7. ಅದು ಪ್ರತಿಯೊಂದು ಆಜ್ಞೆಯ ಕಾರಣ ಮತ್ತು ವಾದಕ್ಕೆ ಸಾಕ್ಷ್ಯಾಧಾರ ನೀಡುತ್ತದೆ.
8. ಅದರಲ್ಲಿ ಯಾವುದೇ ನಿರರ್ಥಕ ವಿಷಯ ಪ್ರಸ್ತಾಪಿಸಲ್ಪಟ್ಟಿಲ್ಲ.
9. ಅದರಲ್ಲಿ ಯಾವುದೇ ವೈರುಧ್ಯಗಳಿಲ್ಲ.
10. ಎಲ್ಲ ವಿಧಗಳ ಅಂಧಕಾರವನ್ನು ದೂರ ಸರಿಸುವ ಪ್ರಕಾಶ ಪವಿತ್ರ ಖುರ್‌ಆನ್ ಆಗಿದೆ. ಅದು ಎಂತಹ ಸತ್ಯಾಂಶಗಳನ್ನು ಒಳಗೊಂಡಿದೆ ಎಂದರೆ ಸುಳ್ಳು ಅದರ ಮುಂದೆ ನಿಲ್ಲಲಾರದು.

ಪವಿತ್ರ ಖುರ್‌ಆನಿನ ಸತ್ಯತೆಗೆ ಅಸಂಖ್ಯಾತ ಸಾಕ್ಷ್ಯಾಧಾರಗಳಿವೆ. ಆದರೆ ಉದಾಹರಣೆಗೆ ಕೇವಲ ಮೂರು ಸಾಕ್ಷ್ಯಾಧಾರಗಳನ್ನು ನೀಡುತ್ತೇನೆ:

1. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

**"ಅವರು ಖುರ್‌ಆನಿನ ಕುರಿತು ಚಿಂತನೆ ಮಾಡುವುದಿಲ್ಲವೇ? ಅದು ಅಲ್ಲಾಹೇತರನಿಂದ ಬಂದದ್ದಾಗಿದ್ದರೆ ಖಂಡಿತವಾಗಿಯೂ ಅವರು ಅದರಲ್ಲಿ ಬಹಳ ವೈರುಧ್ಯಗಳನ್ನು ಕಾಣುತ್ತಿದ್ದರು." (4:83)**

ಈ ವಚನದಲ್ಲಿ ಪವಿತ್ರ ಖುರ್‌ಆನಿನ ಸತ್ಯತೆಗೆ ನೀಡಲಾದ ಸಾಕ್ಷ್ಯಾಧಾರವೇನೆಂದರೆ, ಅದರ ವಚನಗಳಲ್ಲಿ ಯಾವುದೇ ವೈರುಧ್ಯಗಳಿಲ್ಲ. ಈ ಗ್ರಂಥ 23 ವರ್ಷಗಳ ಕಾಲ ಒಬ್ಬ ನಿರಕ್ಷರಿ ಪ್ರವಾದಿಗೆ ಅವತೀರ್ಣಗೊಳ್ಳುತ್ತಿತ್ತು. 23 ವರ್ಷಗಳ ಕಾಲದಲ್ಲಿ ವಿದ್ಯಾ ಸಂಪನ್ನರಾದವರು ಸಹ ಎಷ್ಟೋ ವಿಷಯಗಳನ್ನು ಮರೆತುಬಿಡುತ್ತಾರೆ. ಹೀಗಿರುವಾಗ ಒಬ್ಬ ನಿರಕ್ಷರಿ ಪ್ರವಾದಿ ವೈರುಧ್ಯಗಳಿಲ್ಲದ ಗ್ರಂಥ ಸ್ವತಃ ರಚಿಸಲು ಸಾಧ್ಯವೇ?

2. ಪವಿತ್ರ ಖುರ್‌ಆನಿನ ಸತ್ಯತೆಗೆ ಇರುವ ಇನ್ನೊಂದು ಭವ್ಯ ಸಾಕ್ಷ್ಯಾಧಾರ ಇದಾಗಿದೆ:

ಅಲ್ಲಾಹನು ಹೇಳುತ್ತಾನೆ: **"ದಿಟವಾಗಿಯೂ ನಾವೇ ಈ ಉಪದೇಶವನ್ನು ಅವತೀರ್ಣಗೊಳಿಸಿದ್ದು. ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು." (ಪವಿತ್ರ ಖುರ್‌ಆನ್ 15:10)**

ಈ ವಚನವು ಹಝ್ರತ್ ಪೈಗಂಬರ್(ಸ) ಮಕ್ಕದಲ್ಲಿರುವಾಗ ಅವತೀರ್ಣಗೊಂಡಿತು. ಮಕ್ಕದ ಜೀವಿತದ ಕೊನೆಯ ವರ್ಷಗಳು ಸಹ ಬಹಳ ಅಪಾಯಕರವಾಗಿದ್ದವು. ಹಝ್ರತ್ ಪೈಗಂಬರರು ಶಿಷ್ಯರೊಂದಿಗೆ ಶುಅಬೆ ಅಬೂತಾಲಿಬ್ ಎಂಬಲ್ಲಿ ದಿಗ್‌ಬಂಧನಾವಸ್ಥೆಯಲ್ಲಿದ್ದರು. ಮುಸ್ಲಿಮರಿಗೆ ತಮ್ಮ ರಕ್ಷಣೆಗೋಸ್ಕರ ಸ್ಥಳ ಸಿಗುತ್ತಿರಲಿಲ್ಲ. ಇಂತಹ ಸ್ಥಿತಿಯಲ್ಲಿ ಅಲ್ಲಾಹನು "ನಾವೇ ಖುರ್‌ಆನಿನ ಸಂರಕ್ಷಣೆ ಮಾಡುವೆವು" ಎಂದು ಹೇಳಿದುದು ಎಷ್ಟು ಭವ್ಯ ಮಹಿಮೆ ಭರಿತ ಉಚ್ಚ ಧ್ವನಿಯಾಗಿದೆ! ಈ ವಾಕ್ಯದ ಶಕ್ತಿಯನ್ನು ಅರಬಿ ಭಾಷೆ ಬಲ್ಲವರೇ ಅರ್ಥ ಮಾಡಿಕೊಳ್ಳಬಲ್ಲರು.

ಮುಸ್ಲಿಮರು ಸ್ವತಃ ಶತ್ರುಗಳಿಂದ ಮುತ್ತಿಗೆ ಹಾಕಲ್ಪಟ್ಟಿರುವಾಗ ಅಲ್ಲಾಹನು ಶತ್ರುಗಳೊಂದಿಗೆ ಹೇಳುತ್ತಾನೆ: ನೀವು ಖುರ್‌ಆನನ್ನು ನಾಶಮಾಡಲು ನಿಮ್ಮ ಸಂಪೂರ್ಣ ಶಕ್ತಿಯನ್ನು ಬಳಸಿದರೂ ನೀವು ಅದರಲ್ಲಿ ಯಶಸ್ಸನ್ನು ಗಳಿಸಲಾರಿರಿ. ನಾವೇ ಸ್ವತಃ ಅದನ್ನು ಸಂರಕ್ಷಿಸುವೆವು.

ಹಝ್ರತ್ ಪೈಗಂಬರರು ಮತ್ತು ಅವರ ಶಿಷ್ಯರು ದಿಗ್‌ಬಂಧನದಿಂದ ಮುಕ್ತರಾಗುತ್ತಾರೆ. ಅವರಿಗೆ ಜಯ ಲಭಿಸುತ್ತದೆ. ಶಕ್ತಿಶಾಲಿಗಳಾದ ಜನರ ಒಂದು ಸಮೂಹ ಅವರೊಂದಿಗಿರುತ್ತದೆ. ಪವಿತ್ರ ಖುರ್‌ಆನ್ ಸಂರಕ್ಷಿಸಲ್ಪಡುತ್ತದೆ. ಮುಂದೆಯೂ ಸಂರಕ್ಷಿಸಲ್ಪಡುತ್ತಾ ಇರುವುದು. ಇಂತಹ ಅದ್ವಿತೀಯ ಸಂರಕ್ಷಣೆ ಲೋಕದ ಬೇರೆ ಯಾವುದಾದರೂ ಧಾರ್ಮಿಕ ಗ್ರಂಥಕ್ಕೆ ಲಭಿಸಿದೆಯೋ?

ಪವಿತ್ರ ಖುರ್‌ಆನ್ ಬಗ್ಗೆ ಸರ್ ವಿಲ್ಯಮ್ ಮ್ಯೂರ್ ಹೀಗೆ ಬರೆಯುತ್ತಾರೆ:

"ಮುಹಮ್ಮದ್ ಯಾವ ರೂಪದಲ್ಲಿ ಖುರ್‌ಆನನ್ನು ಲೋಕದ ಮುಂದೆ ಇರಿಸಿದರೋ ಅದೇ ರೂಪದಲ್ಲಿ ಇಂದು ಸಹ ಇದೆ ಎಂಬುದಕ್ಕೆ ಆಂತರಿಕ ಮತ್ತು ಬಾಹ್ಯ ಸಾಕ್ಷ್ಯಗಳು ಇವೆ. ಖುರ್‌ಆನಿನ ಪ್ರತಿಯೊಂದು ವಚನ ಮುಹಮ್ಮದರ ಕಾಲದಿಂದ ಇಂದಿನ ತನಕ ತನ್ನ ಮೂಲರೂಪದಲ್ಲಿಯೇ ಬಾಕಿಯಾಗಿ ಉಳಿದಿದೆ ಎಂದು ನಾವು ದೃಢವಾಗಿ ಹೇಳಬಲ್ಲೆವು." ("ಲೈಫ್ ಆಫ್ ಮುಹಮ್ಮದ್")

ಜರ್ಮನಿಯ ಪ್ರಸಿದ್ಧ ಕ್ರೈಸ್ತ ಸಂಶೋಧಕ ನೋಲ್ ಡೀಕ್ ಪವಿತ್ರ ಖುರ್‌ಆನ್ ಬಗ್ಗೆ ಹೀಗೆ ಹೇಳುತ್ತಾರೆ:

"ಖುರ್‌ಆನಿನಲ್ಲಿ ಹಸ್ತಕ್ಷೇಪವಾಗಿರುವುದರ ಕುರಿತು ಸಂಶೋಧನೆ ನಡೆಸಿದ ಪಾಶ್ಚಿಮಾತ್ಯ ವಿದ್ವಾಂಸರು ಅದನ್ನು ಸಾಬೀತುಗೊಳಿಸಲು ಸಂಪೂರ್ಣವಾಗಿ ಅಸಮರ್ಥರಾದರು." (ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ - ಶೀರ್ಷಿಕೆ "ಖುರ್‌ಆನ್")

ಪವಿತ್ರ ಖುರ್‌ಆನಿನ ಎದುರಿಗೆ ಸುವಾರ್ತೆಗಳ ಸ್ಥಾನದ ಬಗ್ಗೆ ಪವಿತ್ರ ಖುರ್‌ಆನಿನ ವಿರೋಧಿಯೂ ಸುವಾರ್ತೆಗಳನ್ನು ನಂಬುವವನೂ ಆಗಿದ್ದ ಸರ್ ವಿಲ್ಯಮ್ ಮ್ಯೂರ್ ಹೀಗೆ ಹೇಳುತ್ತಾರೆ:

"ಹಸ್ತಕ್ಷೇಪಕ್ಕೊಳಗಾಗದ ಮತ್ತು ಬದಲಾವಣೆಗೆ ಪಾತ್ರವಾಗದ ಮುಸ್ಲಿಮರ ಗ್ರಂಥ ಮತ್ತು ನಮ್ಮ ಗ್ರಂಥಗಳ ವಿವಿಧ ಪ್ರತಿಗಳ ಪರಸ್ಪರ ವೈರುದ್ಧ್ಯಗಳನ್ನು ಹೋಲಿಸಿ ಹೇಳುವುದು ಪರಸ್ಪರ ಸಾಮ್ಯತೆ ಇಲ್ಲದ ಎರಡು ವಸ್ತುಗಳನ್ನು ಹೋಲಿಸಿ ಹೇಳುವಂತೆಯೇ ಆಗಿದೆ." (ಲೈಫ್ ಆಫ್ ಮುಹಮ್ಮದ್)

೩. ಪವಿತ್ರ ಖುರ್‌ಆನಿನ ಸತ್ಯತೆಗೆ ಇರುವ ಒಂದು ಭವ್ಯ ಸಾಕ್ಷ್ಯಾಧಾರ ಇದಾಗಿದೆ:

ಪವಿತ್ರ ಖುರ್‌ಆನ್ ಲೋಕಕ್ಕೆ ಹೀಗೆ ಪಂಥಾಹ್ವಾನ ನೀಡಿದೆ:

**"ಹೇಳು ಈ ಖುರ್‌ಆನಿಗೆ ಸಮಾನವಾದ ಮತ್ತೊಂದನ್ನು ತರಲಿಕ್ಕಾಗಿ 'ಇನ್ಸ್' ಮತ್ತು 'ಜಿನ್ನ್' ಒಟ್ಟು ಸೇರಿ ಪ್ರಯತ್ನಿಸಿದರೂ ಅವರು ಪರಸ್ಪರ ಸಹಾಯ ಮಾಡಿದರೂ - ಅದಕ್ಕೆ ಸಮಾನವಾದುದನ್ನು ತರಲಿಕ್ಕೆ ಅವರಿಂದ ಸಾಧ್ಯವಿಲ್ಲ." (17:89)**

ಈ ಪಂಥಾಹ್ವಾನ ನೀಡಿ ಒಂದೂವರೆ ಸಾವಿರ ವರ್ಷಗಳು ದಾಟಿಹೋದರೂ ಸಾವಿರಾರು ವಿರೋಧಿಗಳು ಪವಿತ್ರ ಖುರ್‌ಆನನ್ನು ಆಕ್ಷೇಪಿಸಿದರೂ ಇಂದಿನ ತನಕ ಈ ಪಂಥಾಹ್ವಾನವನ್ನು ಅಂಗೀಕರಿಸಿ ಮುಂದೆ ಬರಲು ಯಾರಿಗೂ ಸಾಧ್ಯವಾಗಿಲ್ಲ. ಪವಿತ್ರ ಖುರ್‌ಆನ್ ಅಲ್ಲಾಹನ ವಾಣಿ ಎಂಬುದು ಹಗಲು ಬೆಳಕಿನ ಹಾಗೆ ಸ್ಪಷ್ಟವಾಗಿದೆ. ಅಲ್ಲಾಹನ ವಚನದಲ್ಲಿ ಬದಲಾವಣೆ ಮಾಡಲು ಸಾಧ್ಯವಿಲ್ಲ.

ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್[ರ] ಹೀಗೆ ಹೇಳುತ್ತಾರೆ:

"ಪವಿತ್ರ ಖುರ್‌ಆನ್ ಅವತೀರ್ಣಗೊಂಡು ಹದಿಮೂರು ನೂರಕ್ಕಿಂತ ಹೆಚ್ಚು ವರ್ಷಗಳು ದಾಟಿಹೋಗಿವೆ. ಅದರ ಉಪದೇಶಗಳು ಇಂದಿನ ತನಕ ಅನುಷ್ಠಾನಕ್ಕೆ ತರಲು ಯೋಗ್ಯವಾಗಿವೆ. ಇನ್ನು ಮುಂದೆ ಸಹ ಅನುಷ್ಠಾನಯೋಗ್ಯವಾಗಿ ಮುಂದುವರಿಯುವುವು. ಯಾವ ಗ್ರಂಥವು ಅಲ್ಲಾಹನಿಂದ ಅವತೀರ್ಣಗೊಂಡಿಲ್ಲವೋ ಅದು ಇಂದು ಬರೆಯಲ್ಪಟ್ಟರೆ ನಾಳೆ ಅದರ ಬಗ್ಗೆ ಅದನ್ನು ನಂಬುವವರೇ ವಿರೋಧ ಸೂಚಿಸುತ್ತಾರೆ. ಅದರ ಉಪದೇಶಗಳ ಅನುಷ್ಠಾನ ನಿಂತುಹೋಗುತ್ತದೆ. ಆದರೆ ಪವಿತ್ರ ಖುರ್‌ಆನಿನ ಉಪದೇಶಗಳನ್ನು ಅದರ ಅನುಯಾಯಿಗಳು ಪಾಲಿಸುತ್ತಾ ಇರುತ್ತಾರೆ. ಅದನ್ನು ಬಿಟ್ಟು ಹೋಗುತ್ತಾ ಇದ್ದವರು ಸಹ ಈಗ ಪುನಃ ಅದರ ಕಡೆಗೆ ಮರಳಿ ಬರುತ್ತಿದ್ದಾರೆ. ಯುರೋಪಿಯನ್ ಸಂಸ್ಕೃತಿಯ ಅಭಿಮಾನಿಗಳು ಅದರ ಬಾಹ್ಯ ಸೌಂದರ್ಯದ ಕಹಿಯನ್ನು ಅನುಭವಿಸಿದ ನಂತರ ಪವಿತ್ರ ಖುರ್‌ಆನಿನ ನಿಖರ ಉಪದೇಶಗಳ ಚೆಲುವನ್ನು ಕಂಡುಕೊಳ್ಳುತ್ತಾ ಇದ್ದಾರೆ. ಹಂದಿಮಾಂಸ ನಿಷಿದ್ಧಗೊಳಿಸುವಿಕೆ, ಮದ್ಯಪಾನ ನಿಷೇಧ, ಬಹುಭಾರ್ಯತ್ವ, ವಿವಾಹ ವಿಚ್ಛೇದನೆ, ಪುರುಷರು ಮತ್ತು ಮಹಿಳೆಯರು ಒಂದೇ ಸ್ಥಳದಲ್ಲಿ ಜಮಾಯಿಸುವಾಗ ಕೈಗೊಳ್ಳಬೇಕಾದ ಜಾಗರೂಕತೆ, ವಾರೀಸು ಹಕ್ಕುಗಳು ಮೊದಲಾದವುಗಳಿಗೆ ಸಂಬಂಧಿಸಿ ಪವಿತ್ರ ಖುರ್‌ಆನ್ ಪ್ರತಿಪಾದಿಸುವ ತತ್ವಗಳ ಶ್ರೇಷ್ಠತೆಯನ್ನು ಲೋಕವು ಅಂಗೀಕರಿಸಲು ನಿರ್ಬಂಧಿತವಾಗುತ್ತಿದೆ. ಪವಿತ್ರ ಖುರ್‌ಆನ್ ಪ್ರತಿಪಾದಿಸುವ ತತ್ವಗಳ ಶ್ರೇಷ್ಠತೆಯನ್ನು ಲೋಕವು ಅಂಗೀಕರಿಸಲು ನಿರ್ಬಂಧಿತವಾಗುತ್ತಿದೆ. ಪವಿತ್ರ ಖುರ್‌ಆನಿನ ಬಾಳ್ವಿಕೆ ನಮ್ಮ ದೃಷ್ಟಿಯಲ್ಲಿ ಅಂತ್ಯದಿನದ ತನಕವಾಗಿದೆ. ಇಸ್ಲಾಮಿನ ವಿರೋಧಿಗಳ ದೃಷ್ಟಿಯಲ್ಲೂ ಅದರ ಉಪದೇಶಗಳ ಬಾಳ್ವಿಕೆ ದೀರ್ಘವಾಗುತ್ತಾ ಇರುವುದು ಕಂಡು ಬರುತ್ತದೆ." (ತಫ್‌ಸೀರ್ ಕಬೀರ್ - ಸಂಪುಟ ೩, ಪುಟ 471)

## ಪ್ರಶ್ನೆ 7ರ ಉತ್ತರ

ಸರಕಾರದ ಬಗ್ಗೆ ಇಸ್ಲಾಮಿನ ನಿಲುವು ಅತ್ಯಂತ ಸುವ್ಯವಸ್ಥೆಯಿಂದ ಕೂಡಿದುದೂ ಪರಿಶುದ್ಧವೂ ಶಾಂತಿ ಪ್ರದಾನ ಮಾಡುವಂತಹದ್ದೂ ಎಲ್ಲಾ ವಿಧ ಒಳಿತುಗಳಿಂದ ತುಂಬಿದುದೂ ಎಲ್ಲಾ ವಿಧ ಕೆಡುಕುಗಳಿಂದ ಮುಕ್ತವೂ ಆಗಿದೆ. ಇಂದಿನ ಕಾಲದ ಪ್ರಜಾಪ್ರಭುತ್ವವು ಅದರೆದುರಿಗೆ ಯಾವುದೇ ಸ್ಥಾನವನ್ನು ಪಡೆಯುವುದಿಲ್ಲ. ಸರಕಾರದ ಬಗ್ಗೆ ಇಸ್ಲಾಮಿನ ನಿಲುವನ್ನು ಪರಾಂಬರಿಸಿ ಅದರೊಂದಿಗೆ ಇಂದಿನ ಪ್ರಜಾಪ್ರಭುತ್ವವನ್ನು ಹೋಲಿಸಿ ನೋಡಿರಿ.

1. ಇಸ್ಲಾಮಿನ ನಿಲುವು ಹೀಗಿದೆ: ಭೂಮ್ಯಾಕಾಶಗಳಲ್ಲಿ ಇರುವುದೆಲ್ಲವೂ ಅಲ್ಲಾಹನಿಗೆ ಸೇರಿವೆ. ದೊರೆತನ ಮತ್ತು

ಆಡಳಿತಾಧಿಕಾರ ಅವನ ವತಿಯಿಂದಲೇ ದೊರಕುತ್ತದೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಹೇಳಿರಿ: ಸರ್ವಾಧಿಪತ್ಯದ ಪ್ರಭುವಾದ ಅಲ್ಲಾಹನೇ, ನೀನು ಬಯಸುವವರಿಗೆ ಆಧಿಪತ್ಯ ನೀಡುತ್ತಿ. ನೀನು ಬಯಸುವವರಿಂದ ಅಧಿಕಾರ ಕಿತ್ತುಕೊಳ್ಳುತ್ತಿ. ನೀನು ಬಯಸುವವರಿಗೆ ಉನ್ನತ ಸ್ಥಾನವನ್ನು ನೀಡುತ್ತಿ. ನೀನು ಬಯಸುವವರನ್ನು ಅಪಮಾನಿತರಾಗಿ ಮಾಡುತ್ತಿ. ಎಲ್ಲ ಒಳಿತುಗಳು ನಿನ್ನ ಕೈಯಲ್ಲಿವೆ. ನಿಸ್ಸಂದೇಹವಾಗಿಯೂ ನೀನು ಎಲ್ಲ ಕಾರ್ಯಗಳಲ್ಲೂ ಸರ್ವಸಮರ್ಥನಾಗಿರುವೆ." (3:27)**

ಇಸ್ಲಾಮಿನ ದೃಷ್ಟಿಕೋನದಲ್ಲಿ ಅಧಿಕಾರದ ಹುದ್ದೆ ಯಾವುದೇ ವೈಯಕ್ತಿಕ ಜಹಗೀರು ಅಲ್ಲ. ಅದು ಸರ್ವಶಕ್ತನಿಂದ ದೊರಕುವ ಒಂದು ವಿಶ್ವಸ್ತನಿಧಿ (ಅಮಾನತ್) ಆಗಿದೆ. ಅದು ಯಾರಿಗೆ ದೊರಕುತ್ತದೋ ಅವನು ಅದನ್ನು ಸಂರಕ್ಷಿಸಬೇಕು. ಅದಕ್ಕೆ ಸಂಬಂಧಿಸಿ ವಂಚನೆಯಿಂದ ವರ್ತಿಸಬಾರದು.

2. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಸಹ ಹೇಳಿದ್ದಾನೆ:

**"ಖಂಡಿತವಾಗಿಯೂ ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕೆಂದೂ ಜನರೆಡೆಯಲ್ಲಿ ನೀವು ತೀರ್ಪು ನೀಡುವಾಗ ನ್ಯಾಯಯುತವಾಗಿ ತೀರ್ಪು ನೀಡಬೇಕೆಂದೂ ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ." (4:59)**

ಗಿಬ್ಬನ್ ಒಬ್ಬ ಪ್ರಸಿದ್ಧ ಪಾಶ್ಚಿಮಾತ್ಯ ಚರಿತ್ರೆಗಾರನಾಗಿದ್ದನು. ಅವನು ಬರೆದ ರೋಮನ್ ಸಾಮ್ರಾಜ್ಯದ ಅವನತಿ ಮತ್ತು ಪತನ ಎಂಬ ಗ್ರಂಥದಲ್ಲಿ ಅಲಪ್ ಅರ್‌ಸಲಾನನ ಪುತ್ರ ಮಲಿಕ್ ಶಾ ಬಗ್ಗೆ ಹೀಗೆ ಬರೆದಿರುವನು: "ಮಲಿಕ್ ಶಾ ಚಿಕ್ಕ ವಯಸ್ಸಿನವನಾಗಿರುವಾಗ ಅವನ ಪಿತ ನಿಧನ ಹೊಂದಿದನು. ಆಗ ಮಲಿಕ್ ಶಾನ ಒಬ್ಬ ಚಿಕ್ಕಪ್ಪ, ಒಬ್ಬ ಚಿಕ್ಕಪ್ಪನ ಮಗ ಮತ್ತು ಒಬ್ಬ ಸಹೋದರ ದೊರೆತನಕ್ಕೋಸ್ಕರ ವಾದಿಸಿದರು. ಆಗ ಪರಸ್ಪರರ ವಿರುದ್ಧ ಆಂತರಿಕ ಯುದ್ಧ ಪ್ರಾರಂಭವಾಯಿತು. ನಿಝಾಮುದ್ದೀನ್ ತೂಸೀ ಮಲಿಕ್ ಶಾರ ಪ್ರಧಾನ ಮಂತ್ರಿ ಆಗಿದ್ದರು. ಅವರು ಶಿಯಾ ಪಂಥದವರಾಗಿದ್ದುದರಿಂದ ಇಮಾಮ್ ಮೂಸಾ ರಿಝಾ ಎಂಬ ಸಂತರ ಗೋರಿಯ ಸಮೀಪಕ್ಕೆ ಹೋಗಿ ಯುದ್ಧದಲ್ಲಿ ತನ್ನ ಜಯಕ್ಕೋಸ್ಕರ ಮಲಿಕ್ ಶಾ ಪ್ರಾರ್ಥಿಸಬೇಕೆಂದು ಅಪೇಕ್ಷಿಸಿದರು. ಮಲಿಕ್ ಶಾ ದರ್ಗಕ್ಕೆ ಹೋಗಿ ಪ್ರಾರ್ಥಿಸಿದರು. ಪ್ರಾರ್ಥನೆ ಮುಗಿಸಿದ ನಂತರ ಮಲಿಕ್ ಶಾ ನಿಝಾಮುದ್ದೀನ್‌ರೊಂದಿಗೆ 'ನೀವು ಏನೆಂದು ಪ್ರಾರ್ಥಿಸಿರಿದಿರಿ' ಎಂದು ಕೇಳಿದರು. ಅವರು ಹೇಳಿದರು: 'ನಿಮಗೆ ಜಯವನ್ನು ದಯಪಾಲಿಸಲು ನಾನು ದೇವನನ್ನು ಬೇಡಿಕೊಂಡೆನು' ಆಗ ಮಲಿಕ್ ಶಾ ಹೀಗೆ ಹೇಳಿದರು: 'ನಾನು ಹೀಗೆ ಪ್ರಾರ್ಥಿಸಿದೆ-ನನ್ನ ಸಹೋದರ ಮುಸ್ಲಿಮರ ಮೇಲೆ ಆಡಳಿತೆ ನಡೆಸಲು ನನಗಿಂತ ಹೆಚ್ಚು ಯೋಗ್ಯನಾಗಿದ್ದರೆ ಅವನಿಗೆ ಜಯ ನೀಡು. ನನ್ನ ಜೀವ ಮತ್ತು ನನ್ನ ಕಿರೀಟ ನನ್ನಿಂದ ತೆಗೆದುಬಿಡು. ನಾನು ಈ ಅಮಾನತನ್ನು ಹೆಚ್ಚು ಉತ್ತಮವಾಗಿ ಸಂರಕ್ಷಿಸಲು ಸಾಮರ್ಥ್ಯವುಳ್ಳವನಾದರೆ ನನಗೆ ಜಯವನ್ನು ನೀಡು.'

ಗಿಬ್ಬನ್ ಅತ್ಯಂತ ದ್ವೇಷಭರಿತ ಚರಿತ್ರೆಗಾರನಾಗಿದ್ದನು. ಆದರೆ ಅವನು ಮೇಲೆ ವಿವರಿಸಿದ ಘಟನೆ ಬಗ್ಗೆ ಹೀಗೆ ಬರೆಯುತ್ತಾನೆ:

"ಯುವಕನಾದ ಈ ಮುಸ್ಲಿಮ್ ರಾಜಕುಮಾರನ ಈ ಮಾತಿಗಿಂತ ಹೆಚ್ಚು ಪರಿಶುದ್ಧವೂ ಹೆಚ್ಚು ವಿಶಾಲ ದೃಷ್ಟಿಕೋನವನ್ನು ಹೊಂದಿದುದೂ ಆದ ಮಾತು ಚರಿತ್ರೆಯ ಹಾಳೆಗಳಲ್ಲಿ ಹುಡುಕಿ ಕಂಡುಹಿಡಿಯುವುದು ಅಸಾಧ್ಯವಾಗಿದೆ. ವೃದ್ಧರಾದ ಕ್ರೈಸ್ತ ದೊರೆಗಳು ಕೂಡ ಇಂತಹ ಉತ್ತಮ ಸ್ವಭಾವಗುಣವನ್ನು ಪ್ರಕಟಿಸಲಾರರು. ಮುಸ್ಲಿಮರಲ್ಲಿ ಇಂತಹ ಮನೋಭಾವ ಉಂಟಾಗಲು ಕಾರಣವೇನೆಂದರೆ, 'ಅಧಿಕಾರವು ಒಂದು ಅಮಾನತ್ (ವಿಶ್ವಸ್ತ ನಿಧಿ) ಆಗಿದೆ. ನೀವು ಅಮಾನತನ್ನು (ವಿಶ್ವಸ್ತ ನಿಧಿಯನ್ನು) ಸಂರಕ್ಷಿಸಬೇಕು. ವಂಚನೆ ಮಾಡಬಾರದು ಎಂದು ಇಸ್ಲಾಮ್ ಅವರ ಮನಸ್ಸಿನಲ್ಲಿ ಬಹಳ ಶಕ್ತಿಯುತವಾಗಿ ಕೇಂದ್ರೀಕರಿಸಿತ್ತು." (ತಫ್‌ಸೀರ್ ಕಬೀರ್ – ಸಂಪುಟ 6, ಪುಟ 132)

3. ರೊಟ್ಟಿ, ಬಟ್ಟೆ ಮತ್ತು ಮನೆಯ ಬಗ್ಗೆ ಈಗ ಬೊಬ್ಬೆ ಹಾಕುತ್ತಾರೆ. ಆದರೆ ಪವಿತ್ರ ಖುರ್‌ಆನ್ ಮಾನವರ ಮೂಲಭೂತ ಆವಶ್ಯಕತೆಗಳ ಕುರಿತು ಒಂದೂವರೆ ಸಾವಿರ ವರ್ಷಗಳ ಹಿಂದೆಯೇ ಜನರ ಗಮನವನ್ನು ಹರಿಸಿದೆ.

**"ಇಲ್ಲಿ ನಿನಗೆ ಹಸಿವೆ ಮತ್ತು ನಗ್ನತೆಯ ಬಾಧೆ ತಟ್ಟದು. ಬಾಯಾರಿಕೆ ಮತ್ತು ಬಿಸಿಲ ಬೇಗೆಗೆ ಕೂಡ ನೀನು ತುತ್ತಾಗಲಾರೆ." (20 : 119, 120)**

ಈ ಕಾಲದ ಬುದ್ಧಿಶಾಲಿಗಳ ದೃಷ್ಟಿ ಕೆಲವು ವರ್ಷಗಳ ಹಿಂದಿನ ತನಕ ನೀರಿನ ಕಡೆಗೆ ಬಿದ್ದಿರಲಿಲ್ಲ. ಇಂದು ನೀರಿನ ಮಹತ್ವ ಮತ್ತು ಅದರ ಮೌಲ್ಯ ಮಾಪನ ಬಗ್ಗೆ ಗಮನಿಸಲಾಗುತ್ತಿದೆ. ಸಕಲ ರಹಸ್ಯಗಳನ್ನು ಬಲ್ಲ ಅಲ್ಲಾಹನು ರೊಟ್ಟಿ, ಬಟ್ಟೆ, ಮನೆಯೊಂದಿಗೆ ನೀರನ್ನು ಸಹ ಮಾನವರ ಮೂಲಭೂತ ಆವಶ್ಯಕತೆಗಳೊಂದಿಗೆ ಸೇರಿಸಿದ್ದಾನೆ. ಇವು ನಾಗರಿಕರ ಹಕ್ಕುಗಳಾಗಿವೆ. ಸರಕಾರ ಅವುಗಳನ್ನು ಈಡೇರಿಸಬೇಕೆಂದು ಹೇಳುತ್ತಾನೆ.

4. ಇಸ್ಲಾಮ್, ನೀವು ಹುದ್ದೆಯನ್ನು ಬೇಡಿಕೊಳ್ಳಬೇಡಿರೆಂದು ಹೇಳುತ್ತದೆ. ಹಝ್ರತ್ ಪೈಗಂಬರರು(ಸ) ಹುದ್ದೆಗಳನ್ನು ಬೇಡಿಕೊಳ್ಳುವುದನ್ನೂ ಅಪೇಕ್ಷಿಸುವುದನ್ನೂ ನಿಷಿದ್ಧಗೊಳಿಸಿರುವರು. ತನ್ನನ್ನು ಸ್ವತಃ ಹುದ್ದೆಗಾಗಿ ಮುಂದೊಡ್ಡುವುದನ್ನು ಮತ್ತು ಬೇರೆ ಒಬ್ಬನೊಂದಿಗೆ "ನನ್ನನ್ನು ಹುದ್ದೆಗೋಸ್ಕರ ಸೂಚಿಸಿರಿ" ಎಂದು ಹೇಳುವುದು ಕೂಡ ನಿಷಿದ್ಧವಾಗಿದೆ.

5. ಕರಾರುಗಳ (ಒಪ್ಪಂದಗಳ) ಪಾಲನೆಯ ಬಗ್ಗೆ ಇಸ್ಲಾಮ್ ಆಗ್ರಹಪಡಿಸುತ್ತದೆ. ಒಪ್ಪಂದಗಳನ್ನು ಭಂಗಪಡಿಸುವುದು

ಅತ್ಯಂತ ಹೀನ ಕೃತ್ಯವಾಗಿದೆ. ಅದರಿಂದ ಶಾಂತಿ ಭಂಗವಾಗುತ್ತದೆ.

ಅಲ್ಲಾಹನು ಪವಿತ್ರ ಖುರ್‌ಅನಿನಲ್ಲಿ ಹೀಗೆ ಹೇಳಿದ್ದಾನೆ:

**"ಓ ಸತ್ಯವಿಶ್ವಾಸಿಗಳೇ, ನೀವು ಕರಾರುಗಳನ್ನು (ಒಪ್ಪಂದಗಳನ್ನು) ಪಾಲಿಸಿರಿ."** (5:12)

**"ನೀವು ಕರಾರನ್ನು ಪಾಲಿಸಿರಿ. ಏಕೆಂದರೆ ಕರಾರಿನ ಬಗ್ಗೆ ಪ್ರಶ್ನಿಸಲಾಗುವುದು."** (17:35)

**"ಹಾಗಲ್ಲ, ಯಾವೊಬ್ಬನು ತನ್ನ ಕರಾರನ್ನು ಪಾಲಿಸಿ ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳುತ್ತಾನೋ (ಆತನು ಸಾತ್ವಿಕನು). ದಿಟವಾಗಿಯೂ ಅಲ್ಲಾಹನು ಭಯಭಕ್ತಿಯುಳ್ಳವರನ್ನು ಪ್ರೀತಿಸುತ್ತಾನೆ."** (3:77)

6. ಸರಕಾರದ ಪ್ರಮುಖ ವ್ಯವಹಾರಗಳನ್ನು ಸಮಾಲೋಚನೆ ಮಾಡಿದ ಬಳಿಕ ನಡೆಸಬೇಕು. ಹಝ್ರತ್ ಪೈಗಂಬರರಿಗೆ(ಸ) ಹೀಗೆ ಅಲ್ಲಾಹನು ಆಜ್ಞಾಪಿಸಿದನು:

**"ಪ್ರಧಾನ ಕಾರ್ಯಗಳಲ್ಲಿ ಅವರೊಡನೆ ಸಮಾಲೋಚಿಸು."** (ಪವಿತ್ರ ಖುರ್‌ಆನ್ 3:160)

ಕಂದಕ ಯುದ್ಧದ ಮೊದಲು ಹಝ್ರತ್ ಪೈಗಂಬರರು(ಸ) ಸಲ್ಮಾನ್ ಫಾರಿಸೀ(ರ) ಅವರೊಂದಿಗೆ ಸಮಾಲೋಚನೆ ನಡೆಸಿ ಅವರ ಸಲಹೆ ಮೇರೆಗೆ ಕಂದಕವನ್ನು ತೋಡಿದ್ದರು.

ಸರಕಾರದ ಆಡಳಿತೆಯ ಬಗ್ಗೆ ಇಸ್ಲಾಮ್ ಸೂಚಿಸುವ ಪ್ರಮುಖ ತತ್ವಗಳನ್ನು ಮೇಲೆ ಬರೆಯಲಾಗಿದೆ. ಸರಕಾರ ಯಾವುದೇ ರೀತಿಯಲ್ಲಿದ್ದರೂ ಆ ಸರಕಾರಗಳೆಲ್ಲಾ ಮೇಲಿನ ತತ್ವಗಳನ್ನು ಅನಿವಾರ್ಯವಾಗಿ ಪಾಲನೆ ಮಾಡಬೇಕು. ಇಸ್ಲಾಮ್ ಸರಕಾರದ ಬಗ್ಗೆ ಹೊಂದಿರುವ ನಿಲುವು ಕೆಲವು ವಿಷಯಗಳಲ್ಲಿ ಪ್ರಜಾಪ್ರಭುತ್ವದೊಂದಿಗೆ ನಿಶ್ಚಯವಾಗಿಯೂ ಸಮನ್ವಯ ಹೊಂದಿದೆ. ಆದರೆ ಅದು ಪ್ರಜಾಪ್ರಭುತ್ವಕ್ಕಿಂತ ಹೆಚ್ಚು ಭವ್ಯವೂ ಹೆಚ್ಚು ಉತ್ತಮವೂ ಆಗಿದೆ. ವಾಸ್ತವಿಕವಾಗಿ ಪಾಶ್ಚಿಮಾತ್ಯ ದೇಶಗಳು ಪ್ರಜಾಪ್ರಭುತ್ವವನ್ನು ಇಸ್ಲಾಮ್‌ನಿಂದಲೇ ಕಲಿತರು. ಅವರು ಅನೇಕ ಇಸ್ಲಾಮೀ ಉಪದೇಶಗಳನ್ನು ಅನುಸರಿಸಲು ನಿರ್ಬಂಧಿತರೂ ಆದರು.

ಕ್ರೈಸ್ತ ಧರ್ಮ ಪ್ರತಿಪಾದಿಸುವ ಮೃದು ವರ್ತನೆಯ ಉಪದೇಶವನ್ನು ಇಂದಿನ ತನಕ ಅನುಸರಿಸಲು ಎಂದೂ ಕ್ರೈಸ್ತ ಜನತೆಗೆ ಭಾಗ್ಯ ದೊರೆತಿಲ್ಲ. ಇನ್ನೊಂದು ಕೆನ್ನೆಯನ್ನು ಒಡ್ಡುವುದಕ್ಕೆ ಪ್ರತಿಯಾಗಿ ಅವರ ದ್ವೇಷಾಗ್ನಿ ಎಷ್ಟು ಪ್ರಜ್ವಲಿಸುತ್ತದೆ ಎಂದರೆ ವಿರೋಧಿಗಳನ್ನು ಭಸ್ಮಗೊಳಿಸಲು ಅವರು ಇಚ್ಛಿಸುತ್ತಾರೆ. ಅವರು ಪರಸ್ಪರ ಅನ್ಯೋನ್ಯ ಮೃದುವಾಗಿ ವರ್ತಿಸಿ ನ್ಯಾಯ ಬದ್ಧವಾಗಿ ನಡೆಯುವವರಾದರೂ ಅನ್ಯರ ವಿರುದ್ಧ ಘೋರ ಅಪರಾಧಗಳನ್ನು ಮಾಡುವುದರಲ್ಲಿ ಅವರಿಗೆ ಯಾವುದೇ ನಾಚಿಕೆ ಇರುವುದಿಲ್ಲ. ಆದರೆ ಇಸ್ಲಾಮ್, ನೀವು ಶತ್ರುಗಳೊಂದಿಗೆ ಕೂಡ ನ್ಯಾಯನಿಷ್ಠರಾಗಿ ವರ್ತಿಸಿರಿ ಎಂದು ಹೇಳುತ್ತದೆ. (ಪವಿತ್ರ ಖುರ್‌ಆನ್ 5:9)

ಪುನಃ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಕೆಡುಕಿಗಿರುವ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ. ಆದರೆ ಯಾರಾದರೂ ಕ್ಷಮೆ ನೀಡಿದರೆ (ಮತ್ತು ಅದರ ಪರಿಣಾಮವಾಗಿ) ಒಳಿತು ಉಂಟಾಗುವುದಾದರೆ ಅದರ ಪ್ರತಿಫಲ ಅವನಿಗೆ ಅಲ್ಲಾಹನಿಂದ ದೊರಕುವುದು. ದಿಟವಾಗಿಯೂ ಅವನು ದುಷ್ಕರ್ಮಿಗಳನ್ನು ಪ್ರೀತಿಸುವುದಿಲ್ಲ."** (42:41)

ಮೇಲಿನ ಉಪದೇಶಗಳನ್ನು ಕ್ರೈಸ್ತ ಧರ್ಮದ ಮೃದು ವರ್ತನೆಯ ಉಪದೇಶದೊಂದಿಗೆ ಹೋಲಿಸಿ ನೋಡಿರಿ. ಇಸ್ಲಾಮಿನ ಉಪದೇಶಗಳನ್ನು ಕಳೆದ ಒಂದೂವರೆ ಸಾವಿರ ವರ್ಷಗಳಲ್ಲಿ ಪಾಲನೆ ಮಾಡಲಾಗುತ್ತಿದೆ. ಲೋಕಾಂತ್ಯದವರೆಗೂ ಅದು ಪಾಲಿಸಲ್ಪಡುವುದು. ಆದರೆ ಕ್ರೈಸ್ತ ಧರ್ಮದ ಮೃದು ವರ್ತನೆಯ ಉಪದೇಶವನ್ನು ಹಿಂದೆ ಉಪೇಕ್ಷಿಸಿದ ಹಾಗೆ ಇಂದು ಸಹ ಉಪೇಕ್ಷಿಸಿ ತಿರಸ್ಕರಿಸಲಾಗುತ್ತಿದೆ. ಮುಂದೆ ಸಹ ಹಾಗೆಯೇ ಆಗುವುದು. ಕ್ರೈಸ್ತ ಧರ್ಮೀಯರಿಗೆ ಅವರ ಧರ್ಮದ ಉಪದೇಶವನ್ನು ಪಾಲಿಸುವ ಭಾಗ್ಯ ಇಂದಿನ ತನಕ ದೊರೆತಿಲ್ಲ.

## ಇಸ್ಲಾಮ್ ಮಾತ್ರ ಮಹಿಳೆಗೆ ಸರಿಯಾದ ಸ್ಥಾನಮಾನವನ್ನು ದಯಪಾಲಿಸಿತು

ಮಹಿಳೆಯರನ್ನು ಅಪಮಾನ ಮತ್ತು ಹೀನ ಸ್ಥಿತಿಯಿಂದ ಮೇಲಕ್ಕೆತ್ತಿ ಅತ್ಯಂತ ಗೌರವದ ಸ್ಥಾನಮಾನಗಳನ್ನು ನೀಡಿದ ಏಕಮಾತ್ರ (ಹೌದು, ಏಕಮಾತ್ರ) ಧರ್ಮ ಇಸ್ಲಾಮ್ ಆಗಿದೆ. ಮಹಿಳೆಗೆ ಎಲ್ಲಾ ವಿಧ ಹಕ್ಕುಗಳನ್ನು ನೀಡಲಾಯಿತು. ಅವರನ್ನು ಸಮಾಜದಲ್ಲಿ ಪುರುಷನಿಗೆ ಸಮಾನವಾಗಿ ನಿಲ್ಲಿಸಲಾಯಿತು. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ:

**"ಖಂಡಿತವಾಗಿಯೂ ನಿಮ್ಮ ಪೈಕಿ ಪುರುಷನಾಗಲಿ, ಸ್ತ್ರೀಯರಾಗಲಿ, ಯಾರ ಕರ್ಮವನ್ನೂ ನಾನು ನಿಷ್ಫಲಗೊಳಿಸಲಾರೆ."** (3:196)

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು: **"ಸ್ವರ್ಗವು ನಿಮ್ಮ ತಾಯಂದಿರ ಪಾದಗಳಡಿಯಲ್ಲಿದೆ."**

ಯಾವುದೇ ಧರ್ಮವು ತಾಯಿಯ ಪದವಿಯನ್ನು ಇಷ್ಟು ಉನ್ನತಗೊಳಿಸಿಲ್ಲ. ಹೆಣ್ಣು ಮಕ್ಕಳ ಕುರಿತು ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು:

**"ಯಾರು ತಮ್ಮ ಎರಡು ಪುತ್ರಿಯರನ್ನು ಚೆನ್ನಾಗಿ ಪಾಲನೆ ಪೋಷಣೆ ಮಾಡುತ್ತಾರೋ, ಉತ್ತಮ ಸ್ವಭಾವ ಗುಣಗಳನ್ನು**

**ಕಲಿಸುತ್ತಾರೋ ಮತ್ತು ಅವರಿಗೆ ಮದುವೆ ಮಾಡಿಸುತ್ತಾರೋ ಅವರು ಸ್ವರ್ಗವನ್ನು ಗಳಿಸುವರು."**

ತಾಯಿಗೆ ಮಕ್ಕಳ ಸ್ವತ್ತಿನಲ್ಲೂ ಹೆಣ್ಣು ಮಕ್ಕಳಿಗೆ ತಂದೆ ತಾಯಂದಿರ ಸ್ವತ್ತಿನಲ್ಲೂ ಸಹೋದರಿಯರಿಗೆ ಸಹೋದರರ ಸ್ವತ್ತಿನಲ್ಲೂ ಪತ್ನಿಗೆ ಪತಿಯ ಸ್ವತ್ತಿನಲ್ಲೂ ವಾರೀಸು ಹಕ್ಕನ್ನು ಇಸ್ಲಾಮ್ ನೀಡಿತು.

ಒಳಿತನ್ನು ಗಳಿಸುವ ಮಾರ್ಗ ಮಹಿಳೆಯರಿಗೆ ತೆರೆದಿಡಲಾಯಿತು. ಮಹಿಳೆ ಬಯಸುವುದಾದರೆ, ಒಳಿತನ್ನು ಗಳಿಸುವುದರಲ್ಲಿ ಪುರುಷನಿಗಿಂತ ಮುಂದೆ ಹೋಗಲು ಸಾಧ್ಯ. ಮಹಿಳೆ ಸಿದ್ದೀಖ್, ಶಹೀದ್ , ಸಾಲಿಹ್ ಸ್ಥಾನಗಳಿಸಲು ಸಾಧ್ಯವಿದೆ. ಆದರೆ ಶರೀರ ಪ್ರಕೃತಿಯ ವ್ಯತ್ಯಾಸದ ಕಾರಣ ಪ್ರವಾದಿ ಆಗಲಾರಳು. ಆದರೆ ಪ್ರವಾದಿಯ ಮಾತೆಯಾಗಬಲ್ಲಳು.

ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟ ಆಜ್ಞೆ ಹೀಗಿದೆ:

**"ನೀವು ಅವರೊಡನೆ (ಪತ್ನಿಯರೊಡನೆ) ಉತ್ತಮ ರೀತಿಯಲ್ಲಿ ವರ್ತಿಸಿರಿ." (4:20)**

ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು:

**"ನಿಮ್ಮ ಪೈಕಿ ತನ್ನ ಪತ್ನಿಯೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸುವವನೇ ಎಲ್ಲರಿಗಿಂತಲೂ ಉತ್ತಮನು. ನೀವು ನನ್ನನ್ನು ನೋಡಿರಿ. ನನ್ನ ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸುವುದರಲ್ಲಿ ನಾನು ಎಲ್ಲರಿಗಿಂತಲೂ ಉತ್ತಮನಾಗಿದ್ದೇನೆ."**

ಅನಿವಾರ್ಯ ಪರಿಸ್ಥಿತಿಯಲ್ಲಿ ಇಸ್ಲಾಮ್ ಪುರುಷರಿಗೆ ವಿವಾಹ ವಿಚ್ಛೇದನೆ (ತಲಾಖ್ ನೀಡುವ) ಹಕ್ಕು ನೀಡಿದೆ. ಅದೇ ರೀತಿ ಮಹಿಳೆಯರು ಪುರುಷರಿಂದ ವಿವಾಹ ಸಂಬಂಧ ವಿಚ್ಛೇದಿಸುವ ಹಕ್ಕು (ಖುಲ್‌ಅ) ಸಹ ಪಡೆದಿರುವರು. ಹುಡುಗಿಯ ಒಪ್ಪಿಗೆ ಪಡೆಯದೆ ಬಲಾತ್ಕಾರದಿಂದ ವಿವಾಹ ನಡೆಸುವುದನ್ನು ನಿಷಿದ್ಧಗೊಳಿಸಲಾಗಿದೆ. ವಿಧವೆಯರ ಮತ್ತು ಅನಾಥ ಹೆಣ್ಣು ಮಕ್ಕಳ ಮದುವೆ ಮಾಡಿಸುವ ಸಾಮಾಜಿಕ ಬದ್ಧತೆಯ ಬಗ್ಗೆ ಇಸ್ಲಾಮ್ ಒತ್ತಿ ಹೇಳಿದೆ.

ಮಹಿಳೆಯ ಬಗ್ಗೆ ಬೈಬಲ್ ಮತ್ತು ಪವಿತ್ರ ಖುರ್‌ಆನಿನ ಉಪದೇಶಗಳನ್ನು ಈ ಕೆಳಗೆ ಕೊಡಲಾಗಿದೆ.

## ಬೈಬಲ್ ಮತ್ತು ಮಹಿಳೆ

ಬೈಬಲ್ ಮಹಿಳೆಯನ್ನು ಪುರುಷನ ಎದುರಿಗೆ ಎರಡನೆಯ ದರ್ಜೆಯ ಸೃಷ್ಟಿ ಎಂದು ಹೇಳಿದೆ. ಕೆಲವು ಸನ್ನಿವೇಶಗಳಲ್ಲಿ ಅವರನ್ನು ಅತ್ಯಂತ ಅಪರಿಶುದ್ಧರು ಎಂದು ಹೇಳಿದೆ. ಹೊಸ ಒಡಂಬಡಿಕೆ ನೋಡಿರಿ:

**"ದೇವಜನರ ಎಲ್ಲಾ ಸಭೆಗಳ ಮಾರ್ಯಾದೆಯ ಪ್ರಕಾರ ಸ್ತ್ರೀಯರು ಸಭೆಯ ಕೂಟಗಳಲ್ಲಿ ಸುಮ್ಮಗಿರಬೇಕು; ಮಾತಾಡುವುದಕ್ಕೆ ಅವರಿಗೆ ಅಪ್ಪಣೆಯಿಲ್ಲ; ಅವರು ಅಧೀನದಲ್ಲಿರಬೇಕು; ಧರ್ಮಶಾಸ್ತ್ರದಲ್ಲಿಯೂ ಹೀಗೆ ಹೇಳಿದೆಯಲ್ಲಾ. ಅವರು ಏನಾದರೂ ತಿಳುಕೊಳ್ಳುವುದಕ್ಕೆ ಅಪೇಕ್ಷಿಸಿದರೆ ಮನೆಯಲ್ಲಿ ತಮ್ಮ ಗಂಡಂದಿರನ್ನು ಕೇಳಲಿ. ಸ್ತ್ರೀಯರು ಸಭೆಯಲ್ಲಿ ಮಾತಾಡುವುದು ನಾಚಿಕೆಗೆಟ್ಟ ಕೆಲಸವಾಗಿದೆ." (೧ ಕೊರಿಂಥದವರಿಗೆ 14:34)**

ಮಹಿಳೆಯನ್ನು ಎರಡನೆಯ ದರ್ಜೆಗೆ ಇಳಿಸಿದುದರ ಕಾರಣ ಬೈಬಲ್ ಹೇಳುವುದೇನೆಂದರೆ, ಆಕೆ ಆದಾಮನನ್ನು ದಾರಿ ತಪ್ಪಿಸಿದ್ದಳು. ಆದುದರಿಂದ ಆದಾಮ್ ಏದೆನ್ ತೋಟದಿಂದ ಹೊರಗೆ ಹೋಗಬೇಕಾಯಿತು. ಅನಂತರ ದೇವನು ಮಹಿಳೆಗೆ ಈ ಕೆಳಗಿನ ಶಿಕ್ಷೆ ನೀಡಿದನು:

**"ನೀನು ಗರ್ಭಿಣಿಯಾಗಿರುವ ಕಾಲದಲ್ಲಿ ಬಹು ಸಂಕಟಪಡಬೇಕೆಂದು ನಾನು ನೇಮಿಸಿದ್ದೇನೆ; ಕಷ್ಟದಿಂದಲೇ ಮಕ್ಕಳನ್ನು ಹೆರುವಿ; ಗಂಡನ ಮೇಲೆ ನಿನಗೆ ಆಶೆಯಿರುವುದು; ಅವನು ನಿನಗೆ ಒಡೆಯನಾಗುವನು." (ಆದಿಕಾಂಡ 3:16)**

ಆದರೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**"ಪುರುಷರು ಸ್ತ್ರೀಯರ ರಕ್ಷಾಧಿಕಾರಿಗಳಾಗಿದ್ದಾರೆ, ಅಲ್ಲಾಹನು ಅವರ ಪೈಕಿ ಕೆಲವರಿಗೆ ಬೇರೆ ಕೆಲವರಿಗಿಂತ (ಪುರುಷರಿಗೆ ಸ್ತ್ರೀಯರಿಗಿಂತ) ಕೆಲವು ಮೇಲ್ಮೆಯನ್ನು ಕೊಟ್ಟಿರುವುದರಿಂದ." (4:35)**

ಪುರುಷರು ಮಹಿಳೆಯರ ರಕ್ಷಣೆಗೆ ಬದ್ಧರಾದ ರಕ್ಷಣಾಧಿಕಾರಿಗಳಾಗಿದ್ದಾರೆ. ಎಂದರೆ ಸೆಕ್ಯುರಿಟಿ ಗಾರ್ಡ್‌ಗಳಾಗಿದ್ದಾರೆ. ಆದುದರಿಂದ ಪುರುಷರಿಗೆ ಶಕ್ತಿಯನ್ನು ನೀಡಲಾಗಿದೆ.

ಆದರೆ ಹಕ್ಕುಗಳ ಬಗ್ಗೆ ಹೇಳುವುದಾದರೆ ಪುರುಷರಿಗೂ ಸ್ತ್ರೀಯರಿಗೂ ಸಮಾನ ಹಕ್ಕುಗಳಿವೆ:

**"ಅವರ ಮೇಲೆ ಪುರುಷರಿಗೆ ಹಕ್ಕುಗಳಿರುವಂತೆಯೇ ಅವರಿಗೂ (ಸ್ತ್ರೀಯರಿಗೂ) ನ್ಯಾಯೋಚಿತವಾದ ಹಕ್ಕುಗಳಿವೆ." (2:229)**

ಹಝ್ರತ್ ಪೈಗಂಬರ್(ಸ) ತನ್ನ ಪತ್ನಿ ಹಝ್ರತ್ ಆಯಿಶಾರಿಂದ(ರ) ಧರ್ಮದ ಬಗ್ಗೆ ಅರ್ಧಾಂಶದಷ್ಟನ್ನು ಕಲಿಯಬಹುದೆಂದು ಶಿಷ್ಯರಿಗೆ ಹೇಳಿದರು. ಆದರೆ ಬೈಬಲ್ ಸ್ತ್ರೀಯರು ಸಂಪೂರ್ಣ ಮೌನಾವಲಂಬಿಗಳಾಗಿರಬೇಕೆಂದು ಹೇಳುತ್ತದೆ.

ಮಹಿಳೆ ಮುಟ್ಟಾದಾಗ ಮತ್ತು ಬಾಣಂತಿಯಾದಾಗ ಅತ್ಯಂತ ಕೊಳಕಾಗುತ್ತಾಳೆಂದು ಬೈಬಲ್ ಹೇಳುತ್ತದೆ:

**"ಒಬ್ಬ ಸ್ತ್ರೀ ಗಂಡು ಮಗುವನ್ನು ಹೆತ್ತರೆ ತಾನು ತಿಂಗಳ ಮುಟ್ಟಿನಿಂದ ಹೇಗೆ ಅಶುದ್ಧಳಾಗುತ್ತಾಳೋ ಹಾಗೆಯೇ ಏಳುದಿನಗಳ**

ತನಕ ಅಶುದ್ಧಳಾಗಿರಬೇಕು." (ಯಾಜಕ ಕಾಂಡ 12:2)

"ಹೆಣ್ಣು ಮಗುವನ್ನು ಹೆತ್ತರೆ ತಾನು ತಿಂಗಳ ಮುಟ್ಟಿನಿಂದ ಹೇಗೆ ಅಶುದ್ಧಳಾಗುತ್ತಾಳೋ ಹಾಗೆಯೇ ಎರಡು ವಾರಗಳು ಅಶುದ್ಧಳಾಗಿರಬೇಕು." (ಯಾಜಕ ಕಾಂಡ 12:5)

"ಅವಳನ್ನು (ಮುಟ್ಟಾದವಳನ್ನು) ಮುಟ್ಟಿದವರು ಆ ದಿನದ ಸಾಯಂಕಾಲದ ವರೆಗೆ ಅಶುದ್ಧರಾಗಿರುವರು." (ಯಾಜಕ ಕಾಂಡ 15:19)

"ಅವಳು (ಮುಟ್ಟಾದವಳು) ಯಾವುದರ ಮೇಲೆ ಕುಳಿತಿದ್ದಳೋ ಅದನ್ನು ಮುಟ್ಟಿದವನು ತನ್ನ ಬಟ್ಟೆಗಳನ್ನು ಒಗೆದುಕೊಂಡು ಸ್ನಾನ ಮಾಡಬೇಕು." (ಯಾಜಕ ಕಾಂಡ 15:22)

"ಪುರುಷನು ಒಂದು ವೇಳೆ ಅಂತವಳೊಡನೆ ಸಂಗಮಿಸಿದುದರಿಂದ ಅವಳ ರಜಸ್ಸು ಅವನಿಗೆ ತಗಲಿದರೆ ಅವನು ಏಳು ದಿನಗಳ ಕಾಲ ಅಶುದ್ಧನಾಗಿರುವನು. ಅಷ್ಟರಲ್ಲಿ ಅವನು ಯಾವ ಹಾಸಿಗೆಯ ಮೇಲೆ ಮಲಗಿಕೊಂಡರೂ ಅದು ಅಶುದ್ಧವಾಗಿರುವುದು." (ಯಾಜಕ ಕಾಂಡ 15:24)

ಪವಿತ್ರ ಖುರ್‌ಆನ್ ಮುಟ್ಟು ಮತ್ತು ಹೆರಿಗೆಗೆ ಸಂಬಂಧಿಸಿ, ಅವು ಮಹಿಳೆಯರಿಗೆ ಕಷ್ಟ ಉಂಟಾಗುವ ಕಾಲಗಳಾಗಿವೆ ಎಂದು ಹೇಳುತ್ತದೆ. ಅಂತಹ ಸಂದರ್ಭದಲ್ಲಿ ಲೈಂಗಿಕ ಸಂಪರ್ಕ ನಿಷಿದ್ಧಗೊಳಿಸಲಾಗಿದೆ. ಏಕೆಂದರೆ ರೋಗಬಾಧೆಯ ಅಪಾಯ ಆಗ ಇರುತ್ತದೆ. ಆದರೆ ಮಹಿಳೆಯನ್ನು ಸ್ಪರ್ಶಿಸುವುದು, ಜೊತೆಗೆ ಕುಳಿತುಕೊಳ್ಳುವುದು, ಜೊತೆಗೆ ಕುಳಿತು ಊಟ ಮಾಡುವುದು ನಿಷಿದ್ಧವಲ್ಲ. ಅಂತಹ ಮಹಿಳೆ ಯಾವುದಾದರೂ ಹಾಸಿಗೆಯ ಮೇಲೆ ಕುಳಿತರೆ ಆ ಹಾಸಿಗೆ ಅಶುದ್ಧವಾಗಲಾರದು.

ವಿಧವೆ ವಿವಾಹವಾಗದಿದ್ದರೆ ಉತ್ತಮ ಎಂದು ಬೈಬಲ್ ಹೇಳುತ್ತದೆ:

"(ವಿಧವೆ) ಮದುವೆ ಮಾಡಿಕೊಳ್ಳುವುದಕ್ಕಿಂತಲೂ ಇದ್ದ ಹಾಗೆಯೇ ಇರುವುದು ಆಕೆಗೆ ಸುಖವೆಂದು ನನ್ನ ಅಭಿಪ್ರಾಯ; ನನಗೂ ದೇವರ ಆತ್ಮ ಉಂಟೆಂದು ನೆನಸುತ್ತೇನೆ." (೧ ಕೊರಿಂಥದವರಿಗೆ 7:40)

ಆದರೆ ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ವಿಧವೆಯ, ವಿಶಿಷ್ಟವಾಗಿ ಯುವತಿಯಾದ ವಿಧವೆಯ ವಿವಾಹವನ್ನು ನಡೆಸುವುದು ಸಮಾಜದ ಕರ್ತವ್ಯವಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ನಿಮ್ಮಲ್ಲಿರುವ ವಿಧವೆಯರಿಗೂ ವಿವಾಹ ನಡೆಸಿರಿ." (24:33)

ಬೈಬಲ್ ಪ್ರಕಾರ ವಿಧವೆಯರ ಮದುವೆ ಆಗದಿರುವುದು ಉತ್ತಮವಾಗಿದೆ. ಈ ಉಲ್ಲೇಖ ನೋಡಿರಿ:

"ಮದುವೆಯಿಲ್ಲದವರನ್ನೂ ವಿಧವೆಯರನ್ನೂ ಕುರಿತು ನಾನು ಹೇಳುವುದೇನೆಂದರೆ – ನಾನಿರುವಂತೆಯೇ ಇರುವುದು ಅವರಿಗೆ ಒಳ್ಳೇದು; ಅವರು ದಮೆಯಿಲ್ಲದವರಾದರೆ ಮದುವೆ ಮಾಡಿಕೊಳ್ಳಲಿ." (೧ ಕೊರಿಂಥದವರಿಗೆ 7:8,9)

ಪವಿತ್ರ ಖುರ್‌ಆನ್ ಮದುವೆಯನ್ನು ಪುರುಷರೂ ಸ್ತ್ರೀಯರೂ ಮಾಡುವುದು ಆವಶ್ಯಕವೆಂದು ಹೇಳಿದೆ. ಕ್ರೈಸ್ತರ ಬ್ರಹ್ಮಚರ್ಯವು ಒಂದು ನವೀನ ಆಚಾರವೆಂದೂ ಅದನ್ನು ಅವರ ಪವಿತ್ರ ಗ್ರಂಥದಲ್ಲಿ ಕಡ್ಡಾಯಗೊಳಿಸಿಲ್ಲವೆಂದೂ ಕ್ರೈಸ್ತರು ಅನಂತರ ತಾವೇ ಸ್ವತಃ ತಮ್ಮ ಮೇಲೆ ಅದನ್ನು ಹೊರಿಸಿದರೆಂದೂ ಪವಿತ್ರ ಖುರ್‌ಆನ್ ಹೇಳಿದೆ. ಅದು ಹೀಗೆಂದಿದೆ:

"ಅನಂತರ ನಾವು ಅವರ ಹೆಜ್ಜೆಗಳನ್ನು ಅನುಸರಿಸುವ ಸಂದೇಶವಾಹಕರನ್ನು ಕಳುಹಿಸಿದೆವು. ಮರ್ಯಮ್ ಪುತ್ರ ಈಸಾರನ್ನೂ ಅವರ ಅನುಗಾಮಿಯಾಗಿ ನಾವು ಕಳುಹಿಸಿದೆವು. ಅವರಿಗೆ ನಾವು ಇಂಜೀಲನ್ನು ನೀಡಿದೆವು. ಅವರನ್ನು ಅನುಸರಿಸಿದವರ ಹೃದಯಗಳಲ್ಲಿ ನಾವು ಸಹಾನುಭೂತಿಯನ್ನೂ ಕರುಣೆಯನ್ನೂ ಮೂಡಿಸಿದೆವು. ಹೊಸದಾಗಿ ಆಚರಣೆಗೆ ತಂದ ಸನ್ಯಾಸವನ್ನು ನಾವು ಅವರಿಗೆ ಆಜ್ಞಾಪಿಸಿರಲಿಲ್ಲ." (57 : 28)

ವಾಚಕರೇ ನೀವು ತೀರ್ಮಾನಿಸಿರಿ. ಬೈಬಲ್ ಮತ್ತು ಖುರ್‌ಆನಿನ ಉಪದೇಶಗಳಲ್ಲಿ ಇಂದಿನ ಕಾಲಘಟ್ಟದ ಆವಶ್ಯಕತೆಗಳಿಗೆ ಅನುಸಾರವಾಗಿರುವುದು ಯಾವ ಉಪದೇಶವಾಗಿದೆ ಎಂದು. ಕ್ರೈಸ್ತರು ಮತ್ತು ಮುಸ್ಲಿಮರು ಯಾವ ನಿಯಮಗಳನ್ನು ಪಾಲಿಸುತ್ತಿದ್ದಾರೆಂದು ನೋಡಿರಿ.

ಹಳೆ ಒಡಂಬಡಿಕೆಯಲ್ಲಿ ತನ್ನ ಪತ್ನಿಯ ಬಗ್ಗೆ ವ್ಯಭಿಚಾರದ ಆರೋಪ ಹೊರಿಸುವ ಪತಿಯ ಕುರಿತು ಬರೆದಿರುವ ಈ ಕೆಳಗಿನ ನಿಯಮಗಳನ್ನು ಪರಿಶೀಲಿಸಿರಿ:

"ಕರ್ತನು ಮೋಶೆಗೆ ಹೇಳಿದ್ದೇನೆಂದರೆ – ನೀನು ಇಸ್ರಾಯೇಲ್ಯರಿಗೆ ಹೀಗೆ ಆಜ್ಞಾಪಿಸು – ಮುತ್ತೈದೆಯು ಸನ್ಮಾರ್ಗವನ್ನು ಬಿಟ್ಟು ದುಷ್ಕಾರ್ಯ ಮಾಡುವಾಗ ಕೈಗೆ ಸಿಕ್ಕದೆಯೂ ಸಾಕ್ಷಿಯಿಲ್ಲದೆಯೂ ರಹಸ್ಯವಾಗಿಯೇ ಪರಪುರುಷನೊಡನೆ ಸಂಗಮಿಸಿ ಗಂಡನಿಗೆ ದ್ರೋಹಿಯಾಗಿ ಅಶುದ್ಧಳಾದ ಸಂದರ್ಭದಲ್ಲೂ ಅವಳು ಹೀಗೆ ಮಾಡದೆ ಕೆಟ್ಟು ಹೋಗದ ಸಂದರ್ಭದಲ್ಲೂ ಕೆಟ್ಟು ಹೋದಳೆಂದು ಸಂಶಯವು ಗಂಡನಲ್ಲಿ ಹೊಕ್ಕರೆ ಮಾಡಬೇಕಾದದ್ದೇನೆಂದರೆ – ಆ ಪುರುಷನು ತನ್ನ ಹೆಂಡತಿಯನ್ನು ಯಾಜಕನ ಬಳಿಗೆ ಕರೆದುಕೊಂಡು ಬರಬೇಕು...... ಯಾಜಕನು ಅವಳನ್ನು ಕರೆದು ಕರ್ತನ ಎದುರಿನಲ್ಲಿ ನಿಲ್ಲಿಸಬೇಕು..... ಯಾಜಕನು ಅವಳಿಂದ ಶಪತಪೂರ್ವಕವಾದ ಪ್ರಮಾಣ ವಾಕ್ಯವನ್ನು ನುಡಿಸುವವನಾಗಬೇಕು." (ಅರಣ್ಯಕಾಂಡ 5 : 11-15, 16, 19)

ಅನಂತರ ಆಕೆಗೆ ವಿಷಕರವಾದ ನೀರನ್ನು ಕುಡಿಸಿ "ಶಾಪವನ್ನುಂಟುಮಾಡುವ ಈ ನೀರು ನಿನ್ನೊಳಗೆ ಸೇರಿ ನಿನ್ನ ಹೊಟ್ಟೆ ಉಬ್ಬುವಂತೆಯೂ ತೊಡೆಗಳು ಕ್ಷೀಣವಾಗಿ ಹೋಗುವಂತೆಯೂ ಮಾಡುವದು ಎಂದು ಹೇಳಬೇಕು." (ಅರಣ್ಯಕಾಂಡ 5:22)

"ಅವಳು ದ್ರೋಹಿಯಾಗಿ ಗಂಡನಿಗೆ ದ್ರೋಹ ಮಾಡಿದವಳಾಗಿದ್ದರೆ ಕುಡಿದ ನಂತರ ಶಾಪಕರವಾದ ಆ ನೀರು ಅವಳೊಳಗೆ ಸೇರಿ ವಿಷವಾಗುವುದರಿಂದ ಅವಳ ಹೊಟ್ಟೆ ಉಬ್ಬುವುದು, ಅವಳ ತೊಡೆಗಳು ಕ್ಷೀಣವಾಗಿ ಹೋಗುವವು; ಆ ಸ್ತ್ರೀ ತನ್ನ ಜನದೊಳಗೆ ಶಾಪಗ್ರಸ್ತಳಾಗುವಳು." (ಅರಣ್ಯಕಾಂಡ 5 : 27)

ಈ ದೌರ್ಜನ್ಯಭರಿತ ಉಪದೇಶ ಪತ್ನಿಯ ಮೇಲೆ ವ್ಯಭಿಚಾರದ ದೋಷ ಹೊರಿಸುವ ಪತಿಯ ಪರವಾಗಿದೆ. ಆದರೆ ಪತ್ನಿ ಪತಿಯ ಮೇಲೆ ದೋಷಾರೋಪ ಮಾಡಿದರೆ ಪತಿಗೂ ವಿಷಕರವಾದ ನೀರು ಕುಡಿಸಲಾಗುವುದೋ ಎಂದು ಬರೆದಿಲ್ಲ. ಬೈಬಲ್ ಪುರುಷ ಮತ್ತು ಸ್ತ್ರೀಯ ಮಧ್ಯೆ ಮೇಲಿನ ರೀತಿ ತಾರತಮ್ಯ ಭಾವನೆಯಿಂದ ವರ್ತಿಸುತ್ತದೆ.

ಪವಿತ್ರ ಖುರ್‌ಆನ್, ಪತ್ನಿಯ ಮೇಲೆ ವ್ಯಭಿಚಾರದ ಆರೋಪ ಹೊರಿಸುವ ಪತಿಗೆ ಸಾಕ್ಷಿಗಳು ಇಲ್ಲವಾದರೆ ಹೀಗೆ ಮಾಡಬೇಕೆಂದು ಹೇಳುತ್ತದೆ:

**"ತಮ್ಮ ಪತ್ನಿಯರ ಮೇಲೆ (ವ್ಯಭಿಚಾರದ) ಆರೋಪವನ್ನು ಹೊರಿಸುವವರು – ಅದಕ್ಕೆ ತಾವೇ ಹೊರತು ಬೇರೆ ಸಾಕ್ಷಿಗಳಿಲ್ಲದಿದ್ದರೆ – ಖಂಡಿತವಾಗಿಯೂ ತಾನು ಸತ್ಯ ನುಡಿಯುತ್ತೇನೆಂದು ನಾಲ್ಕು ಸಲ ಅಲ್ಲಾಹನ ನಾಮದಲ್ಲಿ ಪ್ರಮಾಣ ಮಾಡಿ ಹೇಳಬೇಕಾಗುತ್ತದೆ. ಐದನೆಯ ಸಲ ಅವನು ಪ್ರಮಾಣ ಮಾಡಿ ತಾನು ಸುಳ್ಳುಗಾರನಾಗಿದ್ದರೆ ತನ್ನ ಮೇಲೆ ಅಲ್ಲಾಹನ ಶಾಪವಿರಲಿ ಎಂದು ಸಹ ಹೇಳಬೇಕಾಗಿದೆ.**

**"ಆದರೆ 'ಖಂಡಿತವಾಗಿಯೂ ಅವನು (ಪತಿ) ಸುಳ್ಳು ಹೇಳುತ್ತಾನೆ' ಎಂದು ಅಲ್ಲಾಹನ ನಾಮದಲ್ಲಿ ಪ್ರಮಾಣ ಮಾಡಿ ನಾಲ್ಕು ಸಲ ಅವಳು (ಆರೋಪಿಸಲ್ಪಟ್ಟ ಪತ್ನಿ) ಹೇಳಿದರೆ ಅವಳು ಶಿಕ್ಷೆಯಿಂದ ಮುಕ್ತಳಾಗುವಳು.**

**"(ಅಷ್ಟೇ ಅಲ್ಲ) ಅವಳು ಐದನೆಯ ಸಲ ಪ್ರಮಾಣ ಮಾಡಿ ಅವನು ಸತ್ಯವಂತನಾಗಿದ್ದರೆ ತನ್ನ ಮೇಲೆ ಅಲ್ಲಾಹನ ಕೋಪವೆರಗಲಿ ಎಂದು ಸಹ ಹೇಳಬೇಕಾಗಿದೆ." (24:7–10)**

ನೀವು ನೋಡಿರಿ. ಬೈಬಲ್ ಸ್ತ್ರೀಯ ಮೇಲೆ ಆರೋಪ ಹೊರಿಸಿ ಬಡ ಸ್ತ್ರೀಯನ್ನು ವಿಷಕರವಾದ ನೀರನ್ನು ಕುಡಿಯಲು ಬಲಾತ್ಕಾರ ಮಾಡುತ್ತದೆ. ಆದರೆ ಇಸ್ಲಾಮೀ ನಿಯಮ ಸಂಹಿತೆ ಪ್ರಕಾರ ಪುರುಷ ಮತ್ತು ಸ್ತ್ರೀ ಇಬ್ಬರಿಗೂ ಪ್ರಮಾಣ ಮಾಡಲು ಹೇಳುತ್ತದೆ.

ನೀವು ಯೋಚಿಸಿರಿ: ಇಸ್ಲಾಮ್ ಧರ್ಮದ ಉಪದೇಶ ಸ್ತ್ರೀ ಪುರುಷರನ್ನು ಸಮಾನವಾಗಿ ಪರಿಗಣಿಸಲುತ್ತದೆ. ಬೈಬಲಿನ ಉಪದೇಶ ಸ್ತ್ರೀಯ ಮೇಲೆ ದೌರ್ಜನ್ಯ ಉಂಟುಮಾಡುತ್ತದೆ. ಸ್ತ್ರೀಯು ನಿರಪರಾಧಿಯೂ ದೌರ್ಜನ್ಯಪೀಡಿತಳೂ ಆಗಿದ್ದರೂ ಅಥವಾ ಪಾಪಕೃತ್ಯ ಮಾಡಿದವಳಾಗಿದ್ದರೂ ಆಕೆ ಖಂಡಿತವಾಗಿಯೂ ವಿಷಕರವಾದ ನೀರು ಕುಡಿದು ಮೃತಳಾಗುವಳು.

ಪುರುಷ ಮತ್ತು ಸ್ತ್ರೀ ಮಧ್ಯೆ ತಾರತಮ್ಯವನ್ನು ಸೂಚಿಸುವ ಬೈಬಲಿನ ಇನ್ನೊಂದು ಉಲ್ಲೇಖ ನೋಡಿರಿ:

**ಒಬ್ಬ ಪತಿ "ನಾನು ಇವಳನ್ನು ಮದುವೆ ಮಾಡಿಕೊಂಡೆನು; ಆದರೆ ಕೂಡಿದಾಗ ಇವಳು ಕನ್ನಿಕೆಯಲ್ಲವೆಂದು ತಿಳಿದು ಬಂತು ಎಂದು ಹೇಳಿ ಅವಳ ಹೆಸರನ್ನು ಕೆಡಿಸಿದರೆ ಅವಳ ತಾಯಿ ತಂದೆಗಳು ತಮ್ಮ ಮಗಳು ವಿವಾಹಕ್ಕೆ ಮುಂಚೆ ಪುರುಷ ಸಂಪರ್ಕವಿಲ್ಲದವಳು ಎಂಬುದಕ್ಕೆ ನಿದರ್ಶನವನ್ನು ಊರು ಬಾಗಲಿಗೆ ಹಿರಿಯರ ಮುಂದೆ ತಂದು ತೋರಿಸಬೇಕು." (ಧರ್ಮೋಪದೇಶ ಕಾಂಡ 22:14, 15)**

**ತಂದೆ ತನ್ನ ಮಗಳನ್ನು ಕನ್ನಿಕೆ ಎಂದು ಸಾಬೀತುಪಡಿಸಿದರೆ ಆಕೆಯ ಗಂಡನಿಗೆ ದಂಡ ವಿಧಿಸಲಾಗುವುದು. ಅದನ್ನು ಹುಡುಗಿಯ ತಂದೆಗೆ ಕೊಡಲಾಗುವುದು. "ಆದರೆ ಆ ಹೆಣ್ಣು ವಿವಾಹಕ್ಕೆ ಮುಂಚೆ ಪುರುಷ ಸಂಪರ್ಕ ಮಾಡಿದವಳೇ ಎಂದು ತಿಳಿದು ಬಂದರೆ ಊರಿನವರೆಲ್ಲರು ಕಲ್ಲೆಸೆದು ಅವಳನ್ನು ಕೊಲ್ಲಬೇಕು." (ಧರ್ಮೋಪದೇಶ ಕಾಂಡ 22 : 19, 20, 21 ನೋಡಿರಿ.)**

ಇದು ಸ್ತ್ರೀಯ ಬಗ್ಗೆ ಬೈಬಲಿನ ಉಪದೇಶಗಳಾಗಿವೆ. ತಂದೆಯೊಂದಿಗೆ ಹೇಳಲಾಗುತ್ತದೆ – ತನ್ನ ಮಗಳು ಕನ್ಯೆ ಎಂಬುದರ ಗುರುತು ಊರ ಜನರ ಮುಂದೆ ಇಡಬೇಕು. ಇಲ್ಲದಿದ್ದರೆ ಮಗಳನ್ನು ಕಲ್ಲೆಸೆದು ಕೊಲ್ಲಲಾಗುವುದು ಎಂದು.

ಇದು ಎಂತಹ ಬೈಬಲ್ ಎಂದರೆ ಅದನ್ನು ನಂಬುವ ಪಾದರಿಗಳು ಮತ್ತು ಪೋಪ್ ಸಹ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮೇಲೆ ದೋಷಾರೋಪಗಳನ್ನು ಹೊರಿಸುತ್ತಾ ಇರುತ್ತಾರೆ.

ಕ್ರೈಸ್ತ ಪಾದರಿಗಳಿಗೆ ನಾವು ಪಂಥಾಹ್ವಾನ ನೀಡುತ್ತೇವೆ. ಇಂತಹ ದೌರ್ಜನ್ಯಕರ ಉಪದೇಶಗಳನ್ನು ನೀವು ಪವಿತ್ರ ಖುರ್‌ಆನ್‌ನಿಂದ ಆಯ್ದು ಉಲ್ಲೇಖಿಸಲು ಶಕ್ತರಲ್ಲ. ಮಹಿಳೆಗೆ ಪುರುಷನಿಗೆ ಸಮಾನವಾದ ಹಕ್ಕುಗಳನ್ನು ನೀಡಿದ ಏಕಮಾತ್ರ ದೈವಿಕ ಗ್ರಂಥ ಪವಿತ್ರ ಖುರ್‌ಆನಾಗಿದೆ.

★

# ಟ್ಯೂರಿನಿನ ಶವವಸ್ತ್ರ (The Shroud of Turin)

**ಲೇಖಕ : ಆರಿಫ್ ಖಾನ್**

ಟ್ಯೂರಿನಿನ ಶವವಸ್ತ್ರ ಯೇಸು ಕ್ರಿಸ್ತರನ್ನು ದಫನು ಮಾಡುವಾಗ ಬಳಸಲಾದ ಶವವಸ್ತ್ರ ಎಂದು ಹೇಳಲಾಗುತ್ತಿದೆ. ಈ ಬಟ್ಟೆ 4.37x1.1 ಮೀಟರ್ ಅಳತೆಯನ್ನು ಹೊಂದಿದೆ. (ಅಂದಾಜು 14 ಅಡಿ ಉದ್ದವಾಗಿದೆ) ಅದರಲ್ಲಿ ಶಿಲುಬೆಗೇರಿಸಲ್ಪಟ್ಟವನೆಂಬಂತೆ ತೋರುವ ಒಬ್ಬ ಮನುಷ್ಯನ ಅಸ್ಪಷ್ಟ ಚಿತ್ರವು ಕಾಣುತ್ತಿದೆ. 2010ರ ಎಪ್ರಿಲ್ ದಿನಾಂಕ 10ರಿಂದ ಮೇ ದಿನಾಂಕ 23ರ ತನಕ ಅಂದಾಜು ಎರಡು ಮಿಲಿಯ ಸಂದರ್ಶಕರು ಇಟೆಲಿ ದೇಶದ ಉತ್ತರ ಭಾಗದಲ್ಲಿರುವ ಟ್ಯೂರಿನ್ ನಗರವನ್ನು ಸಂದರ್ಶಿಸಿ ಲಿನನ್ ಬಟ್ಟೆಯ ಈ ಶವವಸ್ತ್ರವನ್ನು ನೋಡಿದರು. ಈ ಶತಮಾನದ ಪ್ರಥಮ ದಶಾಬ್ದದಲ್ಲಿ ಇದು ಪ್ರಥಮ ಬಾರಿ ಪ್ರದರ್ಶನಕ್ಕೆ ಇಡಲಾಗಿದೆ. 2010ರ ಎಪ್ರಿಲ್ ತಿಂಗಳಲ್ಲಿ ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನಾಯಕರಾದ ಖಲೀಫತುಲ್ ಮಸೀಹ್ ಖಾಮಿಸ್ (ಪಂಚಮ ಖಲೀಫ) ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್‌ರವರು ಖಾಸಗಿಯಾಗಿ ಈ ಶವವಸ್ತ್ರವನ್ನು ಸಂದರ್ಶಿಸುವ ಏರ್ಪಾಡನ್ನು ಪ್ರದರ್ಶನದ ಅಧಿಕಾರಿಗಳು ಮಾಡಿದರು.



ಶವವಸ್ತ್ರವನ್ನು ಇರಿಸಲಾಗಿರುವ ಚಾಪೆಲ್

ಈ ಶವವಸ್ತ್ರ ಎಂದರೇನು? ಇಂದಿನ ಲೋಕದೊಂದಿಗೆ ಅದರ ಮಹತ್ವವೇನು?

## ಶವವಸ್ತ್ರ

ಕ್ರೈಸ್ತ ಲೋಕವು ಅನೇಕ ಪುರಾತನ ಅವಶೇಷಗಳನ್ನು ಹೊಂದಿರುತ್ತದೆ. ಅತ್ಯಂತ ಪವಿತ್ರ ಅವಶೇಷಗಳು ಯೇಸುಕ್ರಿಸ್ತರ ಜೀವಿತದ ಕಾಲಕ್ಕೆ ಸೇರಿದವುಗಳಾಗಿವೆ. ಈ ಅವಶೇಷಗಳ ಅಧಿಕೃತತೆಯನ್ನು ಪರಿಶೀಲಿಸುವುದು ಯಾವಾಗಲೂ ಕಷ್ಟಕರವಾಗಿದೆ. ಅತ್ಯಂತ ಪ್ರಸಿದ್ಧ ಅವಶೇಷವು ಟ್ಯೂರಿನಿನ ಶವವಸ್ತ್ರವಾಗಿದೆ. ಅದು ಯೇಸುಕ್ರಿಸ್ತರಿಗೆ ಹೊದಿಸಲಾದ ಶವವಸ್ತ್ರವೆಂದು ಹೇಳಲಾಗುತ್ತಿದೆ.

ಹೊಸ ಒಡಂಬಡಿಕೆಯ ಸುವಾರ್ತೆಗಳು ಯೇಸು ಕ್ರಿಸ್ತರನ್ನು ಶಿಲುಬೆಯಿಂದ ಇಳಿಸಿದ ನಂತರ ಅವರಿಗೆ ಲಿನನ್ ಬಟ್ಟೆ ಹೊದಿಸಲಾಯಿತೆಂದು ಹೇಳುತ್ತವೆ.

*"ಯೋಸೇಫನು ನಾರುಮಡಿಯನ್ನು ಕೊಂಡುತಂದು ಆತನನ್ನು ಇಳಿಸಿ ನಾರುಮಡಿಯಲ್ಲಿ ಸುತ್ತಿ ಬಂಡೆಯಲ್ಲಿ ತೋಡಿದ್ದ ಸಮಾಧಿಯಲ್ಲಿಟ್ಟು ಸಮಾಧಿಯ ಬಾಗಿಲಿಗೆ ಕಲ್ಲನ್ನು ಉರುಳಿಸಿದನು." (ಮಾರ್ಕ 15:46)*

*"ಇದಲ್ಲದೆ ಮೊದಲು ಒಂದು ಸಾರಿ ರಾತ್ರಿವೇಳೆಯಲ್ಲಿ ಯೇಸುವಿನ ಬಳಿಗೆ ಬಂದಿದ್ದ ನಿಕೋದೇಮನು ಸಹ ರಕ್ತಬೋಳ, ಅಗರುಗಳನ್ನು ಕಲಸಿದ ಚೂರ್ಣವನ್ನು ನೂರು ಸೇರಿನಷ್ಟು ತಕ್ಕೊಂಡು ಅಲ್ಲಿಗೆ ಬಂದನು. ಅವರು ಯೇಸುವಿನ ದೇಹವನ್ನು ಎತ್ತಿಕೊಂಡು ಯೆಹೂದ್ಯರಲ್ಲಿ ಹೂಳಿಡುವ ಪದ್ಧತಿ ಪ್ರಕಾರ ಅದನ್ನು ಆ ಸುಗಂಧ ದ್ರವ್ಯಗಳ ಸಹಿತವಾಗಿ ನಾರು ಬಟ್ಟೆಯಲ್ಲಿ ಸುತ್ತಿದರು." (ಯೋಹಾನ 19:39–40)*

ಕೆಲವರು ಹೇಳುವುದು ಬೈಬಲಿನಲ್ಲಿ ಪ್ರಸ್ತಾಪಿಸಿಲಾದ ಶವವಸ್ತ್ರವೇ ಟ್ಯೂರಿನ್‌ನಲ್ಲಿರುವ ಶವವಸ್ತ್ರವಾಗಿದೆ ಎಂದು. ಬೇರೆ ಕೆಲವು ವಾದಗಳು ಇಂತಹ ಅವಶೇಷಗಳ ಬಗ್ಗೆ ಇದ್ದರೂ ಟ್ಯೂರಿನಿನ ಶವವಸ್ತ್ರ ಅತ್ಯಂತ ಆಕರ್ಷಕವೂ ಅತ್ಯಂತ ಸರಿಯಾದುದೆಂದೂ ಅಂಗೀಕರಿಸಲ್ಪಟ್ಟಿದೆ. 1898ರಲ್ಲಿ ಈ ಶವವಸ್ತ್ರದ ಪ್ರಥಮ ಫೋಟೋಗ್ರಾಫನ್ನು ಸೆಕೊಂಡೋ ಪಿಯಾ ಎಂಬವನು ಮೊದಲ ಬಾರಿಗೆ ತೆಗೆದಾಗ ಈ ಶವವಸ್ತ್ರದ ಅಂತಸ್ತು ಅಂಗೀಕರಿಸಲ್ಪಟ್ಟಿತು.

ಈ ಫೋಟೋಗ್ರಾಫಿನ ನೆಗೆಟಿವ್ ಈ ಶವವಸ್ತ್ರದ ಆಶ್ಚರ್ಯಕರವಾದ ವಿವರಣೆ ಗಳನ್ನು ನೀಡಿತು. ಅಷ್ಟರವರೆಗೆ ಅಸ್ಪಷ್ಟವಾಗಿ ಕಾಣಿಸುತ್ತಿದ್ದ ಚಿತ್ರವು ನೆಗೆಟಿವ್ ಫಿಲ್ಮ್ ಮೂಲಕ ಸ್ಪಷ್ಟವಾದ ಚಿತ್ರವನ್ನು ಪ್ರಕಟಿಸಿತು. ಫೋಟೋಗ್ರಾಫರನು ಫೋಟೋಗ್ರಾಫಿಕ್ ಪ್ಲೇಟನ್ನು ನೋಡಿದಾಗ ಸ್ತಂಭೀಭೂತನಾಗಿ ಅದನ್ನು ಕೆಳಗೆ ಹಾಕಿದನು ಎಂದು ಹೇಳಲಾಗುತ್ತದೆ.

## ಟ್ಯೂರಿನ್ ಶವವಸ್ತ್ರ ಎಷ್ಟು ಪ್ರಾಚೀನ?

ಈ ಶವವಸ್ತ್ರದ ಬಗ್ಗೆ ದಾಖಲಿಸಲಾದ ಚರಿತ್ರೆ 13ನೇ, 14ನೇ ಶತಮಾನದ ತನಕ ಮಾತ್ರವಿದೆ. ಆದರೆ ಯೇಸು ಕ್ರಿಸ್ತರ ಚಿತ್ರವಿರುವ ಬಟ್ಟೆಯ ದಾಖಲಿಸಲಾದ ಚರಿತ್ರೆ ಎರಡು ಸಾವಿರ ವರ್ಷಗಳಷ್ಟು ಹಿಂದಿನದಾಗಿದೆ. "ಎಡೆಸ್ಸದ ಬಟ್ಟೆ" ಮೊದಲಾದ ಪ್ರಸಿದ್ಧ ವಸ್ತ್ರಗಳು ವಾಸ್ತವಿಕವಾಗಿ ಟ್ಯೂರಿನಿನ ಶವವಸ್ತ್ರವೇ ಆಗಿತ್ತು.

ಐಯನ್ ವಿಲ್‌ಸನ್ ಎಂಬ ಚರಿತ್ರೆಗಾರನು ಶವವಸ್ತ್ರದ ಬಗ್ಗೆ ಸಂಶೋಧನೆ ನಡೆಸಿದ ವ್ಯಕ್ತಿಯಾಗಿದ್ದಾರೆ. ಅವರು ಟ್ಯೂರಿನಿನ ಶವವಸ್ತ್ರದ ಚರಿತ್ರೆಯನ್ನು ಕ್ರಿಸ್ತಶಕದ ಪ್ರಥಮ ಶತಮಾನಕ್ಕೆ ಒಯ್ಯುತ್ತಾರೆ.

(The Turin Shroud : The Illustrated Evidence, Ian Wilson & Barrieschwortz, 2000 pp:151-155)

ವಿಲ್‌ಸನ್ ತನ್ನ ಸಂಶೋಧನೆಯಲ್ಲಿ ಯೇಸು ಕ್ರಿಸ್ತರ ಮುಖದ ಅಚ್ಚು ಇರುವ ಒಂದು ಪ್ರಸಿದ್ಧ ಬಟ್ಟೆಯ ಬಗ್ಗೆ ಪ್ರಸ್ತಾಪಿಸುತ್ತಾರೆ. ಇದನ್ನು ಎಡೆಸ್ಸದ ಬಟ್ಟೆ ಎಂದೆನ್ನುತ್ತಾರೆ. ಮೂರನೆಯ ಮತ್ತು ನಾಲ್ಕನೆಯ ಶತಮಾನದ ಮೂಲಗಳು ಯೇಸು ಕ್ರಿಸ್ತರ ಚಿತ್ರ ಇರುವ ಒಂದು ಬಟ್ಟೆಯನ್ನು ಜೆರುಸಲೇಮ್‌ನಿಂದ ಎಡೆಸ್ಸಕ್ಕೆ ಒಯ್ಯಲಾದ ಬಗ್ಗೆ ಪಾರಂಪರಿಕ ಹೇಳಿಕೆಗಳನ್ನು ದಾಖಲಿಸುತ್ತವೆ. ಎಡೆಸ್ಸದ ರಾಜನಾದ ಅಬ್‌ಗರ್ ಪಂಚಮನು ಈ ಬಟ್ಟೆಯ ಕಾರಣದಿಂದ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದನು. ವಿಲ್‌ಸನ್, ಈ ಬಟ್ಟೆ ಶತಮಾನಗಳ ಕಾಲ ಹೇಗೆ ಬಾಕಿಯಾಗಿ ಉಳಿಯಿತು ಎಂದು ಸಹ ವಿವರಿಸುತ್ತಾರೆ. ವಿಲ್‌ಸನ್ ಹೀಗೆ ಹೇಳುತ್ತಾರೆ: ಯೇಸು ಕ್ರಿಸ್ತರು ಪುನರುತ್ಥಾನ ಹೊಂದಿದಾಗ ಅತ್ಯಂತ ಬೃಹತ್ತಾದ ಶಕ್ತಿಯು ಸ್ಫೋಟಗೊಂಡಿತು. ಅದರ ಪರಿಣಾಮವಾಗಿ ಬಟ್ಟೆಯಲ್ಲಿ ಶರೀರದ ಚಿತ್ರವು ಮೂಡಿತು.

ಆದರೆ ಅಂತಹ ಶಕ್ತಿಯು ಒಂದು ಜೀವಂತ ಶರೀರದಿಂದ ಮಾತ್ರ ಹೊರಹೊಮ್ಮಲು ಸಾಧ್ಯವಿದೆ.

ವಿಲ್‌ಸನ್ ಸೂಚಿಸುವ ಸಮಯ ಕ್ರಮದಲ್ಲಿ ಊಹೆಗಳು ಇವೆ. ಆದರೆ ಬೇರೆ ಬೇರೆ ಹೇಳಿಕೆಗಳಲ್ಲಿ ಸೂಚಿಸಲಾದ ಬಟ್ಟೆಯು ಟ್ಯೂರಿನಿನ ಇದೇ ಶವವಸ್ತ್ರ ಆಗಿರಲು ಸಾಧ್ಯತೆಗಳಿವೆ. ಈಗ ಸಹ ಈ ವಿಷಯವು ಬಹಳ ರಹಸ್ಯಾತ್ಮಕವಾಗಿಯೇ ಇದೆ.

## ಪ್ರತಿಬಿಂಬ

ಈ ಬಟ್ಟೆಯ ಅತ್ಯಂತ ಆಕರ್ಷಕ ವಿಷಯವು ಅದರಲ್ಲಿ ಅಡಕವಾದ ಪ್ರತಿಬಿಂಬ ವಾಗಿದೆ. ಈ ಪ್ರತಿಬಿಂಬ ಹೇಗೆ ಉಂಟಾಯಿತು ಎಂಬುದರ ಬಗ್ಗೆ ನಿಖರವಾಗಿ, ಪೂರ್ಣವಾಗಿ ಇಂದಿನ ತನಕ ತಿಳಿದುಬಂದಿಲ್ಲ. ಈ ಪ್ರತಿಬಿಂಬದ ಇನ್ನೊಂದು ಗಮನಾರ್ಹ ವಿಷಯವೇನೆಂದರೆ ಈ ಪ್ರತಿಬಿಂಬವು ಋಣಾತ್ಮಕ (ನೆಗೆಟಿವ್) ಆಗಿದೆ.



ಸೆಕೊಂಡೋ ಪಯಾ

## ಯೇಸು ಕ್ರಿಸ್ತರ ಶಿಲುಬೆಗೇರಿಸುವಿಕೆಗೆ ಶವ ವಸ್ತ್ರದೊಂದಿಗಿರುವ ಸಂಬಂಧವೇನು?

ಈ ಶವವಸ್ತ್ರದಲ್ಲಿ ಎಂತಹ ಕುರುಹುಗಳಿವೆ ಎಂದರೆ ಯೇಸು ಕ್ರಿಸ್ತರಿಗೆ ಎರಡು ಸಾವಿರ ವರ್ಷಗಳ ಮೊದಲು ಏನು ಸಂಭವಿಸಿರುವುದಾಗಿ ಅಹ್ಮದೀ ಮುಸ್ಲಿಮರು ನಂಬುತ್ತಾರೋ ಅವು ಗಳೊಂದಿಗೆ ಈ ಬಟ್ಟೆಯ ಕುರುಹುಗಳು ಸಮನ್ವಯ ಹೊಂದುತ್ತವೆ.

## ಚಾಟಿಯೇಟು ಮತ್ತು ಫ್ಲಾಗ್‌ರಮ್ ಬಳಕೆ

ಶಿಲುಬೆಗೇರಿಸುವ ಮೊದಲು ಅಪರಾಧಿಯನ್ನು ಚಾಟಿಯಿಂದ ಹೊಡೆಯುವುದು ರೋಮನ್ ಶಿಕ್ಷಾಕ್ರಮವಾಗಿತ್ತು. ಶವವಸ್ತ್ರ ಇಂತಹ ಗುರುತುಗಳನ್ನು ಹೊಂದಿದೆ, ಮುಖ್ಯವಾಗಿ ಶರೀರದ ಬೆನ್ನಿನಲ್ಲಿ. ರೋಮನರು ಫ್ಲಾಗ್‌ರಮ್ ಎಂಬ ಚಾಟಿಯನ್ನು ಬಳಸುತ್ತಿದ್ದರು. ಅದರಲ್ಲಿ ಮೂರು ಎಳೆಗಳು ಇದ್ದು ಪ್ರತಿಯೊಂದರ ತುದಿಯಲ್ಲಿ ಎಲುಬಿನ ತುಂಡು ಮೊನಚುಗೊಳಿಸಲ್ಪಟ್ಟು ಹೆಚ್ಚು ಗಾಯ ಉಂಟುಮಾಡುವಂತೆ ಜೋಡಿಸಲಾಗಿತ್ತು. ಈ ಶವವಸ್ತ್ರದಲ್ಲಿ ಫ್ಲಾಗ್‌ರಮ್ ಬಳಸಿದ ಕುರುಹುಗಳು ಸ್ಪಷ್ಟವಾಗಿ ಕಾಣಿಸುತ್ತಿವೆ.

## ಮುಳ್ಳಿನ ಕಿರೀಟ

ಯೇಸು ಕ್ರಿಸ್ತರು ತನ್ನನ್ನು ಯಹೂದಿಯರ ರಾಜನೆಂದು ಕರೆದುಕೊಂಡ ಕಾರಣ ಅವರನ್ನು ಅಪಹಾಸ್ಯ ಮಾಡಲಾಯಿತು. ಸುವಾರ್ತೆಗಳಲ್ಲಿ ಅವರಿಗೆ ಮುಳ್ಳಿನ ಕಿರೀಟ ತೊಡಿಸಿದ ಬಗ್ಗೆ ಉಲ್ಲೇಖಗಳಿವೆ.

*"ಮುಳ್ಳು ಬಳ್ಳಿಯಿಂದ ಕಿರೀಟವನ್ನು ಹೆಣೆದು ಆತನ ತಲೆಯ ಮೇಲೆ ಇಟ್ಟು ಬಲಗೈಯಲ್ಲಿ ಬೆತ್ತವನ್ನು ಕೊಟ್ಟು ಆತನ ಮುಂದೆ ಮೊಣಕಾಲೂರಿ – ಯೆಹೂದ್ಯರ ಅರಸನೇ, ನಿನಗೆ ನಮಸ್ಕಾರ ಎಂದು ಆತನನ್ನು ಪರಿಹಾಸ್ಯ ಮಾಡಿದರು." (ಮತ್ತಾಯ 27:29)*

*"ಆತನಿಗೆ ಕೆಂಪು ಬಟ್ಟೆಯನ್ನು ಹೊದಿಸಿ ಮುಳ್ಳಿನ ಕಿರೀಟವನ್ನು ಹೆಣೆದು ಆತನಗಿಟ್ಟು...." (ಮಾರ್ಕ 15:17)*

"ಸಿಪಾಯಿಗಳು ಮುಳ್ಳು ಬಳ್ಳಿಯಿಂದ ಕಿರೀಟವನ್ನು ಹೆಣೆದು ಆತನ ತಲೆಯ ಮೇಲೆ ಇಟ್ಟು ಕೆಂಪು ಬಟ್ಟೆಯನ್ನು ಆತನಿಗೆ ಹೊದಿಸಿ....." (ಯೋಹಾನ 19:2)

ಟ್ಯೂರಿನಿನ ಶವವಸ್ತ್ರ ತಲೆಯ ಸುತ್ತಲೂ ಅಸಾಧಾರಣವಾದ ರಕ್ತ ಪ್ರವಾಹವನ್ನು ಸೂಚಿಸುತ್ತದೆ. ರಕ್ತದ ಕಲೆಗಳು ತಲೆಗೂದಲಲ್ಲಿ ಮತ್ತು ತಲೆಯ ಹಿಂಭಾಗದ ಕೂದಲಲ್ಲಿ ಕಾಣಿಸುತ್ತವೆ. ಮುಳ್ಳಿನ ಒಂದು ಕಿರೀಟ ಧರಿಸಿದರೆ ಹೇಗಾಗಬಹುದೋ ಅದಕ್ಕೆ ಇದು ಸರಿಹೋಲುತ್ತದೆ.

(ಹೆಚ್ಚಿನ ವಿವರಗಳಿಗೆ The Turin Shroud, The illustrated Evidence, Ian Wilson & Barrie Schwortz 2000 ನೋಡಿರಿ).

## ಮೊಳೆಗಳ ಹೊಡೆತದಿಂದ ಉಂಟಾದ ಗಾಯಗಳು

ಯೇಸು ಕ್ರಿಸ್ತರನ್ನು ಶಿಲುಬೆಗೇರಿಸಿದಾಗ ಅವರ ಅಂಗೈಯ ಗಂಟುಗಳ ಮೂಲಕ ಮತ್ತು ಪಾದಗಳ ಮೂಲಕ ಮೊಳೆ ಹೊಡೆ ಯಲಾಯಿತು. ಶವವಸ್ತ್ರವು ಇದನ್ನು ಚಿತ್ರಿಸುತ್ತದೆ. ಬಟ್ಟೆಯು ಈ ಭಾಗಗಳನ್ನು ಆವರಿಸಿದ್ದಲ್ಲಿ ರಕ್ತವು ಹೆಚ್ಚಾಗಿ ಹರಿದಿರುವುದು ಕಾಣುತ್ತದೆ. ಮೊಳೆಗಳನ್ನು ಅಂಗೈ ಗಂಟುಗಳ ಮೂಲಕ ಜಡಿಯಲಾದುದನ್ನು ಸೂಚಿಸುವುದು ಆಸಕ್ತಿದಾಯಕವಾಗಿದೆ. ಸಾಂಪ್ರದಾಯಿಕ ಚಿತ್ರಗಳು ಮೊಳೆಗಳನ್ನು ಅಂಗೈ ಯೊಳಗಿನಿಂದ ಜಡಿದುದಾಗಿ ತೋರಿಸುತ್ತವೆ. ಆಧುನಿಕ ಸಂಶೋಧನೆ ಇದನ್ನು ಅಲ್ಲಗಳೆದಿದೆ. ಏಕೆಂದರೆ ಶರೀರ ಭಾರವನ್ನು ಹೊರಲು ಮೊಳೆಗಳನ್ನು ಮಣಿಗಂಟುಗಳ ಮೂಲಕವೇ ಜಡಿಯಬೇಕಾಗಿತ್ತು. ಶವವಸ್ತ್ರ ಇದನ್ನೇ ಸೂಚಿಸುತ್ತದೆ.

## ರಕ್ತದ ಹರಿಯುವಿಕೆ

ಇದರ ಮೊದಲು ನಾವು ಬರೆದ ಹಾಗೆ ಬಟ್ಟೆಯಲ್ಲಿ ರಕ್ತದ ಗುರುತುಗಳಿವೆ. 1978ರಲ್ಲಿ ವಿಜ್ಞಾನಿಗಳು ಇದು ನಿಜವಾಗಿ ಮಾನವನ ರಕ್ತದ ಗುರುತುಗಳೆಂದೂ ಬಣ್ಣ ಅಥವಾ ಮೃಗಗಳ ರಕ್ತದ ಗುರುತು ಗಳಲ್ಲವೆಂದೂ ಸಾಬೀತುಗೊಳಿಸಿರುವರು. ರಕ್ತದ ಹರಿಯುವಿಕೆಯು ಶಾರೀರಿಕ ಘಟನೆಗೆ ಅನುಸಾರವಾಗಿದೆ. ರಕ್ತದ ಪ್ರತಿಯೊಂದು ಹರಿವು ಮನುಷ್ಯನ ಶಾರೀರಿಕ ಅವಯವಗಳ ಘಟನೆಗೆ ಅನುಸಾರವಾಗಿ ಮತ್ತು ರಕ್ತನಾಳಗಳ ವ್ಯವಸ್ಥೆಗೆ ಅನುಸಾರವಾಗಿದೆ.

## ಶವವಸ್ತ್ರದ ಮೇಲೆ ನಡೆಸಲಾದ ವೈಜ್ಞಾನಿಕ ಪರೀಕ್ಷೆಗಳು

1978ರಲ್ಲಿ STURP ಎಂಬ ಸಂಸ್ಥೆಯು ಶವವಸ್ತ್ರದ ಮೇಲೆ ಕೆಲವು ಪರೀಕ್ಷೆಗಳನ್ನು ಮಾಡಿ ಶವವಸ್ತ್ರದ ಒಂದು ಅಂಶವನ್ನು ನಾಶಕ್ಕೊಳಪಡಿಸದೆ ಈ ಕೆಳಗಿನ ಪರೀಕ್ಷೆಗಳನ್ನು ಕೈಗೊಳ್ಳಲಾಯಿತು:

1. ಕಪ್ಪು ಬಿಳುಪು ಫೋಟೋಗ್ರಾಫಿ.
2. ವಿವಿಧ ರೀತಿಯ ವೈಜ್ಞಾನಿಕ ಫೋಟೋಗ್ರಾಫಿ ವಿಧಾನಗಳನ್ನು ಬಳಸಿದರು.
3. X- ರೇ.
4. U.V. ಫೋಟೋಗ್ರಾಫಿ.
5. ಫೋಟೋ ಮೈಕ್ರೋಸ್ಕೋಪ್ ಉಪಯೋಗಿಸಿ ಫೋಟೋಗ್ರಾಫಿ.
6. ವಿಶಿಷ್ಟವಾದ ಅಂಟುವ ಟೇಪ್‌ಗಳನ್ನು ಉಪಯೋಗಿಸಿ ಬಟ್ಟೆಯ ಪರೀಕ್ಷೆ.
7. ಬಟ್ಟೆಯ ರಕ್ತಸಿಕ್ತ ನೂಲುಗಳ ಪರೀಕ್ಷೆ ಮತ್ತು DNA ಕಂಡುಹಿಡಿದುದು.

ಈ ಪರೀಕ್ಷೆಗಳನ್ನು ನಡೆಸಿದುದರ ಮುಖ್ಯ ಉದ್ದೇಶ ಈ ಬಟ್ಟೆಯಲ್ಲಿ ಮನುಷ್ಯನ ಪ್ರತಿಬಿಂಬ ಹೇಗೆ ಮೂಡಿತು ಎಂಬುದನ್ನು ಪರಿಶೀಲಿಕ್ಕಾಗಿತ್ತು. ದೀರ್ಘಕಾಲ ಪರೀಕ್ಷೆ ನಡೆಸಿದರೂ ಈ ಪ್ರಶ್ನೆಗೆ ಉತ್ತರ ಇನ್ನೂ ದೊರಕಿಲ್ಲ.

ಶವವಸ್ತ್ರದಲ್ಲಿರುವ ಪ್ರತಿಬಿಂಬವು ಎಂತಹ ರೀತಿ ಇದೆ ಎಂದರೆ ಅದು ಹೇಗೆ ಸಂಭವಿಸಿತು ಎಂಬುದನ್ನು ಸೂಚಿಸುವುದು ಕಷ್ಟಕರವಾಗಿದೆ.

ಪ್ರತಿಬಿಂಬವು ಹೇಗೆ ಉಂಟಾಯಿತು ಎಂಬುದನ್ನು ವಿವರಿಸುವ ಸಿದ್ಧಾಂತಗಳು ಈ ಕೆಳಗಿನ ವೈಶಿಷ್ಟ್ಯಗಳನ್ನು ಪರಿಶೀಲಿಸಬೇಕು:

1. ಪ್ರತಿಬಿಂಬವು ಬಹಳ ಅಸ್ಪಷ್ಟವಾಗಿದೆ. ಬಟ್ಟೆಯ ಮೇಲ್ಭಾಗದಲ್ಲಿ ಮಾತ್ರ ಕಾಣಿಸುತ್ತದೆ.


2. ಈ ಪ್ರತಿಬಿಂಬ ಇರುವಲ್ಲಿ ಯಾವುದೇ ಬಣ್ಣದ ಪದಾರ್ಥಗಳು ಇಲ್ಲ.

3. ಬಟ್ಟೆಯಿಂದ ಶರೀರವು ದೂರ ಇರುವಾಗ ಪ್ರತಿಬಿಂಬ ಅಸ್ಪಷ್ಟವಾಗುತ್ತದೆ. ಇದು ಈ ಶವವಸ್ತ್ರದ '3D' ಗುಣವನ್ನು ತೋರಿಸುತ್ತದೆ.

4. ಪ್ರತಿಬಿಂಬವು ಋಣಾತ್ಮಕ (Negative) ಆಗಿದೆ.

## 1988ರ ಕಾರ್ಬನ್-14 ಪರೀಕ್ಷೆ ಈ ವಸ್ತ್ರವನ್ನು ಕೃತ್ರಿಮ ಎಂದು ಸಾಬೀತುಗೊಳಿಸಿಲ್ಲವೇ?

1988ರಲ್ಲಿ ಶವವಸ್ತ್ರದ ಬಗ್ಗೆ ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಮುಖ್ಯ ಸಮಾಚಾರಗಳು ಪ್ರಕಟವಾದುವು. ಕಾರ್ಬನ್ – 14 ಪರೀಕ್ಷೆ ಮೂಲಕ ಈ ಶವವಸ್ತ್ರ 1260 ರಿಂದ 1360 ಕಾಲಾವಧಿಯಲ್ಲಿ ನಿರ್ಮಿತವಾದುದೆಂದು ಸಾಬೀತಾಗಿದೆ ಎಂದು ಪ್ರಕಟವಾಯಿತು. ಈ ವಸ್ತ್ರ ಕೃತ್ರಿಮವೋ ವಾಸ್ತವಿಕವೋ ಎಂಬುದರ ಬಗ್ಗೆ ನಾಲ್ಕು ಪ್ರಯೋಗಶಾಲೆಗಳು ಸ್ವತಂತ್ರವಾಗಿ ಪ್ರಯೋಗ ನಡೆಸಿ ಈ ತೀರ್ಮಾನಕ್ಕೆ ಬಂದಿದ್ದುವು. ಶವವಸ್ತ್ರದ ಬಗ್ಗೆ ದಾಖಲಿಸಲಾದ ಚರಿತ್ರೆಗೆ ಇದು ಸರಿಹೊಂದುವಂತೆ ಇತ್ತು. ಇದಕ್ಕೆ ಹಿಂದಿನ ಕಾಲಕ್ಕೆ ಸಂಬಂಧಿಸಿ ಯಾವುದೇ ಅಧಿಕೃತ ದಾಖಲೆಗಳು ಇರಲಿಲ್ಲ.



ಶವವಸ್ತ್ರದಲ್ಲಿ ಮೂಡಿದ ಪ್ರತಿಬಿಂಬ

ವಿಜ್ಞಾನಿಗಳು ಶವವಸ್ತ್ರದ ಸಾಚಾತನವನ್ನು ನಿರಾಕರಿಸಿ ಇದು ಧರ್ಮದ ಮೇಲೆ ವಿಜ್ಞಾನವು ಗಳಿಸಿದ ಜಯ ಎಂದು ಘೋಷಿಸಿದರು.

ಪ್ರೊಫೆಸರ್ ಎಡ್ವರ್ಡ್ ಹಾಲ್‌ರವರಿಗೆ ಅರ್ಪಿಸಿದ ಶ್ರದ್ಧಾಂಜಲಿಯಲ್ಲಿ ಕಾರ್ಬನ್-14 ಪರೀಕ್ಷೆ ಬಗ್ಗೆ ವಿವಿಧ ವಿಜ್ಞಾನಿಗಳ ಅಭಿಪ್ರಾಯಗಳನ್ನು ಹೀಗೆ ಸಂಗ್ರಹಿಸಲಾಗಿದೆ:

"14ನೇ ಶತಮಾನದಲ್ಲಿ ಕೃತ್ರಿಮ ಅವಶೇಷಗಳನ್ನು ನಿರ್ಮಿಸುವ ಮಿಲಿಯಗಟ್ಟಲೆ ಬಂಡವಾಳದ ವ್ಯಾಪಾರವು ನಡೆಯುತ್ತಿತ್ತು."

"ಒಬ್ಬನಿಗೆ ಒಂದು ತುಂಡು ಹಳೆಯ ಲಿನನ್ ಬಟ್ಟೆ ಲಭಿಸಿತು. ಅವನು ಅದನ್ನು ವಂಚಿಸಲು ಉಪಯೋಗಿಸಿದನು."

"ಕೆಲವರು ಫ್ಲಾಟ್ ಅರ್ಥ್ ಸೊಸೈಟಿ (ಭೂಮಿ ಅಗಲಕ್ಕೆ ಹರಡಿಕೊಂಡಿದೆ; ಗೋಳಾಕೃತಿಯಲ್ಲಿ ಇಲ್ಲ ಎಂದು ಹೇಳುವವರು) ಹಾಗೆ ಶವವಸ್ತ್ರದ ಸಾಚಾತನದ ಬಗ್ಗೆ ಹೋರಾಡುವರು. ಆದರೆ ನಮಗೆ ಸಂಬಂಧಿಸಿ ಈ ವಿಷಯವು ಇಲ್ಲಿಗೆ ಮುಕ್ತಾಯವಾಗಿದೆ." (http://www.independent.co.uk/news/obituaries/professor.edward_hall_729330.html)

## ಕಾರ್ಬನ್ ಡೇಟಿಂಗ್ ಪರೀಕ್ಷೆಯ ಪರಿಣಾಮ: ಉತ್ತರಗಳಿಗಿಂತ ಹೆಚ್ಚು ಪ್ರಶ್ನೆಗಳು

ವಿದ್ವಾಂಸರಿಗೆ ಮತ್ತು ಪರಿಣಿತರಿಗೆ ಕಾರ್ಬನ್ ಡೇಟಿಂಗ್ ಪರೀಕ್ಷೆಯ ಪರಿಣಾಮಗಳು ಉತ್ತರಗಳಿಗಿಂತ ಹೆಚ್ಚು ಪ್ರಶ್ನೆಗಳಿಗೆ ಕಾರಣವಾಗಿದೆ. ಶವವಸ್ತ್ರವು ಕೃತ್ರಿಮವಾಗಿದ್ದರೆ, ಅದರಲ್ಲಿ ಮೂಡಿದ ಪ್ರತಿಬಿಂಬ ಹೇಗೆ ರೂಪಿಸಲ್ಪಟ್ಟಿತು? ಫೊಟೋಗ್ರಾಫೀ ವಿಜ್ಞಾನ ಮನವರಿಕೆಮಾಡುವ ಮೊದಲು ಋಣಾತ್ಮಕ ಪ್ರತಿಬಿಂಬ ಸೃಜಿಸಲಾದುದಾದರೂ ಹೇಗೆ? ಶಾರೀರಿಕ ಘಟನೆಗೆ ಅನುಸಾರವಾಗಿ ರಕ್ತ ಹರಿಯುವಿಕೆಯು ಶಾರೀರಿಕ ಘಟನೆಯ ಬಗ್ಗೆ ಪೂರ್ಣ ಜ್ಞಾನ ಲಭಿಸಿರದ ಕಾಲದಲ್ಲಿ ಬಟ್ಟೆಯಲ್ಲಿ ಗುರುತು ಮಾಡಿದುದಾರೂ ಹೇಗೆ?

ವಿದ್ವಾಂಸರು ಕಾರ್ಬನ್ ಡೇಟಿಂಗ್ ವಿಧಾನದಲ್ಲಿ ಉಂಟಾದ ತಪ್ಪುಗಳ ಬಗ್ಗೆ ಪರಿಶೀಲನೆ ನಡೆಸಿದರು. ಪ್ರಸಿದ್ಧ ವಿದ್ವಾಂಸರು ಕಾರ್ಬನ್ ಡೇಟಿಂಗ್‌ನಲ್ಲಿ ಉಂಟಾದ ತಪ್ಪುಗಳ ಸಿದ್ಧಾಂತಗಳನ್ನು ಮುಂದಿರಿಸಿದರು. ಅವರು ಬಟ್ಟೆಯ ಮೇಲೆ ಉಂಟಾದ ಬಯೋಪ್ಲಾಸ್ಟಿಕ್ ಆವರಣದ ಬಗ್ಗೆ ಮತ್ತು ಬೆಂಕಿಯಿಂದ ಉಂಟಾದ ಹಾನಿಯ ಬಗ್ಗೆ ಶಂಕಿಸಿದರು. ಅದು ಸಹ ಕಾರ್ಬನ್ ಕಾಲನಿರ್ಣಯದ ಮೇಲೆ ಪ್ರಭಾವ ಬೀರಿರಬಹುದು. ಗೂಢಾಲೋಚನೆಯ ಸಿದ್ಧಾಂತಗಳೂ ಪ್ರಕಟಿಸಲಾದುವು. ಕಾರ್ಬನ್ ಡೇಟಿಂಗ್ ನಡೆಸಿದ ವಿಜ್ಞಾನಿಗಳ ಮತ್ತು ವ್ಯಾಟಿಕನ್ ಅಧಿಕಾರಿಗಳು ಕಾರ್ಬನ್ ಡೇಟಿಂಗ್ ಪರಿಣಾಮಗಳ ಮೇಲೆ ಪ್ರಭಾವ ಬೀರಿರಬಹುದೆಂಬ ಸಿದ್ಧಾಂತಗಳೂ ಜಾರಿಗೊಂಡವು.

## ರೇ ರೋಗರ್ಸ್ – ಕಾರ್ಬನ್ ಡೇಟಿಂಗ್ ಬಗ್ಗೆ ನೀಡಿದ ಅಭಿಪ್ರಾಯ

2005ರಲ್ಲಿ STURP ಟೀಮಿನ ಸದಸ್ಯರೂ ಥರ್ಮೋಡೈನಮಿಕ್ಸ್ ಪರಿಣಿತರೂ ಆದ ರೇ ರೋಗರ್ಸ್ ಕಾರ್ಬನ್ ಡೇಟಿಂಗ್ ಸಮಸ್ಯೆಗೆ ಪರಿಹಾರ ಸೂಚಿಸಿದರು.

ಸೂಬೆನ್‌ಫೊರ್ಡ್ ಮತ್ತು ಅವರ ಪತಿ ಜೋಸೆಫ್ ಮೆರಿನೋ ವಿಜ್ಞಾನಿಗಳಾಗಿರಲಿಲ್ಲ. ಹೀಗಿದ್ದರೂ 1978ರಿಂದ ಮೊದಲುಗೊಂಡು ಅವರು ಶವವಸ್ತ್ರದ ಪ್ರತಿಬಿಂಬಗಳ ವಿಶ್ಲೇಷಣೆ ನಡೆಸಿದರು. ಅವರು ಕಂಡುಕೊಂಡಿದ್ದೇನೆಂದರೆ, ರೇಡಿಯೋ ಕಾರ್ಬನ್ ಪರೀಕ್ಷೆಗೋಸ್ಕರ ಶವವಸ್ತ್ರದ ತುಂಡು ಯಾವ ಭಾಗದಿಂದ ಪಡೆಯಲಾಯಿತೋ ಆ ಭಾಗವನ್ನು ಪುನಃ ನೇಯಲಾಗಿತ್ತು.

ಬೇರಿ ಸ್ಕೋವೊರ್ಟ್‌ರ್ಝ್ ಇತ್ತೀಚೆಗಿನ ಒಂದು ಫಿಲ್ಮ್ ಡೊಕ್ಯುಮೆಂಟರಿಯಲ್ಲಿ ಹೀಗೆ ಹೇಳಿದರು:

"ಕಾರ್ಬನ್ ಡೇಟಿಂಗ್‌ಗೋಸ್ಕರ ನೀಡಲಾದ ಬಟ್ಟೆಯ ನಮೂನೆಯ ಅನೇಕ ಚಿತ್ರಗಳನ್ನು ಟೆಕ್ಸ್‌ಟೈಲ್ ಪರಿಣಿತರಿಗೆ ತೋರಿಸಲಾಯಿತು. ಆ ಚಿತ್ರವು ಶವವಸ್ತ್ರದ ತುಂಡಿನ ಚಿತ್ರ ಎಂದು ಅವರಿಗೆ ತಿಳಿದಿರಲಿಲ್ಲ. ಪ್ರತಿಯೊಬ್ಬ ಟೆಕ್ಸ್‌ಟೈಲ್ ಪರಿಣಿತರು ಒಬ್ಬರು ಇನ್ನೊಬ್ಬರಿಂದ ಸ್ವತಂತ್ರವಾಗಿ ಹೀಗೆ ಹೇಳಿದರು: "ಈ ಬಟ್ಟೆಯನ್ನು

ಪುನಃ ನೇಯಲಾಗಿದೆ ಎಂಬಂತೆ ತೋರುತ್ತದೆ."

ಬೆನ್‌ಫ್ಲರ್ಡ್ ಮತ್ತು ಮೆರಿನೋ ದಂಪತಿ ಶವವಸ್ತ್ರದ ಈ ಭಾಗವನ್ನು 16ನೇ ಶತಮಾನದ ಹತ್ತಿಯಿಂದ ದುರಸ್ತಿಪಡಿಸಲಾಯಿತು ಎಂದು ನಂಬುತ್ತಾರೆ. ಮೂಲಬಟ್ಟೆ ಮತ್ತು 16ನೇ ಶತಮಾನದ ಹತ್ತಿ ಪರಸ್ಪರ ಮಿಶ್ರವಾಗಿ ನೇಯಿದಿರಬಹುದು. ಒಂದನೇ ಶತಮಾನದ ಬಟ್ಟೆ ಮತ್ತು 16ನೇ ಶತಮಾನದ ಹತ್ತಿ ಇವುಗಳ ಮಿಶ್ರಣದ ಬಟ್ಟೆ ಇವೆರಡು ಶತಮಾನಗಳ ಮಧ್ಯದ ಕಾಲವನ್ನು ಸೂಚಿಸಿರಲು ಸಾಧ್ಯವಿದೆ ಎಂದು ಅವರು ಪ್ರತಿಪಾದಿಸಿದರು.

ಈ ದಂಪತಿಗಳು "ಕಾರ್ಬನ್-14 ಡೇಟಿಂಗ್ ನಿರ್ಧಾರದಲ್ಲಿ ಉಂಟಾದ ತಪ್ಪಿಗೆ ಕಾರಣ ಶವವಸ್ತ್ರವನ್ನು ದುರಸ್ತಿಗೊಳಿಸಿದುದು" ಎಂಬ ಶೀರ್ಷಿಕೆಯಲ್ಲಿ ಪ್ರಕಟಣೆ ನೀಡಿದರು. ಇದನ್ನು ರೇ ರೋಗರ್ಸ್ ಗಮನಿಸಿದರು. ರೇ ರೋಗರ್ಸ್ ತಾನು ಕೈಗೊಂಡ ಸಂಶೋಧನೆಯನ್ನು ಉತ್ತೇಜಿಸಿದ ಕಾರಣವನ್ನು ಹೀಗೆ ವಿವರಿಸಿದರು:

"ನಾನು ಶವವಸ್ತ್ರದ ಬಗ್ಗೆ ಸಂಶೋಧನೆಯನ್ನು ಬಿಟ್ಟಿದ್ದೆ. ಅದರೆ ಅದೇ ಸಮಯದಲ್ಲಿ ಕಾರ್ಬನ್ ಡೇಟಿಂಗ್‌ನಲ್ಲಿ ತಪ್ಪು ಸಂಭವಿಸಿರ ಬಹುದೆಂಬುದರ ಕುರಿತು ಅಸಂಖ್ಯಾತ ಕಾರಣಗಳನ್ನು ಭ್ರಾಂತಿದಾಯಕ ವಾಗಿ ಸೂಚಿಸಿದುದನ್ನು ನಾನು ಗಮನಿಸಿದೆ. ಕೊನೆಯದಾಗಿ ಬೆನ್‌ಫೋರ್ಡ್ ಮತ್ತು ಮೆರಿನೋ ದಂಪತಿಯ ಅಭಿಪ್ರಾಯವನ್ನು ನಾನು ತಿಳಿದೆನು."

ಬೆರ್ರಿ ಸ್ಕೋವೊರ್ಟ್‌ಝ್ ತನಗೆ ರೇ ರೋಗರ್ಸ್ ಮಾಡಿದ ಟೆಲಿಫೋನ್ ಕರೆಯ ಬಗ್ಗೆ ಹೀಗೆ ಹೇಳುತ್ತಾರೆ:

"ರೇ ರೋಗರ್ಸ್ ಹೇಳಿದರು: ಈ ದಂಪತಿ ಹೇಳುವುದು ಅವಿವೇಕವಾಗಿದೆ. ಅವರು ಹೇಳುವುದು ತಪ್ಪೆಂದು ಐದು ನಿಮಿಷಗಳಲ್ಲಿ ನಾನು ಸಾಬೀತುಗೊಳಿಸಬಲ್ಲೆನು." ನಾನು ಹೇಳಿದೆ: "ಒಳ್ಳೆಯದು ರೇ ರೋಗರ್ಸ್, ಹಾಗೆಯೇ ಮಾಡಿರಿ."

ರೇ ರೋಗರ್ಸ್ ಈ ವಿಷಯದಲ್ಲಿ ಸಂಶೋಧನೆ ನಡೆಸಲು ಅದ್ವಿತೀಯ ಸ್ಥಾನದಲ್ಲಿದ್ದರು. ಅವರ ಕೈಯಲ್ಲಿ ರೇಡಿಯೋ ಕಾರ್ಬನ್ ಪರೀಕ್ಷೆಗೆ ಬಳಸಲಾದ ಬಟ್ಟೆಯ ತುಣುಕು ಇತ್ತು. ಅದರೊಂದಿಗೆ ಅದಕ್ಕೆ ಸಮೀಪವಾಗಿ ಇದ್ದ ಭಾಗದ ಬಟ್ಟೆ ಚೂರು ಸಹ ಅವರ ಕೈಯಲ್ಲಿ ಇತ್ತು.

ರೇ ರೋಗರ್ಸ್ ಆ ದಂಪತಿಗಳ ಸಿದ್ಧಾಂತವನ್ನು ಖಂಡಿಸಲು ಪ್ರಯತ್ನಿಸಿ ಗಂಟೆಗಳು ದಾಟಿಹೋದಾಗ ಬೆರ್ರಿ ಸ್ಕೋವೋರ್ಟ್‌ರನ್ನು ಕರೆದು ಹೇಳಿದರು:

"ದಂಪತಿಗಳು ಹೇಳಿದುದು ಸರಿ. ಇಲ್ಲಿ ಹತ್ತಿ ಇದೆ. ಶವವಸ್ತ್ರದ ಉಳಿದ ಭಾಗದಲ್ಲಿ ಹತ್ತಿ ಇಲ್ಲ. ಇಲ್ಲಿ ಹತ್ತಿ ನೂಲಿನಿಂದ ನೇಯಲಾಗಿದೆ. ಅವರು ಹೇಳಿದುದು ಸರಿ."

ರೇ ರೋಗನ್ಸ್ ಹೀಗೆ ತೀರ್ಮಾನಕ್ಕೆ ಬಂದರು: ಕಾರ್ಬನ್ ಡೇಟಿಂಗ್ ಪರೀಕ್ಷೆಗೆ ನೀಡಲಾದ ಬಟ್ಟೆಯು ಪುನಃ ನೇಯಲಾದ ಬಟ್ಟೆಯ ತುಂಡಾಗಿದೆ.

ದುಃಖಕರವಾದ ವಿಷಯವೇನೆಂದರೆ, ರೇ ರೋಗರ್ಸ್ ತಮ್ಮ ಸಂಶೋಧನೆಯನ್ನು ಮುಗಿಸಿದ ನಂತರ ಸ್ವಲ್ಪ ಸಮಯದೊಳಗೆ ಕ್ಯಾನ್ಸರ್ ರೋಗ ಉಲ್ಬಣಗೊಂಡು ಮೃತರಾದರು. ಅವರು ನಡೆಸಿದ ಸಂಶೋಧನೆಯ ಪೂರ್ಣ ವಿವರಗಳನ್ನು ಶವವಸ್ತ್ರದ ಬಗ್ಗೆ ಪರಿಣಿತರೂ ಅವರ ಸಹೋದ್ಯೋಗಿಯೂ ಆಗಿದ್ದ ಬೆರ್ರಿ ಸ್ಕೋವೊರ್ಟ್‌ಝ್ DVD ರೂಪದಲ್ಲಿ ರೇ ರೋಗರ್ಸ್ ನಿಧನ ಹೊಂದುವ ಮೊದಲು ಪ್ರಕಟಿಸಿದರು. ರೇ ರೋಗರ್ಸ್‌ರವರ ಸಂಶೋಧನೆಗೆ ಸಂಬಂಧಿಸಿದ ಸವಿವರ ಲೇಖನ ಪ್ರಸಿದ್ಧ ಕೆಮಿಸ್ಟ್ರಿ ಪತ್ರಿಕೆಯಾದ "ತೆರ್ಮೋಚಿಮಿಕ ಏಕ್ಟಾ (Thermochimica Acta) ಪ್ರಕಟಿಸಿತು.

ಇದು ಕ್ರಾಂತಿದಾಯಕ ಸಂಶೋಧನೆಯಾಗಿತ್ತು. ಕಾರ್ಬನ್ ಡೇಟಿಂಗ್ ಪರೀಕ್ಷೆಯ ಪರಿಣಾಮ ರದ್ದುಗೊಳಿಸಲ್ಪಟ್ಟಿದೆ. ಶವವಸ್ತ್ರದ ಸಾಚಾತನದ ಬಗ್ಗೆ ಇರುವ ಅತ್ಯಂತ ದೊಡ್ಡ ಆಕ್ಷೇಪವನ್ನು ದೂರೀಕರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ನೋಡಿರಿ:

(1. TURIN SHROUD : The New Evidence - Discovery H.D. April 2009

2. Studies on the Radio Carbon sample from the Shroud of Turin, Thermochimica Acta Vol:425 Issue 1-2, Pages 189-194.)

## ಯೇಸು ಕ್ರಿಸ್ತರು ಶಿಲುಬೆಯಿಂದ ಜೀವಂತವಾಗಿ ಇಳಿಸಲ್ಪಟ್ಟರೆಂದು ಶವವಸ್ತ್ರ ಸಾಕ್ಷ್ಯ ಹೇಳುತ್ತದೆಯೇ?

ಅಹ್ಮದಿ ಮುಸ್ಲಿಮರು ಯೇಸು ಕ್ರಿಸ್ತರ ಬಗ್ಗೆ, ಅವರು ಶಿಲುಬೆಯಿಂದ ಜೀವಂತವಾಗಿ ಇಳಿಸಲ್ಪಟ್ಟರೆಂದು ನಂಬುವ ಕಾರಣ ಟ್ಯೂರಿನಿನ ಶವವಸ್ತ್ರ ಯೇಸು ಕ್ರಿಸ್ತರು ಶಿಲುಬೆಯಿಂದ ಇಳಿಸಲ್ಪಡುವಾಗ ಜೀವಂತವಾಗಿ ಇದ್ದರೆಂದು ಸೂಚಿಸುತ್ತದೆ ಎಂಬುದಕ್ಕೆ ಸಾಕ್ಷ್ಯಾಧಾರವಾಗಿದೆ.

ಶರೀರವು ಕೆಟ್ಟು ಹೋದ ಬಗ್ಗೆ ಯಾವ ಸಾಕ್ಷ್ಯವೂ ಶವವಸ್ತ್ರದಿಂದ ದೊರಕುವುದಿಲ್ಲ. ಪ್ರತಿಬಿಂಬದ ಸ್ಥಿತಿ, ಬಟ್ಟೆಯಲ್ಲಿ ಬಹಳ ಹೆಚ್ಚು ರಕ್ತ ಇರುವುದು ಮತ್ತು ಪ್ರತಿಬಿಂಬ ಮೂಡಿದುದು ಇದನ್ನೇ ಸೂಚಿಸುತ್ತದೆ. (The Turin Shroud is Genuine, Rodney Hoare, 1994 Pages 69-73 ನೋಡಿರಿ.)

ಬೇರೆ ಸಂಶೋಧಕರು ಶವವಸ್ತ್ರವು ಇದಕ್ಕೆ ವಿರುದ್ಧವಾದುದನ್ನು ಸೂಚಿಸುತ್ತದೆ ಎಂದು ಹೇಳುತ್ತಾರೆ. ಶವವಸ್ತ್ರ ಯಾರಿಗೆ ಸುತ್ತಲಾಯಿತೋ ಆತನು ಮೃತನಾಗಿದ್ದನು. ಶವ ಮರಗಟ್ಟುವಿಕೆ ಮತ್ತು ರಕ್ತ ಪ್ಲಾಸ್ಮಾ ಬೇರೆಯಾದುದನ್ನು ಸಾಕ್ಷ್ಯವಾಗಿ ನೀಡುತ್ತಾರೆ.
(The Turin Shroud : The Illustrated Evidence - Ian Wilson & Barrie Schowortz:2000 Pages 67-81 ನೋಡಿರಿ).

ಇದು ಅತ್ಯಂತ ವಿವಾದಾತ್ಮಕ ವಿಷಯವಾಗಿದೆ. ಯೇಸು ಕ್ರಿಸ್ತರು ಶಿಲುಬೆಯಿಂದ ಜೀವಂತವಾಗಿ ಇಳಿಸಲ್ಪಟ್ಟರೆಂಬುದಕ್ಕೆ ಶವವಸ್ತ್ರ ಸಾಕ್ಷಿಯಾಗಿದೆ ಎಂಬುದರ ಬಗ್ಗೆ ರೋಚಕ ಚರ್ಚೆಗಳು ಪ್ರಯೋಜನಕರ ವಾಗಿಲ್ಲ. ಜೀಸಸ್ ಕೋನ್ಸ್‌ಪಿರೆಸಿ (Jesus Conspiracy) - ಯೇಸುಕ್ರಿಸ್ತರ ಗೂಢಾಲೋಚನೆ ಎಂಬ ಪುಸ್ತಕ ಬರೆದ ಹೋಲ್‌ಗರ್ ಕರ್ಸ್ಟೆನ್ (Holger Karsten) ಮೊದಲಾದವರು ಪ್ರತಿಪಾದಿಸುವ ಗೂಢಾಲೋಚನೆ ಸಿದ್ಧಾಂತವು ಯೇಸು ಕ್ರಿಸ್ತರು ಶಿಲುಬೆಯಿಂದ ಜೀವಂತವಾಗಿ ಇಳಿಸಲ್ಪಟ್ಟರೆಂಬ ವಾದವನ್ನು ರದ್ದುಗೊಳಿಸಲು ಸಂಶೋಧಕರಿಗೆ ಸಹಾಯಕವಾಗಿದೆ.

ಇನ್ನೊಂದು ಕಡೆ ಡಾಕ್ಟರ್ ಫ್ರೆಡ್‌ರಿಕ್ ಝುಗಿಬೆ ಎಂಬವರು ನಿಷ್ಠಾವಂತ ಕ್ರೈಸ್ತರಾಗಿದ್ದು ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾದರೆಂಬ ವಾದವನ್ನು ಮಾಡುವವರಾಗಿದ್ದಾರೆ. ಈ ಬಗ್ಗೆ ಹೆಚ್ಚು ಸಂಶೋಧನೆಗಳನ್ನು ನಡೆಸಬೇಕಾಗಿದೆ. ಹೆಚ್ಚು ಪ್ರಶ್ನೆಗಳಿಗೆ ಉತ್ತರ

ನೀಡಬೇಕಾಗಿದೆ. ಸದ್ಯ ಸಾಕ್ಷ್ಯಾಧಾರಗಳು ನಿರ್ಣಾಯಕವಾಗಿಲ್ಲ. ಒಂದೇ ರೀತಿಯ ಮಾಹಿತಿಗಳನ್ನು ಆಧಾರವಾಗಿಟ್ಟುಕೊಂಡು ಪರ ಮತ್ತು ವಿರುದ್ಧ ವಾದಗಳನ್ನು ಮಾಡಲಾಗುತ್ತಿದೆ. ಶವವಸ್ತ್ರವು ಜೀವಂತ ವ್ಯಕ್ತಿಗೆ ಸುತ್ತಲಾಗಿತ್ತು ಎಂಬುದನ್ನು ಅನುಮೋದಿಸಿ ಬರೆದ ಲೇಖಕರ ವಿವರಗಳನ್ನು ಕೆಳಗೆ ನೀಡುತ್ತೇವೆ:

## 1. ರೋಡ್ನೀ ಹೋರ್

**(Rodney Hoare - The Turin Shroud is Genuine - 1994)**

ಶವವಸ್ತ್ರದ ಪ್ರತಿಬಿಂಬದ ಚಿತ್ರವನ್ನು FBI ವಿಜ್ಞಾನಿಗಳ ಪರಾಮರ್ಶೆಗೆ ನೀಡಿದ ಬಗ್ಗೆ, ಅವರೊಂದಿಗೆ ನಡೆಸಿದ ಚರ್ಚೆಯ ನಂತರ ಅವರು ತಲಪಿದ ನಿರ್ಣಯದ ಬಗ್ಗೆ ಹೀಗೆ ರೋಡ್ನೀ ಹೋರ್ ಹೇಳುತ್ತಾರೆ:

"ಅಪರಾಧ ವಿಜ್ಞಾನ ಶಾಖೆಯ ವಿಜ್ಞಾನಿಗಳು ಹೀಗೆ ವಾದಿಸಿದರು: ಹದಿನೇಳನೆಯ ಶತಮಾನದ ಮೊದಲಿನ ವೈಜ್ಞಾನಿಕ ಪ್ರಗತಿಯ ದೃಷ್ಟಿಯಲ್ಲಿ ಶವವಸ್ತ್ರವನ್ನು ಹೊದಿಸಲಾದ ವ್ಯಕ್ತಿ ಪೂರ್ಣವಾಗಿ ಮೃತನಾಗಿದ್ದನು. ಆದರೆ ಈಗಿನ ವೈಜ್ಞಾನಿಕ ಜ್ಞಾನದ ಬೆಳಕಿನಲ್ಲಿ ಆ ಶವವಸ್ತ್ರವನ್ನು ಹೊದಿಸಲಾದ ವ್ಯಕ್ತಿ ಗಾಢವಾದ ಪ್ರಜ್ಞಾಹೀನ ಸ್ಥಿತಿಯಲ್ಲಿ (In a deep coma) ಇದ್ದರು.

ಇದನ್ನು ಹೀಗೆ ವಿಶದೀಕರಿಸಲಾಗಿದೆ:

ರಾಸಾಯನಿಕವಾಗಿ ಕಲೆ ಉಂಟು ಮಾಡುವ ಪ್ರಕ್ರಿಯೆಯು ಉಷ್ಣದ ಸ್ಥಿತಿಗನುಸಾರವಾಗಿರುತ್ತದೆ. ಹೆಚ್ಚು ಬಿಸಿಯಾದರೆ ಹೆಚ್ಚು ಗಾಢವಾದ ಕಲೆಗಳು ಉಂಟಾಗುತ್ತವೆ. ಬಟ್ಟೆಯ ತಾಪ ಸಹ ಶರೀರದ ತಾಪಕ್ಕೆ ಸಮವಾಗಿರಬೇಕು. ಶರೀರದಲ್ಲಿ ರಕ್ತ ಸಂಚಲನೆ ಇರುವಾಗ ಮತ್ತು ಹೃದಯ ಮಿಡಿತ ಜಾರಿಯಲ್ಲಿರುವಾಗ ಮಾತ್ರ ಇದು ಸಾಧ್ಯ.... ಶರೀರವು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಿರಬೇಕು; ಇಪ್ಪತ್ತನೆಯ ಶತಮಾನದ ವೈದ್ಯಕೀಯ ಮಾನದಂಡ ಪ್ರಕಾರ ಶರೀರವು ಮೃತವಾಗಿರಲಿಲ್ಲ.

ರೋಡ್ನೀ ಹೋರ್ ಹೀಗೆ ಸಹ ಬರೆದಿದ್ದಾರೆ: "STURP ಸಂಘವು ಶಾರೀರಿಕ ಮಚ್ಚೆಗಳ ಹಾಗಿರುವ ಕಲೆಗಳನ್ನು ಬಟ್ಟೆಯನ್ನು ಬೇಯಿಸಿದಾಗ ಕಂಡು ಹಿಡಿಯಿತು. ಆ ಬಟ್ಟೆಯಲ್ಲಿ ಬೆವರು, ರಕ್ತ ಬೋಳ ಮತ್ತು ಅಗರಿನ ಮೇಲ್‌ಹೊದಿಕೆ ಇತ್ತು.

ರೋಡ್ನೀ ಶವವಸ್ತ್ರದಿಂದ ಸಾಕ್ಷ್ಯಾಧಾರಗಳನ್ನು ಶಿಲುಬೆಯ ಸಂಭವದ ವಿವರಣೆಯೊಂದಿಗೆ ನೀಡಿದ್ದಾರೆ. ಹೊಸ ಒಡಂಬಡಿಕೆಯನ್ನು ಉಲ್ಲೇಖಿಸಿ ಯೇಸು ಕ್ರಿಸ್ತರು ಶಿಲುಬೆಯಿಂದ ಜೀವಂತವಾಗಿ ಇಳಿದರೆಂದು ವಾದಿಸುತ್ತಾರೆ.

## 2. ಕುರ್ಟ್ ಬರ್ನ

**(Kurt Bern'a - Jesus Nicht Kreuz Gestorben - Jesus did not Perish on the Cross - 1975 Zurich)**

ಕುರ್ಟ್ ಬರ್ನ ಹೇಳುವುದು ಹೀಗೆ:

ಶವವಸ್ತ್ರದ ಸಾಕ್ಷ್ಯ ಮತ್ತು ಹೊಸ ಒಡಂಬಡಿಕೆಯ ಉಲ್ಲೇಖಗಳು ಯೇಸುಕ್ರಿಸ್ತರು ಶಿಲುಬೆಯಿಂದ ಜೀವಂತವಾಗಿ ಇಳಿದರು ಎಂಬುದನ್ನು ಸೂಚಿಸುತ್ತದೆ.

ಕುರ್ಟ್ ತನ್ನ ವಾದಕ್ಕೆ ಸಾಕ್ಷ್ಯವಾಗಿ ಜರ್ಮನಿಯ ಒಂದು ಯುನಿರ್ವಸಿಟಿಯ ಪ್ರೊಫೆಸರರಾದ ಥಿಯೋಡೋರ್ ಹಿರ್ಟ್ (Theodor Hirt) ರವರ ಅಭಿಪ್ರಾಯವನ್ನು ಉಲ್ಲೇಖಿಸುತ್ತಾರೆ:

"ಮನುಷ್ಯನು ಸತ್ತುಹೋದಾಗ ಶರೀರದ ರಕ್ತ ಸಂಚಾರವು ಸ್ಥಗಿತಗೊಳ್ಳುತ್ತದೆ. ಮೃತನಾದ ತಕ್ಷಣ ಮೃತನ ಚರ್ಮ ಕೆಂಪು ತಾಜಾ ಬಣ್ಣ ಹೊಂದಿರಬಹುದು. ಏಕೆಂದರೆ ಆಗ ಸೂಕ್ಷ್ಮರಕ್ತನಾಳಗಳಲ್ಲಿ ರಕ್ತವು ಇರುತ್ತದೆ. ಆದರೆ ಹೃದಯವು ಬಡಿತವನ್ನು ನಿಲ್ಲಿಸುವಾಗ ರಕ್ತನಾಳಗಳು ರಕ್ತವನ್ನು ಹಿಂದಕ್ಕೆ ಸರಿಸುತ್ತವೆ. ಆಗ ಚರ್ಮದ ಕೆಳಗಿರುವ ಸೂಕ್ಷ್ಮ ರಕ್ತನಾಳಗಳು ರಕ್ತರಹಿತವಾಗುತ್ತವೆ. ಅವು ರಕ್ತ ಸಂಚಲನೆಯು ಕೊನೆಯ ತುದಿಯಲ್ಲಿರುತ್ತವೆ. ರಕ್ತವು ಹಿಂದಕ್ಕೆ ಸರಿಸಲ್ಪಟ್ಟಾಗ ಮೃತನ ಚರ್ಮವು ಬೆಳ್ಳಗಾಗಿ ಕಾಣಿಸುತ್ತವೆ.

"ಹೃದಯವು ತನ್ನ ಬಡಿತವನ್ನು ನಿಲ್ಲಿಸಿ ಏಳೆಂಟು ತಾಸುಗಳು ದಾಟಿ ಹೋಗುವಾಗ ಹೀಗೆ ಸಂಭವಿಸುತ್ತದೆ. ಆಗ ರಕ್ತವು ತೆರೆದಿರುವ ಗಾಯಗಳಿಂದ ಹೊರಗೆ ಹರಿಯಲಾರದು. ಏಕೆಂದರೆ ರಕ್ತಸಂಚಾರಕ್ಕೆ ಒತ್ತಡವು ಇರುವುದಿಲ್ಲ. ರಕ್ತನಾಳಗಳಲ್ಲಿರುವ ರಕ್ತವು ಹಿಂದಕ್ಕೆ ಸರಿಯುತ್ತದೆ.

"(ಮುಳ್ಳಿನ ಕಿರೀಟವನ್ನು ತೆಗೆದಾಗ) ಏನು ಸಂಭವಿಸುತ್ತದೆ– ಹೃದಯ ಬಡಿತವು ಜಾರಿಯಲ್ಲಿತ್ತೇ? ಆಗ ಚಿಕ್ಕ ಚಿಕ್ಕ ಗಾಯಗಳಲ್ಲಿ ರಕ್ತ ತುಂಬುತ್ತದೆ. ರಕ್ತವು ತಲೆಯಿಂದ ತಲೆಗೂದಲಿಗೆ ಹರಿಯುತ್ತದೆ. ಈ ರಕ್ತ ಹರಿಯುತ್ತಾ ಇದ್ದರೆ ಆ ರಕ್ತ ಶವವಸ್ತ್ರಕ್ಕೆ ತೊಟ್ಟಿಕ್ಕುತ್ತದೆ. ಯೇಸುಕ್ರಿಸ್ತರ ಶವವಸ್ತ್ರದಲ್ಲಿ ಹೀಗೆ ಕಾಣಿಸುತ್ತದೆ. ಇದೇ ಕಾರಣದಿಂದ ಶವವಸ್ತ್ರವು ಸುತ್ತಲ್ಪಟ್ಟದ್ದು ಮೃತಶರೀರವನ್ನಲ್ಲ ಎಂದು ಸ್ಪಷ್ಟವಾಗುತ್ತದೆ. ಹತ್ತೊಂಬತ್ತು ನೂರು ವರ್ಷಗಳ ನಂತರ ಒಂದು ಫೋಟೋಗ್ರಾಫಿಕ್ ಕೆಮರಾ ಇದರ ಬಗ್ಗೆ ಸಾಕ್ಷ್ಯ ನೀಡಿದೆ. ಕೆಮರಾ ಸುಳ್ಳು ಹೇಳುವುದಿಲ್ಲ. ನೀವು ನನ್ನ ವಾದವನ್ನು ಸುಲಭವಾಗಿ ಮನವರಿಕೆ ಮಾಡಿರಬಹುದು."

## 3. ಹೋಲ್‌ಗರ್ ಕೆರ್‌ಸ್ಟೆನ್ ಮತ್ತು ಎಲ್ಮರ್ ಗ್ರೂಬರ್

**(Holger Kersten & Elmar Gruber - The Jesus Conspiracy - 1992)**

ಈ ಗ್ರಂಥದ ಮುಖ್ಯ ವಾದ, ಯೇಸು ಕ್ರಿಸ್ತರು ಶಿಲುಬೆಯ ಮರಣದಿಂದ ರಕ್ಷಿಸಲ್ಪಟ್ಟರು ಎಂದಾಗಿದೆ. ಅವರ ಪುಸ್ತಕದ ಒಂದು ಅಧ್ಯಾಯವಾದ "ಜೀವಂತ ಮನುಷ್ಯನ ಪ್ರತಿಬಿಂಬ"ದಲ್ಲಿ ಹೀಗೆ ಹೇಳಲಾಗಿದೆ:

"ನಾವು ವಿವರಿಸಿದ ವಿಷಯಗಳ ಬಗ್ಗೆ ಯಾವ ಶಂಕೆಯೂ ಇಲ್ಲ. ಟ್ಯೂರಿನಿನ ಬಟ್ಟೆಯು ಯೇಸುಕ್ರಿಸ್ತರನ್ನು ಶಿಲುಬೆಯಿಂದ ಇಳಿಸಿದ ನಂತರ ಅವರನ್ನು ಚಿಕಿತ್ಸಿಸಲು ಹೊದಿಸಲಾದ ಬಟ್ಟೆಯಾಗಿದೆ. ಇದು ಸರಿಯಾಗಿದ್ದರೆ ಯೇಸು ಕ್ರಿಸ್ತರನ್ನು ಶವ ಕುಠೀರದಲ್ಲಿ ಇರಿಸಿದಾಗ ಅವರು ಜೀವಂತವಾಗಿದ್ದರು. ಇದರ ಬಗ್ಗೆ ಸಾಕ್ಷ್ಯಾಧಾರಗಳನ್ನು ಟ್ಯೂರಿನಿನ ಬಟ್ಟೆಯಲ್ಲಿ ನಾವು ಕಾಣಲು ಶಕ್ತರಾಗುವೆವು.

ಈ ಗ್ರಂಥದ ಲೇಖಕರು ತಮ್ಮ ವಾದವನ್ನು ಸಾಬೀತುಗೊಳಿಸಲು ರಕ್ತದ ಕಲೆಗಳ ಬಗ್ಗೆ ಹೀಗೆ ಹೇಳುತ್ತಾರೆ:

"ಅರಿಮಥಾಯದ ಯೋಸೆಫನು ಮತ್ತು ಅವನ ಸಹಾಯಕರು ಯೇಸುಕ್ರಿಸ್ತರ ಶರೀರವನ್ನು ವೈದ್ಯಕೀಯ ಕಾರಣದಿಂದ ತೊಳೆಯದೆ ಇದ್ದುದಕ್ಕೆ ನಾವು ಅವರಿಗೆ ಕೃತಜ್ಞರಾಗಬೇಕು. ಅವರು ಶರೀರವನ್ನು ತೊಳೆಯದೆ ಇದ್ದುದರಿಂದ ಹೆಪ್ಪುಗಟ್ಟಿದ ರಕ್ತವು ಬಟ್ಟೆಯಲ್ಲಿ ಅಚ್ಚೊತ್ತಿತು. ಎರಡು ಬೇರೆ ಬೇರೆ ರೀತಿಯ ರಕ್ತದ ಹರಿವನ್ನು ಕಾಣಬಹುದು. ಮೊದಲನೆಯದಾಗಿ, ಹೆಪ್ಪುಗಟ್ಟಿದ ರಕ್ತವು ಚಾಟಿಯೇಟು, ಮುಳ್ಳಿನ ಕಿರೀಟ, ಪಕ್ಕೆಗೆ ತಿವಿದ ಗಾಯ ಮತ್ತು ಮೊಳೆ ಹೊಡೆತದಿಂದ ಉಂಟಾದುದು. ಎರಡನೆಯದಾಗಿ, ಯೇಸು ಕ್ರಿಸ್ತರನ್ನು ಅಂಗಾತವಾಗಿ

ಮಲಗಿಸಿದಾಗ ತಾಜಾ ರಕ್ತವು ಹರಿಯಲು ತೊಡಗಿತು. ಆಗ ಬಟ್ಟೆಯು ಅಗರು ಸವರಿದ ಕಾರಣ ರಕ್ತವನ್ನು ಹೀರಲಿಲ್ಲ. ಅದು ಬಟ್ಟೆಯ ಮೇಲೆ ಹರಡಿತು. ಇದು ಆಧುನಿಕ ಸಂಶೋಧಕರು ಕಂಡು ಹಿಡಿದ ಆಶ್ಚರ್ಯಕರ ವಿಷಯವನ್ನು ಸ್ಪಷ್ಟಪಡಿಸುತ್ತದೆ. ರಕ್ತದ ಕಲೆಗಳು ಬಟ್ಟೆಯು ತೆಳು ವಾಗಿದ್ದರೂ ಅದರ ಹಿಂಭಾಗದಲ್ಲಿ ಕಾಣಿಸುವುದಿಲ್ಲ. ಗಿಡಮೂಲಿಕೆ ಯಿಂದ ತಯಾರಿಸಿದ ಲೇಪನವು ಹೆಪ್ಪುಗಟ್ಟಿದ ರಕ್ತವನ್ನು ಮೃದುಗೊಳಿಸಲು ಶಕ್ತವಾಯಿತು. ಆದುದರಿಂದ ಅದರ ಗುರುತು ಸಹ ಬಟ್ಟೆಗೆ ವರ್ಗಾಯಿಸಲ್ಪಟ್ಟಿತು.

ಬೆನ್ನಿನ ಸುತ್ತಲೂ ಇದ್ದ ರಕ್ತದ ಕಲೆಗಳ ಬಗ್ಗೆ ಲೇಖಕರು ಬೊಟ್ಟು ಮಾಡಿ ತೋರಿಸಿ ಹೀಗೆ ಹೇಳುತ್ತಾರೆ:

"ಬೆನ್ನಿನಲ್ಲಿ ನಿತಂಬಗಳ ಮಧ್ಯೆ ಇರುವ ಕುಳಿಯಲ್ಲಿ ರಕ್ತವು ಜಮಾಯಿಸಲ್ಪಟ್ಟಿದೆ. ಶರೀರವನ್ನು ನೇರವಾಗಿ ಮಲಗಿಸಿದಾಗ ಹೀಗೆ ಸಂಭವಿಸಿದೆ ಎಂದು ಇದು ಸೂಚಿಸುತ್ತದೆ."

## 4. ಕ್ರಿಸ್ಟೋಫರ್ ನೈಟ್ ಮತ್ತು ರೋಬರ್ಟ್ ಲೋಮಾಸ್

**(The Second Messiah - Christopher Knight & Robert Lomas - London 1997)**

ಈ ಪುಸ್ತಕ ಟ್ಯೂರಿನಿನ ಶವವಸ್ತ್ರದ ಬಗ್ಗೆ ಬೇರೆಯೇ ಒಂದು ಸಿದ್ಧಾಂತವನ್ನು ಮುಂದಿಡುತ್ತದೆ. ಆದರೆ ಈ ಶವವಸ್ತ್ರವನ್ನು ಜೀವಂತ ವ್ಯಕ್ತಿಗೆ ಹೊದಿಸಲಾಗಿದೆ ಎಂದು ವಾದಿಸಲಾಗಿದೆ. ಈ ವಸ್ತ್ರವನ್ನು ಸುತ್ತಲಾದ ಮನುಷ್ಯನನ್ನು ಒರಟು ಕಲ್ಲಿನ ಮೇಲೆ ಮಲಗಿಸಿರಲಿಲ್ಲ ಎಂದೂ ಮೃದು ಹಾಸಿಗೆಯ ಮೇಲೆ ಮಲಗಿಸಲಾಗಿದೆ ಎಂದೂ ಲೇಖಕರು ವಾದಿಸುತ್ತಾರೆ. ಅವರು ಹೀಗೆ ಹೇಳುತ್ತಾರೆ:

"ಮೃತ ದೇಹಗಳನ್ನು ಮೃದು ಹಾಸಿಗೆಗಳ ಮೇಲೆ ಮಲಗಿಸಲಾಗುವುದಿಲ್ಲ. ಆದುದರಿಂದ ವಸ್ತ್ರದಲ್ಲಿ ಪ್ರತಿಬಿಂಬವು ಶವ ಶರೀರದ್ದಾಗಿರಲಿಲ್ಲ. ಶವವಸ್ತ್ರದಲ್ಲಿ ಅತ್ಯಂತ ದಾರುಣ ಹಿಂಸೆಗೆ ಗುರಿಯಾದ ಜೀವಂತ ವ್ಯಕ್ತಿಯ ಪ್ರತಿಬಿಂಬ ಮೂಡಿದೆ."

ಮೆಲೆ ವಿವರಿಸಲಾದ ಎಲ್ಲಾ ಲೇಖಕರು ಈ ವಸ್ತ್ರವನ್ನು ಜೀವಂತ ವ್ಯಕ್ತಿಗೆ ಹೊದಿಸಲಾಗಿತ್ತು ಎಂದು ನಿರ್ಧರಿಸಿರುವರು.

## ಉಪಸಂಹಾರ

ಶವವಸ್ತ್ರದ ಬಗ್ಗೆ ಪೂರ್ವಗ್ರಹವಿಲ್ಲದೆ ಸಂಶೋಧನೆ ನಡೆಸುವುದು ಅತ್ಯಂತ ಕಷ್ಟಕರವಾಗಿದೆ. ಈ ಬಟ್ಟೆಯ ಬಗ್ಗೆ ಆಸಕ್ತಿ ಹೊಂದಿದವರು ಮತ್ತು ಸಂಶೋಧನೆ ನಡೆಸುವವರು ಪೂರ್ವಗ್ರಹಗಳನ್ನೂ ಪಕ್ಷಪಾತವನ್ನೂ ನಂಬಿಕೆಗಳನ್ನೂ ಹೊಂದಿರುತ್ತಾರೆ.

ಇಂದಿನ ಕಾಲದಲ್ಲಿ ವಿದ್ವಾಂಸರು ಈ ವಸ್ತ್ರದ ಬಗ್ಗೆ ಭಿನ್ನಾಭಿಪ್ರಾಯ ಗಳನ್ನು ಹೊಂದಿದ್ದಾರೆ. ಪ್ರಥಮ ಕಾರ್ಬನ್ ಟೆಸ್ಟ್ ಪರಿಣಾಮವು ಈ ವಸ್ತ್ರವು ಕೃತ್ರಿಮ ಎಂದೂ ಮಧ್ಯಯುಗದ ಸೃಷ್ಟಿ ಎಂದೂ ಪ್ರಕಟವಾದಾಗ ಅನೇಕರು ಇದರ ಬಗ್ಗೆ ಆಸಕ್ತಿಯನ್ನು ಕಳೆದುಕೊಂಡರು. ಅನೇಕರಿಗೆ ರೇ ರೋಗರ್ಸ್‌ರವರ ಸಂಶೋಧನೆ ಬಗ್ಗೆ ತಿಳಿದಿಲ್ಲ. 2009ರ ಅಕ್ಟೋಬರ್ ತಿಂಗಳಲ್ಲಿ ಸಹ ವಸ್ತ್ರದಲ್ಲಿ ಮೂಡಿದ ಪ್ರತಿಬಿಂಬವನ್ನು ಕೃತ್ರಿಮವಾಗಿ ನಿರ್ಮಿಸಬಹುದೆಂದು ಕೆಲವು ಸಂಶೋಧಕರು ಹೇಳಿದುದು ವರದಿಯಾಗಿದೆ.

[ಒಬ್ಬ ಇಟಾಲಿಯನ್ ಸಂಶೋಧಕ ಪ್ರೊಫೆಸರ್ ಲೂಯಿಗಿ ಗಾರ್ಲಸ್ ಚೆಲ್ಲಿ (Professor Luigi Garlaschelli) ಮೇಲಿನಂತೆ ವಾದಿಸಿರುವರು]

ಶವವಸ್ತ್ರದ ಬಗ್ಗೆ ಸಂಶೋಧನೆ ನಡೆಸುವವರು ಮತ್ತು ಕೆಲವು ಉತ್ಸಾಹಭರಿತ ಜನರು ಇನ್ನೊಂದು ಕಾರ್ಬನ್-14 ಟೆಸ್ಟ್ ನಡೆಸ ಬೇಕೆಂದು ಬಯಸುತ್ತಾರೆ. ಆದರೆ ಶವವಸ್ತ್ರವನ್ನು ಸಂದರ್ಶಿಸುವುದನ್ನು ಬಹಳ ನಿಯಂತ್ರಣಕ್ಕೊಳಪಡಿಸಲಾಗಿದೆ. ಅದರ ಪರೀಕ್ಷೆ ನಡೆಸುವುದಕ್ಕೆ ಅನುಮತಿ ಪಡೆಯುವುದು ಅತ್ಯಂತ ಕಷ್ಟವೆಂದು ಚಾರಿತ್ರಿಕವಾಗಿ ಸಾಬೀತಾಗಿದೆ.

ಶವವಸ್ತ್ರದಲ್ಲಿ ಮೂಡಿರುವ ಪ್ರತಿಬಿಂಬವು ಅಳಿಸಿ ಹೋಗುತ್ತಿರುವುದಾಗಿ ಕಂಡುಬಂದಿದೆ. ಈ ವಸ್ತ್ರವನ್ನು ವಿಶಿಷ್ಟವಾಗಿ ನಿರ್ಮಿಸಲಾದ ಪೆಟ್ಟಿಗೆಯಲ್ಲಿ ಇರಿಸಿ ಪ್ರತಿಬಿಂಬವು ಅಳಿಸಿ ಹೋಗದಂತಾಗಲು ಪ್ರಯತ್ನಿಸಲಾಗಿದೆ. ಇದಕ್ಕಾಗಿ ತೈಮೋಲ್ (Thymol) ದ್ರಾವಣವನ್ನು ಬಟ್ಟೆಯ ಮೇಲೆ ಪ್ರಯೋಗಿಸಲಾಗಿದೆ. ಇನ್ನು ಮುಂದೆ ನಡೆಸಬಹುದಾದ ಕಾರ್ಬನ್-14 ಪರೀಕ್ಷೆಯನ್ನು ಸರಿಯಾಗಿ ನಡೆಸಲಾಗದಂತೆ ಇದು ಮಾಡುವುದು.

2010ರ ಎಪ್ರಿಲ್ ದಿನಾಂಕ 30ರ ಜುಮುಅ ಖುತುಬದಲ್ಲಿ ಪಂಚಮ ಖಲೀಫರಾದ ಹಝ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು ಪಾಕಿಸ್ತಾನದ ರಬ್‌ವದಲ್ಲಿ ಮೀರ್ ಮಹ್‌ಮೂದ್ ಅಹ್ಮದರ ಮೇಲ್ವಿಚಾರಣೆಯಲ್ಲಿ ನಡೆಸಲಾದ ಕೆಲವು ಪ್ರಯೋಗಗಳನ್ನು ವಿವರಿಸಿರುವರು. ಹೋಲ್‌ಗರ್ ಕೆರ್‌ಸ್ಟನ್ ರಕ್ತಬೋಳ ಅಗರು ಮತ್ತು ರೇಡಿಯೇಟರ್ ಉಪಯೋಗಿಸಿ ಇದೇ ರೀತಿಯ ಪ್ರಯೋಗಗಳನ್ನು ಮಾಡಿದ್ದರು. ಕೆರ್‌ಸ್ಟನ್ ರೂಪಿಸಿದ ಪ್ರತಿಬಿಂಬ ಶವವಸ್ತ್ರದ ಪ್ರತಿಬಿಂಬದ ಕೆಲವು ವೈಶಿಷ್ಟ್ಯಗಳನ್ನು ಹೊಂದಿತ್ತು. ಆದರೆ ಎಲ್ಲವನ್ನೂ ಹೊಂದಿರಲಿಲ್ಲ.

ವಿಜ್ಞಾನಿಗಳಿಗೆ ಮತ್ತು ಸಂಶೋಧಕರಿಗೆ ಶವವಸ್ತ್ರ ಒಂದು ಆಶ್ಚರ್ಯಕರ ಸಮಸ್ಯೆಯನ್ನು ಮುಂದಿರಿಸುತ್ತದೆ. ಆದರೆ ಅದನ್ನು ಬಗೆಹರಿಸುವ ದಾರಿ ಇನ್ನೂ ಕಾಣಿಸುತ್ತಾ ಇಲ್ಲ. ಯೇಸು ಕ್ರಿಸ್ತರನ್ನು ನಂಬುವವರಿಗೆ ಅವರು ಶಿಲುಬೆಗೇರಿಸಲ್ಪಟ್ಟಾಗ ಅನುಭವಿಸಿದ ಯಾತನೆಯ ಚಿತ್ರ ಅದು ನೀಡುತ್ತದೆ. ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗದೆ ಜೀವಂತವಾಗಿ ಇಳಿಸಲ್ಪಟ್ಟರು ಎಂದು ನಂಬುವವರಿಗೆ ಅದು ತಮ್ಮ ವಾದವನ್ನು ಸಮರ್ಥಿಸುವಂತಹ ಅತ್ಯಂತ ಬಲವತ್ತಾದ ಸಾಕ್ಷ್ಯವಾಗಲು ಸಾಧ್ಯವಿದೆ.

ಆದರೆ ಈಗ ಈ ಶವವಸ್ತ್ರದ ಬಗ್ಗೆ ಎಲ್ಲಾ ರೀತಿಯ ಚರ್ಚೆಗಳು ನಡೆಯುತ್ತಾ ಇವೆ. ಇದರ ಬಗ್ಗೆ ಒಮ್ಮತಾಭಿಪ್ರಾಯ ರೂಪಿಸಲು ಸಾಧ್ಯವೋ ಎಂಬುದನ್ನು ಭವಿಷ್ಯತ್ ಕಾಲವೇ ನಮಗೆ ತಿಳಿಸುವುದು.

ಕೊನೆಯದಾಗಿ ಹೇಳುವುದೇನೆಂದರೆ, STURP ಸಂಘವು ಶವವಸ್ತ್ರದಲ್ಲಿರುವ ರಕ್ತದಿಂದ DNAವನ್ನು ಕಂಡುಹಿಡಿಯಲು ಸಮರ್ಥವಾಗಿತ್ತು. ಇದರ ಪರಿಣಾಮವಾಗಿ 1999ರಲ್ಲಿ ಲಿಯಾನ್‌ಸಿಯೋ ಗಾರ್ಜ-ವಾಲ್‌ಡೆಸ್ (Leoncio Garza-Valdes) ದಿ DNA ಆಫ್ ಗಾಡ್ (The DNA of God) ಎಂಬ ಪುಸ್ತಕ ಬರೆದಿದ್ದರು. ಇದು ಇನ್ನೊಂದು ವಿಷಯದ ಕಡೆಗೆ ನಮ್ಮ ಗಮನ ಹರಿಸುತ್ತದೆ. ಯೇಸು ಕ್ರಿಸ್ತರಿಗೆ ಸಂಬಂಧಿಸಿ ಬೇರೆ ಒಂದು ಮೂಲದಿಂದ DNA ಸಂಗ್ರಹಿಸಲು ಸಾಧ್ಯವಾದರೆ ಆಗ ಶವವಸ್ತ್ರದಿಂದ ದೊರೆತ ರಕ್ತದ DNA ಯೊಂದಿಗೆ ಹೋಲಿಸಿ ನೋಡಲು ಸಾಧ್ಯವಾಗುವುದು ಮತ್ತು ಶವವಸ್ತ್ರಕ್ಕೆ ಸಂಬಂಧಿಸಿದ ರಹಸ್ಯವು ಬಗೆಹರಿಸಲ್ಪಡುವುದು.

★

# ಪ್ರವಾದಿತ್ವದ ಜಾರಿ

★ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್
ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ

ನಮ್ಮ ವಿರುದ್ಧ ಮಾಡಲಾಗುವ ಮತ್ತೊಂದು ಆಕ್ಷೇಪ ಹೀಗಿದೆ:

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಅಲ್ಲಾಹನ ಸಂದೇಶವಾಣಿಯ ಅವತೀರ್ಣವಾಗುವಿಕೆ (ವಹೀ) ಮತ್ತು ಪ್ರವಾದಿತ್ವ (ನುಬುವ್ವತ್) ಜಾರಿಯಲ್ಲಿದೆ ಎಂದು ನಾವು ನಂಬುತ್ತೇವೆ.

ಈ ಆಕ್ಷೇಪ ಸಹ ಗಾಢವಾಗಿ ಚಿಂತಿಸದ ಕಾರಣದಿಂದ ಅಥವಾ ಹಗೆತನದ ಕಾರಣದಿಂದ ಉದ್ಭವಿಸಿದುದಾಗಿದೆ.

ವಾಸ್ತವಿಕ ವಿಷಯವೇನೆಂದರೆ, ನಮಗೆ ಶಬ್ದಗಳ ಪ್ರಯೋಗದೊಂದಿಗೆ ಯಾವ ಸಂಬಂಧವೂ ಇಲ್ಲ. ಯಾವ ವಿಷಯದಲ್ಲಿ ಅಲ್ಲಾಹ್ ಮತ್ತು ಅವನ ಸಂದೇಶವಾಹಕರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೌರವ ಅಡಕವಾಗಿದೆಯೋ ಅದು ಮಾತ್ರ ನಮಗೆ ಇಷ್ಟಕರವಾಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರವಾದಿತ್ವವನ್ನು ಮುಗಿತಾಯಗೊಳಿಸುವ, ಹೊಸ ಕಲಿಮ ಮತ್ತು ಹೊಸ ಖಿಬ್ಲವನ್ನು ಪ್ರತಿಪಾದಿಸುವ, ಹೊಸ ಶರೀಅತನ್ನು ತರುವ, ಅಥವಾ ಇಸ್ಲಾಮೀ ಶರೀಅತಿನ ಯಾವುದಾದರೊಂದು ಆಜ್ಞೆಯನ್ನು ಬದಲಾಯಿಸುವ ಅಥವಾ ಜನರನ್ನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದರಿಂದ ತಡೆದು ತನ್ನ ಅನುಸರಣೆಯನ್ನು ಮಾಡಲು ಪ್ರೇರೇಪಿಸುವ, ಅಥವಾ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸದಂತಹ ಅಥವಾ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ಹೊರತು ಯಾವುದಾದರೂ ಅನುಗ್ರಹ ಗಳಿಸಿದ ಬಗ್ಗೆ ವಾದಿಸುವ ವ್ಯಕ್ತಿಯು ಆಗಮಿಸುವರೆಂದು ನಾವು ಒಂದು ಕ್ಷಣ ಕಾಲ ಕೂಡ ನಂಬಲಾರೆವು. ಅಂತಹ ವ್ಯಕ್ತಿ ಆಗಮಿಸುವುದಾದರೆ ಇಸ್ಲಾಮ್ ಧರ್ಮವು ಸುಳ್ಳಾಗುವುದು ಮತ್ತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಅಲ್ಲಾಹನು ಮಾಡಿದ ವಾಗ್ದಾನಗಳು ಸುಳ್ಳಾಗುವುವು.

ಆದರೆ ನಾವು ಹೀಗೆ ಸಹ ಇಷ್ಟಪಡಲಾರೆವು. ಏನೆಂದರೆ,

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದಿಂದ ಎಲ್ಲಾ ದೈವಿಕ ಅನುಗ್ರಹಗಳು ತಡೆಯಲ್ಪಟ್ಟವು; ಅವರು ಲೋಕದ ಅಭಿವೃದ್ಧಿಗೆ ಸಹಾಯಕರಾಗುವುದಕ್ಕೆ ಪ್ರತಿಯಾಗಿ ಅದರ ಮಾರ್ಗದಲ್ಲಿ ತಡೆಯಾದರು. ಅವರು ಅಲ್ಲಾಹನ ಕಡೆಗೆ ಜನರನ್ನು ತಲಪಿಸುವುದಕ್ಕೆ ಪ್ರತಿಯಾಗಿ, ಅಲ್ಲಾಹನ ಕಡೆಗೆ ಏರಿ ಹೋಗಿ ಉನ್ನತ ಸ್ಥಾನಗಳಿಸಲು ತಡೆಯೊಡ್ಡುವವರಾದರು. (ನಊಧುಬಿಲ್ಲಾಹ್)

ಮೇಲೆ ವಿವರಿಸಿದ ಪ್ರಥಮ ಅಭಿಪ್ರಾಯ ಇಸ್ಲಾಮಿಗೆ ವಿನಾಶಕರವಾಗಿದೆ. ನಾವು ವಿವರಿಸಿದ ಎರಡನೆಯ ಅಭಿಪ್ರಾಯ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವ್ಯಕ್ತಿತ್ವದ ಮೇಲೆ ನಡೆಸಲಾಗುವ ಅಪಾಯಕರ ಹಲ್ಲೆಯಾಗಿದೆ. ನಾವು ಇದನ್ನು ಅಂಗೀಕರಿಸುವುದಿಲ್ಲ. ನಾವು ಅದನ್ನು ಸಹಿಸಲಾರೆವು. ನಮ್ಮ ದೃಢ ನಂಬಿಕೆ ಏನೆಂದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿಶ್ವಕ್ಕೆ ಅನುಗ್ರಹದಾಯಕರಾಗಿದ್ದರು. ಕಣ್ಣನ್ನು ಹೊಂದಿರುವ ಪ್ರತಿಯೊಬ್ಬನಿಗೆ ಇದು ಕಾಣಿಸುತ್ತದೆ ಎಂದು ನಾವು ದೃಢವಾಗಿ ನಂಬುತ್ತೇವೆ. ಅವರು ಆಗಮಿಸಿ ದೈವಿಕ ಅನುಗ್ರಹಗಳಿಂದ ಜನರು ವಂಚಿತರಾಗುವಂತೆ ಎಂದೂ ಮಾಡಲಿಲ್ಲ. ಅವರ ಆಗಮನದ ನಂತರ ಅಲ್ಲಾಹನ ಅನುಗ್ರಹದ ಹರಿವು ಎಷ್ಟೋ ಹೆಚ್ಚಾಯಿತು. ಮೊದಲು ಅದು ಒಂದು ಕಾಲುವೆಯ ಹಾಗೆ ಹರಿಯುತ್ತಿತ್ತು. ಈಗ ಅದು ನದಿಯ ಹಾಗೆ ಹರಿಯುತ್ತಿದೆ.

ಹಿಂದಿನ ಕಾಲದಲ್ಲಿ ಜ್ಞಾನವು ಪರಿಪೂರ್ಣತೆಗೆ ತಲಪಿರಲಿಲ್ಲ, ಪರಿಪೂರ್ಣ ಜ್ಞಾನದ ಸಹಾಯವಿಲ್ಲದೆ ಪರಿಪೂರ್ಣವಾದ ಸೂಕ್ಷ್ಮಜ್ಞಾನ ಸಹ ಲಭಿಸಲಾರದು. ಈಗ ಜ್ಞಾನ ಪರಿಪೂರ್ಣತೆಗೆ ತಲಪಿದೆ. ಹಿಂದಿನ ಗ್ರಂಥಗಳಲ್ಲಿ ವಿವರಿಸಿಲ್ಲದ ವಿಷಯಗಳು ಪವಿತ್ರ ಖುರ್ಆನ್‌ನಲ್ಲಿ ವಿವರಿಸಲಾಗಿದೆ.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ಜನರಿಗೆ ಸೂಕ್ಷ್ಮಜಾನ ವರ್ಧಿಸಿತು. ಸೂಕ್ಷ್ಮಜ್ಞಾನದ ವರ್ಧನೆಯ ಕಾರಣದಿಂದ ಅವರು ಎಂತಹ ಉನ್ನತ ಪದವಿಗಳನ್ನು ಗಳಿಸಬಲ್ಲರೆಂದರೆ, ಹಿಂದಿನವರು ಆ ಪದವಿಯನ್ನು ಗಳಿಸಲು ಸಾಧ್ಯವಿರಲಿಲ್ಲ. ಹೀಗೆ ನಂಬುವುದಿಲ್ಲವಾದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅನ್ಯ ಪ್ರವಾದಿಗಳ ಮೇಲೆ ಇರುವ ಶ್ರೇಷ್ಠತೆಯಾದರೂ ಏನು? ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಯವಿಲ್ಲದೆ ಸ್ವತಂತ್ರವಾಗಿ ನುಬುವ್ವತ್ ಗಳಿಸಬಹುದೆಂದು ನಾವು ಖಂಡಿತವಾಗಿ ನಂಬುವುದಿಲ್ಲ. ಇದೇ ಕಾರಣದಿಂದ ಹಝ್ರತ್ ಈಸಾ ಮಸೀಹ್ ಸ್ವತಃ ಆಗಮಿಸುವರು ಎಂದು ನಾವು ನಂಬುವುದಿಲ್ಲ. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೌರವವು ಉನ್ನತಗೊಳ್ಳುವ ಉಮ್ಮತೀ ಪ್ರವಾದಿಯ ಆಗಮನವನ್ನು ನಾವು ನಿರಾಕರಿಸುವುದಿಲ್ಲ.

ಪ್ರಿಯ ವಾಚಕರೆ, ಅಲ್ಲಾಹನು ನಿಮ್ಮ ಹೃದಯವನ್ನು ಬೆಳಗಲಿ. ಸತ್ಯವನ್ನು ಅಂಗೀಕರಿಸಲು ನೀವು ಹೃದಯ ವೈಶಾಲ್ಯವುಳ್ಳವರಾಗಲು ಅನುಗ್ರಹಿಸಲಿ. ಶರೀಅತ್ ತಂದ ಪ್ರವಾದಿಯ ನಂತರ ಇನ್ನೋರ್ವ ಶರೀಅತ್ ತರುವ ಪ್ರವಾದಿ ಮೊದಲು ಆಗಮಿಸಿದ ಪ್ರವಾದಿಯ ಶರೀಅತನ್ನು ರದ್ದುಗೊಳಿಸುತ್ತಾರೆ. ಶರೀಅತ್ ತಂದ ಪ್ರವಾದಿಯ ಆಗಮನದ ನಂತರ ಅವರಿಂದ ಸ್ವತಂತ್ರರಾಗಿ ಒಬ್ಬ ಹೊಸ ಪ್ರವಾದಿ ಆಗಮಿಸಿದರೆ ಶರೀಅತ್ ತಂದ ಪ್ರವಾದಿಯ ಶರೀಅತ್ ರದ್ದುಗೊಳಿಸಲ್ಪಡುವುದು. ಒಂದು ಶರೀಅತ್ ತಂದ ಪ್ರವಾದಿಯನ್ನು ಅನುಸರಿಸಿ ಆ ಪ್ರವಾದಿಯ ಅನುಗ್ರಹದ ಪಾಲನ್ನು ಪಡೆದು ಆಗಮಿಸಿ ಶರೀಅತ್ ತಂದ ಪ್ರವಾದಿಯ ನುಬುವ್ವತನ್ನು ಪ್ರಚಾರಗೊಳಿಸುವುದಾದರೆ ಅದು ಶರೀಅತ್ ತಂದ ಪ್ರವಾದಿಯ ಶ್ರೇಷ್ಠತೆಯನ್ನೂ ಅವರ ಗೌರವವನ್ನೂ ವರ್ಧಿಸುವಂತಹದಾಗುವುದು. ಅದು ಅಪಮಾನಕರವಾಗಲಾರದು. ಇಂತಹ ಪ್ರವಾದಿತ್ವ ಸಾಧ್ಯ ಎಂದು ಪವಿತ್ರ ಖುರ್ಆನ್‌ನಿಂದ ತಿಳಿಯುತ್ತದೆ. ವಿವೇಕವು ಸಹ ಇದು ಸಾಧ್ಯ ಎಂದು ಸಾಕ್ಷ್ಯ ಹೇಳುತ್ತದೆ. ಈ ಸಮುದಾಯದಲ್ಲಿ ಇಂತಹ ನುಬುವ್ವತ್ ಲಭಿಸುವುದಿಲ್ಲವಾದರೆ ಈ ಸಮುದಾಯಕ್ಕೆ ಬೇರೆ ಪ್ರವಾದಿಗಳ ಸಮುದಾಯಗಳ ಮೇಲೆ ಯಾವುದೇ ಶ್ರೇಷ್ಠತೆ ಇರಲಾರದು.

ಹಝ್ರತ್ ಮೂಸಾ ಅಲೈಹಿಸ್ಸಲಾಮರ ಸಮುದಾಯದಲ್ಲಿ

ಅನೇಕ ಮುಹದ್ದಸ್ (ದೇವವಾಣಿ ಲಭಿಸಿದವರು) ಇದ್ದರು ಎಂದು ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿರುವರು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯಕ್ಕೆ ಸೇರಿದವರು ಬರೇ ಮುಹದ್ದಸ್ ಸ್ಥಾನಕ್ಕೆ ಮಾತ್ರ ತಲಪುವುದಾದರೆ ಅವರಿಗೆ ಇತರ ಪ್ರವಾದಿಗಳ ಮೇಲೆ ಇರುವ ಶ್ರೇಷ್ಠತೆ ಏನು? ಅವರು ಮಾನವ ಕುಲದ ನಾಯಕರೂ ಪ್ರವಾದಿಗಳ ನೇತಾರರೂ ಆಗುವುದಾದರೂ ಹೇಗೆ? ಅವರು ಪ್ರವಾದಿಗಳಲ್ಲಿ ಶ್ರೇಷ್ಠರು (ಖೈರುರ್ರುಸೂಲ್) ಆಗಬೇಕಾದರೆ ಅವರಲ್ಲಿ ಬೇರೆ ಪ್ರವಾದಿಗಳಲ್ಲಿಲ್ಲದ ವಿಶಿಷ್ಟ ಶ್ರೇಷ್ಠ ಗುಣಗಳು ಇರಬೇಕು.

ನಮ್ಮ ದೃಷ್ಟಿಯಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಂತಹ ಶ್ರೇಷ್ಠತೆ ಹೊಂದಿರುವರೆಂದರೆ ಬೇರೆ ಪ್ರವಾದಿಗಳ ಅನುಯಾಯಿಗಳು ಕೇವಲ ಮುಹದ್ದಸ್ ಸ್ಥಾನ ಗಳಿಸಲು ಮಾತ್ರ ಶಕ್ತರಾಗಿದ್ದರು. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿಗಳು ನುಬುವ್ವತ್ ಸ್ಥಾನ ಗಳಿಸಲು ಸಾಧ್ಯವಿದೆ. ಅವರ ಪರಿಶುದ್ಧ ಶಕ್ತಿಯ ಪರಿಪೂರ್ಣತೆಯು ಒಬ್ಬ ವಿಶ್ವಾಸಿಯ ಹೃದಯವನ್ನು ಅವರ ಮೇಲಿನ ಪ್ರೇಮದಿಂದ ತುಂಬಿಸುತ್ತದೆ.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದಿಂದ ನಾವು ಮೇಲೆ ವಿವರಿಸಿದಂತಹ ಉಮ್ಮತೀ ನುಬುವ್ವತ್ ಕೂಡ ಕೊನೆಗೊಳ್ಳುವುದಾದರೆ ಅವರ ಆಗಮನ ಲೋಕಕ್ಕೆ ಒಂದು ವಿಪತ್ತಾಗುವುದು. ಪವಿತ್ರ ಖುರ್‌ಆನ್ ಸಹ ನಿಷ್ಪ್ರಯೋಜಕ ವಾಗುವುದು. ಏಕೆಂದರೆ ಅವರು ಆಗಮಿಸುವ ಮೊದಲು ಮನುಷ್ಯರು ದೊಡ್ಡ ದೊಡ್ಡ ಆಧ್ಯಾತ್ಮಿಕ ಪದವಿ ಗಳಿಸುತ್ತಿದ್ದರು. ಆದರೆ ಅವರು ಆಗಮಿಸಿ ಇದಕ್ಕೆ ತಡೆಯೊಡ್ಡಿದರು ಎಂದು ನಂಬಬೇಕಾಗಬಹುದು. ಇದಲ್ಲದೆ ಹೀಗೆ ಸಹ ನಂಬಬೇಕಾಗಬಹುದು: ಪವಿತ್ರ ಖುರ್‌ಆನಿಗೆ ಮೊದಲು ಅವತೀರ್ಣವಾದ ಗ್ರಂಥಗಳು ಮನುಷ್ಯರನ್ನು ಪ್ರವಾದಿತ್ವಕ್ಕೆ ಏರಿಸಲು ಸಹಾಯಕವಾಗಿದ್ದವು. ಆ ಗ್ರಂಥಗಳ ಮೂಲಕ ಜನರು ಎಂತಹ ಪದವಿ ಗಳಿಸುತ್ತಿದ್ದರೆಂದರೆ ಅಲ್ಲಾಹನು ಅವರನ್ನು ನುಬುವ್ವತಿನ ಸ್ಥಾನ ನೀಡಲು ತರಬೇತಿಗಾಗಿ ಆಯ್ಕೆ ಮಾಡುತ್ತಿದ್ದನು. ಆದರೆ ಪವಿತ್ರ ಖುರ್‌ಆನನ್ನು ಅನುಸರಿಸಿ ನಡೆದರೆ ಮನುಷ್ಯನು ಅಂತಹ ಸ್ಥಾನಕ್ಕೆ ತಲಪಲಾರನು.

ಮೇಲೆ ವಿವರಿಸಲಾದ ವಿಷಯವು ವಾಸ್ತವಿಕವಾಗಿಯೂ ಹಾಗೆಯೇ ಆಗಿದ್ದರೆ ಅಲ್ಲಾಹನ ನೈಜ ಭಕ್ತರ ಹೃದಯಗಳು ನೋವನ್ನು ಅನುಭವಿಸುವುದು. ಅವರ ಟೊಂಕ ಮುರಿಯಲ್ಪಡುವುದು. ಏಕೆಂದರೆ ಸರ್ವಲೋಕಕ್ಕೆ ಕಲ್ಯಾಣದಾಯಕರಾದ ಮತ್ತು ಪ್ರವಾದಿಗಳ ನಾಯಕರಾದ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನ ವಾದಾಗ ಅವರು ಹೀಗೆ ಯೋಚಿಸಿದ್ದರು: ನಮ್ಮ ಆಧ್ಯಾತ್ಮಿಕ ಅಭಿವೃದ್ಧಿ ಗೋಸ್ಕರ ಹೊಸ ಬಾಗಿಲುಗಳು ತೆರೆಯಲ್ಪಡುವುವು. ನಾವು ನಮ್ಮ ಪ್ರಿಯ ದೇವನಿಗೆ ಇನ್ನಷ್ಟು ಸಮೀಪ ಆಗುವೆವು. ಆದರೆ ಪರಿಣಾಮ ಏನಾಯಿತೆಂದರೆ (ನಊಧುಬಿಲ್ಲಾಹ್) ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಗಮಿಸಿ ಮೊದಲು ತೆರೆದಿದ್ದ ಬಾಗಿಲುಗಳನ್ನು ಸಹ ಮುಚ್ಚಿಬಿಟ್ಟರು.

ಒಬ್ಬ ಸತ್ಯವಿಶ್ವಾಸಿಯು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಮೇಲೆ ವಿವರಿಸಿದ ರೀತಿಯಲ್ಲಿ ಒಂದು ಕ್ಷಣಕಾಲ ಸಹ ಯೋಚಿಸಲು ಸಾಧ್ಯವೇ? ಅವರನ್ನು ಪ್ರೀತಿಸುವ ಪ್ರೇಮಿ ಈ ನಂಬಿಕೆಯನ್ನು ಒಂದು ಕ್ಷಣ ಕಾಲ ಕೂಡ ಹೊಂದಲು ಸಾಧ್ಯವೇ? ಅಲ್ಲಾಹನಾಣೆ, ಅವರು ಅನುಗ್ರಹದ ಒಂದು ಸಮುದ್ರ ವಾಗಿದ್ದರು. ಅವರು ಆಧ್ಯಾತ್ಮಿಕ ಅಭಿವೃದ್ಧಿಯ ಒಂದು ಆಕಾಶವಾಗಿದ್ದರು. ಅದರ ವೈಶಾಲ್ಯವನ್ನು ಯಾರೂ ಗಳಿಸಲಾರರು. ಅವರು ಅನುಗ್ರಹದ ಬಾಗಿಲನ್ನು ಮುಚ್ಚಲಿಲ್ಲ. ಅವರು ಅದನ್ನು ತೆರೆದಿಟ್ಟಿರುವರು. ಅವರ ಮತ್ತು ಹಿಂದಿನ ಪ್ರವಾದಿಗಳ ಮಧ್ಯೆ ಇರುವ ವ್ಯತ್ಯಾಸವೇನೆಂದರೆ ಹಿಂದಿನ ಪ್ರವಾದಿಗಳ ಅನುಯಾಯಿಗಳು ಮುಹದ್ದಸ್ ಸ್ಥಾನ ಗಳಿಸಲು ಶಕ್ತರಾಗಿದ್ದರು. ನುಬುವ್ವತ್ ಸ್ಥಾನ ನೀಡಲು ಅವರಿಗೆ ಬೇರೆ ತರಬೇತಿ ಆವಶ್ಯಕವಾಗಿತ್ತು. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿಯಾಗಿ ಒಬ್ಬ ಮನುಷ್ಯನು ನುಬುವ್ವತ್ ಸ್ಥಾನ ಸಹ ಪಡೆಯುತ್ತಾನೆ. ಹೀಗಿದ್ದರೂ ಆ ವ್ಯಕ್ತಿ ಉಮ್ಮತೀ (ಶಿಷ್ಯ) ಆಗಿರುತ್ತಾನೆ. ಆ ವ್ಯಕ್ತಿ ಆಧ್ಯಾತ್ಮಿಕವಾಗಿ ಎಷ್ಟು ಅಭಿವೃದ್ಧಿಹೊಂದಿದರೂ ಅವರ ಗುಲಾಮರಾಗಿಯೇ ಇರುತ್ತಾರೆ. ಆ ವ್ಯಕ್ತಿ ಆಧ್ಯಾತ್ಮಿಕವಾಗಿ ಉನ್ನತ ಸ್ಥಾನಗಳಿಸಿದರೂ ಉಮ್ಮತೀ ಎಂದು ಕರೆಯಲ್ಪಡುವುದರಿಂದ ಸ್ವತಂತ್ರರಾಗಲಾರರು. ತನಗೆ ಲಭಿಸುವ ಆಧ್ಯಾತ್ಮಿಕ ಪದವಿಯು ಉನ್ನತ ಗೊಳಿಸಲ್ಪಡುವಾಗ ಆ ವ್ಯಕ್ತಿಯು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾಡಿದ ಉಪಕಾರದ ಭಾರದಿಂದ ತಗ್ಗುತ್ತಾ ಹೋಗುತ್ತಾನೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದೇವಸಾಮೀಪ್ಯದ ಎಂತಹ ಸ್ಥಾನ ಗಳಿಸದರೆಂದರೆ, ಬೇರೆ ಯಾರಿಗೂ ಅಲ್ಲಿಗೆ ತಲಪಲು ಸಾಧ್ಯವಾಗಲಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಂತಹ ಉನ್ನತ ಸ್ಥಾನಕ್ಕೆ ತಲಪಿದರೆಂದರೆ, ಬೇರೆಯವರ ಕೈಗಳು ಕೂಡ ಅಲ್ಲಿಗೆ ತಲಪಲು ಸಾಧ್ಯವಾಗಲಿಲ್ಲ. ಅವರ ಪ್ರಗತಿ ಎಷ್ಟು ವೇಗದಿಂದ ಸಾಗುತ್ತಿದೆ ಎಂದರೆ ಅದನ್ನು ಊಹಿಸಲು ಸಹ ಸಾಧ್ಯವಾಗದು.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯ ಸಹ ಅವರು ಹೆಜ್ಜೆ ಹಾಕಿದುದರಿಂದ ಹೆಜ್ಜೆ ಮುಂದೊತ್ತಿ ಸಾಗಿದೆ. ಅವರು ಅಭಿವೃದ್ಧಿಗಳಿಸಿದುದರಿಂದ ಅಭಿವೃದ್ಧಿ ಹೊಂದಿದೆ.

ಮೇಲೆ ವಿವರಿಸಿದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನವು ಅವರ ನಂತರ ಮೇಲೆ ವಿವರಿಸಿದಂತಹ ಉಮ್ಮತೀ ಪ್ರವಾದಿತ್ವದ ಶೃಂಖಲೆಯು ಜಾರಿಯಲ್ಲಿರುವುದಾಗಿ ನಂಬಲು ನಮ್ಮನ್ನು ಆಗ್ರಹಪಡಿಸುತ್ತದೆ. ಏಕೆಂದರೆ ಇದು ಅವರಿಗೆ ಗೌರವಾರ್ಹ ವಾಗಿದೆ. ಅಂತಹ ಪ್ರವಾದಿತ್ವ ಸ್ಥಗಿತಗೊಳ್ಳುವುದು ಅವರಿಗೆ ಅಪಮಾನಕರವಾಗಿದೆ.

ಒಬ್ಬ ಯೋಗ್ಯ ಅಧ್ಯಾಪಕನ ಚಿಹ್ನೆ ಆತನು ಯೋಗ್ಯ ವಿದ್ಯಾರ್ಥಿ ಗಳನ್ನು ಹೊಂದುವುದರಲ್ಲಿದೆ. ಒಬ್ಬ ದೊಡ್ಡ ರಾಜನ ಲಕ್ಷಣ ಆತನ ಅಧೀನದಲ್ಲಿ ಅನೇಕ ರಾಜರಿರಬೇಕು.

ಒಬ್ಬ ಅಧ್ಯಾಪಕನ ವಿದ್ಯಾರ್ಥಿಗಳು ಕೆಳಮಟ್ಟದ ವಿದ್ಯಾರ್ಹತೆ ಹೊಂದಿದ್ದರೆ ಅವನು ಯೋಗ್ಯ ಅಧ್ಯಾಪಕನೆಂದು ಗಣಿಸಲ್ಪಡಲಾರನು. ಒಬ್ಬ ರಾಜನ ಅಧೀನದಲ್ಲಿ ಕೀಳುಮಟ್ಟದ ಜನರಿದ್ದರೆ ಅವನು ದೊಡ್ಡ ರಾಜನೆಂದು ಕರೆಯಲ್ಪಡಲಾರನು. ಚಕ್ರವರ್ತಿ ಎಂದು ಹೇಳುವುದು ಗೌರವದ ಬಿರುದಾಗಿದೆ. ಅದು ಅಪಮಾನಕರವಾದುದಲ್ಲ. ಯಾವ ಪ್ರವಾದಿಯ ಅಧೀನದಲ್ಲಿ ಅನುಯಾಯಿಗಳು ಉಮ್ಮತೀ ನಬಿಯ ಸ್ಥಾನ ಪಡೆಯುತ್ತಾರೋ ಅಂತಹ ಪ್ರವಾದಿ ದೊಡ್ಡ ಪ್ರವಾದಿಯೇ ಆಗಿರುತ್ತಾರೆ. ಏಕೆಂದರೆ ಪ್ರವಾದಿತ್ವ ಪಡೆಯುವವರು ಉಮ್ಮತೀ (ಶಿಷ್ಯ) ಆಗಿರುತ್ತಾರೆ.

ಈ ಕಾಲದ ಮುಸ್ಲಿಮರ ತಪ್ಪು ಗ್ರಹಿಕೆಗೆ ಕಾರಣವೇನೆಂದರೆ (ಈ ಕಾಲದ ಮುಸ್ಲಿಮರು ಎಂದು ಹೇಳಿದುದು ಏಕೆಂದರೆ ಹಿಂದಿನ ಕಾಲದ ಹಿರಿಯ ವಿದ್ವಾಂಸರ ಗ್ರಂಥಗಳಲ್ಲಿ ಈ ವಿಶ್ವಾಸಕ್ಕೆ ವಿರುದ್ಧವಾಗಿ

ಉಲ್ಲೇಖಗಳಿವೆ. ಅಂತಹ ವಿದ್ವಾಂಸರಲ್ಲಿ ಹಝ್‌ರತ್ ಮುಹ್‌ಯುದ್ದೀನ್ ಇಬ್ನು ಅರಬಿ, ಹಝ್‌ರತ್ ಮುಲ್ಲಾ ಅಲಿ ಖಾರಿ, ಅಲ್ಲಾಮ ಇಬ್ನು ಖಯ್ಯಿಮ್ ಇವರ ಗ್ರಂಥಗಳಲ್ಲಿ, ಹಝ್‌ರತ್ ಮೌಲಾನ ರೂಮಿ ಬರೆದ ಮಸ್ನವಿಯಲ್ಲಿ, ಹಝ್‌ರತ್ ಮುಜದ್ದಿದ್ ಅಲ್‌ಫೆ ಸಾನೀ, ಶೇಖ್ ಅಹ್ಮದ್ ಸರ್‌ಹಿಂದಿ ಇವರ ಮಕ್ತೂಬಾತ್ ಮೊದಲಾದವುಗಳಲ್ಲಿ.) ಈ ಕಾಲದ ಮುಸ್ಲಿಮರು ಪ್ರವಾದಿತ್ವದ (ನುಬುವ್ವತಿನ) ಅರ್ಥ ಮನವರಿಕೆ ಮಾಡುವುದರಲ್ಲಿ ತಪ್ಪು ಮಾಡಿದ್ದಾರೆ. ಅವರು ಯೋಚಿಸುವುದೇನೆಂದರೆ ಹೊಸ ಶರೀಅತ್ ತರುವವರು ಮಾತ್ರ ನಬಿಯಾಗಿರುತ್ತಾರೆ. ಅಥವಾ ಮೊದಲಿನ ಪ್ರವಾದಿ ತಂದ ಶರೀಅತ್‌ನಲ್ಲಿ ಕೆಲವು ಆಜ್ಞೆಗಳನ್ನು ರದ್ದುಗೊಳಿಸಬೇಕು ಅಥವಾ ಮೊದಲು ಆಗಮಿಸಿದ ಪ್ರವಾದಿಯನ್ನು ಅನುಸರಿಸುವುದರಿಂದ ಹೊರಗಿರಬೇಕು.

ವಾಸ್ತವಿಕ ವಿಷಯವೇನೆಂದರೆ ಒಬ್ಬ ಪ್ರವಾದಿಯಾಗಲು ಇವು ಆವಶ್ಯಕವಾಗಿಲ್ಲ. ಪ್ರವಾದಿ ಮೇಲಿನ ಮೂರು ವರ್ಗಗಳಲ್ಲಿ ಒಂದಕ್ಕೆ ಸೇರ್ಪಡೆಯಾಗಿರುತ್ತಾರೆ. ಅಥವಾ ಒಬ್ಬ ಪ್ರವಾದಿಯಲ್ಲಿ ಮೇಲೆ ವಿವರಿಸಿದ ಮೂರು ಗುಣಗಳೂ ಇರುವುದಿಲ್ಲ. ಹೊಸ ಗ್ರಂಥ ತರದ, ಹಿಂದಿನ ಶರೀಅತಿನ ಆಜ್ಞೆಯನ್ನು ರದ್ದುಗೊಳಿಸದ, ನೇರವಾಗಿ ಪ್ರವಾದಿತ್ವ ಲಭಿಸದ ಪ್ರವಾದಿ ಸಹ ಆಗಮಿಸಬಹುದಾಗಿದೆ. ಏಕೆಂದರೆ ಪ್ರವಾದಿತ್ವ (ನುಬುವ್ವತ್) ಅಲ್ಲಾಹನ ಸಾಮೀಪ್ಯ ಗಳಿಸಿದ ಒಂದು ಹೆಸರಾಗಿದೆ. ಆ ಸ್ಥಾನ ಗಳಿಸಿದ ವ್ಯಕ್ತಿಯ ಕೆಲಸ, ಲೋಕದ ಜನರ ಸುಧಾರಣೆ ಮಾಡುವುದು, ಜನರನ್ನು ಅಲ್ಲಾಹನ ಕಡೆಗೆ ಕರೆದೊಯ್ಯುವುದು, ಮೃತ ಹೃದಯಗಳಿಗೆ ಚೈತನ್ಯ ನೀಡುವುದು, ಬರಡು ಭೂಮಿಯನ್ನು ಸಸ್ಯ ಸಮೃದ್ಧವನ್ನಾಗಿ ಮಾಡುವುದು, ಜನರ ಮಾರ್ಗದರ್ಶನಕ್ಕಾಗಿ ಅಲ್ಲಾಹನಿಂದ ಅವತೀರ್ಣವಾದ ಮಾತುಗಳನ್ನು ಜನರಿಗೆ ತಲಪಿಸುವುದು ಮತ್ತು ಸತ್ಯದ ಪ್ರಚಾರಕ್ಕಾಗಿ ತಮ್ಮ ಜೀವಿತವನ್ನು ಮುಡಿಪಾಗಿಡುವ ಜನರ ಒಂದು ಜಮಾಅತನ್ನು ಸ್ಥಾಪಿಸುವುದು. ಅವರ ಮಾದರಿಯನ್ನು ನೋಡಿ ಇತರರು ತಮ್ಮ ಹೃದಯಗಳನ್ನು ಶುದ್ಧೀಕರಿಸಿ ತಮ್ಮ ನಡೆವಳಿಕೆಗಳನ್ನು ತಿದ್ದುವಂತಾಗಬೇಕು.

ನುಬುವ್ವತನ್ನು ನಿರಾಕರಿಸುವುದು ನುಬುವ್ವತಿನ ಅರ್ಥವನ್ನು ತಪ್ಪಾಗಿ ಗ್ರಹಿಸಿದುದರಿಂದ ಉಂಟಾಗುವುದಾಗಿದೆ. ಕೆಲವು ರೀತಿಯ ನುಬುವ್ವತ್ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವೈಭವವನ್ನು ಕುಂದಿಸುವುದಕ್ಕೆ ಬದಲಾಗಿ ವರ್ಧಿಸುತ್ತದೆ.

ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ನಂತರ ಪವಿತ್ರ ಖುರ್‌ಆನ್ ನುಬುವ್ವತಿನ ಶೃಂಖಲೆಯನ್ನು ಕೊನೆಗೊಳಿಸುತ್ತದೆ; ಏಕೆಂದರೆ ಈ ಕೆಳಗಿನ ವಚನ ಅದಕ್ಕೆ ಸಾಕ್ಷ್ಯವಾಗಿದೆ ಎಂದು ಹೇಳಲಾಗುತ್ತಿದೆ.

مَا كَانَ مُحَمَّدٌ اَبَآ اَحَدٍ مِّنْ رِّجَالِكُمْ وَلٰكِنْ رَّسُوْلَ اللّٰهِ وَ خَاتَمَ النَّبِيّٖنَ -

"ಮುಹಮ್ಮದ್ ನಿಮ್ಮ ಪೈಕಿ ಯಾವನೇ ಪುರುಷನ ಪಿತನಲ್ಲ. ಆದರೆ ಅವರು ಅಲ್ಲಾಹನ ಸಂದೇಶವಾಹಕರೂ ಖಾತಮನ್ನಬಿಯ್ಯೀನರೂ (ಪ್ರವಾದಿಗಳ ಮುದ್ರೆಯೂ) ಆಗಿದ್ದಾರೆ." (33:41)

ಆದುದರಿಂದ ಇನ್ನು ಮುಂದೆ ಯಾವುದೇ ಪ್ರವಾದಿ ಬರಲಾರರು ಎಂದು ಹೇಳಲಾಗುತ್ತಿದೆ.

ಪವಿತ್ರ ಖುರ್‌ಆನ್ ತೆರೆದು ನೋಡಿದರೆ ಅದರಲ್ಲಿ ಖಾತ ಮುನ್ನಬಿಯ್ಯೀನ್ ಎಂದು 'ತ' ಅಕ್ಷರದ ಅಕಾರದೊಂದಿಗೆ ಬರೆದುದನ್ನು ಕಾಣಬಹುದು. 'ತ' ಅಕ್ಷರದ ಇಕಾರ ಪ್ರಯೋಗಿಸಲ್ಪಟ್ಟಿಲ್ಲ. ಖಾತಮ್ ಪದದ ಅರ್ಥ ಮುದ್ರೆ ಎಂದಾಗಿದೆ. ಕೊನೆಗೊಳಿಸುವವ ಎಂಬ ಅರ್ಥ ಅದಕ್ಕೆ ಇಲ್ಲ. ಮುದ್ರೆಯು ಅಧಿಕೃತಗೊಳಿಸಲು ಉಪಯೋಗಿಸಲ್ಪಡುತ್ತದೆ. ಈ ವಚನದ ಅರ್ಥ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರವಾದಿಗಳ ಮುದ್ರೆ ಎಂದಾಗಿದೆ. ಇಮಾಮ್ ಬುಖಾರಿ ತನ್ನ ಗ್ರಂಥ ಸಹೀಹ್ ಬುಖಾರಿಯಲ್ಲಿ ಖಾತಮುನ್ನಬಿಯ್ಯೀನ್ ಎಂಬುದಕ್ಕೆ ಪ್ರವಾದಿಗಳ ಮುದ್ರೆ ಎಂದು ಅರ್ಥ ನೀಡಿದ್ದಾರೆ. ಅವರು ಈ ವಚನದ ವ್ಯಾಖ್ಯಾನದಲ್ಲಿ ಒಂದು ಹದೀಸನ್ನು ಉಲ್ಲೇಖಿಸಿದ್ದಾರೆ. ಆ ಹದೀಸ್ ಪ್ರಕಾರ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪವಿತ್ರ ದೇಹದಲ್ಲಿ ಪ್ರವಾದಿತ್ವದ ಒಂದು ಮುದ್ರೆ ಇದ್ದಿತು.

ಜನರು ಪವಿತ್ರ ಖುರ್‌ಆನಿನಲ್ಲಿ ಬಳಸಲಾದ ಶಬ್ದಗಳ ಬಗ್ಗೆ ಚಿಂತಿಸುತ್ತಿದ್ದರೆ ಅವರಿಗೆ ಇಂತಹ ತಪ್ಪುಗ್ರಹಿಕೆ ಉಂಟಾಗುತ್ತಿರಲಿಲ್ಲ. ಪವಿತ್ರ ಖುರ್‌ಆನಿನ ಈ ವಚನದಲ್ಲಿ ಯಾವ ವಿಷಯ ಪ್ರಸ್ತಾಪಿಸಲಾಗಿದೆ ಎಂದು ಯೋಚಿಸುತ್ತಿದ್ದರೆ ಅವರಿಗೆ ತಿಳಿಯುತ್ತಿತ್ತು. ಈ ವಚನದಲ್ಲಿ ಹೀಗೆ ಹೇಳಲಾಗಿದೆ: ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಮ್ಮ ಪೈಕಿ ಯಾವನೇ ಪುರುಷನ ಪಿತ ಅಲ್ಲ. ಅನಂತರ ಆದರೆ (ವಲಾಕಿನ್) ಎಂದು ಹೇಳಿ ಅವರನ್ನು ಸಂದೇಶವಾಹಕನೆಂದೂ ಖಾತಮನ್ನಬಿಯ್ಯೀನ್ ಎಂದೂ ಹೇಳಲಾಗಿದೆ. 'ಆದರೆ' (ವಲಾಕಿನ್) ಎಂಬ ಪದವನ್ನು ಸಂಶಯದ ನಿವಾರಣೆಗೆ ಬಳಸಲಾಗಿದೆ ಎಂಬುದು ಸ್ಪಷ್ಟ. ಈ ವಚನದ ಪ್ರಥಮ ಭಾಗದಿಂದ ಸಂಶಯ ಉಂಟಾಗುತ್ತದೆ. ಏಕೆಂದರೆ ಸೂರತುಲ್ ಕೌಸರ್‌ನಲ್ಲಿ,

اِنَّ شَانِئَكَ هُوَ الْاَبْتَرُ -

"ನಿನ್ನ ಶತ್ರುವೇ ಸಂತಾನರಹಿತನು. (ನೀನು ಸಂತಾನರಹಿತನಲ್ಲ)." ಎಂದು ಹೇಳಲಾಗಿದೆ. (108:4)

ಖಾತಮನ್ನಬಿಯ್ಯೀನ್ ಎಂಬ ವಚನದಲ್ಲಿ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪುರುಷ ಸಂತಾನವಿಲ್ಲ ಎಂದು ಹೇಳಿದೆ. ಇದರಿಂದ ಕೆಲವು ಜನರ ಹೃದಯದಲ್ಲಿ ಸಂಶಯ ಉಂಟಾಗಬಹುದಾದುದರಿಂದ ಅದರ ನಿವಾರಣೆಗೋಸ್ಕರ ಹೀಗೆ ಸೂಚಿಸಲಾಗಿದೆ: ಶಾರೀರಿಕವಾಗಿ ಪುರುಷ ಸಂತಾನ ಇಲ್ಲದಿದ್ದರೂ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅಬ್‌ತರ್ (ಪುರುಷ ಸಂತಾನ ರಹಿತ) ಎಂದು ಕರೆಯಬಾರದು. ಏಕೆಂದರೆ ಅವರು ಅಲ್ಲಾಹನ ಸಂದೇಶವಾಹಕರಾಗಿದ್ದಾರೆ. ಅವರ ಆಧ್ಯಾತ್ಮಿಕ ಪುರುಷ ಸಂತಾನ ಅಸಂಖ್ಯಾತವಾಗುವುದು. ಅನಂತರ **ಖಾತಮನ್ನಬಿಯ್ಯೀನ್** ಎಂದು ಹೇಳಿ ಇದೇ ವಿಷಯವನ್ನು ಇನ್ನಷ್ಟು ವಿಸ್ತರಿಸಲಾಗಿದೆ. ಅನೇಕ ಸತ್ಯವಿಶ್ವಾಸಿಗಳು ಅವರ ಆಧ್ಯಾತ್ಮಿಕ ಪುತ್ರರಾಗುವರು ಮಾತ್ರವಲ್ಲ, ಅವರು ಪ್ರವಾದಿಗಳ ಮುದ್ರೆ ಸಹ ಆಗಿರುವರು. ಅವರ ಮುದ್ರೆ ಪಡೆದವರು ನುಬುವ್ವತ್ ಪದವಿ ಗಳಿಸುವರು. ಈ ರೀತಿ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸತ್ಯವಿಶ್ವಾಸಿಗಳಾದ ಸಾಮಾನ್ಯ ಪುರುಷರ ಮಾತ್ರವಲ್ಲ, ಪ್ರವಾದಿಗಳ ಪಿತರೂ ಆಗುವರು.

ಈ ವಚನವು ನಾವು ಇದರ ಮೊದಲು ವಿವರಿಸಿದಂತಹ ಪ್ರವಾದಿತ್ವದ ಬಾಗಿಲನ್ನು ತೆರೆಯುತ್ತದೆ; ಅದನ್ನು ಮುಚ್ಚುವುದಿಲ್ಲ. ಆದರೆ ಹೊಸ ಶರೀಅತ್ ತರುವ ಮತ್ತು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತಿನೊಂದಿಗೆ ಸಂಬಂಧ ಹೊಂದದ ನುಬುವ್ವತಿನ ಬಾಗಿಲನ್ನು ಮುಚ್ಚುತ್ತದೆ. ಏಕೆಂದರೆ ಅಂತಹ ನುಬುವ್ವತ್ ಜಾರಿಗೊಳ್ಳುವುದಾದರೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪಿತೃತ್ವ ಕೊನೆಗೊಳ್ಳುವುದು. ಅಂತಹ

ನುಬುವ್ವತನ್ನು ನಿರಾಕರಿಸಲಾಗಿದೆ.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು

**"ಇನ್ನೀ ಆಖಿರುಲ್ ಅನ್‌ಬಿಯಾ"** (ನಾನು ಕೊನೆಯ ಪ್ರವಾದಿ) ಎಂದೂ **"ಲಾನಬಿಯ್ಯ ಬಅ್‌ದೀ"** (ನನ್ನ ನಂತರ ಪ್ರವಾದಿ ಇಲ್ಲ) ಎಂದೂ ಹೇಳಿದುದರಿಂದ ಅವರ ಆಗಮನದ ನಂತರ ಬೇರೆ ಪ್ರವಾದಿ ಬರಲಾರರು ಎಂದು ಹೇಳಲಾಗುತ್ತಿದೆ.

ಖೇದಕರವಾದ ವಿಷಯವೇನೆಂದರೆ, ಜನರು **"ಇನ್ನೀ ಆಖಿರುಲ್ ಅನ್‌ಬಿಯಾ"** ಎಂಬ ಹದೀಸಿನೊಂದಿಗೆ **"ವ ಮಸ್‌ಜಿದೀ ಆಖಿರುಲ್ ಮಸಾಜಿದ್"** (ನನ್ನ ಮಸ್‌ಜಿದ್ ಕೊನೆಯ ಮಸ್‌ಜಿದ್) ಎಂಬ ವಾಕ್ಯ ಸಹ ಇದೆ ಎಂಬುದನ್ನು ನೋಡುವುದಿಲ್ಲ.

**"ಇನ್ನೀ ಆಖಿರುಲ್ ಅನ್‌ಬಿಯಾ"** ಎಂಬ ಹದೀಸು ಪ್ರಕಾರ ಯಾವುದೇ ರೀತಿಯ ಪ್ರವಾದಿ ಬರಲಾರರು ಎಂದು ಹೇಳುವ ಜನರು **"ಮಸ್‌ಜಿದೀ ಆಖಿರುಲ್ ಮಸಾಜಿದ್"** (ಸಹೀಹ್ ಮುಸ್ಲಿಮ್)– ನನ್ನ ಮಸ್‌ಜಿದ್ ಕೊನೆಯ ಮಸ್‌ಜಿದ್ ಎಂಬ ಹದೀಸು ಇದ್ದರೂ ಹಲವಾರು ಮಸ್‌ಜಿದ್‌ಗಳನ್ನು ನಿರ್ಮಿಸುತ್ತಾರೆ. ಎಷ್ಟರ ಮಟ್ಟಿಗೆಂದರೆ, ಕೆಲವು ನಗರಗಳಲ್ಲಿ ಮಸ್‌ಜಿದ್‌ಗಳು ಅಧಿಕವಾಗಿರುವುದರಿಂದ ಅವುಗಳಲ್ಲಿ ಹಲವು ಉಪಯೋಗಿಸದೆ ಬಿಟ್ಟುಬಿಡಲಾಗುತ್ತಿದೆ. ಕೆಲವು ಸ್ಥಳಗಳಲ್ಲಿ ಎರಡು ಮಸ್‌ಜಿದ್‌ಗಳ ಮಧ್ಯದ ದೂರ ಇಪ್ಪತ್ತು ಗಜಗಳಿಗಿಂತಲೂ ಕಡಿಮೆ ಇರುತ್ತದೆ. ಆಖಿರುಲ್ ಅನ್‌ಬಿಯಾ (ಕೊನೆಯ ಪ್ರವಾದಿ) ಎಂದು ಹೇಳಿದುದರಿಂದ ಯಾವುದೇ ಮನುಷ್ಯ ಪ್ರವಾದಿ ಆಗಲಾರನಾದರೆ, ಆಖಿರುಲ್ ಮಸ್‌ಜಿದ್ (ಕೊನೆಯ ಮಸ್‌ಜಿದ್) ನಿರ್ಮಿಸಿದ ನಂತರ ಬೇರೆ ಮಸ್‌ಜಿದ್‌ಗಳು ಏಕೆ ನಿರ್ಮಿಸಲ್ಪಟ್ಟವು?

ಇದಕ್ಕೆ ಹೀಗೆ ಉತ್ತರ ನೀಡಲಾಗುತ್ತಿದೆ: ಇವು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಸ್‌ಜಿದ್‌ಗಳಾಗಿವೆ. ಈ ಮಸ್‌ಜಿದ್‌ಗಳಲ್ಲಿ ನಡೆಸಲಾಗುವ ಆರಾಧನೆಯ ರೀತಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿರ್ಮಿಸಿದ ಮಸ್‌ಜಿದ್‌ಗಳಲ್ಲಿ ಮಾಡಲಾಗುತ್ತಿದ್ದ ಆರಾಧನೆಯ ರೀತಿಯ ಪ್ರಕಾರವಾಗಿದೆ. ಆದುದರಿಂದ ಪ್ರತಿಬಿಂಬದ ರೂಪದಲ್ಲಿ ಈ ಮಸ್‌ಜಿದ್‌ಗಳು ಅದರಿಂದ ಪ್ರತ್ಯೇಕವಾಗಿಲ್ಲ. ಆದುದರಿಂದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಸ್‌ಜಿದ್ ಕೊನೆಯ ಮಸ್‌ಜಿದ್ ಆಗಿದೆ ಎಂಬುದನ್ನು ನಿರಾಕರಿಸುವುದಿಲ್ಲ. ಈ ಉತ್ತರ ಸರಿಯಾಗಿದೆ. ಆದರೆ ನಾವು ಹೇಳುವುದೇನೆಂದರೆರ, **"ಇನ್ನೀ ಆಖಿರುಲ್ ಅನ್‌ಬಿಯಾ"** (ನಾನು ಕೊನೆಯ ಪ್ರವಾದಿ) ಎಂಬ ಹದೀಸು ಇದ್ದರೂ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನೆರಳಿನ ರೂಪದಲ್ಲಿ ಹೊಸ ಪ್ರವಾದಿ ಬರಬಹುದು. ಹಾಗೆ ಆಗಮಿಸುವ ಪ್ರವಾದಿ ಹೊಸ ಶರೀಅತನ್ನು ತರಲಾರರು. ಅವರು ಇಸ್ಲಾಮೀ ಶರೀಅತನ್ನು ಅನುಸರಿಸುವವರಾಗುವರು. ಅವರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳನ್ನು ಪ್ರಚಾರಗೊಳಿಸಲಿಕ್ಕೋಸ್ಕರ ಆಗಮಿಸುವರು. ಅವರಿಗೆ ಎಲ್ಲಾ ಅನುಗ್ರಹಗಳು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಲಭಿಸುವುವು. ಇಂತಹ ಪ್ರವಾದಿಯ ಆಗಮನದಿಂದ ಅವರು ಆಖಿರುಲ್ ಅನ್‌ಬಿಯಾ ಆಗಿರುವುದಕ್ಕೆ ಅಡ್ಡಿಯಾಗುವುದಿಲ್ಲ. ಮಸ್‌ಜಿದುನ್ನಬವೀ (ಪ್ರವಾದಿಯ ಮಸ್‌ಜಿದ್) ಮಾದರಿಯನ್ನು ಅನಸರಿಸಿ ಹೊಸ ಮಸ್‌ಜಿದ್‌ಗಳನ್ನು ನಿರ್ಮಿಸಿದ ಕಾರಣದಿಂದ ಅವರ ಮಸ್‌ಜಿದ್ ಆಖಿರುಲ್ ಮಸಾಜಿದ್ ಆಗುವುದಕ್ಕೆ ಅಡ್ಡಿಯಾಗಲಾರದು.

ಇದೇ ರೀತಿ **ಲಾ ನಬಿಯ್ಯ ಬಅ್‌ದೀ** (ನನ್ನ ಅನಂತರ ಪ್ರವಾದಿ ಇಲ್ಲ) ಎಂಬ ಹದೀಸಿನ ಅರ್ಥ ಅವರ ನಂತರ ಯಾವ ಪ್ರವಾದಿಯೂ ಇಲ್ಲ ಎಂದಾಗುವುದಿಲ್ಲ. ಅವರ ಶರೀಅತನ್ನು ರದ್ದುಗೊಳಿಸುವ ಪ್ರವಾದಿ ಬರುವುದಿಲ್ಲ ಎಂದೇ ಇದರ ಅರ್ಥವಾಗಿದೆ. ಅರಬಿ ಭಾಷೆಯಲ್ಲಿ ಬಅ್‌ದ್ ಎಂಬ ಶಬ್ದದ ಅರ್ಥವೇನೆಂದರೆ, ಮೊದಲು ಹೇಳಿದುದನ್ನು ಕೊನೆಗೊಳಿಸಿ ಅನಂತರ ಹೊಸದಾಗಿ ಪ್ರಾರಂಭವಾಗುವುದು. ಯಾವ ಪ್ರವಾದಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತಿನ ಸಹಾಯಕ್ಕಾಗಿ ಬರುತ್ತಾರೋ ಅವರನ್ನು ಅವರ ನಂತರ (ಬಅ್‌ದ್) ಬಂದ ಪ್ರವಾದಿ ಎಂದು ಹೇಳಲಾಗದು. ಅಂತಹ ಪ್ರವಾದಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರವಾದಿತ್ವದ ಒಳಗಿರುವರು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶರೀಅತಿನ ಯಾವುದಾದರೂ ಆಜ್ಞೆಯನ್ನು ರದ್ದುಗೊಳಿಸುವವನು ಹೊರಗಿರುವನು.

ಬುದ್ಧಿಶಾಲಿಯಾದ ಮನುಷ್ಯನು ಪ್ರತಿಯೊಂದು ವಿಷಯವನ್ನು ಪೂರ್ಣವಾಗಿ ಯೋಚಿಸಬೇಕು ಮತ್ತು ಶಬ್ದಗಳನ್ನು ತಳಸ್ಪರ್ಶಿಯಾಗಿ ಪರಿಶೀಲಿಸಬೇಕು. ಪ್ರಾಯಶಃ ಜನರು ತಪ್ಪುಗ್ರಹಿಕೆಗೆ ಗುರಿಯಾಗುವ ಭಯಹೊಂದಿದುದರಿಂದ ಹಝ್ರತ್ ಆಯಿಶಾ(ರ) ಹೀಗೆ ಹೇಳಿರುವರು:

قُوْلُوْا إِنَّهُ خَاتَمُ الْأَنْبِيَاءِ، وَلَا تَقُوْلُوْا لَا نَبِيَّ بَعْدَهُ۔

"ಜನರೇ, ಅವರು ಖಾತಮುಲ್‌ಅಂಬಿಯಾ ಆಗಿದ್ದರೆಂದು ಹೇಳಿರಿ. ಆದರೆ ಅವರ ನಂತರ ಪ್ರವಾದಿ ಇಲ್ಲವೆಂದು ಹೇಳಬೇಡಿರಿ."

ಹಝ್ರತ್ ಆಯಿಶಾ(ರ) ಪ್ರಕಾರ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಒಬ್ಬ ಪ್ರವಾದಿಯೂ ಬರುವುದಿಲ್ಲವಾದರೆ ಅವರು ಜನರೊಂದಿಗೆ **ಲಾ ನಬಿಯ್ಯ ಬಅ್‌ದಹೂ** ಎಂದು ಹೇಳಬೇಡಿರಿ ಎಂದು ಹೇಳಿದುದಾದರೂ ಏಕೆ? ಅವರು ಹೇಳಿದ ಮಾತು ಸರಿಯಾಗಿಲ್ಲವಾದರೆ ಸಹಾಬ (ಪ್ರವಾದಿ ಶಿಷ್ಯರು) ಅವರ ಮಾತನ್ನು ಏಕೆ ವಿರೋಧಿಸಲಿಲ್ಲ?

ಹಝ್ರತ್ ಆಯಿಶಾ(ರ) ಲಾನಬಿಯ್ಯಬಅ್‌ದೀ ಎಂದು ಹೇಳುವುದನ್ನು ತಡೆದುದರಿಂದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಪ್ರವಾದಿ ಬರಬಹುದು; ಆದರೆ ಶರೀಅತನ್ನು ತರುವ ಪ್ರವಾದಿ ಅಥವಾ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸದ ಸ್ವತಂತ್ರ ಪ್ರವಾದಿ ಬರಲಾರರು ಎಂದು ಅವರು ನಂಬಿದ್ದರು ಎಂದು ಸ್ಪಷ್ಟವಾಗುತ್ತದೆ. ಉಳಿದ ಸಹಾಬ (ಪ್ರವಾದಿ ಶಿಷ್ಯರು) ಅವರ ಮಾತಿಗೆ ವಿರೋಧ ಸೂಚಿಸದೆ ಮೌನವನ್ನು ಅವಲಂಬಿಸಿದುದರಿಂದ ಅವರು ಸಹ ಹೀಗೆಯೇ ನಂಬಿದ್ದರೆಂದು ತಿಳಿಯುತ್ತದೆ.

ಜನರು ಪವಿತ್ರ ಖುರ್‌ಆನನ್ನು ಗಾಢವಾಗಿ ಅಧ್ಯಯನ ಮಾಡುವುದಿಲ್ಲ ಎಂಬುದು ದುಃಖಕರ ಸಂಗತಿಯಾಗಿದೆ. ಅವರು ಸ್ವತಃ ತಪ್ಪು ಮಾಡುತ್ತಾರೆ; ಬೇರೆ ಜನರನ್ನೂ ತಪ್ಪು ದಾರಿಗೆಳೆಯುತ್ತಾರೆ. ಇನ್ನೊಂದು ದುಃಖಕರ ವಿಷಯವೇನೆಂದರೆ, ತಪ್ಪು ಮಾಡಿದ ಜನರು ಅವರ ಹಾಗೆ ತಪ್ಪು ಮಾಡದ ಜನರ ಮೇಲೆ ಸಿಟ್ಟಾಗುತ್ತಾರೆ. ಅವರನ್ನು ಧರ್ಮರಹಿತರೆಂದೂ ಅವಿಶ್ವಾಸಿಗಳೆಂದೂ ಕರೆಯುತ್ತಾರೆ. ಆದರೆ ಸತ್ಯವಿಶ್ವಾಸಿಗಳು ಜನರ ಆಕ್ಷೇಪಗಳಿಗೆ ಹೆದರುವುದಿಲ್ಲ. ಅವರು ಅಲ್ಲಾಹನ ಕೋಪಕ್ಕೆ ಭಯಪಡುತ್ತಾರೆ. ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನಿಗೆ ಯಾವ ಹಾನಿಯನ್ನುಂಟುಮಾಡಬಲ್ಲನು? ಅವನು ಮಾಡಬಹುದಾದ ಅತಿದೊಡ್ಡ ಕೆಲಸ ಹತ್ಯೆಯಾಗಿದೆ. ಆದರೆ ಸತ್ಯವಿಶ್ವಾಸಿ ಮೃತ್ಯುವಿಗೆ ಹೆದರಲಾರನು. ಸತ್ಯವಿಶ್ವಾಸಿಗೆ ಮೃತ್ಯು ತನ್ನ ಪ್ರೀತಿಗೆ ಪಾತ್ರನಾದ

ಅಲ್ಲಾಹನ ಭೇಟಿಗೆ ಒಂದು ಮಾರ್ಗವಾಗಿದೆ.

ಜನರು ಪವಿತ್ರ ಖುರ್‌ಆನ್ ಬಗ್ಗೆ ಚಿಂತಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ಅದೊಂದು ವಿಶಾಲ ಖಜಾನೆಯಾಗಿದೆ ಎಂದು ಅವರಿಗೆ ಮನವರಿಕೆ ಆಗುತ್ತಿತ್ತು. ಅದು ಎಂದೂ ಖಾಲಿಯಾಗದ ಉಗ್ರಾಣವಾಗಿದೆ. ಅದು ಮನುಷ್ಯನ ಎಲ್ಲಾ ಆವಶ್ಯಕತೆಗಳನ್ನು ನೆರವೇರಿಸುವುದು. ಅದರಲ್ಲಿ ಆಧ್ಯಾತ್ಮಿಕ ಅಭಿವೃದ್ಧಿಯನ್ನು ಪಡೆಯುವ ಎಷ್ಟು ಮಾರ್ಗಗಳನ್ನು ವಿವರಿಸಲಾಗಿದೆ ಎಂದರೆ ಅದಕ್ಕಿಂತ ಮೊದಲು ಅವತೀರ್ಣವಾದ ಧಾರ್ಮಿಕ ಗ್ರಂಥಗಳಲ್ಲಿ ಅದರ ಹತ್ತರಲ್ಲೊಂದು ಭಾಗ ಕೂಡ ವಿವರಿಸಲ್ಪಟ್ಟಿಲ್ಲ. ಅವರಿಗೆ ಈ ವಿಷಯ ತಿಳಿದಿದ್ದರೆ ಬಾವಿಯೊಳಗಿನ ಕಪ್ಪೆಯ ಹಾಗೆ ತಮ್ಮ ಸ್ಥಿತಿಯ ಬಗ್ಗೆ ತೃಪ್ತರಾಗುತ್ತಿರಲಿಲ್ಲ. ಅವರು ಅಲ್ಲಾಹನ ಸಾಮೀಪ್ಯ ಗಳಿಸುವ ಮಾರ್ಗವನ್ನು ಹುಡುಕಲು ಹೆಜ್ಜೆ ಹಾಕುತ್ತಿದ್ದರು. ಅವರು ಶಬ್ದಗಳ ಬದಲು ಹೃದಯಗಳ ಸುಧಾರಣೆಯ ಮಹತ್ವವನ್ನು ಅರಿತಿದ್ದರೆ ಅವರು ಬಾಹ್ಯ ವಿದ್ಯೆ ಕಲಿಯುವುದು ಸಾಕೆಂದು ಗಣಿಸುತ್ತಿರಲಿಲ್ಲ. ಅವರು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಲು ಪ್ರಯತ್ನ ಮಾಡುತ್ತಿದ್ದರು. ಅವರ ಹೃದಯಗಳಲ್ಲಿ ಈ ಆಶೆ ಉಂಟಾಗುತ್ತಿದ್ದರೆ ಅವರು ಪವಿತ್ರ ಖುರ್‌ಆನ್ ಮನುಷ್ಯರ ಅಭಿವೃದ್ಧಿಗೆ ಎಂತಹ ಮಾರ್ಗಗಳನ್ನು ತೆರೆದಿದೆ ಎಂದು ಅನ್ವೇಷಿಸುತ್ತಿದ್ದರು. ಆಗ ಅವರಿಗೆ ಮನವರಿಕೆ ಆಗುತ್ತಿತ್ತು – ಅವರು ಒಂದು ಸಿಪ್ಪೆಯನ್ನು ಹೊಂದಿ ಸಂತೋಷಗೊಂಡಿದ್ದಾರೆ ಮತ್ತು ಬರಿದಾದ ಪಾತ್ರೆಯನ್ನು ಬಾಯಿಗೆ ತಗಲಿಸಿ ಮತ್ತರಾಗಲು ಬಯಸುತ್ತಾರೆಂದು.

ಜನರು ಸೂರತುಲ್ ಫಾತಿಹ ಓದುತ್ತಾರೆ. ಆದರೆ ಅವರಲ್ಲಿ ಪ್ರಸ್ತಾಪಿಸಲ್ಪಟ್ಟ ಅನುಗ್ರಹಗಳು ತಮಗೆ ಸಹ ಸಿಗಲಿ ಎಂಬ ಆಶೆ ಅವರ ಹೃದಯಗಳಲ್ಲಿ ಎಂದೂ ಏಕೆ ಉಂಟಾಗುವುದಿಲ್ಲ. ಅವರು ರಾತ್ರಿ ಹಗಲು ಐವತ್ತು ಸಾರಿ,

**ಇಹ್‌ದಿನಸ್ಸಿರಾತಲ್ ಮುಸ್ತಖೀಮ ಸಿರಾತಲ್ಲದೀನ ಅನ್‌ಅಮ್‌ತ ಅಲೈಹಿಮ್**

**"ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು; ನಿನ್ನ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗದಲ್ಲಿ"** ಎಂದು ಹೇಳುತ್ತಾ ಇರುತ್ತಾರೆ. ಅದರೆ ತಾವು ಯಾವ ಅನುಗ್ರಹಗಳನ್ನು ಬೇಡುತ್ತಾ ಇದ್ದೇವೆ ಎಂದು ಅವರು ಯೋಚಿಸುವುದಿಲ್ಲ. ಅವರು ಒಂದು ಸಲವಾದರೂ ನಾವು ಏನನ್ನು ಬೇಡುತ್ತಿದ್ದೇವೆ ಎಂದು ಅರ್ಥ ಮಾಡಿಕೊಂಡು ನಮಾಝ್ ಮಾಡುತ್ತಿದ್ದರೆ ಅವರ ಗಮನ ಸೂರತುನ್ನಿಸಾದಲ್ಲಿರುವ ಈ ವಚನದ ಕಡೆಗೆ ತಿರುಗುತ್ತಿತ್ತು:

وَلَوْ اَنَّهُمْ فَعَلُوْا مَا يُوْعَظُوْنَ بِهٖ لَكَانَ خَيْرًا لَّهُمْ وَاَشَدَّ تَثْبِيْتًا ۙ
وَّاِذًا لَّاٰتَيْنٰهُمْ مِّنْ لَّدُنَّاۤ اَجْرًا عَظِيْمًا ۙ وَّلَهَدَيْنٰهُمْ صِرَاطًا مُّسْتَقِيْمًا ۔
وَمَنْ يُّطِعِ اللّٰهَ وَالرَّسُوْلَ فَاُولٰٓئِكَ مَعَ الَّذِيْنَ اَنْعَمَ اللّٰهُ عَلَيْهِمْ
مِّنَ النَّبِيّٖنَ وَالصِّدِّيْقِيْنَ وَالشُّهَدَاۤءِ وَالصّٰلِحِيْنَ ۚ وَحَسُنَ اُولٰٓئِكَ
رَفِيْقًا ۞ ذٰلِكَ الْفَضْلُ مِنَ اللّٰهِ ۚ وَكَفٰى بِاللّٰهِ عَلِيْمًا ۔

ಅರ್ಥ: **"ಅವರಿಗೆ ಉಪದೇಶಿಸಿದಂತೆ ಅವರು ಮಾಡಿರುತ್ತಿದ್ದರೆ ಅದು ಅವರಿಗೆ ಗುಣಕರವೂ ಅವರ ಹೃದಯವನ್ನು ದೃಢಪಡಿಸುವುದೂ ಆಗುತ್ತಿತ್ತು. ಆಗ ನಾವು ಅವರಿಗೆ ಬಹಳ ದೊಡ್ಡ ಪ್ರತಿಫಲ ನೀಡುತ್ತಿದ್ದೆವು. ನಾವು ನಿಶ್ಚಯವಾಗಿಯೂ ಅವರನ್ನು ಸರಿಯಾದ ಮಾರ್ಗದಲ್ಲಿ ನಡೆಸುತ್ತಿದ್ದೆವು. ಯಾರಾದರೂ ಅಲ್ಲಾಹನಿಗೆ ವಿಧೇಯರಾಗಿ ಈ ಸಂದೇಶವಾಹಕರನ್ನು ಅನುಸರಿಸಿದರೆ ಅವರು ಅಲ್ಲಾಹನು ಅನುಗ್ರಹಿಸಿದ ಪ್ರವಾದಿಗಳು, ಸತ್ಯಸಂಧರು, ಹುತಾತ್ಮರು ಮತ್ತು ಸಜ್ಜನರಲ್ಲಿ ಸೇರುವರು. ಅವರು ಅತ್ಯುತ್ತಮ ಸಂಗಾತಿಗಳಾಗಿದ್ದಾರೆ. ಇದು ಅಲ್ಲಾಹನ ಮಹತ್ವ ಪೂರ್ಣ ಅನುಗ್ರಹವಾಗಿದೆ. ಅಲ್ಲಾಹನ ಎಲ್ಲವನ್ನೂ ಬಲ್ಲವನಾಗಿದ್ದಾನೆ."** **(4:67–71)**

ಈ ವಚನಗಳಿಂದ ತಿಳಿಯುವುದೇನೆಂದರೆ, ಅಲ್ಲಾಹನ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗ ತೋರಿಸಿಕೊಡುವುದರ ಉದ್ದೇಶ ಪ್ರವಾದಿಗಳು, ಸತ್ಯಸಂಧರು, ಹುತಾತ್ಮರು ಮತ್ತು ಸಜ್ಜನರ ಗುಂಪಿಗೆ ಸೇರಿಸುವುದಾಗಿದೆ. ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ನಮಗೆ ಮಾರ್ಗದರ್ಶನ ನೀಡಿರುವನು – ನಾವು ಪ್ರತಿದಿನ ಅಂದಾಜು ನಲ್ವತ್ತು ಸಾರಿ ನೇರಮಾರ್ಗಕ್ಕೋಸ್ಕರ ಪ್ರಾರ್ಥಿಸಬೇಕೆಂದು. ಅನಂತರ ನೇರ ಮಾರ್ಗದ ವಿವರಣೆಯನ್ನು ಅಲ್ಲಾಹನು ಸ್ವತಃ ನೀಡುತ್ತಾನೆ – ಪ್ರವಾದಿಗಳ, ಸತ್ಯಸಂಧರ, ಹುತಾತ್ಮರ ಮತ್ತು ಸಜ್ಜನರ ಗುಂಪಿನೊಂದಿಗೆ ಸೇರುವುದೇ ಅದರ ಉದ್ದೇಶವೆಂದು. ಹೀಗಿರುವಾಗ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯಕ್ಕೆ ನುಬುವ್ವತಿನ ಬಾಗಿಲು ಸಂಪೂರ್ಣವಾಗಿ ಮುಚ್ಚಿಹೋಗುವುದಾದರೂ ಹೇಗೆ?

ಅಲ್ಲಾಹನು ನಮ್ಮೊಂದಿಗೆ ಪ್ರವಾದಿಗಳ, ಸತ್ಯಸಂಧರ, ಹುತಾತ್ಮರ, ಸಜ್ಜನರ ಅನುಗ್ರಹ ಬೇಡಲು ಹೇಳಿ ಅನಂತರ ಈ ಅನುಗ್ರಹಗಳನ್ನು ಈ ಸಮುದಾಯಕ್ಕೆ ಶಾಶ್ವತವಾಗಿ ಸ್ಥಗಿತಗೊಳಿಸಿದ್ದೇನೆ ಎಂದು ಹೇಳುವುದು ಹಾಸ್ಯಾಸ್ಪದವಲ್ಲವೇ? ಅಲ್ಲಾಹನ ಮಹಿಮೆಗೆ ಹಾಸ್ಯ ಸಲ್ಲದು. ಅಲ್ಲಾಹನು ಎಲ್ಲಾ ನ್ಯೂನತೆಗಳಿಂದಲೂ ಮುಕ್ತನಾಗಿದ್ದಾನೆ. ಅವನು ಪರಿಶುದ್ಧನೂ ಎಲ್ಲಾ ಕಳಂಕರಹಿತನೂ ಆಗಿದ್ದಾನೆ. ಅವನು ಈ ಅನುಗ್ರಹ ಗಳನ್ನು ತಡೆದಿಟ್ಟಿದ್ದರೆ ಸೂರತುಲ್ ಫಾತಿಹದಲ್ಲಿ ಆ ಅನುಗ್ರಹಗಳಿಗೋಸ್ಕರ ಪ್ರಾರ್ಥಿಸಲು ಹೇಳುತ್ತಿರಲಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವವರು ಪ್ರವಾದಿಗಳ ಗುಂಪನ್ನು ಸಹ ಸೇರಬಲ್ಲರೆಂದು ಹೇಳುತ್ತಿರಲಿಲ್ಲ.

ಕೆಲವರು ಹೀಗೆ ಹೇಳುತ್ತಾರೆ: ಪವಿತ್ರ ಖುರ್‌ಆನಿನ, ಮೇಲೆ ಉಲ್ಲೇಖಿಸಿದ ವಚನದಲ್ಲಿ ಮಅಲ್ಲದೀನ ಅನ್‌ಅಮಲ್ಲಾಹು ಅಲೈಹಿಮ್ (ಅನುಗ್ರಹಕ್ಕೆ ಪಾತ್ರರಾದವರ ಜೊತೆ) ಎಂದು ಹೇಳಲಾಗಿದೆ. ಮಿನಲ್ಲದೀನ್ ಅನ್‌ಅಮಲ್ಲಾಹು ಅಲೈಹಿಮ್ (ಅನುಗ್ರಹಕ್ಕೆ ಪಾತ್ರರಾದವರ ಪೈಕಿ) ಎಂದು ಹೇಳಿಲ್ಲ. ಆದುದರಿಂದ ಈ ಸಮುದಾಯದಲ್ಲಿ ಅನುಗ್ರಹಕ್ಕೆ ಪಾತ್ರರಾದವರು ಪ್ರವಾದಿಗಳ ಜೊತೆಗೆ ಇರುವರು. ಅವರು ಪ್ರವಾದಿಗಳಾಗಿ ಸೇರಲಾರರು.

ಈ ಆಕ್ಷೇಪ ಸೂಚಿಸುವವರು ಈ ವಚನದಲ್ಲಿ ಕೇವಲ ಪ್ರವಾದಿಗಳ ಪ್ರಸ್ತಾಪ ಮಾತ್ರವಲ್ಲ, ಸತ್ಯಸಂಧರ, ಹುತಾತ್ಮರ ಮತ್ತು ಸಜ್ಜನರ ಬಗ್ಗೆಯೂ ಪ್ರಸ್ತಾಪಿಸಲಾಗಿದೆ ಎಂಬುದನ್ನು ಗಮನಿಸಬೇಕು.

ಮಅ(ಜೊತೆ) ಎಂಬ ಶಬ್ದ ಇರುವ ಕಾರಣ ಈ ಜನರು ಹಾಗೆ ಅರ್ಥ ಹೇಳುವುದಾದರೆ, ಅದರೊಂದಿಗೆ ಹೀಗೆ ಸಹ ಹೇಳಬೇಕಾಗ ಬಹುದು: ಈ ಸಮುದಾಯದಲ್ಲಿ ಯಾರೂ ಸತ್ಯಸಂಧರಾಗಲಾರರು. ಕೆಲವರು ಸತ್ಯಸಂಧರೊಂದಿಗೆ ಇರಿಸಲ್ಪಡುವರು. ಹುತಾತ್ಮರು ಸಹ ಯಾರೂ ಇರಲಾರರು. ಕೆಲವರನ್ನು ಹುತಾತ್ಮರ ಜೊತೆ ಇರಿಸಲಾಗುವುದು. ಸಜ್ಜನರು ಸಹ ಯಾರೂ ಇರಲಾರರು. ಕೆಲವರನ್ನು ಸಜ್ಜನರ ಜೊತೆಗೆ ಇರಿಸಲಾಗುವುದು.

ಇದರ ಅರ್ಥ ಬೇರೆ ಶಬ್ದಗಳಲ್ಲಿ ಹೀಗಾಗುತ್ತದೆ: ಈ ಸಮುದಾಯದ ಎಲ್ಲಾ ಜನರು ಒಳಿತು ಮತ್ತು ಭಯಭಕ್ತಿಯ ಎಲ್ಲಾ ಪದವಿಗಳಿಂದ ವಂಚಿತರಾಗುವರು. ಅವರಲ್ಲಿ ಕೆಲವರನ್ನು ಹಿಂದಿನ

ಸಮುದಾಯಗಳಲ್ಲಿ ಅನುಗ್ರಹ ಪಡೆದವರ ಜೊತೆಗೆ ಇರಿಸಲಾಗುವುದು.

ಒಬ್ಬ ಮುಸ್ಲಿಮನಾದವನು ಹೀಗೆ ಯೋಚಿಸಲು ಸಾಧ್ಯವೇ? ಈ ಸಮುದಾಯದಲ್ಲಿ ಸಜ್ಜನರು ಕೂಡ ಇರಲಾರರು; ಕೆಲವರು ಸಜ್ಜನ ಜೊತೆಗೆ ಇರಿಸಲ್ಪಡುವವರು ಎಂದು. ಇಂತಹ ಅಭಿಪ್ರಾಯ ಪವಿತ್ರ ಖುರ್‌ಆನ್, ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಪಮಾನಕರವಾಗಿದೆ.

ಮಅ(ಜೊತೆ) ಶಬ್ದದ ಬಗ್ಗೆ ಒತ್ತಿಹೇಳಿ ನುಬುವ್ವತಿನ ಶೃಂಖಲೆಯನ್ನು ಕೊನೆಗೊಳಿಸುವುದಾದರೆ ಅದರೊಂದಿಗೆ ಮುಸ್ಲಿಮರಿಗೆ ಸತ್ಯಸಂಧತೆ, ಹುತಾತ್ಮತೆ ಮತ್ತು ಸಜ್ಜನಿಕೆಯ ಬಾಗಿಲು ಸಹ ಮುಚ್ಚಲ್ಪಡುವುದು.

ವಾಸ್ತವಿಕ ವಿಷಯವೇನೆಂದರೆ, ಮಅ ಎಂಬ ಶಬ್ದದ ಅರ್ಥ ಒಂದು ಸ್ಥಳ ಅಥವಾ ಒಂದು ಕಾಲಘಟ್ಟದಲ್ಲಿ ಎರಡು ವಸ್ತುಗಳು ಜೊತೆಗೂಡಿರುವುದು ಎಂದಲ್ಲ. ಮಅ ಎಂಬ ಶಬ್ದವು ಪದವಿಯಲ್ಲಿ ಜೊತೆಗೂಡುವಿಕೆಗೂ ಅನ್ವಯಿಸುತ್ತದೆ. ಉದಾಹರಣೆಗೆ ಅಲ್ಲಾಹನು ಹೀಗೆ ಹೇಳುತ್ತಾನೆ:

اِنَّ الْمُنٰفِقِیْنَ فِی الدَّرْكِ الْاَسْفَلِ مِنَ النَّارِۚ وَلَنْ تَجِدَ لَهُمْ نَصِیْرًاۙ اِلَّا الَّذِیْنَ تَابُوْا وَ اَصْلَحُوْا وَ اعْتَصَمُوْا بِاللّٰهِ وَ اَخْلَصُوْا دِیْنَهُمْ لِلّٰهِ فَاُولٰٓىِٕكَ مَعَ الْمُؤْمِنِیْنَؕ وَ سَوْفَ یُؤْتِ اللّٰهُ الْمُؤْمِنِیْنَ اَجْرًا عَظِیْمًا۔

**"ಖಂಡಿತವಾಗಿಯೂ ಕಪಟ ವಿಶ್ವಾಸಿಗಳು ನರಕದ ಅತ್ಯಂತ ಕೆಳಮಟ್ಟದಲ್ಲಿ ಹಾಕಲ್ಪಡುವವರು ಅವರಿಗೆ ಸಹಾಯಕನಾಗಿ ಯಾರನ್ನೂ ನೀನು ಕಾಣಲಾರೆ. ಪಶ್ಚಾತ್ತಾಪಪಟ್ಟು ತಮ್ಮನ್ನು ತಿದ್ದಿಕೊಂಡು ಅಲ್ಲಾಹನನ್ನು ಬಿಗಿಯಾಗಿ ಹಿಡಿಯುವವರು ಮತ್ತು ಅಲ್ಲಾಹನಿಗೆ ಪ್ರಾಮಾಣಿಕವಾಗಿ ವಿಧೇಯತೆ ತೋರಿಸುವವರು ಅದರಿಂದ ಹೊರತಾಗುವರು. ಅವರು ಸತ್ಯವಿಶ್ವಾಸಿಗಳ ಜತೆಯಲ್ಲಿರುತ್ತಾರೆ. ಸತ್ಯವಿಶ್ವಾಸಿಗಳಿಗೆ ಅಲ್ಲಾಹನು ಶೀಘ್ರದಲ್ಲಿ ಮಹತ್ತರ ಪ್ರತಿಫಲವನ್ನು ನೀಡುವನು." (4:146, 147)**

ಪಶ್ಚಾತ್ತಾಪಗೊಂಡು ತಮ್ಮನ್ನು ತಿದ್ದಿಕೊಳ್ಳುವ ಮಾಜಿ ಕಪಟವಿಶ್ವಾಸಿಗಳ ಕುರಿತು ಮಅಲ್‌ಮೂಮಿನೀನ್ (ಸತ್ಯವಿಶ್ವಾಸಿಗಳ ಜೊತೆಗಿರುತ್ತಾರೆ) ಎಂದು ಹೇಳಲಾಗಿದೆ. ಇಂತಹ ಜನರು ಸತ್ಯವಿಶ್ವಾಸಿಗಳಾಗಿರುತ್ತಾರೆ ಎಂದು ಇದರ ಅರ್ಥವಾಗಿದೆ. ಅವರು ಸತ್ಯವಿಶ್ವಾಸಿಗಳಾಗಿರಲಾರರು; ಕೇವಲ ಸತ್ಯವಿಶ್ವಾಸಿಗಳ ಜೊತೆ ಇರಿಸಲ್ಪಡುವವರು ಎಂದು ಹೇಳುವುದು ತಪ್ಪೆಂದು ಸ್ವಯಂಸಿದ್ಧವಾಗುತ್ತದೆ.

ಆದುದರಿಂದ ಮಅ ಎಂಬ ಶಬ್ದವು ಸ್ಥಾನದಲ್ಲಿ ಒಂದುಗೂಡುವಿಕೆ ಬಗ್ಗೆ ಸಹ ಉಪಯೋಗಿಸಲ್ಪಡುತ್ತದೆ. ಇದೇ ಅರ್ಥದಲ್ಲಿ "ಅವರು ಅನುಗ್ರಹ ಪಡೆದವರ ಜೊತೆಗಿರುವರು" (ಉಲಾಯಿಕ ಮಅಲ್ಲಧೀನ ಅನ್‌ಅಮಲ್ಲಾಹು ಅಲೈಹಿಮ್) ಎಂದು ಹೇಳಲಾಗಿದೆ.

ಪವಿತ್ರ ಖುರ್‌ಆನಿನಲ್ಲಿ ಅನೇಕ ವಚನಗಳು ಸೂಚಿಸುವುದೇನೆಂದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರವಾದಿತ್ವದ ನೆರಳಿನ ರೂಪದಲ್ಲಿ ಅವರ ಪ್ರವಾದಿತ್ವದ ಪ್ರಚಾರಕ್ಕಾಗಿ ಅವರನ್ನು ಅನುಸರಿಸುವ ಸೇವಕನ ರೂಪದಲ್ಲಿ ಪ್ರವಾದಿತ್ವದ ಬಾಗಿಲು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದಲ್ಲಿ ತೆರೆದಿಡಲಾಗಿದೆ. ಉದಾಹರಣೆಗೆ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ನೋಡಿರಿ:

قُلْ اِنَّمَا حَرَّمَ رَبِّیَ الْفَوَاحِشَ مَا ظَهَرَ مِنْهَا وَ مَا بَطَنَ وَ الْاِثْمَ وَ الْبَغْیَ بِغَیْرِ الْحَقِّ وَ اَنْ تُشْرِكُوْا بِاللّٰهِ مَا لَمْ یُنَزِّلْ بِهٖ سُلْطٰنًا وَّ اَنْ تَقُوْلُوْا عَلَى اللّٰهِ مَا لَا تَعْلَمُوْنَ ۔ وَ لِكُلِّ اُمَّةٍ اَجَلٌۚ فَاِذَا جَآءَ اَجَلُهُمْ لَا یَسْتَاْخِرُوْنَ سَاعَةً وَّ لَا یَسْتَقْدِمُوْنَ ۔ یٰبَنِیْۤ اٰدَمَ اِمَّا یَاْتِیَنَّكُمْ رُسُلٌ مِّنْكُمْ یَقُصُّوْنَ عَلَیْكُمْ اٰیٰتِیْۙ فَمَنِ اتَّقٰى وَ اَصْلَحَ فَلَا خَوْفٌ عَلَیْهِمْ وَ لَا هُمْ یَحْزَنُوْنَ ۔

"ಹೇಳು: 'ಅಶ್ಲೀಲ ಕೃತ್ಯಗಳು – ಬಹಿರಂಗವಾಗಿರಲಿ ಅಥವಾ ಗುಪ್ತವಾಗಿರಲಿ, ಪಾಪಕೃತ್ಯಗಳು, ಅನ್ಯಾಯವಾಗಿ ಬಂಡಾಯವೇಳುವುದು, ಅಲ್ಲಾಹನು ಯಾವುದೇ ಸಾಕ್ಷ್ಯಾಧಾರ ನೀಡದಿರುವವುಗಳನ್ನು ಅವನಿಗೆ ಸಹಭಾಗಿಗಳನ್ನಾಗಿ ಮಾಡುವುದು ಮತ್ತು ನಿಮಗೆ ತಿಳಿಯದಿದ್ದ ವಿಚಾರಗಳನ್ನು ಅಲ್ಲಾಹನ ಮೇಲೆ ನೀವು ಆರೋಪಿಸುವುದು. (ಇವುಗಳನ್ನು) ನನ್ನ ಪ್ರಭು ನಿಷಿದ್ಧಗೊಳಿಸಿದ್ದಾನೆ.

"ಪ್ರತಿಯೊಂದು ಸಮುದಾಯಕ್ಕೆ (ಅವರ ಅಂತ್ಯಕ್ಕೆ) ಒಂದು ಕಾಲಾವಧಿ ಇದೆ. ಹಾಗೆ ಅವರ ಕಾಲಾವಧಿ ಸಮೀಪಿಸಿದರೆ ಅದರಿಂದ ಒಂದು ಘಳಿಗೆಯಾದರೂ ಹಿಂದೆ ಅಥವಾ ಮುಂದೆ ಆಗಲು ಅವರಿಗೆ ಸಾಧ್ಯವಿಲ್ಲ.

"ಓ ಆದಮ್ ಸಂತತಿಗಳೇ, ನನ್ನ ದೃಷ್ಟಾಂತಗಳನ್ನು ನಿಮಗೆ **ವಿವರಿಸಿಕೊಡುವ ನಿಮ್ಮ ಪೈಕಿಯ ಸಂದೇಶವಾಹಕರು ನಿಮ್ಮ ಬಳಿಗೆ ಬಂದರೆ ಯಾರು ಭಯಭಕ್ತಿಹೊಂದಿ ಸ್ವಯಂ ಸುಧಾರಣೆ ಮಾಡಿಕೊಳ್ಳುತ್ತಾರೋ** ಅವರಿಗೆ (ಭವಿಷ್ಯತ್ ಕಾಲದ ಕುರಿತು) ಯಾವುದೇ ಭಯವಿಲ್ಲ. (ಗತ ಕಾಲದ ಕುರಿತು) ಅವರು ವ್ಯಥೆ ಪಡಲಾರರು." (7:34–36)

ಮೇಲೆ ಉಲ್ಲೇಖಿಸಿದ ವಚನದಿಂದ ಸ್ಪಷ್ಟವಾಗಿ ಸಾಬೀತಾಗುವುದೇನೆಂದರೆ, ಈ ಸಮುದಾಯದಲ್ಲಿಯೂ ಪ್ರವಾದಿ ಆಗಮಿಸುವರು. ಈ ವಚನದಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದೊಂದಿಗೆ ಹೀಗೆ ಹೇಳುತ್ತಾನೆ: **ನಿಮ್ಮ ಬಳಿಗೆ ಪ್ರವಾದಿ ಬಂದರೆ ನೀವು ಅವರನ್ನು ಅಂಗೀಕರಿಸಬೇಕು. ಹಾಗೆ ಮಾಡದಿದ್ದರೆ ಕಷ್ಟ ಅನುಭವಿಸುವಿರಿ.**

ಈ ವಚನದಲ್ಲಿ "ಇಮ್ಮಾ" ಎಂಬ ಶಬ್ದ ಪ್ರಯೋಗಿಸಲಾಗಿದೆ. ಅದರಲ್ಲಿ "ಬಂದರೆ" ಎಂದು ಹೇಳಿದುದರಿಂದ ಅದೊಂದು ಶರತ್ತಿನ ರೂಪದಲ್ಲಿದೆ ಎಂದು ಹೇಳುವುದಾದರೆ, ಇದೇ ಪದ ಪ್ರಯೋಗ ಹಝ್ರತ್ ಆದಮ್‌ರಿಗೆ(ಅ) ಸಂಬಂಧಿಸಿಯೂ ಬಳಸಲಾಗಿದೆ. ಈ ಪದವನ್ನು ಶರತ್ತಿನ ರೂಪದಲ್ಲಿ ಪ್ರಯೋಗಿಸಲ್ಪಟ್ಟರೂ ಅಲ್ಲಾಹನ ದೃಷ್ಟಿಯಲ್ಲಿ ಪ್ರವಾದಿತ್ವ ಕೊನೆಗೊಂಡಿಲ್ಲ ಎಂದು ಸ್ಪಷ್ಟವಾಗುತ್ತದೆ. ಅಲ್ಲಾಹನು ಒಂದು ವಿಷಯದ ಬಗ್ಗೆ ಅದು ಸಂಭವಿಸಲಾರದು ಎಂದು ಹೇಳಿದ್ದರೆ ಅದನ್ನು ಶರತ್ತಿಗೊಳಪಡಿಸಿ ಸಂಭಾವ್ಯ ಎಂದು ಹೇಳುವುದು ಅವನ ಮಹಿಮೆಗೆ ವಿರುದ್ಧವಾಗಿದೆ.

ಪವಿತ್ರ ಖುರ್‌ಆನಿನ ಸಾಕ್ಷ್ಯ ಅಲ್ಲದೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಡಿಗಳಿಂದ ತಿಳಿದು ಬರುವುದೇನೆಂದರೆ, ಪ್ರವಾದಿತ್ವದ ಬಾಗಿಲು ಪೂರ್ಣವಾಗಿ ಮುಚ್ಚಲ್ಪಟ್ಟಿಲ್ಲ, ಆಗಮಿಸಲಿರುವ ಮಸೀಹ್‌ರನ್ನು ಅವರು ನಬಿ (ಪ್ರವಾದಿ) ಎಂದು ಪದೇ ಪದೇ ಹೇಳಿದ್ದಾರೆ. ಅವರ ಅನಂತರ ಬೇರೆ ಪ್ರವಾದಿಗಳು ಆಗಮಿಸಲಾರರಾದರೆ ಮಸೀಹ್‌ರನ್ನು ನಬಿಯುಲ್ಲಾಹ್ (ಅಲ್ಲಾಹನ ಪ್ರವಾದಿ) ಎಂದು ಕರೆದುದು ಏಕೆ? ★

# ವುಝುವಿನ ಪ್ರಯೋಜನಗಳು

★ ಸಿದ್ದೀಖ್ ಅಶ್ರಫ್ ಅಲಿ

ವುಝು ಒಂದು ಅರಬಿ ಪದವಾಗಿದೆ. ಇಸ್ಲಾಮ್ ಧರ್ಮದಲ್ಲಿ ಈ ಪದವನ್ನು ನಮಾಝ್ ಮಾಡುವ ಮೊದಲು ಕೈ, ಮುಖ, ಕಾಲು ಮೊದಲಾದವುಗಳನ್ನು ತೊಳೆಯುವ ರೀತಿಯನ್ನು ಸೂಚಿಸುವ ಸಾಂಕೇತಿಕ ಪದವಾಗಿ ಬಳಸಲಾಗುತ್ತಿದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿರುವನು:

"ಓ ಸತ್ಯವಿಶ್ವಾಸಿಗಳೇ, ನೀವು ನಮಾಝ್‌ಗೆ ಸಿದ್ಧರಾದರೆ, ನಿಮ್ಮ ಮುಖಗಳನ್ನು ಮತ್ತು ಮೊಣಕೈ ಗಂಟಿನವರೆಗೆ ಕೈಗಳನ್ನು ತೊಳೆಯಿರಿ; (ಒದ್ದೆ ಕೈಗಳಿಂದ) ನಿಮ್ಮ ತಲೆಗಳನ್ನು ಸವರಿರಿ; ಪಾದಗಂಟುಗಳ ತನಕ ಕಾಲುಗಳನ್ನು ತೊಳೆಯಿರಿ." (5:7)

ಅಲ್ಲಾಹನ ಸಂದೇಶವಾಣಿಯ ಬೆಳಕಿನಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರು ತನ್ನ ಮಾರ್ಗದರ್ಶನ ಮತ್ತು ನಡೆವಳಿಕೆ ಮೂಲಕ ವುಝು ಮಾಡುವ ಒಂದು ಕ್ರಮಬದ್ಧ ರೀತಿಯನ್ನು ಮುಸ್ಲಿಮ್ ಸಮುದಾಯದಲ್ಲಿ ಜಾರಿಗೊಳಿಸಿದರು. ಸ್ನಾನ ಮಾಡುವ ಒಂದು ಪರಿಪೂರ್ಣ ರೀತಿಯನ್ನು ಸಹ ಅವರು ಲೋಕದ ಮುಂದಿರಿಸಿದರು. ಅದರ ವಿವರಣೆಯ ಕುರಿತು ಚಿಂತಿಸಿದಾಗ ಬುದ್ಧಿ ಆಶ್ಚರ್ಯಚಕಿತವಾಗುತ್ತದೆ. ಒಬ್ಬ ನಿರಕ್ಷರಿ ಪ್ರವಾದಿ(ಸ) ಎಷ್ಟು ಸೂಕ್ಷ್ಮವಾಗಿ ಶುದ್ಧೀಕರಣದ ಎಲ್ಲಾ ಆವಶ್ಯಕತೆಗಳನ್ನು ಗಮನದಲ್ಲಿರಿಸಿರುವರು! ಇಂದಿನ ವಿದ್ಯಾವಂತರಾದ ಜನರು, ಆಧುನಿಕ ಕಾಲದ ಡಾಕ್ಟರುಗಳು ಮತ್ತು ವಿಜ್ಞಾನಿಗಳು ಕೂಡ ಅವುಗಳ ತನಕ ತಲಪಲು ಶಕ್ತರಾಗಿಲ್ಲ.

ಮನುಷ್ಯ ಶರೀರದಲ್ಲಿ ಸಾಮಾನ್ಯವಾಗಿ ಬಟ್ಟೆಗಳಿಂದ ಆವೃತವಾಗದೆ ತೆರೆದಿರುವ ಅಂಗಗಳು ದೈನಂದಿನ ಕೆಲಸಗಳ ಕಾರಣದಿಂದ ಕೊಳೆಗೆ ಈಡಾಗುತ್ತವೆ. ಇಂತಹ ಯಾವುದೇ ಶರೀರ ಭಾಗವನ್ನು ವುಝು ಎಂಬ ಶುದ್ಧೀಕರಣ ಕ್ರಿಯೆಯಿಂದ ಹೊರಗಿರಿಸಿಲ್ಲ. ತಲೆಯಿಂದ ಕಾಲಿನ ತನಕ ಸ್ನಾನ ಮತ್ತು ಶುಚೀಕರಣದ ಎಲ್ಲಾ ವಿವರಣೆ ಹಝ್ರತ್ ಪೈಗಂಬರ್(ಸ) ನೀಡಿರುವರು.

ಶರೀರದ ಚರ್ಮದಲ್ಲಿರುವ ಬೆವರು ಹೊರಬರುವ ಸೂಕ್ಷ್ಮ ರಂಧ್ರಗಳು ಬೆವರಿನಲ್ಲಿ ಕೊಳೆ ಸೇರುವಾಗ ಮುಚ್ಚಲ್ಪಡುತ್ತವೆ. ಕಿವಿಗಳ ಒಳಭಾಗ ಮತ್ತು ಮೇಲ್ಭಾಗ, ಅನೇಕ ರೋಗಗಳಿಗೆ ಪ್ರವೇಶ ದ್ವಾರವೆಂದು ಗಣಿಸಲ್ಪಡುವ ಮತ್ತು ಸೋಂಕಿಗೆ ಕಾರಣವಾಗುವ ಮೂಗಿನ ದ್ವಾರಗಳು– ವುಝು ಕ್ರಿಯೆಯು ಅವುಗಳನ್ನೆಲ್ಲಾ ತಲಪುತ್ತವೆ. ಶ್ರದ್ಧೆಯಿಂದ ವುಝು ಮಾಡುವ ಕ್ರಿಯೆಯ ಎಲ್ಲಾ ಆವಶ್ಯಕತೆಗಳನ್ನು ಈಡೇರಿಸಿದರೆ ಅನೇಕ ರೋಗಗಳು ಬಾಧಿಸುವ ಸಾಧ್ಯತೆ ಶೇಕಡಾ ಇಪ್ಪತ್ತೈದರಷ್ಟು ಅಥವಾ ಅದಕ್ಕಿಂತಲೂ ಅಧಿಕವಾಗಿ ಕಡಿಮೆಯಾಗಬಹುದು.

ಹಝ್ರತ್ ಪೈಗಂಬರ್(ಸ) ಕೈ ಮತ್ತು ಕಾಲುಗಳ ಬೆರಳುಗಳನ್ನು ಬೇರೆ ಬೇರೆಯಾಗಿ ತೊಳೆಯಲು ಸಹ ಆಜ್ಞಾಪಿಸಿದ್ದಾರೆ. ವುಝು ಮಾಡುವಾಗ ಯಾವುದೇ ಭಾಗವನ್ನು ನಿರ್ಲಕ್ಷಿಸಿ ಬಿಟ್ಟುಬಿಡುವುದನ್ನು ತಡೆದಿದ್ದಾರೆ. ಹೆಚ್ಚಿಗೆ ಈ ಬಗ್ಗೆ ವಿವರಣೆ ನೀಡದೆ ಕೇವಲ ಎರಡು ಪ್ರಸಿದ್ಧ ಹದೀಸುಗಳ ಭಾಷಾಂತರವನ್ನು ನಿಮ್ಮ ಮುಂದಿಡುತ್ತೇನೆ.

ಹಝ್ರತ್ ಉಸ್ಮಾನ್(ರ) ವರದಿ ಮಾಡುತ್ತಾರೆ: ಅವರು ಒಮ್ಮೆ ನೀರು ತರಿಸಿದರು. ಮೊದಲು ಮೂರು ಸಾರಿ ಕೈತೊಳೆದರು. ಅನಂತರ ಪಾತ್ರೆಯಿಂದ ಬಲಗೈಯಲ್ಲಿ ನೀರು ತೆಗೆದು ಬಾಯಿ ಮುಕ್ಕುಳಿಸಿದರು. ಮೂಗಿನ ದ್ವಾರಗಳನ್ನು ತೊಳೆದರು. ಅನಂತರ ಮೂರು ಸಾರಿ ಮುಖ ತೊಳೆದರು. ಅನಂತರ ಮೊಣಕೈ ಗಂಟಿನ ತನಕ ಕೈಗಳನ್ನು ಮೂರು ಸಾರಿ ತೊಳೆದರು. ಅನಂತರ ಒದ್ದೆ ಕೈಗಳಿಂದ ತಲೆಯನ್ನು ಸವರಿದರು. ಅನಂತರ ಪಾದಗಂಟಿನ ತನಕ ಪಾದಗಳನ್ನು ಮೂರು ಸಾರಿ ತೊಳೆದರು. ಈ ರೀತಿ ವುಝು ಮಾಡಿದ ನಂತರ ಹೇಳಿದರು: ಹಝ್ರತ್ ಮುಹಮ್ಮದ್ ರಸೂಲ್(ಸ) ಹೀಗೆ ಹೇಳಿರುವರು: ನಾನು ವುಝು ಮಾಡಿದಂತೆ ಯಾರು ವುಝು ಮಾಡುತ್ತಾರೋ ಮತ್ತು ಅನಂತರ ಅನಾವಶ್ಯಕ ಯೋಚನೆಗಳಿಂದ ಮುಕ್ತರಾಗಿ ಭಯಭಕ್ತಿಯಿಂದ ಎರಡು ರಕ್‌ಅತ್ ನಮಾಝ್ ಮಾಡುತ್ತಾರೋ ಅಂತಹ ವ್ಯಕ್ತಿಯ ಹಿಂದೆ ಮಾಡಿದ ಪಾಪಗಳು ಕ್ಷಮಿಸಲ್ಪಡುತ್ತವೆ.

(ಬುಖಾರಿ ಕಿತಾಬುಲ್ ವುಝು)

ಹಝ್ರತ್ ಅಬೂ ಹುರೈರ(ರ) ಹಝ್ರತ್ ಮುಹಮ್ಮದ್ ರಸೂಲ್(ರ) ಹೀಗೆ ಹೇಳಿದುದಾಗಿ ವರದಿ ಮಾಡುತ್ತಾರೆ:

ಒಬ್ಬ ಮುಸ್ಲಿಮ್ ಅಥವಾ ಮೂಮಿನ್ ವುಝುವಿಗಾಗಿ ಮುಖ ತೊಳೆಯುವಾಗ ನೀರು ಅಥವಾ ನೀರಿನ ಕೊನೆಯ ಬಿಂದುವಿನೊಂದಿಗೆ ಅವನು ತನ್ನ ಕಣ್ಣುಗಳ ಮೂಲಕ ಮಾಡಿದ ಎಲ್ಲಾ ಕೆಡುಕುಗಳು ತೊಳೆಯಲ್ಪಡುತ್ತವೆ. ಅವನು ತನ್ನ ಎರಡು ಕೈಗಳನ್ನು ತೊಳೆಯುವಾಗ ಅವನು ತನ್ನ ಕೈಗಳ ಮೂಲಕ ಮಾಡಿದ ಎಲ್ಲಾ ಕೆಡುಕುಗಳು ನೀರು ಅಥವಾ ನೀರಿನ ಕೊನೆಯ ಬಿಂದುವಿನೊಂದಿಗೆ ತೊಳೆಯಲ್ಪಡುತ್ತವೆ ಮತ್ತು ಅವನು ಪಾಪಗಳಿಂದ ಮುಕ್ತನಾಗಿ ಪರಿಶುದ್ಧನಾಗಿ ಬರುತ್ತಾನೆ. ಅವನು ತನ್ನ ಕಾಲುಗಳನ್ನು ತೊಳೆಯುವಾಗ ಅವನು ತನ್ನ ಕಾಲುಗಳ ಮೂಲಕ ಮಾಡಿದ ಎಲ್ಲಾ ಕೆಡುಕುಗಳು ನೀರು ಅಥವಾ ನೀರಿನ ಕೊನೆಯ ಬಿಂದುವಿನೊಂದಿಗೆ ತೊಳೆಯಲ್ಪಡುತ್ತವೆ. ಕೊನೆಗೆ ಅವನು ಮಾಡಿದ ಎಲ್ಲಾ ಪಾಪಗಳಿಂದ ಮುಕ್ತನಾಗಿ ಪರಿಶುದ್ಧನಾಗಿ ಹೊರ ಬರುತ್ತಾನೆ. (ಮುಸ್ಲಿಮ್)

ವುಝು ಮಾಡುವುದರ ಉದ್ದೇಶ ಶಾರೀರಿಕ ಶುಚಿತ್ವ ಮಾತ್ರವಲ್ಲ, ಆತ್ಮದ ಪರಿಶುದ್ಧಿ, ಮಾನಸಿಕ ತಾಜಾತನ ಮತ್ತು ಹೃದಯ ವೈಶಾಲ್ಯವೂ ಅದರಿಂದ ದೊರಕುತ್ತವೆ. ವುಝುವಿನ ಆರಂಭದಲ್ಲಿ ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ (ಪರಮ ದಯಾವಂತನೂ ಕಾರುಣ್ಯ ನಿಧಿಯೂ ಆದ ಅಲ್ಲಾಹನ ನಾಮದಿಂದ) ಎಂದು ಹೇಳಬೇಕು. ವುಝು ಮಾಡುವಾಗ ಮಧ್ಯದಲ್ಲಿ ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಹ್‌ದಹೂ ಲಾ ಶರೀಕ ಲಹೂ ವ ಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವ ರಸೂಲುಹೂ (ಅಲ್ಲಾಹನ ಹೊರತು ಬೇರೆ ಯಾರೂ ಆರಾಧನೆಗೆ ಅರ್ಹರಲ್ಲ ಎಂದು ನಾನು ಸಾಕ್ಷ್ಯ ಹೇಳುತ್ತೇನೆ. ಅವನಿಗೆ ಸರಿಸಾಟಿ ಯಾರೂ ಇಲ್ಲ. ಮುಹಮ್ಮದ್ ಅವನ ದಾಸರೂ ದೂತರೂ ಆಗಿರುವರೆಂದು ನಾನು ಸಾಕ್ಷ್ಯ ಹೇಳುತ್ತೇನೆ) ಎಂದು ಹೇಳಬೇಕು. ವುಝು ಮಾಡಿ ಮುಗಿಸಿದ ನಂತರ,

ಅಲ್ಲಾಹುಮ್ಮಜ್‌ಅಲ್‌ನೀ ಮಿನತ್ತವ್ವಾಬೀನ್

ವಜ್‌ಅಲ್‌ನೀ ಮಿನಲ್ ಮುತತಹ್ಹಿರೀನ್

"ಓ ಅಲ್ಲಾಹ್, ನೀನು ನನ್ನನ್ನು ಪಶ್ಚಾತ್ತಾಪಗೊಂಡು ನಿನ್ನ ಕಡೆಗೆ ತಿರುಗುವವರೊಂದಿಗೆ ಸೇರಿಸು. ನೀನು ನನ್ನನ್ನು ಪರಿಶುದ್ಧರೊಡನೆ ಸೇರಿಸು"ಎಂಬ ಪ್ರಾರ್ಥನೆ ಮಾಡಬೇಕೆಂಬ ಆಜ್ಞೆ ಇದೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ನೀವು ನಮಾಝ್‌ಗಾಗಿ ಸಿದ್ಧರಾಗುವಾಗ ಬಾಹ್ಯ ವುಝುವಿನೊಂದಿಗೆ ಒಂದು ಆಂತರಿಕ ವುಝುವನ್ನೂ ಮಾಡಿರಿ. ನಿಮ್ಮ ಅಂಗಾಂಗಗಳನ್ನು ದೇವನ ಹೊರತು ಅನ್ಯರ ಕುರಿತು ಯೋಚನೆಗಳಿಂದ ತೊಳೆಯಿರಿ. ನೀವು ಈ ಎರಡು ಬಗೆಯ ವುಝು ಮಾಡಿ ನಮಾಝ್‌ಗಾಗಿ ನಿಂತುಕೊಳ್ಳಿರಿ. ನಮಾಝ್‌ನಲ್ಲಿ ಬಹಳ ದುಆ (ಪ್ರಾರ್ಥನೆ) ಮಾಡಿರಿ. ನಮಾಝ್ ಮಾಡುವಾಗ ಅಳುವುದನ್ನು ಮತ್ತು ಗೋಳಾಡುವುದನ್ನು ನೀವು ಅಭ್ಯಾಸಮಾಡಿಕೊಳ್ಳಿರಿ – ನಿಮ್ಮ ಮೇಲೆ ದಯೆದೋರಲ್ಪಡಲಿಕ್ಕಾಗಿ."

(ಇಝಾಲಯೆ ಅವ್‌ಹಾಮ್ – ಪುಟ 548–549)

ನಮ್ಮ ನೇತಾರ ಹಝ್‌ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹುಲ್ ಖಾಮಿಸ್ (ಅಹ್ಮದಿಯಾ ಜಮಾಅತಿನ ಪಂಚಮ ಖಲೀಫ) ಈ ವಿಷಯದ ಕುರಿತು ಹೀಗೆ ಹೇಳಿದರು:

"ಬಾಹ್ಯ ಸೌಂದರ್ಯದ ಬಗ್ಗೆ, ನಮಾಝ್‌ನಲ್ಲಿ ಶ್ರದ್ಧೆಯನ್ನು ಕಾಪಾಡಲಿಕ್ಕಾಗಿ ವುಝು ಮಾಡುವ ಬಗ್ಗೆ ಆಜ್ಞೆ ಇದೆ. ಅದರಿಂದ ಶುಚಿತ್ವವು ಉಂಟಾಗುತ್ತದೆ. ಇದಲ್ಲದೆ ನಮಾಝ್ ಮಾಡುವವರು ಹೆಚ್ಚು ಕ್ರಿಯಾಶೀಲರಾಗುತ್ತಾರೆ. ವುಝುವಿನ ಕಾರಣದಿಂದ, ನಮಾಝ್ ಮಾಡುವಾಗ ಅದರ ಕಡೆಗೆ ಹೆಚ್ಚು ಗಮನವಿರುತ್ತದೆ. ವಿಶಿಷ್ಟವಾಗಿ ಶುಕ್ರವಾರದ ಸಾಮೂಹಿಕ ಪ್ರಾರ್ಥನೆಗೆ ಸ್ನಾನ ಮಾಡಿ ಬರಬೇಕೆಂಬ ಆಜ್ಞೆ ಇದೆ. ಒಟ್ಟಾರೆ ಉದ್ದೇಶವೇನೆಂದರೆ, ನೀವು ನಿಮ್ಮ ಶರೀರದ ಶುಚಿತ್ವದ ಕುರಿತು ಗಮನಿಸಿದರೆ ಆತ್ಮವನ್ನು ಸಹ ಶುಚಿಗೊಳಿಸುವ ಕುರಿತು ಗಮನಿಸುವಿರಿ. ಅಲ್ಲಾಹನ ಬಗ್ಗೆ ಹೆದರಿಕೆ ಮತ್ತು ಭಯಭಕ್ತಿ ಸಹ ಹೃದಯಲ್ಲಿ ಉಂಟಾಗುವುದು."

(ಶುಕ್ರವಾರದ ಪ್ರವಚನ 13–10–2003)

ಬಹಳ ಜನರು ನಮಾಝ್ ಮಾಡುವಾಗ ತಮ್ಮ ಶ್ರದ್ಧೆಯನ್ನು ತಕ್ಕ ಮಟ್ಟಿಗೆ ನಮಾಝ್‌ಗೆಯೇ ಸೀಮಿತಗೊಳಿಸುತ್ತಾರೆ. ಆದರೆ ಬೇರೆ ಬಹಳ ಜನರು ನಮಾಝ್ ಮಾಡುವಾಗ ಅವರ ಯೋಚನೆಗಳು ಅವರ ಶ್ರದ್ಧೆಯ ದಾರಿಯಲ್ಲಿ ತಡೆಯೊಡ್ಡುತ್ತವೆ. ಇದೇ ಕಾರಣದಿಂದ ಪವಿತ್ರ ಖುರ್‌ಆನ್‌ನಲ್ಲಿ ನಮಾಝ್ ಕುರಿತು ಪ್ರಸ್ತಾಪಿಸುವಾಗ "ನಮಾಝ್ ಮಾಡಿರಿ" ಎಂದು ಹೇಳುವುದಕ್ಕೆ ಪ್ರತಿಯಾಗಿ "ನಮಾಝನ್ನು ನಿಷ್ಠೆಯಿಂದ ಪಾಲಿಸಿರಿ" ಎಂದು ಅಲ್ಲಾಹನು ಹೇಳಿರುವನು.

ಹಝ್‌ರತ್ ಮುಸ್ಲಿಹ್ ಮೌಊದ್ (ವಾಗ್ದತ್ತ ಸುಧಾರಕ) ಹಝ್‌ರತ್ ಖಲೀಫತುಲ್ ಮಸೀಹ್ ಸಾನೀ (ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ) ಹಝ್‌ರತ್ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಸಾಹೇಬ್(ರ) ತನ್ನ ಧಿಕ್ರೆ ಇಲಾಹಿ (ದೇವ ಸ್ಮರಣೆ) ಎಂಬ ಭವ್ಯ ಭಾಷಣದಲ್ಲಿ ನಮಾಝನ್ನು ಶ್ರದ್ಧಾಪೂರ್ವಕವಾಗಿ ಅನುಷ್ಠಿಸುವ ಕುರಿತು ಇಪ್ಪತ್ತೆರಡು ವಿಧಾನಗಳನ್ನು ವಿವರಿಸಿರುವರು. ಅವರು ಹೀಗೆ ಹೇಳಿದ್ದಾರೆ:

"ಇಸ್ಲಾಮೀ ಶರೀಅತ್ (ನಿಯಮ ಸಂಹಿತೆ) ನಮಾಝ್‌ನಲ್ಲಿ ಶ್ರದ್ಧೆಯನ್ನು ಕಾಪಾಡಲು ಕೆಲವು ನಿಯಮಗಳನ್ನು ನಿಶ್ಚಯಿಸಿದೆ. ಅವುಗಳಲ್ಲಿ, ಮೊದಲನೆಯದು ವುಝು ಮಾಡುವುದಾಗಿದೆ. ನಮಾಝ್ ಮಾಡುವ ಮೊದಲು ಪ್ರತಿಯೊಬ್ಬನು ವುಝು ಮಾಡಲೇ ಬೇಕಾಗಿದೆ....... ನರಮಂಡಲಗಳ ಮೂಲಕ ಯೋಚನೆಗಳು ಹೊರಗೆ ಬಂದು ಹರಡುತ್ತವೆ. ಅವುಗಳನ್ನು ನಿಯಂತ್ರಿಸಲು ಹಝ್‌ರತ್ ಮುಹಮ್ಮದ್ ರಸೂಲ್(ಸ) ವುಝುವಿನ ಆಜ್ಞೆ ನೀಡಿದರು. ಯೋಚನೆಗಳು ಹೊರಗೆ ಬರುವ ದೊಡ್ಡ ದೊಡ್ಡ ಕೇಂದ್ರಗಳು ಕೈ, ಕಾಲು ಮತ್ತು ಮುಖ ಆಗಿವೆ. ಅವುಗಳ ಮೇಲೆ ನೀರನ್ನು ಹಾಕಿದರೆ ಅವುಗಳಿಂದ ಹೊರಡುವ ಯೋಚನೆಗಳ ದ್ವಾರಗಳು ಮುಚ್ಚಲ್ಪಡುತ್ತವೆ ಎಂದು ಅನುಭವದಿಂದ ತಿಳಿದಿದೆ. ಯೋಚನೆಗಳು ಹೊರಡುವುದು ನಿಂತು ಹೋಗುತ್ತದೆ. ಇದು ಸಾಬೀತಾಗಿರುವ ಸಂಗತಿಯಾಗಿದೆ. ವುಝು ಮಾಡುವ ಒಂದು ಉದ್ದೇಶ ಇದೇ ಆಗಿದೆ. ವುಝು ಮಾಡುವುದರ ಅನೇಕ ಬೇರೆ ಉದ್ದೇಶಗಳೂ ಇವೆ. ಯೋಚನೆಗಳು ಹೊರಡುವುದನ್ನು ತಡೆಯುವುದು ಒಂದು ಮುಖ್ಯ ಉದ್ದೇಶವಾಗಿದೆ. ಯೋಚನೆಗಳ ಓಟ ನಿಂತುಹೋಗುವಾಗ ಹೃದಯದಲ್ಲಿ ಸಮಾಧಾನ ಉಂಟಾಗುತ್ತದೆ ಮತ್ತು ನಮಾಝನ್ನು ಶ್ರದ್ಧೆಯಿಂದ ಮಾಡಲು ಸಾಧ್ಯವಾಗುತ್ತದೆ. ನಮಾಝ್‌ಗೆ ಮೊದಲು ವುಝು ಮಾಡುವುದು ನಮಾಝನ್ನು ಶ್ರದ್ಧೆಯಿಂದ ನಿರ್ವಹಿಸಲಿಕ್ಕೆ ಉಪಯುಕ್ತವಾದ ಅತ್ಯುತ್ತಮವಾದೊಂದು ಮಾರ್ಗವಾಗಿದೆ. ಆದರೆ ನೀವು ವುಝು ಮಾಡಲು ಸನ್ನದ್ಧರಾದಾಗ ಹೀಗೆ ಯೋಚಿಸಬೇಕು: 'ನಾವು ನಮ್ಮ ಯೋಚನೆಗಳನ್ನು ನಿಯಂತ್ರಿಸಿ ನಮಾಝ್ ಮಾಡಲು ಈ ವುಝು ಮಾಡುತ್ತಿದ್ದೇವೆ.' ನೀವು ಹೀಗೆ ಮಾಡಿದರೆ ನಿಮಗೆ ನಮಾಝ್ ಮಾಡುವ ಮಾನಸಿಕ ಸಮಾಧಾನ ಉಂಟಾಗುವುದು. ನಿಮ್ಮ ಶ್ರದ್ಧೆಯನ್ನು ದೂರ ಸರಿಸಲು ನಿಮ್ಮ ಯೋಚನೆಗಳಿಗೆ ಸಾಧ್ಯವಾಗಲಾರದು."

(ಧಿಕ್ರೆ ಇಲಾಹಿ – ಪುಟ 29–30)

ವುಝು ಮಾಡುವುದರ ಸೂಕ್ಷ್ಮ ಉದ್ದೇಶಗಳ ಕುರಿತು ಅರಿತವರು ಅದರ ಪ್ರಯೋಜನಗಳ ಬಗ್ಗೆ ಸಹ ಅರಿತಿರುವರು. ಭಯಭಕ್ತಿಯನ್ನು ಅವಲಂಬಿಸುವ ಸೂಕ್ಷ್ಮ ದಾರಿಗಳನ್ನು ಕಂಡುಕೊಂಡವರು ವುಝುವಿನಿಂದ ಬಹಳ ಹೆಚ್ಚು ಪ್ರಯೋಜನವನ್ನು ಪಡೆಯುತ್ತಾರೆ.

ಕೆಲವು ಹಿರಿಯ ಮಹನೀಯರು ಪ್ರತಿ ನಮಾಝ್‌ಗೆ ಮೊದಲು ವುಝು ಮಾಡುವ ಅಭ್ಯಾಸ ಮಾಡಿಕೊಂಡಿರುತ್ತಾರೆ. ಅವರು ಅದರ ಮೊದಲಿನ ನಮಾಝ್‌ಗೋಸ್ಕರ ಮಾಡಿದ ವುಝು ಲೋಪವಾಗಿಲ್ಲವಾದರೂ ಅವರು ಹಾಗೆ ಮಾಡುತ್ತಾರೆ. ಕೆಲವರು ಯಾವಾಗಲೂ ವುಝು ಮಾಡಿದ ಸ್ಥಿತಿಯಲ್ಲಿರಲು ಬಯಸುತ್ತಾರೆ.

ರಾತ್ರಿ ನಿದ್ರೆಮಾಡಲು ಮಲಗುವ ಮೊದಲು ವುಝು ಮಾಡುವುದು ಪ್ರಿಯಕರವಾದ ಕರ್ಮವೆಂದು ಅನೇಕ ಹಿರಿಯ ಸೂಫೀ ಸಂತರು ಅಭಿಪ್ರಾಯಪಟ್ಟಿದ್ದಾರೆ.

ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ(ರ) ತಮ್ಮ "ಧಿಕ್ರೆ ಇಲಾಹಿ" ಎಂಬ ಭಾಷಣದಲ್ಲಿ ತಹಜ್ಜುದ್ ನಮಾಝ್‌ಗೆ ನಿದ್ರೆಯಿಂದ ಏಳಲು ಹದಿಮೂರು ರೀತಿಗಳನ್ನು ವಿವರಿಸಿದ್ದಾರೆ. ಅದರಲ್ಲಿ ಒಂದು ರೀತಿ ವುಝು ಮಾಡುವ ಮೂಲಕವೆಂದು ಹೀಗೆ ವಿವರಿಸಿದ್ದಾರೆ:

"ಮೂರನೆಯ ರೀತಿ ಹೀಗಿದೆ: ಇಶಾ ನಮಾಝ್ ಮಾಡಿದ ನಂತರ ನಿದ್ರೆ ಮಾಡಲು ಒಬ್ಬರು ಸಿದ್ಧರಾದರೆ ಅವರು ಹಿಂದೆ ಮಾಡಿದ ವುಝು ಲೋಪವಾಗಿಲ್ಲವಾದರೂ ತಾಜಾ ವುಝು ಮಾಡಿ ಮಲಗಲಿ. ಇದು ಆ ವ್ಯಕ್ತಿಯ ಹೃದಯದ ಮೇಲೆ ಪ್ರಭಾವ ಬೀರುತ್ತದೆ. ಅದರಿಂದ ವಿಶಿಷ್ಟವಾದೊಂದು ಸಂತೋಷ ಉಂಟಾಗುತ್ತದೆ. ಒಬ್ಬರು ವುಝುವಿನ ಕಾರಣದಿಂದ ವಿಶಿಷ್ಟವಾದ ಸಂತೋಷದಿಂದ ನಿದ್ರೆ ಮಾಡಿದರೆ ಅವರು ನಿದ್ರೆಯಿಂದ ಏಳುವಾಗ ಸಹ ಸಂತೋಷದಿಂದಲೇ ಇರುವವರಾಗುವರು. ಸಾಮಾನ್ಯವಾಗಿ ಕಂಡುಬರುವುದೇನೆಂದರೆ, ಯಾರಾದರೂ ಅಳುತ್ತಾ ನಿದ್ರೆ ಮಾಡಿದರೆ ಅವನು ಚೀರುತ್ತಾ ನಿದ್ರೆಯಿಂದ ಏಳುವನು. ಯಾರಾದರೂ ನಗುತ್ತಾ ನಿದ್ರಿಸಲು ಹೋದರೆ ನಿದ್ರೆಯಿಂದ ಏಳುವಾಗ ಅವನ ಮುಖ ಸಂತೋಷಭರಿತವಾಗಿರುವುದು. ಈ ರೀತಿ ಯಾರಾದರೂ ವುಝು ಮಾಡಿ ನೆಮ್ಮದಿಯಿಂದ ನಿದ್ರಿಸುವವರು ನಿದ್ರೆಯಿಂದ ಏಳುವಾಗ ಸಹ ನೆಮ್ಮದಿಯಿಂದ ಇರುತ್ತಾರೆ. ಹೀಗೆ ವುಝು ಮಾಡಿ ನಿದ್ರಿಸುವವರಿಗೆ

ನಿದ್ರೆಯಿಂದ ಏಳಲು ಸಹಾಯವಾಗುತ್ತದೆ."

(ಧಿಕ್ರೆ ಇಲಾಹಿ – ಪುಟ 25)

ಕೆಲವು ಜನರಿಗೆ ಕೋಪ ಬೇಗನೆ ಬರುತ್ತದೆ. ಅಂತಹ ಜನರಿಗೋಸ್ಕರ ಹೀಗೆ ಉಪದೇಶಿಸಲಾಗಿದೆ: ನಿಂತಾಗ ಕೋಪ ಬಂದರೆ ಕುಳಿತು ಕೊಳ್ಳಬೇಕು. ಕುಳಿತಿರುವಾಗ ಕೋಪ ಬಂದರೆ ಸ್ವಲ್ಪ ಹೊತ್ತು ಮಲಗಬೇಕು. ಹೀಗೆ ಮಾಡಿದರೆ ಕೋಪದ ತೀವ್ರತೆ ಕಡಿಮೆಯಾಗುತ್ತದೆ. ವುಝು ಮಾಡುವುದರಿಂದ ಸಹ ಕೋಪವು ಸಾಕಷ್ಟು ಕಡಿಮೆಯಾಗುತ್ತದೆ ಎಂದು ಕೆಲವು ಲೇಖಕರು ಬರೆದಿದ್ದಾರೆ.

ರಕ್ತದ ಏರೊತ್ತಡ (ಹೈ ಬ್ಲಡ್ ಪ್ರೆಶರ್) ಇರುವವರು ವುಝು ಮಾಡಿದರೆ ಅವರ ರಕ್ತದ ಒತ್ತಡ ಕಡಿಮೆ ಆಗಬಹುದಾಗಿದೆ. ವುಝು ವನ್ನು ಪುನರಾವರ್ತಿಸುತ್ತಾ ಇದ್ದರೆ ಅವರಿಗೆ ಸಾಕಷ್ಟು ಪ್ರಯೋಜನ ಸಿಗುವುದು. ವಿಶಿಷ್ಟವಾಗಿ, ಮಾನಸಿಕ ಸಂಘರ್ಷದ ಪರಿಣಾಮವಾಗಿ ಏರೊತ್ತಡ ಅನುಭವವಿಸುವವರಿಗೆ ಇದರಿಂದ ಹೆಚ್ಚಿನ ಪ್ರಯೋಜನ ಸಿಗುವುದು. ಸ್ನಾನ ಮಾಡುವುದರಿಂದಲೂ ರಕ್ತದ ಏರೊತ್ತಡ ಕಡಿಮೆ ಯಾಗುವುದು. ಬಹಳ ಜನರು ಇದರ ಪ್ರಯೋಗ ಮಾಡಿ ಪ್ರಯೋಜನ ಪಡೆದಿದ್ದಾರೆ.

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಆಸ್ಟ್ರೇಲಿಯದ ಸಿಡ್ನಿಯಲ್ಲಿ ಶುಕ್ರವಾರದ ಪ್ರವಚನದಲ್ಲಿ ಹೀಗೆ ಹೇಳಿದರು:

*"ನಮಾಝುನ್ನು ಜಾಗರೂಕತೆಯಿಂದ ಅನುಷ್ಠಿಸಲು ಅನೇಕ ಆವಶ್ಯಕತೆಗಳು ಇವೆ. ಮೊದಲನೆಯ ಸಂಗತಿಯೇನೆಂದರೆ, ನಮಾಝ್ ಅನುಷ್ಠಿಸುವ ಮೊದಲು ದೇಹವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವ ಕುರಿತು ಗಮನಹರಿಸಬೇಕು. ಉದಾಸೀನತೆ ಮತ್ತು ಸೋಮಾರಿತನವನ್ನು ದೂರ ಸರಿಸಬೇಕು. ಇದಕ್ಕಾಗಿ ವುಝು ಮಾಡಿದ ನಂತರವೇ ನಮಾಝುನ್ನು ಅನುಷ್ಠಿಸಬೇಕೆಂಬ ಆಜ್ಞೆ ಇದೆ..... ಬಾಹ್ಯ ಮತ್ತು ಆಂತರಿಕ ಸ್ವಚ್ಛತೆಗೆ ವುಝು ಆವಶ್ಯಕವಾಗಿದೆ. ನಮಾಝುನ್ನು ಜಾಗರೂಕತೆಯಿಂದ ಅನುಷ್ಠಿಸಲು ಇದು ಪ್ರಥಮ ಶರತ್ತಾಗಿದೆ.*

*ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೀಗೆ ಹೇಳಿದೆ :*

*'ಓ ಸತ್ಯ ವಿಶ್ವಾಸಿಗಳೇ, ನೀವು ನಮಾಝ್‌ಗೆ ಸಿದ್ಧರಾದರೆ ನಿಮ್ಮ ಮುಖಗಳನ್ನು ಮತ್ತು ಮೊಣಕೈ ಗಂಟಿನವರೆಗೆ ಕೈಗಳನ್ನು ತೊಳೆಯಿರಿ. (ಒದ್ದೆ ಕೈಗಳಿಂದ) ನಿಮ್ಮ ತಲೆಗಳನ್ನು ಸವರಿರಿ. ಪಾದ ಗಂಟುಗಳ ತನಕ ಕಾಲುಗಳನ್ನೂ ತೊಳೆಯಿರಿ.' (5:7)*

*ಇದರಿಂದ ಸ್ಪಷ್ಟವಾಗುವುದೇನೆಂದರೆ ನೀರು ಲಭ್ಯವಾಗುವುದಾದರೆ ವುಝು ಮಾಡುವುದು ಆವಶ್ಯಕವಾಗಿದೆ. (ಇಸ್ಲಾಮ್ ಕರ್ಕಶ ಆಜ್ಞೆಗಳನ್ನು ನೀಡುವ ಧರ್ಮವಲ್ಲ. ವುಝು ಮಾಡಬೇಕಾದುದು ನೀರಿದ್ದರೆ ಮಾತ್ರವಾಗಿದೆ). ವುಝು ಮಾಡುವುದು. ಶಾರೀರಿಕ ಸ್ವಚ್ಛತೆಗೆ ಆವಶ್ಯಕವಾಗಿರುವ ಹಾಗೆ ನಮಾಝ್‌ನಲ್ಲಿ ನಮ್ಮ ಶ್ರದ್ಧೆಯನ್ನು ಸ್ಥಿರವಾಗಿಡಲು ಮತ್ತು ಪ್ರಜ್ಞಾಪೂರ್ವಕವಾಗಿ ನಮಾಝ್ ಅನುಷ್ಠಿಸಲು ಆವಶ್ಯಕವಾಗಿದೆ. ವುಝು ಮಾಡುವಾಗ ನಮಾಝ್‌ಗೆ ಮೊದಲೇ 'ನಾನು ಅಲ್ಲಾಹನ ಸನ್ನಿಧಿಗೆ ಹೋಗುತ್ತಿದ್ದೇನೆ' ಎಂಬ ಭಾವನೆ ಉಂಟಾಗುತ್ತದೆ. ನೀವು ಲೌಕಿಕ ಚಿಂತೆಗಳನ್ನು ಕೊಡವಿ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಬೇಕು ಅಥವಾ ಆ ರೀತಿ ಪರಿಶುದ್ಧರಾಗಿ ಹಾಜರಾಗಲು ಪ್ರಯತ್ನಿಸಬೇಕು.*

*ಒಂದು ಹದೀಸು ಹೀಗಿದೆ: ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರು ಹೇಳಿದರು:*

*'ಒಬ್ಬ ಮುಸ್ಲಿಮ್ ಅಥವಾ ಮೂಮಿನ್ ವುಝುವಿಗಾಗಿ ಮುಖ ತೊಳೆಯುವಾಗ ನೀರಿನ ಕೊನೆಯ ಹನಿಯೊಂದಿಗೆ ಅವನು ತನ್ನ ಕಣ್ಣುಗಳ ಮೂಲಕ ಮಾಡಿದ ಎಲ್ಲಾ ಕೆಡುಕುಗಳು ತೊಳೆಯಲ್ಪಡುತ್ತವೆ. ಅವನು ತನ್ನ ಎರಡು ಕೈಗಳನ್ನು ತೊಳೆಯುವಾಗ ಅವನು ತನ್ನ ಕೈಗಳ ಮೂಲಕ ಮಾಡಿದ ಎಲ್ಲಾ ಕೆಡುಕುಗಳು ನೀರಿನ ಕೊನೆಯ ಹನಿಯೊಂದಿಗೆ ತೊಳೆಯಲ್ಪಡುತ್ತದೆ. ಅವನು ತನ್ನ ಕಾಲುಗಳನ್ನು ತೊಳೆಯುವಾಗ ಅವನು ತನ್ನ ಕಾಲುಗಳ ಮೂಲಕ ಮಾಡಿದ ಎಲ್ಲಾ ಕೆಡುಕುಗಳು ನೀರಿನ ಕೊನೆಯ ಹನಿಯೊಂದಿಗೆ ತೊಳೆಯಲ್ಪಡುತ್ತದೆ. ಕೊನೆಗೆ ಅವನು ಮಾಡಿದ ಎಲ್ಲಾ ಪಾಪಗಳಿಂದ ಮುಕ್ತನಾಗಿ ಪರಿಶುದ್ಧನಾಗಿ ಹೊರಗೆ ಬರುತ್ತಾನೆ.' (ಮುಸ್ಲಿಮ್)*

*ವುಝುವಿಗೆ ಇಷ್ಟು ಮಹತ್ವವಿದೆ. ಆದರೆ ಈ ಹದೀಸಿನಿಂದ ನೀವು ಹೀಗೆ ಭಾವಿಸಬಾರದು: ನೀವು ಪೂರ್ಣ ಪ್ರಜ್ಞೆಯಿಂದ ತಪ್ಪುಗಳನ್ನು ಮಾಡುತ್ತಾ ಇರಬಹುದು. ದುರ್ನೋಟ ಬೀರುತ್ತಾ ಇರಬಹುದು, ಪರರ ಹಕ್ಕುಗಳನ್ನು ಅಪಹರಿಸುತ್ತಾ ಇರಬಹುದು, ನಿಮ್ಮ ಲಾಭಕ್ಕಾಗಿ ಅನ್ಯರಿಗೆ ವಂಚನೆ ಮಾಡುತ್ತಾ ಇರಬಹುದು, ಆಮೇಲೆ ವುಝು ಮಾಡಿದರೆ ಪರಿಶುದ್ಧರಾಗುತ್ತೀರಿ... ಈ ಹದೀಸಿನ ಅರ್ಥವೇನೆಂದರೆ ನೀವು ಉದ್ದೇಶಪೂರ್ವಕವಾಗಿ ಯಾವುದೇ ತಪ್ಪನ್ನು ಮಾಡುವುದಿಲ್ಲ. ಆದರೆ ತಿಳಿಯದೆ ಯಾವುದಾದರೂ ತಪ್ಪನ್ನು ನೀವು ಮಾಡಿದ ಕಾರಣ ಅದರ ಬಗ್ಗೆ ಚಿಂತಿತರಾಗುತ್ತೀರಿ. ಅಂತಹ ಜನರು ಮಾತ್ರ ವುಝು ಮೂಲಕ ಪರಿಶುದ್ಧರಾಗಬಲ್ಲರು."*

(ಶುಕ್ರವಾರದ ಖುತುಬ 14–04–06 ಆಸ್ಟ್ರೇಲಿಯಾ)

ವುಝು ಮಾಡುವುದರಲ್ಲಿ ಯಾವುದೆಲ್ಲಾ ಪ್ರಯೋಜನಗಳಿವೆಯೋ ಅವುಗಳಿಂದೆಲ್ಲಾ ನಾವು ಅರ್ಹವಾದ ರೀತಿ ಲಾಭ ಗಳಿಸುವ ಸೌಭಾಗ್ಯವನ್ನು ಅಲ್ಲಾಹನು ನಮಗೆ ದಯಪಾಲಿಸಲಿ. ಆಮೀನ್.

★

## "ಯುಗರಶ್ಮಿ"ಯ ಒಂದು ವರ್ಷದ ಉಚಿತ ಪ್ರತಿಗಳನ್ನು ವಿತರಿಸಲು ಧನ ಸಹಾಯ ನೀಡಿದ ಉದಾರಮತಿಗಳು

1. ಜನಾಬ್ ಕೆ. ಕೆ. ಬದ್ರುದ್ದೀನ್ ಸಾಹೇಬ್, ಬಜ್ಪೆ – **100 ಪ್ರತಿಗಳು**
2. ಜನಾಬ್ ಬಿ. ಎಸ್. ಅಬ್ದುರ್ರಹೀಂ ಸಾಹೇಬ್, ವಿಟ್ಲ – **50 ಪ್ರತಿಗಳು**
3. ಜನಾಬ್ ಯು. ಎಸ್. ಮಾಹಿನ್ ಕುಞ್ಞಿ ಸಾಹೇಬ್, ಮಂಜೇಶ್ವರ – **30 ಪ್ರತಿಗಳು**
4. ಮುಹಮ್ಮದ್ ಇಸ್ಮಾಈಲ್ ಸಾಹೇಬ್, ಗೋಗಿಕ್ – **25 ಪ್ರತಿಗಳು**
5. ಎಂ. ಯು. ತಾಹಿರ್ ಅಹ್ಮದ್ ಸಾಹೇಬ್, ಮಂಜೇಶ್ವರ – **20 ಪ್ರತಿಗಳು**

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಮಳೆಗಾಗಿ ನಮಾಝ್

ಮಳೆ ಬರದಿದ್ದರೆ ಮತ್ತು ಮಳೆಯ ಆವಶ್ಯಕತೆ ತುಂಬಾ ಇದ್ದರೆ ಜನರೆಲ್ಲರೂ ಪಟ್ಟಣದಿಂದ ಹೊರಗೆ ಒಂದು ಮೈದಾನದಲ್ಲಿ ಸೇರಿ ಎರಡು ರಕ್‌ಅತ್ ನಮಾಝ್ ಮಾಡಬೇಕು. ಅದರಲ್ಲಿ ಇಮಾಮ್ ಪವಿತ್ರ ಖುರ್‌ಆನ್ ವಚನಗಳನ್ನು ಉಚ್ಚ ಸ್ವರದಲ್ಲಿ ಓದಬೇಕು. ನಮಾಝ್ ನಂತರ ಇಮಾಮ್ ಖುತುಬ ಓದಬೇಕು. ಅನಂತರ ಮಳೆ ಬರದಿರಲು ಕಾರಣವಾಗಿರುವ ಪಾಪಗಳಿಗಾಗಿ ಅಲ್ಲಾಹನಿಂದ ಕ್ಷಮಾಪಣೆ ಯಾಚಿಸಬೇಕು ಮತ್ತು ವಿನೀತರಾಗಿ ಪ್ರಾರ್ಥಿಸಬೇಕು.

## ಹಾಜತ್ ನಮಾಝ್

ಯಾವುದಾದರೂ ಆವಶ್ಯಕತೆ ಈಡೇರಬೇಕಾಗಿದ್ದರೆ ಆ ಆವಶ್ಯಕತೆ ಇರುವ ವ್ಯಕ್ತಿ ಹಾಜತ್ ನಮಾಝ್ ಮಾಡಬೇಕು. ಈ ನಮಾಝ್ ಎರಡು ರಕ್‌ಅತ್ ಆಗಿದೆ. ಅನಂತರ ಅಲ್ಲಾಹನನ್ನು ಸ್ತುತಿಸಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ)ರವರಿಗೋಸ್ಕರ ದುರೂದ್ ಪ್ರಾರ್ಥನೆ ಮಾಡಬೇಕು. ಕೊನೆಗೆ ಈ ಕೆಳಗಿನ ದುಆ ಮಾಡಬೇಕು.

لَا إِلٰهَ إِلَّا اللّٰهُ الْحَلِيْمُ الْكَرِيْمُ سُبْحَانَ اللّٰهِ رَبِّ
الْعَرْشِ الْعَظِيْمِ وَالْحَمْدُ لِلّٰهِ رَبِّ الْعٰلَمِيْنَ ـ أَسْئَلُكَ
مُوْجِبَاتِ رَحْمَتِكَ وَعَزَائِمَ مَغْفِرَتِكَ وَالْغَنِيْمَةَ
مِنْ كُلِّ بِرٍّ وَّالسَّلَامَةَ مِنْ كُلِّ إِثْمٍ لَا تَدَعْ لِيْ ذَنْبًا
إِلَّا غَفَرْتَهُ وَلَا هَمًّا إِلَّا فَرَّجْتَهُ وَلَا حَاجَةً هِيَ لَكَ
رِضًى إِلَّا قَضَيْتَهَا يَا أَرْحَمَ الرَّاحِمِيْنَ

ಲಾ ಇಲಾಹ ಇಲ್ಲಲ್ಲಾಹುಲ್‌ಹಲೀಮುಲ್ ಕರೀಮ್
ಸುಬ್‌ಹಾನಲ್ಲಾಹಿ ರಬ್ಬಿಲ್
ಅರ್‌ಶಿಲ್ ಅಝೀಮ್ ವಲ್ ಹಮ್ದು ಲಿಲ್ಲಾಹಿ ರಬ್ಬಿಲ್
ಆಲಮೀನ್. ಅಸ್‌ಅಲುಕ
ಮೂಜಿಬಾತಿ ರಹ್ಮತಿಕ ವ ಅಝಾಇಮ ಮಗ್‌ಫಿರತಿಕ
ವಲ್‌ಗನೀಮತ ಮಿನ್ ಕುಲ್ಲಿ ಬರ್ರಿನ್ ವಸ್ಸಲಾಮತ ಮಿನ್ ಕುಲ್ಲಿ
ಇಸ್‌ಮಿನ್ ಲಾತದಲ್ ಲೀ ಧನ್‌ಬನ್ ಇಲ್ಲಾ ಗಫರ್‌ತಹೂ
ವಲಾ ಹಮ್ಮನ್ ಇಲ್ಲಾ ಫರ್‍ರಜ್ತಹೂ ವಲಾ ಹಾಜತನ್ ಹಿಯ ಲಕ
ರಿಝನ್ ಇಲ್ಲಾ ಖಝೈತಹಾ ಯಾ ಅರ್‌ಹಮರ್‍ರಾಹಿಮೀನ್


ಅರ್ಥ : ಸಹನಶೀಲನೂ ಔದಾರ್ಯವಂತನೂ ಆಗಿರುವ ಅಲ್ಲಾಹನ ಹೊರತು ಅನ್ಯ ದೇವನು ಯಾರೂ ಇಲ್ಲ. ಮಹಾನ್ ಸಿಂಹಾಸನದ ಒಡೆಯನಾದ ಅಲ್ಲಾಹನು ಪರಿಶುದ್ಧನು. ಎಲ್ಲ ಸ್ತುತಿಗಳು ಸಕಲ ಲೋಕಗಳ ಪ್ರಭುವಾದ ಅಲ್ಲಾಹನಿಗೆ. ನಿನ್ನ ಕಾರುಣ್ಯ ಲಭಿಸಲು ಸಾಧ್ಯವಾಗುವಂತಹ ಮತ್ತು ನಿನ್ನಿಂದ ಕ್ಷಮಾಪಣೆ ದೊರೆಯುವಂತಹ ಕಾರ್ಯಗಳನ್ನು ಮಾಡಲು ನನಗೆ ಅನುಕೂಲತೆ ನೀಡೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ. ಎಲ್ಲ ಒಳಿತುಗಳಲ್ಲಿ ಸಮೃದ್ಧಿಯನ್ನೂ ಎಲ್ಲ ಪಾಪಗಳ ಪರಿಹಾರವನ್ನೂ ನಾನು ನಿನ್ನಿಂದ ಯಾಚಿಸುತ್ತೇನೆ. ಯಾವ ಪಾಪವನ್ನೂ ನೀನು ನನಗೆ ಕ್ಷಮಿಸದೆ ಇರಬಾರದು. ಯಾವ ದುಃಖವನ್ನೂ ನನ್ನಿಂದ ದೂರೀಕರಿಸದೆ ಇರಬೇಡ. ನಿನಗೆ ತೃಪ್ತಿಯುಳ್ಳ ನನ್ನ ಯಾವುದೇ ಆವಶ್ಯಕತೆಯನ್ನು ನೀನು ಈಡೇರಿಸದೆ ಬಿಡಬೇಡ. ಕಾರುಣ್ಯದೋರುವವರಲ್ಲಿ ಅತ್ಯಂತ ಹೆಚ್ಚು ಕಾರುಣ್ಯದೋರುವವನೇ (ನೀನು ನನ್ನ ಪ್ರಾರ್ಥನೆಯನ್ನು ಸ್ವೀಕರಿಸು).

## ರೋಗಿಯ ನಮಾಝ್

ರೋಗಿಗೆ ನಿಂತು ನಮಾಝ್ ಮಾಡಲು ಸಾಧ್ಯವಿಲ್ಲವಾದರೆ ಕುಳಿತು ನಮಾಝ್ ಮಾಡಬೇಕು. ಅದು ಸಹ ಸಾಧ್ಯವಿಲ್ಲವಾದರೆ ಒಂದು ಮಗ್ಗುಲಿಗೆ ಮಲಗಿ ಅಥವಾ ಅಂಗಾತನಾಗಿ ಮಲಗಿ ಪ್ರಾರ್ಥಿಸಬಹುದು. ರುಕೂಅ್, ಸುಜೂದ್ ಇತ್ಯಾದಿಗಳನ್ನು ಸಂಜ್ಞೆಗಳಿಂದ ನಿರ್ವಹಿಸದರೆ ಸಾಕು. ಒಟ್ಟಾರೆ ಹೇಳುವುದಾದರೆ, ಯಾವ ರೀತಿ ಸಾಧ್ಯವೋ ಆ ರೀತಿ ನಮಾಝ್ ಮಾಡಬೇಕು. ★

# ಕಾಶ್ಮೀರ ಕಣಿವೆಯಲ್ಲಿ ಮೇರಿಯ ಸಮಾಧಿ

★ ಕಲ್ಲಂಬಲ ಅನ್ಸಾರಿ



ಯೇಸುಕ್ರಿಸ್ತರ ಸಮಾಧಿ ಶ್ರೀನಗರದ ರೋಝಾಬಾಲ್ ಪಟ್ಟಣದ ಕಾನ್ಯಾರ್ ಎಂಬ ಸ್ಥಳದಲ್ಲಿದೆಯೆಂದು ನಂಬುವವರಿದ್ದಾರೆ. ಯೇಸು ಶಿಲುಬೆಯಿಂದ ಪಾರಾಗಿ ಮಾತೆ ಮೇರಿಯೊಂದಿಗೆ ಕಾಶ್ಮೀರಕ್ಕೆ ಬಂದಿದ್ದರೆಂದೂ ಅಲ್ಲಿ ಮೃತಪಟ್ಟ ಯೇಸುಕ್ರಿಸ್ತರ ಸಮಾಧಿ ಕಾನ್ಯಾರ್‌ನಲ್ಲಿದೆಯೆಂದೂ ನಂಬಲಾಗುತ್ತದೆ. ಅಹ್ಮದಿಯಾ ಪಂಥದವರು ಈ ನಂಬಿಕೆಯನ್ನು ಪ್ರಚಾರ ಮಾಡುತ್ತಾರೆ. ಅವರ ಸಂಘಟನೆಯ ಸ್ಥಾಪಕರಾದ ಮಿರ್ಝಾ ಗುಲಾಂ ಅಹ್ಮದ್ ಯೇಸು ಕ್ರಿಸ್ತರ ಸಮಾಧಿ ಕಾಶ್ಮೀರದಲ್ಲಿದೆ ಎಂದು ಪ್ರಥಮವಾಗಿ ಹೇಳಿದರು. ಈ ಕಥೆಯಲ್ಲಿ ಯೇಸುಕ್ರಿಸ್ತರೊಂದಿಗೆ ಬಂದರೆಂದು ಹೇಳಲ್ಪಡುವ ಮಾತೆ ಮೇರಿಗೂ ಕಾಶ್ಮೀರ ಕಣಿವೆಯಲ್ಲಿ ಒಂದು ಸಮಾಧಿ ಇದೆ. ಅದು ಈಗ ಪಾಕಿಸ್ತಾನದಲ್ಲಿದೆ. ಮೇರಿಯ ನಾಮವನ್ನು ಸೂಚಿಸುವ 'ಮರ್ರಿ' ಎಂಬ ಪ್ರಶಾಂತ ಸುಂದರವಾದ ಪರ್ವತ ಪ್ರದೇಶದಲ್ಲಿ ಮೇರಿಯ ಸಮಾಧಿ ಗೋಚರಿಸುತ್ತದೆ.

ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಿಂದ ಎಕ್ಸ್‌ಪ್ರೆಸ್ ಹೈವೇ ದಾರಿಯಲ್ಲಿ 45 ಮೈಲು ಸಂಚರಿಸಿದರೆ ರಾವಲ್ಪಿಂಡಿ ಜಿಲ್ಲೆಯ ಮನೋಹರವಾದ 'ಮರ್ರಿ' ಪರ್ವತ ಶಿಖರವನ್ನು ತಲಪಬಹುದು. ಸಮುದ್ರ ತಳದಿಂದ ಸುಮಾರು 7500 ಅಡಿ ಎತ್ತರದಲ್ಲಿರುವ 'ಮರ್ರಿ' ಬ್ರಿಟಿಷರ ಕಾಲದಿಂದಲೇ ಒಂದು ಸುಖಾರಾಮ ಧಾಮವಾಗಿದೆ. ಇಲ್ಲಿ ಮೇರಿಯದೆಂದು ಹೇಳಲ್ಪಡುವ ಸಮಾಧಿ ಕಾಣಲ್ಪಡುತ್ತದೆ. ಮೇರಿಯ ಸಮಾಧಿ ಇಲ್ಲಿರುವುದರಿಂದಲೇ ಮರ್ರಿ ಎಂಬ ಹೆಸರು ಈ ಸ್ಥಳಕ್ಕೆ ಬಂತೆಂದು ನಂಬಲಾಗುತ್ತದೆ. 1850ರಲ್ಲಿ ಬ್ರಿಟಿಷರು ತಲಪುವ ತನಕ ಮರ್ರಿಯ ಸಮಾಧಿ ಜನರ ಗಮನವನ್ನು ಸೆಳೆದಿರಲಿಲ್ಲ. ಬ್ರಿಟಿಷರು ಮರ್ರಿಯಲ್ಲಿ ಪ್ರಥಮವಾಗಿ ಹಿಲ್ ಸ್ಟೇಶನ್ ಸ್ಥಾಪಿಸಿದರು. ಅದಕ್ಕಿಂತ ಮುಂಚೆಯೇ ಹಿಂದೂಗಳು ಮತ್ತು ಮುಸ್ಲಿಮರು ಮೇರಿಯ ಸಮಾಧಿ ಸಂದರ್ಶಿಸಿ ಎಣ್ಣೆ ಹಾಕಿದ ಹಣತೆಗಳನ್ನು ಹೊತ್ತಿಸಿ ಅವರು ಪ್ರಾರ್ಥಿಸುತ್ತಿದ್ದರು. ಬ್ರಿಟಿಷರು ಬಂದ ನಂತರ ಘಟಿಸಿದ ಒಂದು ದುರಂತ ಹಳೆಯ ಒಂದು ಗಜೆಟ್‌ನಲ್ಲಿ ದಾಖಲಿಸಲ್ಪಟ್ಟಿದೆ. 1898ರಲ್ಲಿ ರಿಚಾರ್ಡ್‌ಸನ್ ಎಂಬ ಗಾರಿಸನ್ ಇಂಜಿನಿಯರ್ ಮೇರಿಯ ಸಮಾಧಿಯನ್ನು ಕೆಡವಿ ಹಾಕುವ ಕಾರ್ಯವನ್ನು ಆರಂಭಿಸಿದನೆಂದೂ ಕೆಲವು ದಿನಗಳೊಳಗೆ ಅವನು ಅಪಘಾತದಲ್ಲಿ ಸತ್ತನೆಂದೂ ಈ ದಾಖಲೆಯಲ್ಲಿ ಕಾಣಲ್ಪಡುತ್ತದೆ. ಆದಾಗ್ಯೂ ಕೆಡವುದಕ್ಕೆ ಬದಲಾಗಿ ಬ್ರಿಟಿಷರು ಈ ಸಮಾಧಿಯನ್ನು ಅನಂತರ ನವೀಕರಿಸಿ ಕಟ್ಟಿದರು. ಅದರ ಸಮೀಪದಲ್ಲೇ ಅವರೊಂದು ಕಾನ್ವೆಂಟನ್ನೂ ಆರಂಭಿಸಿದರು. 'ಕಾನ್ವೆಂಟ್ ಆಫ್ ಜೀಸಸ್ ಆ್ಯಂಡ್ ಮೇರಿ' ಎಂದು ಕರೆಯಲ್ಪಡುವ ಈ ವಿದ್ಯಾ ಸಂಸ್ಥೆ ಇಂದು ಪಾಕಿಸ್ಥಾನದ ಅತ್ಯುತ್ತಮ ಬೋರ್ಡಿಂಗ್ ಸ್ಕೂಲ್‌ಗಳಲ್ಲಿ ಒಂದಾಗಿದೆ. ಸ್ವಾತಂತ್ರ್ಯ ಬಳಿಕ ಪಾಕಿಸ್ಥಾನ ಸರಕಾರ ಈ ಸಮಾಧಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ನಿಯಂತ್ರಣಕ್ಕೊಳಪಡಿಸಿತು. ಅಲ್ಲಿ ಹಲವು ಟೆಲಿವಿಶನ್ ಟ್ರಾನ್ಸ್‌ಮೀಟರ್‌ಗಳನ್ನು ಸ್ಥಾಪಿಸಲಾಯಿತು. ಎತ್ತರವಾದ ಮುಳ್ಳುಬೇಲಿಗಳನ್ನು ಹಾಕಿ ಸಮಾಧಿ ಸಮೇತವಿರುವ ಭಾಗಗಳಲ್ಲಿ ಈಗ ಜನರಿಗೆ ಪ್ರವೇಶವನ್ನು ನಿಷೇಧಿಸಲಾಗಿದೆ. ಆದರೂ ಸುತ್ತಮುತ್ತ ವಾಸಿಸುವವರು ಈ ಸಮಾಧಿಯ ಕುರಿತು ಅನೇಕ ಅದ್ಭುತ ಕಥೆಗಳನ್ನು ಹೇಳುತ್ತಾರೆ.........

ಮರ್ರಿಯಲ್ಲಿರುವ ಮೇರಿಯ ಸಮಾಧಿಯ ಬಗ್ಗೆ ಗಹನವಾದ ಅನ್ವೇಷಣೆಗಳೇನೂ ನಡೆದಿಲ್ಲ. ಕೆಲವು ವರ್ಷಗಳ ಮುಂಚೆ ಕೆಲವು ಆರ್ಕಿಯೋಲಜಿಸ್ಟ್‌ಗಳು ಇಲ್ಲಿ ಪರಿಶೀಲನೆ ನಡೆಸಿದ್ದಾರೆ. ಆದರೆ ಅವು ಇನ್ನೂ ಬೆಳಕಿಗೆ ಬಂದಿಲ್ಲ. ಅದು ಹೇಗಿದ್ದರೂ ಕ್ರೈಸ್ತರ ಮತ್ತು ಮುಸ್ಲಿಮರ ಹಲವು ವಿಭಾಗದವರು ಕಾನ್ಯಾರ್‌ನಲ್ಲಿರುವ ಸಮಾಧಿ ಯೇಸು ಕ್ರಿಸ್ತರದೆಂದು ಮತ್ತು ಮರ್ರಿಯಲ್ಲಿರುವ ಸಮಾಧಿ ಮೇರಿಯದೆಂದು ನಂಬುತ್ತಾರೆ. ಮುಸ್ಲಿಮರು ಯೇಸುಕ್ರಿಸ್ತರ ಶಿಲುಬೆಯ ಮೇಲಿನ ಮರಣವನ್ನು ಒಪ್ಪುವುದಿಲ್ಲ. ಯೇಸು ಕ್ರಿಸ್ತರನ್ನು (ಈಸಾ) ಶಿಲುಬೆಗೆ ಜಡಿಯುವುದಕ್ಕೆ ಮುಂಚೆ ದೇವನು ಅವರನ್ನು ಆಕಾಶಕ್ಕೇರಿಸಿದನೆಂದು ಮುಸ್ಲಿಮರು ಸಾಮಾನ್ಯವಾಗಿ ನಂಬುತ್ತಾರೆ. ಆದರೆ ಅಹ್ಮದಿಯರೂ ಸೇರಿದ ಬೇರೊಂದು ವಿಭಾಗದ ಜನರು ಯೇಸು ಮತ್ತು ಮೇರಿ ಕಾಶ್ಮೀರಕ್ಕೆ ಬಂದಿದ್ದರೆಂದು ನಂಬುತ್ತಾರೆ. ಅವರ ವಾದಕ್ಕೆ ಬೆಂಬಲವಾಗಿ ಅವರು ಸೂಚಿಸುವುದು ಖುರ್‌ಆನಿನ 23ನೇ ಅಧ್ಯಾಯದ 50ನೇ ವಚನವಾಗಿದೆ. ಅದು ಹೀಗಿದೆ: "ನಾವು ಮರ್ಯಮರ ಪುತ್ರನನ್ನೂ ಅವರ ಮಾತೆಯನ್ನೂ ಒಂದು ದೃಷ್ಟಾಂತವಾಗಿ ಮಾಡಿದೆವು. ವಿಶ್ರಾಂತಿಗೆ ಯೋಗ್ಯವೂ ನೀರಿನ ಒರತೆಗಳೂ ಇರುವ ಒಂದು ಉನ್ನತ ಪ್ರದೇಶದೆಡೆಗೆ ತಲಪುವಂತೆ ಮಾಡಿ ನಾವು ಅವರಿಗೆ ಆಶ್ರಯ ನೀಡಿದೆವು." ಕಾಶ್ಮೀರದ ಬೆಟ್ಟಗಳನ್ನು ಖುರ್‌ಆನ್ ಪ್ರತಿಪಾದಿಸುತ್ತದೆಂದು ಅವರು ಹೇಳುತ್ತಾರೆ. ಕಾರಣವೇನೆಂದರೆ ಇಲ್ಲಿ ಹೇಳಿದ ಪ್ರಕೃತಿ ವರ್ಣನೆ ಜೆರೂಸಲೇಮಿನ ಭೂಪ್ರದೇಶಕ್ಕೆ ತೀರಾ ಸರಿಹೊಂದುವುದಿಲ್ಲವೆಂಬುದು ಅವರ ವಾದವಾಗಿದೆ.

ಹೇಗಿದ್ದರೂ ಮೇರಿಯ ಸಮಾಧಿಯಿರುವ ಮರ್ರಿ ಎಂಬ ಡರ್ವಾಳ್ ಕೇಂದ್ರದ ಹೆಸರಿಗೆ ಮೇರಿಯೊಂದಿಗೆ ಅಭೇದ್ಯ ಸಂಬಧವಿದೆಯೆಂದು ಒಪ್ಪಬೇಕು. ವಿವಿಧ ಆರ್ಕಿಯೋಲಜಿಕಲ್, ಡಿ.ಎನ್.ಎ. ಪರೀಕ್ಷೆಗಳ ಮೂಲಕ ಮಾತ್ರವೇ ಈ ಸಮಾಧಿಯ ಕಾಲ ಮತ್ತು ಅದರಲ್ಲಿ ದಫನ ಮಾಡಲಾದ ವ್ಯಕ್ತಿಯ ವಿವರಗಳು ಲಭ್ಯವಾಗುವುವು. ಅಷ್ಟರವರೆಗೆ ಸತ್ಯ ನಿಗೂಢವಾಗಿಯೇ ಇರುವುದು.

("ಮಾತೃಭೂಮಿ" ಸಾಪ್ತಾಹಿಕ 22-4-2012)

# ತ್ಯಜಿಸದಿರಿ ಈ ಅನುಗ್ರಹವ

*– ಕೆ. ಎಂ. ಉಮರ್, ಮಡಿಕೇರಿ*

ಮುಸ್ಲಿಂ ಲೋಕವು ಮರೆಯಬಾರದು
ಮುತ್ತು ಮುಸ್ತಫರ ನುಡಿ ವಚನ
ಮಹ್‌ದಿ ಬರುವರು ನಿಮ್ಮೊಳಗೆಂಬ
ಪಾವನವಾದ ಪ್ರವಾದನ

ಖಿಲಾಫತೆಂಬ ಅನುಗ್ರಹ ನಿಮ್ಮಲಿಲ್ಲದ
ಕಾಲದಿ ಯೋಚಿಸಿರಿ
ಖಿಲಾಫತ್‌ಮಿನ್‌ಹಾಜಿನ್ನುಬುವ್ವ
ತಿಲ್ಲದೆ ಅದರಲಿ ಒಂದಾಗಿ

ಕಣ್ಣು ತೆರೆಯಿರಿ ಮುಸ್ಲಿಂ ಲೋಕದ
ಸ್ಥಿತಿಯನ್ನೊಮ್ಮೆ ವೀಕ್ಷಿಸಿರಿ
ಕಷ್ಟ ಪಡುತಿರೋ ಮುಸ್ಲಿಂ ಲೋಕಕೆ
ನಾಯಕನ್ಯಾರೆಂದ್ಯೋಚಿಸಿರಿ

ಮಹ್‌ದಿಯು ಬಂದು ವರುಷವು ನೂರು
ಕಳೆದರೂ ನಿಮ್ಮ ಕಿವಿ ಮಾತ್ರ
ಮುಚ್ಚಿ ಹೋಗಿದೆ, ಕಣ್ಣು ಕಟ್ಟಿದೆ
ಹೃದಯಕೆ ಪರದೆಯು ಅಡ್ಡವಿದೆ

ಮುತ್ತು ನಬಿಯರ ವಚನವೆಲ್ಲವು
ಪೂರ್ತಿಯಾದುದು ಗಮನಿಸುತ
ಗತ್ತನು ಬಿಟ್ಟು ಸತ್ಯದೆಡೆಗೆ ನೀ
ಗಮನವ ಹಾಯಿಸು ಮನುಜ ಸುತ

ಶಾಪವು ಅಲ್ಲ ಮಾನವ ನಿನಗೆ
ನುಬುವ್ವತೆಂಬ ವರದಾನ
ಸಾರಿ ಹೇಳುವುದು ನಮ್ಮ ಬಾಧ್ಯತೆ
ನಿಮ್ಮ ಪಾಲಿಗಿದು ಸಮಾಧಾನ

ಖಿಲಾಫತೆಂಬ ನೆರಳಿನಡಿಯಲಿ
ಲೋಕದಲ್ಲೆಡೆ ನೆಲೆಸಿಹೆವು
ಖಾತಮುನ್ನಬಿಯರ ದೀನಿನ ಸೇವೆಯ
ಮಾಡುತ ಜೀವನ ಸಾಗಿಪೆವು

ಮುಸ್ಲಿಂ ಲೋಕದ ಜನರಿಗೆ ಯಾರು
ನಾಯಕನಾಗಿ ನಿಮ್ಮಲ್ಲಿ?
ಯಾರೂ ಇಲ್ಲದ ತಬ್ಬಲಿ ಹಾಗೆ
ಮುಸ್ಲಿಂ ಮಕ್ಕಳು ಭುವಿಯಲ್ಲಿ

ಉತ್ತಮ ಉಮ್ಮತ್ತಲ್ಲವೆ ನಮ್ಮ
ನಬಿ ನಾಯಕರ ಶಿಷ್ಯ ಗಣ
ಉತ್ತಮರೆಲ್ಲಿ ನಿಮ್ಮೊಳಗಿಂದು
ಕೇವಲ ನೋಡಲು ಒಂದು ಗಣ

ಸತ್ಯವಂತರು ನೀವೆ ಆದರೆ
ಎಲ್ಲಿದೆ ನಿಮ್ಮಲಿ ಸಮಾಧಾನ
ಸಾರಿ ಹೇಳಲು ಒಂದಾಗಿರುವೆವು
ಮಹದಿ ಇಮಾಮರ ಸಂತಾನ

ಕಾಡಿಗೆ ಹೋದರೂ ಗೆಣಸನು ತಿಂದರೂ
ಸೇರದಿರು ಈ ಸಂಗದಲಿ
ಕಾಲದಿಮಾಮರ ಸಂಗದಿ ಸೇರಿಕೊ
ಯಾಚಿಸಿ ಕ್ಷಮೆಯನು ಬೇಗದಲಿ

ಈ ನುಡಿ ನುಡಿದರು ಮುತ್ತು ನಬಿಯರು
ತನ್ನಯ ಶಿಷ್ಯರ ಕಿವಿಯಲ್ಲಿ
ಈಗ ಚಿಂತನೆ ಮಾಡಿರಿ ಎಲ್ಲರೂ
ಯಾರಲಿ ಇರುವರು ನಾಯಕರು

ಯಹೂದಿಯರಲ್ಲದೆ ನಸರಾನಿಗಳು
ಸ್ನೇಹಿತರಲ್ಲವೆ ನಿಮಗೀಗ
ಯಹೂದರ ಗೆಳೆತನ ಮಾಡದಿರೆಂಬ
ಖುರ್‌ಆನ್ ಬೇಡವೆ ನಿಮಗೀಗ

ವಿರೋಧಿಗಳಲ್ಲಿ ಪ್ರಥಮರಾದರು
ಖಾತಮುನ್ನಬಿಯರ ಮಹ್‌ದಿಯರ
ವಿರೋಧವ ನಿಲ್ಲಿಸಿ ಯೋಚಿಸಿರೆಲ್ಲರು
ದೇವನು ಕಳಿಸಿದ ನಬಿಯವರು

ಈಸಾ ಬರುವರು ಗಗನದಿಂದೆಂಬ
ಭಾವನೆ ತೆಗೆಯಿರಿ ಮನದಿಂದ
ಈಸಾ ಬಂದರು ಖಿದ್‌ಅದಲೆಂಬ
ಸತ್ಯವನರಿಯಿರಿ ನಮ್ಮಿಂದ

ಈಸಾ ಮಸೀಹರು ಮಹ್‌ದಿ ಇಮಾಮರು
ಒಂದೇ ವ್ಯಕ್ತಿಯ ಹೆಸರೆಂದು
ಇಬ್‌ನು ಮಾಜ ತೆರೆದು ನೋಡಿರಿ
ಬರೆದಿದೆ ಅದರಲಿ ನಿಜವೆಂದು

ನಿಮ್ಮಿಂದ ನಿಮಗಿಮಾಮರಾಗಿ
ಬರುವರು ಈಸಾ ನಬಿಯೆಂದು
ನಮ್ಮ ಪುಂಗವ ಮುತ್ತು ನಬಿಯರು
ತನ್ನ ವಚನದಿ ಹೇಳಿದರು

ಈಸಾ ಗಗನದಿಂದಿಳಿಯುವರೆಂದು
ನಬಿಯರು ಎಲ್ಲೂ ಹೇಳಿಲ್ಲ
ಈಸಾ ಜೀವಿಸಿ ಇರುವರು ಎಂದು
ಖುರ್‌ಆನ್ ಎಲ್ಲೂ ನುಡಿದಿಲ್ಲ

ಮೂಢ ನಂಬಿಕೆ ಸ್ವಂತ ಭಾಗದಿ
ತ್ಯಜಿಸಿರಿ ನೀವು ಸೋದರರೇ
ಮಾನವ ರಕ್ಷೆಗೆ ದೇವನು ಕಳಿಸಿದ
ಮಹ್‌ದಿಯ ಜೊತೆಯಲಿ ಮುನ್ನೇರಿ

ದೇವದೂತರನೆದುರಿಸಿ ಹಿಂದೆ
ನಾಶವಾಗಿರೋ ದುಷ್ಟ ಜನ
ದೇವರ ಕೋಪಕೆ ಬಲಿಯಾಗಿರುವುದು
ಗಮನಿಸಿ ನೀವು ಅನುದಿನ

★

## ಲೋಕವನ್ನು ಯುದ್ಧದೆಡೆಗೆ ಕೊಂಡೊಯ್ಯಬೇಡಿರಿ ಅಹ್ಮದಿಯಾ ಖಲೀಫರ ವಿನಂತಿ

ಈಗ ಲೋಕದಲ್ಲಿ ಒಂದು ಯುದ್ಧ ಸ್ಫೋಟವಾದರೆ ಅದು ಇಸ್ರೇಲ್ ಮತ್ತು ಇರಾನ್ ತಮ್ಮೊಳಗೆ ಮಾತ್ರ ಸೀಮಿತವಾಗಿರುವ ಯುದ್ಧವಾಗಿರಲಾರದೆಂದೂ ಬದಲು ಇಂದು ಪರಸ್ಪರ ಘರ್ಷಿಸುತ್ತಿರುವ ಎಲ್ಲ ದೇಶಗಳು ಅದರಲ್ಲಿ ಸೇರಲು ಅವಕಾಶವಿದೆಯೆಂದೂ ಅಹ್ಮದಿಯಾ ಖಲೀಫ ಹೇಳಿದರು. ಅದು ಅಂಗವೈಕಲ್ಯಗಳ ಮತ್ತು ರೋಗಪೀಡಿತವಾದ ಒಂದು ಲೋಕವನ್ನು ಹುಟ್ಟುಹಾಕುವುದು. ಕಾರಣವೇನೆಂದರೆ, ಅದೊಂದು ಅಣ್ವಾಯುಧ ಯುದ್ಧವಾಗಿರಬಹುದು. ಆದುದರಿಂದ ಅಂತಹ ಒಂದು ಯುದ್ಧವಾಗದಂತೆ ತಡೆಯಲು ತಮ್ಮಿಂದ ಸಾಧ್ಯವಿರುವಷ್ಟು ಪ್ರಯತ್ನಿಸಿ ಚರ್ಚೆ ಮೂಲಕ ಸಮಸ್ಯೆಗಳನ್ನು ಪರಿಹರಿಸುತ್ತಾ, ಒಂದು ಜಾಗತಿಕ ಯುದ್ಧದೆಡೆಗೆ ಕೊಂಡೊಯ್ಯದಿರಲಿಕ್ಕೆ ಎಲ್ಲ ಶ್ರಮಗಳನ್ನು ನಡೆಸಬೇಕೆಂದು ಇಸ್ರೇಲ್ ಪ್ರಧಾನ ಮಂತ್ರಿ ನೆತನ್ಯಾಹೂ ಮತ್ತು ಇರಾನ್ ಅಧ್ಯಕ್ಷ ಅಹ್ಮದಿನೇಜಾದ್‌ರನ್ನು ಮುಸ್ಲಿಂ ಖಲೀಫ ಮಿರ್ಝಾ ಮಸ್ರೂರ್ ಅಹ್ಮದ್ ಪತ್ರಗಳ ಮೂಲಕ ವಿನಂತಿಸಿದ್ದಾರೆ. (ಆಧಾರ : ಇಸ್ರೇಲ್ ಟಿ.ವಿ. 5-3-2012)

## ಗುರು ಶ್ರೀ ಶ್ರೀ ರವಿಶಂಕರರಿಗೆ ಅಹ್ಮದಿಯಾ ಸಾಹಿತ್ಯ ಪಾರಿತೋಷಕ



ಇತ್ತೀಚೆಗೆ ಬೆಂಗಳೂರು ಅಹ್ಮದಿಯಾ ಘಟಕದ ಪ್ರತಿನಿಧಿ ತಂಡವೊಂದು ಆರ್ಟ್ ಆಫ್ ಲೀವಿಂಗ್ ಸಂಸ್ಥೆಯ ಗುರು ಶ್ರೀ ಶ್ರೀ ರವಿಶಂಕರರನ್ನು ಬೆಂಗಳೂರಿನಲ್ಲಿರುವ ಅವರ ಆಶ್ರಮದಲ್ಲಿ ಭೇಟಿಯಾಗಿ ಪವಿತ್ರ ಖುರ್‌ಆನಿನ ಕನ್ನಡ ಭಾಷಾಂತರ, ಇತ್ತೀಚೆಗೆ ಪ್ರಕಾಶನಗೊಂಡ "ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ", "ಶಾಂತಿಗೆ ಕರೆ" ಇತ್ಯಾದಿ ಅಹ್ಮದಿಯಾ ಪ್ರಕಟನೆಗಳನ್ನು ಪಾರಿತೋಷಕವಾಗಿ ನೀಡಿದರು. ಮೌಲವಿ ಖಲೀಂ ಖಾನ್, ಶಾಹಿದ್ ಬದ್ರುದ್ದೀನ್ ಮತ್ತು ನಾಸಿರ್ ಅಹ್ಮದ್ ಅಹ್ಮದಿಯಾ ಸಂಘಟನೆಯನ್ನು ಪ್ರತಿನಿಧೀಕರಿಸಿದ್ದರು.

ಲೋಕ ಶಾಂತಿಗೋಸ್ಕರ 200ಕ್ಕೂ ಮಿಕ್ಕಿದ ದೇಶಗಳಲ್ಲಿ ಅಹ್ಮದಿಯಾ ಸಂಘಟನೆ ಶ್ರಮಿಸುವುದನ್ನು ಗುರು ಶ್ಲಾಘಿಸಿದರು. ನಾರ್ವೆಯ ಏರ್‌ಪೋರ್ಟ್ ರಾಜಮಾರ್ಗದ ಬದಿಯಲ್ಲಿ ಇತ್ತೀಚೆಗೆ ಉದ್ಘಾಟಿಸಲ್ಪಟ್ಟ ಅಹ್ಮದಿಯಾ ಮಸೀದಿಯನ್ನು ತಾನು ಕಂಡಿದ್ದೇನೆಂದು ಹೇಳಿ ಅದರ ಕಟ್ಟಡ ರಚನೆಯ ಬಗ್ಗೆ ಅವರು ಮೆಚ್ಚಿಗೆ ವ್ಯಕ್ತಪಡಿಸಿದರು.

## ಪ್ರತಿಭಾಶಾಲಿಯಾದ ಅಹ್ಮದಿ ಬಾಲಿಕೆ



ಬ್ರಿಟಿಷ್ ಸರಕಾರ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಸುವ ಓ ಲೆವಲ್ ಪರೀಕ್ಷೆಯಲ್ಲಿ (O Level Exam) ಪಾಕಿಸ್ತಾನದ ಅಹ್ಮದಿ ಬಾಲಿಕೆ ಸಿತಾರ ಅಕ್‌ಬರ್ ಜಾಗತಿಕ ದಾಖಲೆಯೊಂದಿಗೆ ಅತ್ಯುನ್ನತ ಸ್ಥಾನದಲ್ಲಿ ತೇರ್ಗಡೆ ಹೊಂದಿದ್ದಾಳೆ. 11 ವರ್ಷ ಪ್ರಾಯದ ಸಿತಾರ "ಓ ಲೆವೆಲ್ ಪರೀಕ್ಷೆ" ಪಾಸಾಗುವ ಲೋಕದ ಅತಿ ಕಿರಿಯ ವಯಸ್ಸಿನವಳಾಗಿದ್ದಾಳೆ. ಉನ್ನತ ವ್ಯಾಸಂಗಕ್ಕೆ ಬ್ರಿಟಿಷ್ ಸರಕಾರ ವಿದ್ಯಾರ್ಥಿಗಳಿಗೆ ಅಂತರ್ದೇಶಿಯ ಮಟ್ಟದಲ್ಲಿ ನಡೆಸುವ ಪರೀಕ್ಷೆ ಇದಾಗಿದೆ. ಇಂಗ್ಲಿಷ್, ಮೆತಮೆಟಿಕ್ಸ್, ಬಯೋಲಜಿ, ಕೆಮೆಸ್ಟ್ರಿ, ಫಿಸಿಕ್ಸ್ ಎಂಬೀ ವಿಷಯಗಳಲ್ಲಿ ಸಿತಾರ ಲೋಕ ದಾಖಲೆ ಸ್ಥಾಪಿಸಿದ್ದಾಳೆ. ಒಂಬತ್ತನೆ ವಯಸ್ಸಿನಲ್ಲಿ ಕೆಮೆಸ್ಟ್ರಿಯಲ್ಲೂ ಈ ಬಾಲಿಕೆ ದಾಖಲೆಯೊಂದಿಗೆ ಓ ಲೆವೆಲ್ ಪರೀಕ್ಷೆ ಪಾಸಾಗಿದ್ದಾಳೆ. ವಿದೇಶಗಳಲ್ಲಿ ನಡೆಸುವ IELTS (International English Language Test System) ಪರೀಕ್ಷೆಯಲ್ಲಿ ಸಹ ಸಿತಾರ ಭಾಗವಹಿಸಿ ದಾಖಲೆಯೊಂದಿಗೆ 9ರಲ್ಲಿ 7 ಬಾಂಡ್ ಗಳಿಸಿ ಪಾಸಾಗಿದ್ದಾಳೆ. ಅಸಾಮಾನ್ಯ ಪ್ರತಿಭಾಶಾಲಿಯಾದ ಈ ಚಿಕ್ಕ ಜೀನಿಯಸನ್ನು ಪಾಕಿಸ್ತಾನದ ಮಾಧ್ಯಮಗಳು ಭಾವಿಕಾಲದ ಅಬ್ದುಸ್ಸಲಾಂ ಎಂದು ವರ್ಣಿಸಿವೆ. ಬಾಲಿಕೆ ಅಹ್ಮದಿಯಾದ ಕಾರಣದಿಂದ ಸಿತಾರಳಿಗೆ ಪಾಕಿಸ್ತಾನ ಸರಕಾರ ತಕ್ಕುದಾದ ರೀತಿಯಲ್ಲಿ ಪರಿಗಣನೆ ನೀಡಿಲ್ಲ.

## ಸಂಪಾದಕರಿಗೆ ಪತ್ರ

ಮಾನ್ಯರೆ,

ಕಳುಹಿಸಿದ ಸಂಚಿಕೆಗಳಿಗಾಗಿ ಕೃತಜ್ಞತೆಗಳು. ಆದರೆ ನನಗೆ ಮತೀಯ ಸಾಹಿತ್ಯದಲ್ಲಿ ಪ್ರೀತಿ ಅಷ್ಟಕ್ಕಷ್ಟೆ. ಈ ಕಾಲದಲ್ಲಿ ಮತೀಯ, ಜಾತೀಯ ದೃಷ್ಟಿಯನ್ನು ಬದಿಗಿಟ್ಟು ಎಲ್ಲ ಜಾತಿ ಮತಗಳವರೂ ಪರಸ್ಪರ ಪ್ರೀತಿ ಗೌರವಗಳಿಂದ ಅನ್ಯೋನ್ಯವಾಗಿ ಬಾಳುವುದೇ ಲೇಸೆಂದು ನನ್ನ ಅಭಿಪ್ರಾಯ. ಪತ್ರಿಕೆಗಳೂ ಸರ್ವ ಧರ್ಮ ಸಾಮರಸ್ಯಕ್ಕಾಗಿ ಪ್ರಯತ್ನಿಸುವುದು ಅಗತ್ಯ.

**ಅಮೃತ ಸೋಮೇಶ್ವರ,** ಕೋಟೆಕಾರ್

---

ಮಾನ್ಯರೆ,

ಅಸ್ಸಲಾಮು ಅಲೈಕುಂ.

ಹಡಗಲಿಯ ಗ್ರಂಥಾಲಯದಲ್ಲಿ 'ಯುಗರಶ್ಮಿ' ಸಂಚಿಕೆ ನೋಡಿದೆ. ಉಳಿದ ಕಾರ್ಯಗಳನ್ನು ಬಿಟ್ಟು ಅದನ್ನು ಪೂರ್ತಿಯಾಗಿ ಓದಿದೆ. ಪೋಪ್‌ರಿಗೆ ಇಸ್ಲಾಂ ಧರ್ಮದ ಸಂದೇಶ ಬಹಳ ಚೆನ್ನಾಗಿ ಮೂಡಿ ಬಂದಿದೆ.

ಜೆ. ಅಮೀನ್ ಸಾಬ, ಕೊಂಬಳಿ

## ನಿಧನ ವಾರ್ತೆ

### ರವೀಲ್ ಬುಖಾರೆಯೋವ್ ಸಾಹೇಬ್



ರಶ್ಯದ ಪ್ರಜೆಯಾದ ಜನಾಬ್ ರವೀಲ್ ಬುಖಾರೆಯೋವ್ ಸಾಹೇಬ್ ಜನವರಿ 24ರಂದು ತನ್ನ 61ನೇ ಪ್ರಾಯದಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಜ್ಞಾನ, ನಿಸ್ವಾರ್ಥ ಸೇವೆ, ಖಿಲಾಫತಿನೊಂದಿಗೆ ಸುದೃಢ ಸಂಬಂಧ, ವಿನಯ, ಅಹ್ಮದಿಯಾ ಸಂದೇಶವನ್ನು ರಶ್ಯದಲ್ಲಿ ಪ್ರಚುರಪಡಿಸುವ ಉತ್ಸಾಹ ಕಾರಣದಿಂದ ರವೀಲ್ ಬುಖಾರೆಯೋವ್ ಪ್ರಕಾಶಿಸುವ ಒಂದು ನಕ್ಷತ್ರವಾಗಿದ್ದರೆಂದೂ ಅವರು ಅನೇಕ ಜನರಿಗೆ ಮಾರ್ಗದರ್ಶಕರಾದರೆಂದೂ ಹಝ್ರತ್ ಮಸೀಹ್ ಮೌಊದ್‌ರ(ಅ) ಪ್ರವಾದನ ಪ್ರಕಾರ ಅಹ್ಮದಿಯತ್ ರಶ್ಯದಲ್ಲಿ ಮರಳ ಹರಳನಂತೆ ವ್ಯಾಪಿಸುವಾಗ ಚರಿತ್ರೆ ಅವರ ಸೇವೆಗಳನ್ನು ಖಂಡಿತವಾಗಿಯೂ ಸ್ಮರಿಸುವುದೆಂದೂ ಹಝ್ರತ್ ಖಲೀಫತುಲ್ ಮಸೀಹ್ ಖುತುಬದಲ್ಲಿ ನುಡಿದರು.

ಅವರು ಅಹ್ಮದಿಯಾ ಜಮಾಅತಿಗೆ ಸೇರುವ ಮೊದಲು ಬಿ.ಬಿ.ಸಿ.ಯಲ್ಲಿ ರಶ್ಯನ್ ಕಾರ್ಯಕ್ರಮದಲ್ಲಿ ಕಾರ್ಯನಿರತರಾಗಿದ್ದರು. ಆ ಉದ್ಯೋಗವನ್ನು ಬಿಟ್ಟ ಬಳಿಕ ಅವರು ಪೂರ್ಣವಾಗಿ ತನ್ನನ್ನು ಜಮಾಅತಿನ ಸೇವೆಗಾಗಿ ಅರ್ಪಿಸಿದರು. ತನ್ನ ಜೀವಿತದ ಪ್ರತಿ ನಿಮಿಷ ಅಹ್ಮದಿಯತಿಗೋಸ್ಕರ ವಿನಿಯೋಗಿಸಲ್ಪಡಬೇಕೆಂದು ಅವರ ಬಯಕೆಯಾಗಿತ್ತು. ನಿಧನವಾಗುವ ದಿವಸದಲ್ಲೂ ಈ ಸೇವೆಯಲ್ಲಿ ಅವರು ಮಗ್ನರಾಗಿದ್ದರು.

ಅವರು 1989ರಲ್ಲಿ ಜಮಾಅತಿಗೆ ಸೇರಿದರು. ಅವರ ಸ್ವಂತ ಊರು ತಾತಾರಿಸ್ಥಾನ್. ಎಲ್ಲಿಗೆ ಹೋದರೂ ಅವರು ಅಹ್ಮದಿಯಾ ಜಮಾಅತಿನ ಸಂದೇಶ ತಲುಪಿಸುತ್ತಿದ್ದರು. ಅವರ ಸ್ನೇಹ ವಲಯದಲ್ಲಿ ರಾಜಕಾರಣಿಗಳು, ಸಾಹಿತಿಗಳು, ಕವಿಗಳು, ಡಾಕ್ಟರ್‌ಗಳು, ಕಾಲೇಜು ಮತ್ತು ಯುನಿವರ್ಸಿಟಿ ಅಧ್ಯಾಪಕರು, ವಿದ್ಯಾರ್ಥಿಗಳು, ಆರ್ಥಿಕ ತಜ್ಞರು ಮತ್ತು ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿರುವ ಸ್ತ್ರೀ ಪುರುಷರು ಸೇರುತ್ತಾರೆ. ರವೀಲ್ ಸಾಹೇಬ್ ಕವಿ, ಪತ್ರಕರ್ತ ಮತ್ತು ಅನುವಾದಕರಾಗಿದ್ದರು.

ಲಂಡನಿನಲ್ಲಿ ರಶ್ಯನ್ ಡೆಸ್ಕ್ ಆರಂಭಿಸಿದ ಮೊದಲ್ಗೊಂಡು ರವೀಲ್ ಸಾಹೇಬ್ ಕೊನೆಯ ತನಕ ತನ್ನ ಸೇವೆಯನ್ನು ಸಮರ್ಪಿಸಿದರು. ಎಂ.ಟಿ.ಎ. ಮತ್ತು ಇಂಟರ್‌ನೆಟ್‌ನಲ್ಲಿ ಖುತುಬಗಳ ರಶ್ಯನ್ ಡಬ್ಬಿಂಗ್ ಅವರು ಮಾಡುತ್ತಿದ್ದರು. ಜಮಾಅತಿನ ಹಲವು ಗ್ರಂಥಗಳನ್ನು ಅವರು ರಶ್ಯನ್ ಭಾಷೆಗೆ ತರ್ಜುಮೆ ಮಾಡಿದ್ದಾರೆ. ಖುರ್‌ಆನ್ ಭಾಷಾಂತರ ಮಾಡುವುದರಲ್ಲೂ ಅವರು ಉತ್ತಮ ಸೇವೆ ಸಲ್ಲಿಸಿದ್ದಾರೆ.

ವಿವಿಧ ಪುರಸ್ಕಾರಗಳು ಅವರಿಗೆ ಲಭಿಸಿವೆ. ತಾತಾರಿಸ್ಥಾನದ ಉನ್ನತ ಸಾಹಿತ್ಯ ಪ್ರಶಸ್ತಿ ಅವರಿಗೆ ದೊರಕಿದೆ. ಮೂಸಾ ಜಲೀಲ್ ಪ್ರೈಝ್ ಆಫ್ ಆನರ್ ಎಂಬ ಪ್ರಶಸ್ತಿ ಅವರಿಗೆ ಲಭಿಸಿದೆ. 2006ರಲ್ಲಿ ತಾತಾರಿಸ್ಥಾನದಲ್ಲಿ (National Prize of Honour) ಅವರಿಗೆ ಲಭಿಸಿದೆ. ಅವರು ಬರೆದ ಒಂದು ಪುಸ್ತಕಕ್ಕೆ (The Order of Culture Heritage) ಎಂಬ ಪ್ರಶಸ್ತಿ ಲಭಿಸಿದೆ. ವಿವಿಧ ಅಂತರರಾಷ್ಟ್ರೀಯ ಸಾಂಸ್ಕೃತಿಕ ಸಂಘಗಳಲ್ಲಿ ಅವರು ಸದಸ್ಯರಾಗಿದ್ದರು.

ಅಲ್ಲಾಹನು ದಿವಂಗತರಿಗೆ ಜನ್ನತುಲ್ ಫಿರ್ದೌಸ್‌ನಲ್ಲಿ ಉನ್ನತ ಸ್ಥಾನ ನೀಡಿ ಅನುಗ್ರಹಿಸಲಿ, ಆಮೀನ್.

ಓದಿದ್ದು

## ಅಲ್‌ಕಾಯಿದಾ ನಾಯಕ ಮನ್ಸೂರ್ ಹತ್ಯೆ

ಇಸ್ಲಾಮಾಬಾದ್ : ಪಾಕಿಸ್ತಾನದ ಉತ್ತರ ವಜೀರಿಸ್ಥಾನದಲ್ಲಿ ನಡೆದ ಡ್ರೋನ್ ದಾಳಿಯಲ್ಲಿ ಆವರಣ ಗೋಡೆಯೊಂದು ನೆಲ ಕಚ್ಚಿದ್ದು ಉಗ್ರರೆಂದು ಶಂಕಿಸಲಾದ ನಾಲ್ವರು ಬಲಿಯಾಗಿದ್ದಾರೆ. ಮೃತಪಟ್ಟವರಲ್ಲಿ ಪಾಕ್ ಅಲ್ ಕಾಯಿದಾದ ವರಿಷ್ಠ ಕೂಡ ಸೇರಿದ್ದಾನೆ. ಆತನ ಮೇಲೆ ಅಮೇರಿಕ ಹಲವು ದಿನಗಳಿಂದ ಒಂದು ಕಣ್ಣಿಟ್ಟಿತ್ತು.

ಪಾಕ್‌ನಲ್ಲಿ ನಿಷೇಧಿಸಲ್ಪಟ್ಟ ಹರ್ಕತ್ ಉಲ್ ಮುಜಾಹಿದೀನ್ ಗುಂಪಿನ ಮಾಜಿ ಕಮಾಂಡರ್ ಕೂಡ ಆಗಿದ್ದ ಬದರ್ ಮನ್ಸೂರ್ ಈ ದಾಳಿಯಲ್ಲಿ ಕೊನೆಯುಸಿರೆಳೆದಿದ್ದಾನೆ ಎಂದು ಮಾಧ್ಯಮ ವರದಿ ತಿಳಿಸಿದೆ.

("ಉದಯವಾಣಿ" – 10 ಫೆಬ್ರವರಿ 2012)

ಕರಾಚಿಯಲ್ಲಿ ನಡೆದ ದಾಳಿ ಮತ್ತು ಅಲ್ಪಸಂಖ್ಯಾತ ಅಹ್ಮದಿ ಸಮುದಾಯಕ್ಕೆ ಸೇರಿದ, ಲಾಹೋರ್‌ನಲ್ಲಿರುವ ಎರಡು ಮಸೀದಿಗಳ ಮೇಲೆ 2010 ಮೇಯಲ್ಲಿ ದಾಳಿ ನಡೆಸಿ ಸುಮಾರು 100 ಮಂದಿಯ ಹತ್ಯೆಗೆ ಕಾರಣಕರ್ತ ಮನ್ಸೂರ್ ಆಗಿದ್ದಾನೆ.

(ಡಾನ್, ಪಾಕಿಸ್ತಾನ 09 ಫೆಬ್ರವರಿ 2012)

## ಪ್ರವಾದಿ ಆಗಮನ : ಏಸು ಭವಿಷ್ಯ

ಲಂಡನ್ : ಇತ್ತೀಚೆಗೆ ಪತ್ತೆಯಾಗಿರುವ ಪುರಾತನ ಬೈಬಲ್ ಗ್ರಂಥವೊಂದರಲ್ಲಿ ಏಸು ಕ್ರಿಸ್ತ ಪ್ರವಾದಿ ಮೊಹಮ್ಮದ್ ಪೈಗಂಬರರು ಭೂಮಿಗೆ ಆಗಮಿಸುತ್ತಿರುವ ಬಗ್ಗೆ ಭವಿಷ್ಯ ನುಡಿದಿರುವ ಸಾಲುಗಳಿವೆ ಎನ್ನಲಾಗಿದೆ. ವ್ಯಾಟಿಕನ್‌ನಿಂದ ಈ ಹೇಳಿಕೆಗೆ ತೀವ್ರ ವಿರೋಧ ವ್ಯಕ್ತವಾಗಿದೆ.

ಟರ್ಕಿ ಸರಕಾರ ಕಳೆದ 12 ವರ್ಷಗಳಿಂದ ಅಡಗಿಸಿಟ್ಟ ಸುಮಾರು 1500 ವರ್ಷ ಪುರಾತನವಾದ ಪುಸ್ತಕ ಬರ್ನಬಸ್ ಬರೆದಿರುವ ಯೇಸುವಿನ 'ದೇವವಾಣಿ'ಗಳು ಎನ್ನಲಾಗುತ್ತಿದೆ. ಪೋಪ್ ಬೆನೆಡಿಕ್ಟ್ ಈ ಗ್ರಂಥವನ್ನು ಸ್ವತಃ ನೋಡಲು ಬಯಸಿದ್ದಾರೆ. ಯೇಸುವಿನ ಹುಟ್ಟೂರಿನ ಅರಮೈಕ್ ಭಾಷೆಯಲ್ಲಿ ಬರೆದಿರುವ ಈ ಬೃಹತ್ ಗ್ರಂಥದಲ್ಲಿ 14 ದಶಲಕ್ಷ ಪದಗಳಿವೆ. ಯೇಸುವಿನ ಆರಂಭದ ಪ್ರವಚನಗಳಲ್ಲಿ ಪ್ರವಾದಿಯ ಆಗಮನದ ವಿಚಾರಗಳು ಇದ್ದವು ಎಂದು ದ ಡೇಲಿ ಮೇಲ್ ವರದಿ ಮಾಡಿದೆ.

ಪ್ರಾಣಿಗಳ ಚರ್ಮದಲ್ಲಿ ಅಕ್ಷರಗಳನ್ನು ಕೊರೆದಿರುವ ಈ ಬೈಬಲ್ ಗ್ರಂಥ 12 ವರ್ಷದ ಹಿಂದೆ ಟರ್ಕಿ ಪೊಲೀಸರು ನಡೆಸಿದ ಸ್ಮಗ್ಲಿಂಗ್ ವಿರೋಧಿ ಕಾರ್ಯಾಚರಣೆ ಸಂದರ್ಭದಲ್ಲಿ ಸಿಕ್ಕಿದೆ. 2010ರ ತನಕ ಅದನ್ನು ಭದ್ರ ಕಾವಲಿನಲ್ಲಿಡಲಾಗಿತ್ತು. ಅನಂತರ ಅಂಕಾರ ಎಥ್ನೊಗ್ರಫಿ ಮ್ಯೂಸಿಯಂಗೆ ಹಸ್ತಾಂತರಿಸಲಾಯಿತು. ಚಿಕ್ಕಪುಟ್ಟ ದುರಸ್ತಿಯ ಬಳಿಕ ಸದ್ಯವೇ ಅದನ್ನು ಸಾರ್ವಜನಿಕ ವೀಕ್ಷಣೆಗಿಡಲಾಗುವುದು. ಈ ಬೈಬಲ್ ಗ್ರಂಥ ಯೇಸು ವಾಣಿಯ ನೈಜ ಆವೃತ್ತಿಯಾಗಿರಬೇಕು. ಇಸ್ಲಾಂ ಬಗ್ಗೆ ಯೇಸು ಹೊಂದಿದ್ದ ಸಮಾನಂತರ ಚಿಂತನೆಗಳನ್ನು ರಹಸ್ಯವಾಗಿಡುವ ಉದ್ದೇಶದಿಂದ ಕ್ರಿಶ್ಚಿಯನ್ ಚರ್ಚ್ ಗ್ರಂಥವನ್ನು ಅಡಗಿಸಿಟ್ಟಿರುವ ಸಾಧ್ಯತೆಗಳಿವೆ ಎಂದು ಟರ್ಕಿಯ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಎರ್ತುಗಲ್ ಗುನೆ ಹೇಳಿದ್ದಾರೆ.

("ಉದಯವಾಣಿ" – 26 ಫೆಬ್ರವರಿ 2012)

## ಜಿನ್ನಾ ಭಾಷಣಕ್ಕೋಸ್ಕರ ಪಾಕ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಶನ್ ಆಕಾಶವಾಣಿಯಲ್ಲಿ

ಇಸ್ಲಾಮಾಬಾದ್ : ತಮ್ಮ ರಾಷ್ಟ್ರ ಸ್ಥಾಪಕನೂ ರಾಷ್ಟ್ರಪಿತನೂ ಆದ ಮುಹಮ್ಮದಲಿ ಜಿನ್ನಾರ ಭಾಷಣದ ಧ್ವನಿ ಮುದ್ರಣಕ್ಕಾಗಿ ಪಾಕ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಶನ್ ಆಕಾಶವಾಣಿಯನ್ನು ಸಂಪರ್ಕಿಸಿದೆ. ದೇಶದ ನಿಯಂತ್ರಣವಿಲ್ಲದೆ ಯಾವುದೇ ಧರ್ಮದಲ್ಲಿ ನಂಬಿಕೆಯಿಡುವ ಜನರ ಹಕ್ಕುಗಳ ಕುರಿತು 1947ರಲ್ಲಿ ಅವರು ಮಾಡಿದ ಭಾಷಣದ ಪ್ರತಿಯನ್ನು ಪಾಕಿಸ್ಥಾನ ಕೇಳಿದೆ.

ಪಾಕಿಸ್ಥಾನ ಸ್ವತಂತ್ರವಾಗುವ ಮೂರು ದಿವಸ ಮುಂಚೆ ಪಾಕ್ ಸಂವಿಧಾನ ರಚನಾ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಅವರು ಧರ್ಮ ಸ್ವಾತಂತ್ರ್ಯದ ಬಗ್ಗೆ ಪ್ರತಿಪಾದಿಸಿದರು. ಸ್ವತಂತ್ರ ಪಾಕಿಸ್ಥಾನದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳ ಕುರಿತು ಸಹ ಭಾಷಣದಲ್ಲಿ ಅವರು ಪರಾಮರ್ಶಿಸಿದ್ದಾರೆ.

1980ರ ದಶಕದಲ್ಲಿ ಝಿಯಾಉಲ್ ಹಕ್ ಅಧ್ಯಕ್ಷರಾಗಿದ್ದಾಗ ಪಾಠ ಪುಸ್ತಕಗಳಿಂದ ಇದಕ್ಕೆ ಸಂಬಂಧಿಸಿದ ಭಾಗಗಳನ್ನು ತೆಗೆದುಹಾಕಲಾಗಿತ್ತು. ಈಗಿನ ಸರಕಾರ ಆಗಸ್ಟ್ 11 ರಂದು ಅಲ್ಪ ಸಂಖ್ಯಾತರ ದಿನವೆಂದು ಆಚರಿಸುವ ಸಂದರ್ಭದಲ್ಲಿ ಜಿನ್ನಾರ ಐತಿಹಾಸಿಕ ಭಾಷಣದ ಕುರಿತು ಪಾಕ್ ಸರಕಾರ ಅನ್ವೇಷಣೆ ಆರಂಭಿಸಿತು.

ಭಾಷಣದ ಶಬ್ದಮುದ್ರಣ ಆಕಾಶವಾಣಿ ಸಂಗ್ರಹದಲ್ಲಿದೆಯೆಂದು ತಿಳಿದುಕೊಂಡ ಪಾಕ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಶನ್ ಅವರಿಗೆ ಪತ್ರ ಬರೆಯಿತು. ಬಹುಸ್ವರ, ಪ್ರಜಾಪ್ರಭುತ್ವ, ಆಧುನಿಕ ದೇಶವನ್ನಾಗಿ ಪಾಕಿಸ್ಥಾನವನ್ನು ಬದಲಾಯಿಸಲು ಬಯಸುವವರಿಗೆ ಸಂಬಂಧಿಸಿ ಈ ಭಾಷಣ ಬಹಳ ಪ್ರಧಾನವಾಗಿದೆ – ಪಾಕ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಶನ್ ಡೈರೆಕ್ಟರ್ ಜನರಲ್ ಮುರ್ತಾಝ್ ಸೋಳಂಕಿ ಹೇಳಿದರು.

("ಮಾತೃಭೂಮಿ" – 05 ಜೂನ್ 2012)

ಓದಿದ್ದು

## ಮುಸ್ಲಿಂ ಯುವತಿಯರು 15 ವರ್ಷಕ್ಕೇ ಮದುವೆಯಾಗಬಹುದು.

ಹೊಸದಿಲ್ಲಿ : ಮುಸ್ಲಿಂ ಹುಡುಗಿ 15 ವರ್ಷಕ್ಕೆ ಋತುಮತಿಯಾಗಿದ್ದರೆ ಆಕೆ ಮದುವೆಯಾಗಬಹುದು ಎಂದಿರುವ ದಿಲ್ಲಿ ಹೈಕೋರ್ಟ್ ಅಪ್ರಾಪ್ತ ವಯಸ್ಸಿನ ಯುವತಿಯೊಬ್ಬಳ ಮದುವೆಯನ್ನು ಕಾನೂನು ಸಮ್ಮತವೆಂದು ಹೇಳಿ ಅವಳಿಗೆ ಗಂಡನ ಮನೆಯಲ್ಲಿರಲು ಅನುಮತಿ ಕೊಟ್ಟಿದೆ. ಮಹ್ಮದೀಯ ಕಾನೂನು ಪ್ರಕಾರ ಮುಸ್ಲಿಂ ಯುವತಿ ಋತುಮತಿಯಾಗಿದ್ದರೆ ಹೆತ್ತವರ ಒಪ್ಪಿಗೆಯಿಲ್ಲದೆ ಮದುವೆಯಾಗಬಹುದು ಹಾಗೂ ಆಕೆಯ ಪ್ರಾಯ 18 ವರ್ಷಕ್ಕಿಂತ ಕಡಿಮೆಯಿದ್ದರೂ ಗಂಡನ ಮನೆಯಲ್ಲಿರಬಹುದು ಎಂದು ನ್ಯಾ ಎಸ್. ರವೀಂದ್ರ ಮತ್ತು ನ್ಯಾ ಎಸ್. ಪಿ. ಗರ್ಗ್ ಅವರ ಖಂಡಪೀಠ ತೀರ್ಪಿತ್ತಿದೆ. ಅಪ್ರಾಪ್ತ ವಯಸ್ಸಿನ ಮುಸ್ಲಿಂ ಯುವತಿಯರ ಮದುವೆಗೆ ಸಂಬಂಧಿಸಿ ಸರ್ವೋಚ್ಚ ನ್ಯಾಯಾಲಯ ನೀಡಿರುವ ವಿವಿಧ ತೀರ್ಪುಗಳನ್ನು ಉಲ್ಲೇಖಿಸಿರುವ ಹೈಕೋರ್ಟ್, ಋತುಮತಿಯಾಗಿರುವ ಅರ್ಥಾತ್ 15 ವರ್ಷವಾಗಿರುವ ಮುಸ್ಲಿಂ ಯುವತಿ ತನ್ನ ಇಚ್ಛೆಯನುಸಾರ ಮದುವೆಯಾಗಬಹುದು ಹಾಗೂ ಇಂತಹ ಮದುವೆಗಳು ಕಾನೂನು ಸಮ್ಮತ. ಆದರೆ ಪ್ರಾಯಪ್ರಬುದ್ಧಳಾಗುವಾಗ ಅಂದರೆ 18 ವರ್ಷವಾಗುವಾಗ ತನ್ನ ಮದುವೆ ಸಿಂಧುವೇ ಎಂದು ತೀರ್ಮಾನಿಸುವ ಅಧಿಕಾರವೂ ಅವಳಿಗಿದೆ ಎಂದು ಈ ತೀರ್ಪು ಸ್ಪಷ್ಟಪಡಿಸಿದೆ.

("ಉದಯವಾಣಿ" – 06 ಜೂನ್ 2012)

## ಬುಶ್ : ಅಮೆರಿಕದ ಅತ್ಯಂತ ಕುಪ್ರಸಿದ್ಧ ಮಾಜಿ ಅಧ್ಯಕ್ಷ

ಲಂಡನ್ : ಬದುಕುಳಿದಿರುವ ಅಮೆರಿಕದ ಮಾಜಿ ಅಧ್ಯಕ್ಷರುಗಳಲ್ಲಿ ಜಾರ್ಜ್ ಬುಶ್ ಅತ್ಯಂತ ಕುಪ್ರಸಿದ್ಧರೆಂದು ಸಮೀಕ್ಷೆಯೊಂದು ತಿಳಿಸಿದೆ. ಜು. 6, 1946ರಂದು ಜನಿಸಿದ ಬುಶ್ ಅವರು 2001ರಿಂದ 2009ರ ವರೆಗೆ ಅಮೆರಿಕದ 43ನೇ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಸಿಎನ್‌ಎನ್ ಅಭಿಮತ ಸಂಗ್ರಹದ ಪ್ರಕಾರ, ಬುಶ್ ಅವರ ಬಗ್ಗೆ ತಮಗೆ ಒಳ್ಳೆಯ ಅಭಿಪ್ರಾಯವಿದೆ ಎಂದು ಕೇವಲ ಶೇ.43 ಮಂದಿ ಹೇಳಿದ್ದಾರೆ. ಆದರೆ ಶೇ. 54 ಮಂದಿ ಇದಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ನೀಡಿದ್ದಾರೆ. ಬುಶ್ ಅವರ ಪೂರ್ವಾಧಿಕಾರಿ, ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರ ಬಗ್ಗೆ ಸದಭಿಪ್ರಾಯವಿದೆ ಎಂದು ಸಂದರ್ಶನದಲ್ಲಿ ಭಾಗವಹಿಸಿದ ಮೂರನೇ ಎರಡರಷ್ಟು ಅಮೆರಿಕನರು ಹೇಳಿರುವರೆಂದು ದ ಹಫಿಂಗ್ಟನ್ ಪೋಸ್ಟ್ ಉಲ್ಲೇಖಿಸಿ ಡೈಲಿ ಮೇಲ್ ವರದಿ ಮಾಡಿದೆ. ಇರಾಕ್ ಸಮರ ಅಥವಾ ಜಾಗತಿಕ ಆರ್ಥಿಕ ಸಂಕಷ್ಟ ಅಥವಾ ಬುಶ್ ಇಂಗ್ಲಿಷ್ ಮಾತನಾಡುವ ರೀತಿ ಅವರನ್ನು ಅಷ್ಟು ಕುಪ್ರಸಿದ್ಧಗೊಳಿಸಿರಬೇಕು ಎಂದು ಡೈಲಿ ಶಂಕಿಸಿದೆ. ಬದುಕುಳಿದಿರುವ ಮಾಜಿ ಅಧ್ಯಕ್ಷರುಗಳ ಪೈಕಿ ಜಿಮ್ಮಿ ಕಾರ್ಟರ್ ಅವರನ್ನು ಶೇ. 54 ಮಂದಿ ಇಷ್ಟಪಟ್ಟಿದ್ದರೆ, ಬುಶ್ ಅವರ ತಂದೆ ಜಾರ್ಜ್ ಎಚ್. ಡಬ್ಲ್ಯು. ಬುಶ್ ಅವರನ್ನು ಶೇ. 59 ಮಂದಿ ಇಷ್ಟಪಟ್ಟಿದ್ದಾರೆ.

("ಉದಯವಾಣಿ" – 25 ಜೂನ್ 2012)

## ಪಾಪ್ ಗಾಯಕಿ ವಿಟ್ನಿ ಹ್ಯೂಸ್ಟನ್ ಸೌಂದರ್ಯಕ್ಕೆ ಮರುಳಾಗಿದ್ದ ಲಾದನ್

ಲಂಡನ್ : ಉಸಾಮಾ ಬಿನ್ ಲಾದನ್ ಪಾಪ್ ಗಾಯಕಿ ಹ್ಯೂಸ್ಟನ್ ಸೌಂದರ್ಯಕ್ಕೆ ಮರುಳಾಗಿದ್ದ ಹಾಗೂ ಅವಳನ್ನು ಮದುವೆಯಾಗಬೇಕೆಂದು ಹಂಬಲಿಸುತ್ತಿದ್ದ. ಇಷ್ಟು ಮಾತ್ರವಲ್ಲ ಇದಕ್ಕೆ ತಡೆಯಾಗಿದ್ದ ವಿಟ್ನಿಯ ಗಂಡ ಬಾಬ್ಬಿ ಬ್ರೌನ್‌ನನ್ನು ಸಾಯಿಸಲು ಕೂಡ ಸಂಚು ಮಾಡಿದ್ದ. ಹೊಸ ಪುಸ್ತಕವೊಂದರಲ್ಲಿ ಲಾದನ್‌ನ ಲೈಂಗಿಕ ವಾಂಛೆಗಳು, ಮಾದಕ ವಸ್ತು ಸೇವನೆಯ ಚಟ, ಬಿ52 ಮತ್ತು ವ್ಯಾನ್ ಹಲೆನ್‌ನಂತಹ ಪಾಶ್ಚಾತ್ಯ ಪಾಪ್ ಗುಂಪುಗಳ ಜತೆಗೆ ನರ್ತಿಸುವ ಹುಚ್ಚಿನ ಬಗ್ಗೆ ಕುತೂಹಲಕಾರಿ ಮಾಹಿತಿಗಳಿವೆ.

ಒಂದು ಕಾಲದಲ್ಲಿ ಲಾದನ್‌ನ ಉಪಪತ್ನಿಯಂತಿದ್ದ ಸುಡಾನ್ ಲೇಖಕಿ ಕೋಲಾ ಬೂಫ್ ತನ್ನ ಪುಸ್ತಕದಲ್ಲಿ ಲಾದನ್‌ನ ಇನ್ನೊಂದು ಮುಖವನ್ನು ತೆರೆದಿಟ್ಟಿದ್ದಾರೆ. ಅಮರಿಕದ ಮೇಲೆ ಭೀಕರ ಭಯೋತ್ಪಾದನೆ ದಾಳಿ ಎಸಗುವ ಕೆಲವು ವರ್ಷಗಳ ಮೊದಲು ಅಂದರೆ 1996ರಲ್ಲಿ ಲಾದನ್ ಮೊರಕ್ಕೊದ ಒಂದು ಮನೆಯಲ್ಲಿದ್ದ. ಆಗ ಅವನ ಮನಸ್ಸಿನಲ್ಲಿ ಭಯೋತ್ಪಾದಕ ಕೃತ್ಯಗಳಿಂದ ಹೆಚ್ಚಿಗೆ ಸೆಕ್ಸ್, ಅಮಲು ಮತ್ತು ಪಾಪ್ ತಂಡಗಳ ಜತೆಗೆ ಕುಣಿಯುವಂತಹ ವಿಚಾರಗಳೇ ತುಂಬಿದ್ದವು ಎಂದು ಬೂಫ್ ಈ ಪುಸ್ತಕದಲ್ಲಿ ಹೇಳಿದ್ದಾರೆ.

ಲಾದನ್ ತನ್ನನ್ನು ಕಾಮದ ದಾಸಿಯಂತೆ ಇಟ್ಟುಕೊಂಡಿದ್ದ. ವಿಟ್ನಿ ಹ್ಯೂಸ್ಟನ್ ಜಗತ್ತಿನಲ್ಲಿ ತಾನು ಕಂಡ ಅತ್ಯಂತ ಸುಂದರಿಯಾದ ಹೆಣ್ಣು ಎಂದು ಲಾದನ್ ಭಾವಿಸಿದ್ದ ಹಾಗೂ ಆಕೆಯನ್ನು ಮದುವೆಯಾಗುವ ಕನಸು ಕಾಣುತ್ತಿದ್ದ. ವಿಟ್ನಿಯ ಸೌಂದರ್ಯ ಲಾದನ್‌ಗೆ ಹುಚ್ಚು ಹಿಡಿಸಿತ್ತು. ಉಪನಗರ ಖಾರ್ಟೂಮ್‌ನಲ್ಲಿರುವ ತನ್ನ ಅರಮನೆಯನ್ನು ವಿಟ್ನಿಗೆ ಉಡುಗೊರೆ ಕೊಟ್ಟು ಇದಕ್ಕೂ ಮೊದಲು ಆಕೆಯ ಗಂಡ ಬ್ರೌನ್‌ನನ್ನು ಸಾಯಿಸಲು ಸಂಚು ಮಾಡಿದ್ದ ಎಂದು 2006ರಲ್ಲಿ ಬಿಡುಗಡೆಯಾಗಿರುವ ಆತ್ಮಕಥೆಯಲ್ಲಿ ಬೂಫ್ ಹೇಳಿಕೊಂಡಿದ್ದಾರೆ. ಪ್ರಬಲ ವರ್ಣದ್ವೇಷಿಯಾಗಿದ್ದ ಲಾದನ್, ವಿಟ್ನಿಗಾಗಿ ವರ್ಣ ದ್ವೇಷವನ್ನು ಬಿಡಲು ತಯಾರಾಗಿದ್ದ. ಒಂದು ದಿನ ಗಾಂಜಾದ ಒಂದು ದೀರ್ಘ ದಮ್ಮು ಎಳೆದು ವಿಟ್ನಿಯನ್ನು ಹೆಂಡತಿಯನ್ನಾಗಿ ಮಾಡಿಕೊಳ್ಳುತ್ತೇನೆ ಎಂದು ಘೋಷಿಸಿದ. ವಿಟ್ನಿ ನಿಜವಾಗಿ ಇಸ್ಲಾಂನಲ್ಲಿ ನಂಬಿಕೆ ಹೊಂದಿದ್ದಾರೆ ಮತ್ತು ಅಮೆರಿಕದ ಸಂಸ್ಕೃತಿ ಆಕೆಯ ತಲೆ ಕೆಡಿಸಿದೆ ಎನ್ನುವುದು ಲಾದನ್ ನಂಬಿಕೆಯಾಗಿತ್ತು. ಕರಿಯಳಾಗಿದ್ದ ತಾನು ಕೂದಲು ನೇಯುವುದನ್ನು ಲಾದನ್ ಇಷ್ಟಪಡುತ್ತಿರಲಿಲ್ಲ. ಇದಕ್ಕಾಗಿ ಒಂದು ದಿನ ಥಳಿಸಿ ವಿಟ್ನಿಯಂತೆ ಕೂದಲು ಬಿಟ್ಟಿರಬೇಕೆಂದು ಹೇಳಿದ. ಹುಕ್ಕಾದಿಂದ ಮರಿಜುವಾನದ ದಮ್ಮು ಎಳೆದು ಎದೆ ಬಿಸಿಯಾಗಿ ಇಡಲು ಸದಾ ಇಸಿ ಚಹಾ ಸಿದ್ಧವಾಗಿಟ್ಟಿರಬೇಕೆಂದು ಆದೇಶಿಸಿದ. ಈ ಮುಂತಾದ ಲಾದನ್‌ನ ಅಂತಃಪುರದ ರಹಸ್ಯವನ್ನು ಬೂಫ್ ಬಯಲು ಮಾಡಿದ್ದಾರೆ.

ಮಂಗಗಳು ಮಾತ್ರ ಕೂದಲು ಜಡೆ ಹಾಕಿಕೊಳ್ಳುತ್ತವೆ. ಗಾಯಕಿ ವಿಟ್ನಿ ನಾನು ನೋಡಿರುವ ಅತ್ಯಂತ ಸುಂದರ ಹೆಣ್ಣು, ಆಕೆ ಕೂದಲು

ನೇಯ್ದಿರುವುದನ್ನು ನಾನೆಂದು ಕಂಡಿಲ್ಲ ಎಂದು ಲಾದನ್ ಹೇಳುತ್ತಿದ್ದ. ಸಂಗೀತ ಪಾಪ ಎಂದು ಪ್ರತಿಪಾದಿಸುತ್ತಿದ್ದರೂ ವಿಟ್ನಿಗಾಗಿ ಲಾದನ್ ಚಡಪಡಿಸುತ್ತಿದ್ದ. ವಿಟ್ನಿಯ ಮೇಲಿನ ವ್ಯಾಮೋಹವನ್ನು ತಡೆಯಲು ಸಾಧ್ಯವಾಗದೆ ಯಾರಿಗೋ ಅಮೆರಿಕಕ್ಕೆ ಹೋಗಿ ಆಕೆಯ ಜತೆಗೆ ಮಾತುಕತೆಗೆ ಏರ್ಪಾಡು ಮಾಡಿ ಎಂದು ಹೇಳಿದ್ದ. ಖಾರ್ಟೂಮ್‌ನಲ್ಲಿರುವ ಅರಮನೆಯನ್ನು ವಿಟ್ನಿಗೆ ಉಡುಗೊರೆಯಾಗಿ ಕೊಡಲು ಮುಂದಾಗಿದ್ದ. ವಿಟ್ನಿ ಸಿಗುವುದಾದರೆ ವರ್ಣದ್ವೇಷವನ್ನು ಬಿಡುವುದಾಗಿ ಹೇಳಿದ್ದ. ಅವನ ವರ್ಣದ್ವೇಷದ ಮಾತುಗಳನ್ನು ಕೇಳುವಾಗ ಉಕ್ಕಿ ಬರುತ್ತಿದ್ದ ಸಿಟ್ಟನ್ನು ನುಂಗಿಕೊಳ್ಳುತ್ತಿದ್ದೆ. ನಾನು ಅವನ ಬಳಿಯಿರುವಾಗ ಅವನು ಪದೇ ಪದೇ ವಿಟ್ನಿಯ ಗುಣಗಾನ ಮಾಡುತ್ತಿದ್ದ ಎನ್ನುವ ವಿವರಗಳು ಆತ್ಮಕಥೆಯಲ್ಲಿವೆ.

("ಉದಯವಾಣಿ" – 17 ಫೆಬ್ರವರಿ 2012)

## ಡ್ರೋನ್ ದಾಳಿ ವೇಳೆ ಅಕ್ಷತ ಕನ್ಯೆಯರನ್ನು ನೆನೆಯಿರಿ

ಲಂಡನ್ : ನಿಮ್ಮ ಮೇಲೆ ಡ್ರೋನ್ ದಾಳಿಯಾಗುವಾಗ ಸ್ವರ್ಗದಲ್ಲಿ ನಿಮಗಾಗಿ ಕಾದು ಕುಳಿತಿರುವ ಅಕ್ಷತ ಕನ್ಯೆಯರನ್ನು ನೆನೆಯಿರಿ ಎಂದು ಅಲ್ ಕಾಯಿದಾ ಜಿಹಾದಿಗಳಿಗೆ ಬೋಧಿಸುತ್ತಿದೆ. ವಿದೇಶಿಯರನ್ನು ಜಿಹಾದಿ ಹೋರಾಟಕ್ಕೆ ಸೇರಿಸಿಕೊಳ್ಳುವ ಸಲುವಾಗಿ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಿಸಿರುವ ಕೈಪಿಡಿಯಲ್ಲಿ ಜಿಹಾದಿಗಳಿಗೆ ಇಂತಹ ಹಲವು ಸಲಹೆ ಸೂಚನೆಗಳಿವೆ.

'ಓದಲೇ ಬೇಕಾದ ಕೈಪಿಡಿ' ಎಂದು ವರ್ಗೀಕರಿಸಲಾಗಿರುವ ಈ ಜಿಹಾದಿ ಸಾಹಿತ್ಯ ಬಹಿರಂಗವಾದ ಕೂಡಲೇ ಇಂಟರ್‌ನೆಟ್‌ನಲ್ಲಿ ಕಾಣಿಸಿಕೊಂಡಿದೆ. ಜಿಹಾದಿ ಬದುಕಿನಲ್ಲಿ ಎದುರಾಗುವ ಅಡಚಣೆ ಮತ್ತು ಅಪಾಯಗಳನ್ನು ಯಾವ ರೀತಿ ಎದುರಿಸಬೇಕು ಎನ್ನುವ ವಿವರಣೆಯೊಂದಿಗೆ ಮೊಬೈಲ್ ಫೋನ್ ಬಳಕೆ, ಸ್ವಚ್ಛತೆ ಇತ್ಯಾದಿ ವಿಚಾರಗಳ ಬಗ್ಗೆ ಸಲಹೆ ಸೂಚನೆಗಳಿವೆ.

ಕೈಪಿಡಿಯ ಇನ್ನೊಂದು ವಿಭಾಗದಲ್ಲಿ ನ್ಯಾಟೊ ಪಡೆಯ ಡ್ರೋನ್ ದಾಳಿಯ ಬಗ್ಗೆ ಮಾಹಿತಿಯಿದೆ. ನಿಮಗೆ ಜೇನ್ನೊಣಗಳು ಹಾರಿ ಬರುತ್ತಿರುವ ಶಬ್ದ ಕೇಳಿಸಬಹುದು. ಆಗ ನಿಮಗೆ ಭಯವಾದರೆ ಕಣ್ಣುಗಳನ್ನು ಮುಚ್ಚಿಕೊಂಡು ನೀವು ಸ್ವರ್ಗದಲ್ಲಿದ್ದೀರಿ ಎಂದು ಕಲ್ಪಿಸಿಕೊಳ್ಳಿ, ನಿಮಗಾಗಿ ಕಾದು ನಿಂತಿರುವ ಸ್ವರ್ಗದ ಅಕ್ಷತ ಕನ್ಯೆಯರನ್ನು ನೆನೆಯಿರಿ, ಸ್ವರ್ಗದಲ್ಲಿರುವ ಪ್ರವಾದಿಗಳನ್ನು ಭೇಟಿಯಾಗಲಿರುವ ಪುಳಕವನ್ನು ಅನುಭವಿಸಿ ಎನ್ನುತ್ತಿದೆ ಈ ಕೈಪಿಡಿ. ಅಲ್ ಕಾಯಿದಾ ನಾಯಕ ಅನ್ವರ್ ಅಲ್ ಅವ್ಲಾಕಿಯ ಜತೆಗೆ ಕಳೆದ ಸೆಪ್ಟಂಬರ್‌ನಲ್ಲಿ ಡ್ರೋನ್ ದಾಳಿಗೆ ಬಲಿಯಾಗಿರುವ ಅಮೆರಿಕ ಮೂಲದ ಸಮೀರ್ ಖಾನ್ ಈ ಕೈಪಿಡಿಯನ್ನು ರಚಿಸಿದ್ದಾನೆ ಎನ್ನಲಾಗಿದೆ. ಯೆಮೆನ್‌ನ ಅಲ್ ಖಾಯಿದಾಕ್ಕೆ ಸಮಿರ್ ಖಾನ್ ಮುಖ್ಯ ತರಬೇತುದಾರನಾಗಿದ್ದ.

("ಉದಯವಾಣಿ" – 17 ಮೇ 2012)

## ರಾಷ್ಟ್ರಪಿತ ದಾಖಲೆಯೇ ಇಲ್ಲ!

ಲಕ್ನೋ : ಭಾರತ ಸರ್ಕಾರಕ್ಕೆ 10 ವರ್ಷದ ಹುಡುಗಿಯೊಬ್ಬಳು ಅಚ್ಚರಿ ಮೂಡಿಸಿದ್ದಾಳೆ. ಮಾಹಿತಿ ಹಕ್ಕು ಕಾಯ್ದೆಯಡಿ ಐಶ್ವರ್ಯ ಪರಾಶರ್ ಎಂಬ ಹುಡುಗಿ ಕೇಳಿರುವ ಪ್ರಶ್ನೆಗೆ ಭಾರತ ಸರ್ಕಾರದ ಬಳಿ ಉತ್ತರವೇ ಇಲ್ಲ! ಆಕೆ ಕೇಳಿರುವ ಪ್ರಶ್ನೆಯಾದರೂ ಎಂತಹದ್ದು? ಮಹಾತ್ಮ ಗಾಂಧೀಜಿಯನ್ನು ರಾಷ್ಟ್ರಪಿತ ಎಂದು ನಿರ್ಧರಿಸಿರುವ ದಾಖಲೆಗಳ ನಕಲು ಪ್ರತಿ ಕೊಡಿ ಎನ್ನುವುದು ಆ ಬಾಲಕಿಯ ಪ್ರಶ್ನೆ. ಇದು ಮೊದಲು ಪ್ರಧಾನಿ ಕಚೇರಿಗೆ ತಲುಪಿತು. ಅದು ಈ ಪ್ರಶ್ನೆ ತನ್ನ ವ್ಯಾಪ್ತಿಯದಲ್ಲ ಎಂದು ಹೇಳಿ ಪ್ರಧಾನಿ ಕಾರ್ಯಾಲಯ ಅದನ್ನು ಗೃಹ ಸಚಿವಾಲಯಕ್ಕೆ ಕಳುಹಿಸಿತು. ಗೃಹ ಸಚಿವಾಲಯ ನಮ್ಗೂ ಏನೂ ಗೋತ್ತಾಗ್ತಾ ಇಲ್ಲ ಎಂದು ಅದನ್ನು ರಾಷ್ಟ್ರೀಯ ಹಳೆ ದಾಖಲೆಗಳ ಕಚೇರಿ (ಎನ್‌ಎಐ)ಗೆ ಕಳುಹಿಸಿತು. ಅಂತಿಮವಾಗಿ ಎನ್‌ಎಐ ಸಹಾಯಕ ನಿರ್ದೇಶಕ ಜಯಪ್ರಭಾ ರವೀಂದ್ರನ್ ಬಾಲಕಿಗೆ ನೀಡಿರುವ ಉತ್ತರ ಹೀಗಿದೆ: ಎನ್‌ಎಐನಲ್ಲಿ ಸಾರ್ವಜನಿಕ ದಾಖಲೆಗಳಿಗಾಗಿ ಹುಡುಕಲಾಯಿತು. ಆದರೆ ಅಂತಹ ಯಾವುದೇ ದಾಖಲೆಗಳಿಲ್ಲ. ಡಿಒಪಿಟಿ, ಸಿಪಿಐಒಗೆ ನೀಡಿರುವ ಮಾರ್ಗದರ್ಶಿ ಸೂತ್ರಗಳ ಪ್ರಕಾರ ಪರಿಶೀಲನೆಗೆ ದಾಖಲೆಗಳನ್ನು ಒದಗಿಸಬಹುದು. ಆ ಬಗ್ಗೆ ಯಾವ ಸಂಶೋಧನೆಯನ್ನು ಕೈಗೊಳ್ಳುವಂತಿಲ್ಲ. ಇದರ ಬಗ್ಗೆ ಹುಡುಕಾಟ ನಡೆಸುವುದಾದರೆ ನಿಮಗೆ ಸ್ವಾಗತವಿದೆ.

("ಉದಯವಾಣಿ" – 04 ಎಪ್ರಿಲ್ 2012)

## ಬೇಯಿಸಿದ ಟೊಮೆಟೊ ಕ್ಯಾನ್ಸರ್‌ಗೆ ರಾಮಬಾಣ

ಲಂಡನ್ : ಟೊಮೆಟೊದಿಂದ ಮೂತ್ರಪಿಂಡದ ಕಲ್ಲು ಉಂಟಾಗುತ್ತದೆ ಎನ್ನುವ ಭೀತಿಯಿದ್ದರೂ ಲಂಡನ್‌ನ ವಿಶ್ವವಿದ್ಯಾಲಯವೊಂದರಲ್ಲಿ ನಡೆಸಿರುವ ಅಧ್ಯಯನ ಇದಕ್ಕೆ ವಿರುದ್ಧವಾದ ಫಲಿತಾಂಶ ನೀಡಿದೆ. ಈ ಆಧ್ಯಯನ ಪ್ರಕಾರ ಬೇಯಿಸಿದ ಟೊಮೆಟೊ ಕ್ಯಾನ್ಸರ್‌ಗೆ ರಾಮಬಾಣವಂತೆ. ಮೃದುಲಾ ಚೋಪ್ರಾ ಮತ್ತು ಅವರ ಸಹೋದ್ಯೋಗಿಗಳು ಯುನಿವರ್ಸಿಟಿ ಆಫ್ ಪೋರ್ಟ್ಸ್‌ಮೌತ್‌ನಲ್ಲಿ ನಡೆಸಿದ ಅಧ್ಯಯನದಲ್ಲಿ ಬೇಯಿಸಿದ ಟೊಮೆಟೊದಲ್ಲಿರುವ ಲೈಕೊಪೀನ್ ಎನ್ನುವ ಪೋಷಕಾಂಶ ಕ್ಯಾನ್ಸರ್ ಕಣಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ ಹಾಗೂ ಈ ಕಣಗಳನ್ನು ಕೊಲ್ಲುವ ಸಾಮರ್ಥ್ಯವೂ ಅದಕ್ಕಿದೆ ಎಂದು ಕಂಡುಕೊಳ್ಳಲಾಗಿದೆ. ಕ್ಯಾನ್ಸರ್ ವೈರಾಣುಗಳು ದೇಹದ ಆರೋಗ್ಯವಂತ ರಕ್ತ ಪೂರೈಕೆ ವ್ಯವಸ್ಥೆಯನ್ನು ಹೈಜಾಕ್ ಮಾಡಿ ಬೆಳೆಯುತ್ತವೆ. ಟೊಮೆಟೊಕ್ಕೆ ಕೆಂಬಣ್ಣ ಕೊಡುವ ಲೈಕೊಪೀನ್ ಆರೋಗ್ಯವಂತ ರಕ್ತ ಪೂರೈಕೆಯ ಜತೆಗೆ ಸಂಪರ್ಕ ಹೊಂದುವ ಕ್ಯಾನ್ಸರ್ ವೈರಾಣುಗಳ ಪ್ರಯತ್ನವನ್ನು ವಿಫಲಗೊಳಿಸುತ್ತದೆ.

("ಉದಯವಾಣಿ" – 04 ಫೆಬ್ರವರಿ 2012)

ಓದಿದ್ದು

## ಸ್ವತಂತ್ರ ಭಾರತ ನೋಡುತ್ತಿದ್ದರೆ ನಿಮಗೆ ಏನನ್ನಿಸುತ್ತೆ?

ಬ್ರಿಟಿಷರ ಕಾಲವೇ ಎಷ್ಟೋ ಚೆನ್ನಾಗಿತ್ತು. ಬ್ರಿಟಿಷ್ ಅಧಿಕಾರಿಗಳು ಅಪ್ರಾಮಾಣಿಕರಾಗಿರಲಿಲ್ಲ. ಕೊಲೆ, ಸುಲಿಗೆ, ದರೋಡೆ, ಮಾನಭಂಗ, ಅಸಭ್ಯ ವರ್ತನೆ – ಇವೇ ಮುಂತಾದ ಪದಗಳನ್ನು ನಾನು ಪತ್ರಿಕೆಯ ಮುಖಪುಟದಲ್ಲಿ ನೋಡಿದ್ದು ಸ್ವಾತಂತ್ರ್ಯ ಬಂದ ನಂತರವೇ. ಮೊದಲು ಅವೆಲ್ಲ ಏನೂ ಇರಲಿಲ್ಲ. ಒಂದು ರೀತಿಯಲ್ಲಿ ದೇಶ ಸುಭಿಕ್ಷವಾಗಿತ್ತು. ಐವತ್ತು ರೂಪಾಯಿಯಲ್ಲಿ ಆಡಂಬರದ ಜೀವನ ಮಾಡಬಹುದಾಗಿತ್ತು. – **ವಿ. ಕಲ್ಯಾಣಂ, ಮಹಾತ್ಮಾಗಾಂಧಿ ಆಪ್ತ ಕಾರ್ಯದರ್ಶಿ.**

**("ಉದಯವಾಣಿ" – 02 ಫೆಬ್ರವರಿ 2012)**

## ಸತ್ತ 88 ವರ್ಷಗಳ ಬಳಿಕ ಲೆನಿನ್ ಶವ ದಫನ

ಮಾಸ್ಕೋ : ಸೋವಿಯತ್ ಯೂನಿಯನ್ ರಶ್ಯ ಸ್ಥಾಪಕ ವ್ಲಾದಿಮೀರ್ ಲೆನಿನ್ ನಿಧನ ಹೊಂದಿದ 88 ವರ್ಷಗಳ ಬಳಿಕ ಅವರ ಪಾರ್ಥಿವ ಶರೀರದ ದಫನ ಮಾಡಲು ರಶ್ಯ ಸಿದ್ಧತೆ ನಡೆಸಿದೆ ಎನ್ನಲಾಗಿದೆ. ಈ ಹಿಂದಿನ ಯು.ಎಸ್.ಎಸ್.ಆರ್. ವಿಭಜನೆಗೊಂಡ ಎರಡು ದಶಕಗಳಿಂದ ಕ್ರಾಂತಿಕಾರಿ ಲೆನಿನ್ ಅವರ ಪಾರ್ಥಿವ ಶರೀರವನ್ನು ಮಾಸ್ಕೋದ ರೆಡ್ ಸ್ಕ್ವೇರ್‌ನಲ್ಲಿ ಸಾರ್ವಜನಿಕ ಪ್ರದರ್ಶನಕ್ಕಿರಿಸಲಾಗಿದೆ. ತನ್ನ 53ರ ಹರೆಯದಲ್ಲಿ 1924ರಲ್ಲಿ ನಿಧನ ಹೊಂದಿದ ಲೆನಿನ್ ಅವರನ್ನು ದಫನ ಮಾಡದಿರುವುದು ಒಂದು ಅಸಂಬದ್ಧವಾಗಿದೆ ಎಂದು ರಶ್ಯದ ಹೊಸ ಸಂಸ್ಕೃತಿ ಸಚಿವ ವ್ಲಾದಿಮೀರ್ ಮೆಡಿನ್‌ಸ್ಕಿ ಹೇಳಿದ್ದಾರೆ. ಅವರು ಅಧ್ಯಕ್ಷ ವ್ಲಾದಿಮೀರ್ ಪುತಿನ್ ಅವರ ಸಮೀಪವರ್ತಿಯಾಗಿದ್ದಾರೆ. ದೇಶದ ಪಿತಾಮಹನಾಗಿ ಅವರ ಪಾತ್ರವನ್ನು ಪರಿಗಣಿಸಿ ಲೆನಿನ್ ಅವರಿಗೆ ವಿದಾಯ ನೀಡಬೇಕೆಂದು ಸಚಿವರು ಹೇಳಿರುವರೆಂದು ಡೈಲಿ ಮೇಲ್ ವರದಿ ಮಾಡಿದೆ. ತನ್ನನ್ನು ಸಾಮಾನ್ಯ ರೀತಿಯಲ್ಲಿ ದಫನ ಮಾಡಬೇಕೆಂದು ಲೆನಿನ್ ಸ್ವಯಂ ಕೋರಿದ್ದರು. ಆದ್ದರಿಂದ ಅವರನ್ನು ಸರಳವಾಗಿ, ಎಲ್ಲ ಸರಕಾರಿ ಗೌರವಗಳೊಂದಿಗೆ ದಫನ ಮಾಡಬೇಕು. ಆಗ ನಮ್ಮ ಬದುಕಿನಲ್ಲಿ ಒಳಿತಾದರೂ ಆಗಬಹುದು ಎಂದು ಮೆಡಿನ್‌ಸ್ಕಿ ಅಭಿಪ್ರಾಯಪಟ್ಟಿದ್ದಾರೆ. ಅವರ ಈ ಹೇಳಿಕೆಯು ಲೆನಿನ್ ಅವರನ್ನು ದಫನ ಮಾಡಲು ಸಿದ್ಧತೆಗಳು ನಡೆಯುತ್ತಿವೆ ಎನ್ನುವುದನ್ನು ಸೂಚಿಸುತ್ತದೆ. ಸೈಂಟ್ ಪೀಟರ್ಸ್‌ಬರ್ಗ್‌ನಲ್ಲಿ ಲೆನಿನ್ ಅವರ ತಾಯಿ ಸಮಾಧಿ ಪಕ್ಕದಲ್ಲಿ ಅವರ ದಫನ ನಡೆಯುವ ಸಂಭವ ಅಧಿಕವಾಗಿದೆ.

**("ಉದಯವಾಣಿ" – 11 ಜೂನ್ 2012)**

## 'ಎ ಫಾರ್ ಅಲ್ಲಾ, ಬಿ ಫಾರ್ ಬಂದೂಕ್!'

ಲಂಡನ್ : ಎ ಫಾರ್ ಅಲ್ಲಾ, ಬಿ ಫಾರ್ ಬಂದೂಕ್ – ಇದು ಪಾಕಿಸ್ಥಾನದ ಶಾಲೆಗಳಲ್ಲಿ ಮಕ್ಕಳಿಗೆ ಕಲಿಸುತ್ತಿರುವ ಪಾಠ. ಈಗಲೂ ಶಾಲೆಗಳಲ್ಲಿ ಮಕ್ಕಳ ಮನಸ್ಸಿಗೆ ಮತೀಯ ತೀವ್ರವಾದವನ್ನು ಮತ್ತು ಭಾರತ ದ್ವೇಷವನ್ನು ತುಂಬಿಸಲಾಗುತ್ತದೆ ಮತ್ತು ಇದರಲ್ಲಿ ಯಾವುದೇ ಸುಧಾರಣೆಯಾಗುವ ಲಕ್ಷಣ ಕಾಣಿಸುತ್ತಿಲ್ಲ ಎಂದು ಇಸ್ಲಾಮಾಬಾದ್‌ನ ವಿದ್ವಾಂಸರೊಬ್ಬರು ಹೇಳಿದ್ದಾರೆ.

ಡೆಮಾಕ್ರಸಿ ಫಾರಂ ಕಿಂಗ್ಸ್ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಶಿಕ್ಷಣದ ಪಾತ್ರ' ಎನ್ನುವ ಸೆಮಿನಾರ್‌ನಲ್ಲಿ ಅಣು ವಿಜ್ಞಾನಿ ಹಾಗೂ ಪ್ರಚಲಿತ ವಿಚಾರಗಳ ವಿಶ್ಲೇಷಕ ಪರ್ವೇಜ್ ಹುಡ್‌ಭೋಯ್ ಉದಾಹರಣೆ ಸಮೇತ ಪಾಕಿಸ್ಥಾನದ ಶಿಕ್ಷಣದ ದಯನೀಯ ಸ್ಥಿತಿಯನ್ನು ವಿವರಿಸಿದ್ದಾರೆ. ಪ್ರಾಥಮಿಕ ತರಗತಿಯ ಉರ್ದು ಪಠ್ಯ ಪುಸ್ತಕವೊಂದರಲ್ಲಿ ಇರುವ ಎಯಿಂದ ಅಲ್ಲಾ, ಬಿಯಿಂದ ಬಂದೂಕ್, ಟಿಯಿಂದ ಟಕ್ರಾವೊ, ಜೆಯಿಂದ ಜೆಹಾದ್, ಎಚ್‌ನಿಂದ ಹಿಜಬ್, ಕೆಯಿಂದ ಖಂಜರ್ ಮತ್ತು ಝಡ್‌ನಿಂದ ಜುನೂಬ್ ಎನ್ನುವ ಪಾಠದ ಉದಾಹರಣೆಯನ್ನು ಅವರು ನೀಡಿದ್ದಾರೆ. ಕಳೆದ ಆರು ದಶಕಗಳಲ್ಲಿ ಪಾಕಿಸ್ಥಾನದಲ್ಲಿ ಅಪಾರವಾದ ಬದಲಾವಣೆಗಳಾಗಿವೆ. ಆದರೆ ಜಿಯಾ ಉಲ್ ಹಕ್ ಪ್ರಾರಂಭಿಸಿದ ಶಿಕ್ಷಣದಲ್ಲಿ ವಿಷವುಣಿಸುವ ಪರಂಪರೆಯನ್ನು ಮಾತ್ರ ಅನಂತರ ಬಂದ ಸರಕಾರಗಳು ಬದಲಾಯಿಸಿಲ್ಲ. ಇದರಿಂದಾಗಿ ನನ್ನ ದೇಶವೇ ನನಗೆ ಪರಕೀಯವಾದಂತೆ ಕಾಣಿಸುತ್ತದೆ ಎಂದಿದ್ದಾರೆ. ಈ ಸ್ಥಿತಿಗೆ ಆಂಶಿಕವಾಗಿ ಮದರಸಗಳು ಕಾರಣ ಎಂದವರು ದೂಷಿಸಿದ್ದಾರೆ ಮತ್ತು ಜನರಲ್ ಪರ್ವೇಜ್ ಮುಶರ್ರಫ್ ಕಾಲದಲ್ಲಿ ಶಿಕ್ಷಣವನ್ನು ಸುಧಾರಿಸಲು ಕೈಗೊಂಡ ಪ್ರಯತ್ನಗಳು ಮುಂದುವರಿಯದಿರುವುದಕ್ಕೆ ವಿಷಾದಿಸಿದ್ದಾರೆ.

**("ಉದಯವಾಣಿ" – 25 ಜೂನ್ 2012)**

## ಇಸ್ಲಾಂ ಹೆಸರಲ್ಲಿ ಹಿಂಸಾಕೃತ್ಯ ಸಲ್ಲದು: ಮೌಲಾನಾ ಅಶ್ರಫ್

ಹೊಸದಿಲ್ಲಿ : ಇಸ್ಲಾಂ ಹೆಸರಲ್ಲಿ ನಡೆಯುವ ಎಲ್ಲ ಬಗೆಯ ಹಿಂಸಾಕೃತ್ಯಗಳನ್ನು ಓರ್ವ ಪ್ರಮುಖ ಮುಸ್ಲಿಂ ಧಾರ್ಮಿಕ ನಾಯಕ ಖಂಡಿಸಿದ್ದಾರೆ ಮತ್ತು **'ಜಿಹಾದ್'** ಅಥವಾ ಪವಿತ್ರ ಯುದ್ಧ ಒಬ್ಬಾತನ ಸ್ವಂತ ಸಮಸ್ಯೆಗಳ ವಿರುದ್ಧ ಒಂದು ರಕ್ಷಣೆಯೆಂದು ಓರ್ವ ತಿಳಿದುಕೊಳ್ಳಬೇಕು ಎಂದು ಹೇಳಿದ್ದಾರೆ. "ಜಿಹಾದ್ ಎಂದರೆ ರಕ್ಷಣೆ, ಆಕ್ರಮಣ ಅಲ್ಲ. ನಿಮ್ಮದೇ ಸಮಸ್ಯೆಗಳ ವಿರುದ್ಧ ಜಿಹಾದ್ ನಡೆಸಿರಿ" ಎಂದು ಅಖಿಲ ಭಾರತ ಉಲಮಾ ಮತ್ತು ಮಶಿಕ್ ಮಂಡಲಿಯ ಪ್ರಧಾನ ಕಾರ್ಯದರ್ಶಿ ಹಜ್ರತ್ ಮೌಲಾನಾ ಮೊಹಮ್ಮದ್ ಅಶ್ರಫ್ ಹೇಳಿದರು. "ನಮ್ಮ ಸಮಾಜದಲ್ಲಿ ಜನರು ತಮ್ಮ ಧರ್ಮ, ಜಾತಿ, ಹೆಸರು ಮತ್ತು ಸ್ಥಳದ ಆಧಾರದಲ್ಲಿ ವಿಭಿನ್ನ ವರ್ಗಗಳಾಗಿ ಪ್ರತ್ಯೇಕಗೊಂಡಿದ್ದಾರೆ. ಪ್ರತಿ 50 ಕಿ.ಮೀ.ಗೆ ಭಾಷೆ ವಸ್ತುತಃ ಬದಲಾಗುವ ಭಾರತದಂಥ ದೇಶದಲ್ಲಿ ಜನರು ಸಾಮರಸ್ಯದಲ್ಲಿ ಬದುಕುವುದು ಮತ್ತು ವೈವಿಧ್ಯವನ್ನು ಒಪ್ಪಿಕೊಳ್ಳುವುದು ಅನಿವಾರ್ಯ" ಎಂದವರು ಸೋಮವಾರ ಇಲ್ಲಿ ಸೂಫಿ ಪಂಥ ಮತ್ತು ಭಾರತೀಯ ಇಸ್ಲಾಂ ಎಂಬ ವಿಚಾರ ಸಂಕಿರಣದಲ್ಲಿ ಮಾತನಾಡುತ್ತಾ ಹೇಳಿದರು.

**("ಉದಯವಾಣಿ" – 25 ಎಪ್ರಿಲ್ 2012)**

ಓದಿದ್ದು

## ನಮ್ಮ ಪ್ರೇರಕ ಶಕ್ತಿ : LOVE FOR ALL HATRED FOR NONE – ಪಾಕ್ ನೂತನ ಪ್ರಧಾನಿ

ಪಾಕಿಸ್ತಾನದ ನೂತನ ಪ್ರಧಾನಿ ರಾಜಾ ಪರ್ವೇಝ್ ಅಶ್ರಫ್, ಶಾಂತಿ ಪಾಲನೆ ಸರಕಾರದ ಇಂದಿನ ಅತಿ ಆದ್ಯತೆಯಾಗಿದೆಯೆಂದೂ ಜನತೆಯ ಸೇವೆಗೆ ಎಲ್ಲರೂ ಒಟ್ಟಿಗೆ ಕಾರ್ಯಶೀಲರಾಗಬೇಕಿದೆಯೆಂದೂ ಹೇಳಿದರು.

"**LOVE FOR ALL HATRED FOR NONE** (ಎಲ್ಲರೊಂದಿಗೂ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ) ಎಂಬುದೇ ನಮ್ಮ ಪ್ರೇರಕ ಶಕ್ತಿ" ಎಂದು ಅವರು ನುಡಿದರು.

ಊರ್ಜ ಸಮಸ್ಯೆ ಮತ್ತು ಅಭದ್ರತೆ ತನ್ನ ಸರಕಾರವು ಎದುರಿಸುತ್ತಿರುವ ಎರಡು ಸವಾಲೆಂದು ಅವರು ಹೇಳಿದರು.

(ARY TV NEWS, ಪಾಕಿಸ್ತಾನ 25 ಜೂನ್ 2012)

*ಅಹ್ಮದಿಯಾ ಧ್ಯೇಯ ವಾಕ್ಯ :*


# "LOVE FOR ALL
# HATRED FOR NONE"
# "ಎಲ್ಲರೊಂದಿಗೂ ಪ್ರೀತಿ
# ಯಾರೊಂದಿಗೂ ದ್ವೇಷವಿಲ್ಲ"

*– ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್*
*ಅಹ್ಮದಿಯಾ ಜಮಾಅತಿನ ತೃತೀಯ ಖಲೀಫ*


***MUSLIM TELEVISION AHMADIYYA* is now launched on Asia Broadcast satellite (ABS-1) especially for Asian Viewers. You can now watch MTA in 2ft Dish (DTH/Airtel) by adjusting its frequency.**

**Details of this channel**

| | |
|---|---|
| Channel Name | : Muslim TV |
| Satellite | : ABS - 1 |
| Direction | : 75⁰ East |
| Frequency | : 12579 |
| Symbol Rate | : 22000 |
| Polarization | : Horizontal |
| FEC | : 3/4 |




ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

ಕನ್ನಡ ಭಾಷಾಂತರ

**ಬೆಲೆ : ರೂ. 200/-**

*ಕನ್ನಡದಲ್ಲಿ ಹೊಸ ಹೊತ್ತಗೆಗಳು*




# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

*ಗ್ರಂಥಕರ್ತ : ಹಝ್ರತ್ ಮಿರ್ಝಾ ಬಶೀರ್ ಅಹ್ಮದ್*

*ಪುಟಗಳು : 320 ಬೆಲೆ : ರೂ. 100/-*

## ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

# ನಮ್ಮ ಉಪದೇಶಗಳು

*ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ)*

*ಬೆಲೆ : ರೂ. 15/-*

*ಸಂಪರ್ಕಿಸಿರಿ : ಝುಈಂ,*
*ಮಜ್ಲಿಸ್ ಅನ್ಸಾರುಲ್ಲಾಹ್,*
*ಹಿಲ್ ರೋಡ್, ಮಡಿಕೇರಿ (ಕೊಡಗು)*

# ಧ಼ಿಕ್ರೆ ಇಲಾಹಿ

(ದೇವ ಸ್ಮರಣೆ)

*ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್(ರ)*

*ಬೆಲೆ : ಉಚಿತ*

*ಸಂಪರ್ಕಿಸಿರಿ : ಎಂ. ಎ. ಬಶೀರ್ ಅಹ್ಮದ್, ಪ್ರೆಸಿಡೆಂಟ್,*
*ಅಹ್ಮದಿಯಾ ಮುಸ್ಲಿಂ ಜಮಾಅತ್,*
*ಹಿಲ್ ರೋಡ್, ಮಡಿಕೇರಿ (ಕೊಡಗು)*

# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ ಪುಸ್ತಕ ಬಿಡುಗಡೆ ಸಮಾರಂಭ







ಬೆಂಗಳೂರು: ಅಹ್ಮದಿಯಾ ಮುಸ್ಲಿಮ್ ಮಿಷನಿನ ವತಾರದಲ್ಲಿ ಫೆಬ್ರವರಿ 19 ರಂದು ಜರುಗಿದ ಸಮಾರಂಭದಲ್ಲಿ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ ಎಂಬ ಪುಸ್ತಕವನ್ನು ಕವಿ ಹಾಗೂ ಮಾಜಿ ಶಾಸಕರಾದ ಡಾ॥ ಎಲ್. ಹನುಮಂತಯ್ಯನವರು ಬಿಡುಗಡೆಗೊಳಿಸಿದರು. ಬೆಂಗಳೂರು ದೂರದರ್ಶನ ಕೇಂದ್ರದ ಡೆಪ್ಯೂಟಿ ಡೈರೆಕ್ಟರ್ ಜನರಲ್ ಡಾ॥ ಮಹೇಶ್ ಜೋಷಿ, ಬೆಂಗಳೂರು ಪ್ರೆಸ್ ಕ್ಲಬ್‌ನ ಅಧ್ಯಕ್ಷ ಶ್ರೀ ಎಂ. ಎ. ಪೊನ್ನಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅಹ್ಮದಿಯಾ ಮಿಷನಿನ ದಕ್ಷಿಣ ವಲಯ ಅಧ್ಯಕ್ಷರಾದ ಜನಾಬ್ ಎಂ. ಶಫಿಯುಲ್ಲಾ ಸಾಹೇಬ್, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ವಲಯಾಧ್ಯಕ್ಷ ಮುಸದ್ದಿಕ್ ಅಹ್ಮದ್ ಸಾಹೇಬ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಪುಸ್ತಕದ ಅನುವಾದಕ ಎಂ. ಉಬೈದುಲ್ಲಾ ಸಾಹೇಬ್ ಮತ್ತು ಪರಿಶೀಲಕ ಹಾಗೂ "ಯುಗರಶ್ಮಿ" ಸಂಪಾದಕ ಮುಹಮ್ಮದ್ ಯೂಸುಫ್ ಸಾಹೇಬರನ್ನು, ಅವರೀರ್ವರೂ ಕನ್ನಡ ಭಾಷೆಯಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿಗೆ ಸುದೀರ್ಘ ಕಾಲದಿಂದ ಸಲ್ಲಿಸುತ್ತಿರುವ ಸೇವೆಗೋಸ್ಕರ ಶಾಲು ಹೊದಿಸಿ, ಸ್ಮರಣ ಫಲಕ ನೀಡಿ ಸನ್ಮಾನಿಸಲಾಯಿತು.

Registered with the Registrar of Newspapers for India No. R.N. 27354/75
Yugarashmi Kannada Quarterly, June - 2012. Price : Rs. 15/-





**National Toll Free Number : 1800 180 2131**
**National Website : ahmadiyyamuslimjamaat.in**
**International Website : alislam.org**
**Email : info@ahmadiyyamuslimjamaat.in**


Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001